ಮಂಗಳವಾರ, ಜೂನ್ 17, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 167 | ಪುಟ 16
prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೈಪ್ರಸ್ ಪುರಸ್ಕಾರ

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸೋಮವಾರ ಸೈಪ್ರಸ್ ದೇಶದ ಅತ್ಯುನ್ನತ ನಾಗರಿಕ ಪುರಸ್ಕಾರ 'ಗ್ರ್ಯಾಂಡ್ ಕ್ರಾಸ್ ಆಫ್ ದ ಆರ್ಡರ್ ಆಫ್ ಮಕರಿಯೋಸ್–3' ನೀಡಿ ಗೌರವಿಸಲಾಯಿತು.

ಸ್ಪಾನ್‌ಗೆ ಕಿರೀಟ

ಅಮೆರಿಕದ ಜೆ.ಜೆ. ಸ್ಪಾನ್ ಅವರು ಪೆನ್ಸಿಲ್ವೇನಿಯಾದ ಓಕ್ಮಾಂಟ್ ಕಂಟ್ರಿ ಕ್ಲಬ್‌ನಲ್ಲಿ ನಡೆದ ಯುಎಸ್ ಓಪನ್ ಗಾಲ್ಫ್ ಟೂರ್ನಿಯ ಪ್ರಶಸ್ತಿ ಗೆದ್ದರು

ಸೆನ್ಸೆಕ್ಸ್	ನಿಫ್ಟಿ	$/₹	ಚಿನ್ನ (Std. 10g)	ಶುದ್ಧ ಬೆಳ್ಳಿ (kg)
81,796	24,946	86.06	₹1.04 ಲಕ್ಷ (ಬೆಂಗಳೂರು)	₹1.12 ಲಕ್ಷ (ಬೆಂಗಳೂರು)

ಜನಗಣತಿಗೆ ಮುಹೂರ್ತ

ಅಧಿಸೂಚನೆ ಹೊರಡಿಸಿದ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಟೀಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ಸಾಂಕ್ರಾಮಿಕದ ನೆಪವೊಡ್ಡಿ ಆರು ವರ್ಷಗಳ ಕಾಲ ಜನಗಣತಿಯನ್ನು ಮುಂದೂಡಿದ್ದ ಕೇಂದ್ರ ಸರ್ಕಾರವು ಕೊನೆಗೂ ಈ ಪ್ರಕ್ರಿಯೆ ನಡೆಸಲು ಸೋಮವಾರ ಮುಂದಡಿ ಇಟ್ಟಿದೆ. ಸ್ವಾತಂತ್ರ್ಯಾನಂತರ ಮೊದಲ ಬಾರಿಗೆ ಜನಗಣತಿಯೊಂದಿಗೆ ಜಾತಿ ಗಣತಿಯನ್ನೂ ನಡೆಸಲು ಅಧಿಸೂಚನೆ ಹೊರಡಿಸುವ ಮೂಲಕ ಪ್ರಕ್ರಿಯೆಯನ್ನು ಅಧಿಕೃತವಾಗಿ ಪ್ರಾರಂಭಿಸಿದೆ.

'ಭಾರತದ ಜನಗಣತಿಯನ್ನು 2027ರಲ್ಲಿ ನಡೆಸಲಾಗುವುದು ಎಂದು ಕೇಂದ್ರ ಸರ್ಕಾರ ಈ ಮೂಲಕ ಘೋಷಿಸುತ್ತದೆ' ಎಂದು ಗೃಹ ಸಚಿವಾಲಯ ಹೊರಡಿಸಿದ ಗೆಜೆಟ್ ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಜನಗಣತಿಯ ಪ್ರಕ್ರಿಯೆಗಳು 2027ರ ಮಾರ್ಚ್ 1ರೊಳಗೆ ಮುಕ್ತಾಯಗೊಳ್ಳಲಿವೆ. ದೇಶದಲ್ಲಿ ಮೊದಲ ಡಿಜಿಟಲ್ ಜನಗಣತಿಯಾಗಲಿರುವ ಈ ಪ್ರಕ್ರಿಯೆಯು ನಾಗರಿಕರಿಗೆ ಸ್ವಯಂ-ಗಣತಿಗೆ ಒಳಪಡಲು ಅವಕಾಶ ನೀಡುತ್ತದೆ.

ಅಧಿಸೂಚನೆ ಹೊರಡಿಸಿದ ಕೂಡಲೇ ಕಾಂಗ್ರೆಸ್ ಪಕ್ಷವು ಸರ್ಕಾರದ ವಿರುದ್ಧ ಟೀಕಾಪ್ರಹಾರ ನಡೆಸಿದೆ.

▶11

'ರಾಜ್ಯದ ಜಾತಿ ಗಣತಿ ಭಿನ್ನ'

ದಾವಣಗೆರೆ: ಕೇಂದ್ರ ಸರ್ಕಾರ ಕೇವಲ ಆಯಾ ಜಾತಿಯ ಜನರ ಸಂಖ್ಯೆಯನ್ನು ಲೆಕ್ಕ ಹಾಕುತ್ತಿದೆ. ರಾಜ್ಯ ಸರ್ಕಾರ ಜಾತಿ ಗಣತಿಯ ಜೊತೆಗೆ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸುತ್ತಿದೆ. ಕೇಂದ್ರಕ್ಕಿಂತ ರಾಜ್ಯ ಸರ್ಕಾರ ನಡೆಸುವ ಜಾತಿ ಗಣತಿ ಭಿನ್ನವಾಗಿರಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. 'ಸಾಮಾಜಿಕ ನ್ಯಾಯಕ್ಕೆ ಜಾತಿಗಳ ಸ್ಥಿತಿಗತಿ ಅರ್ಥ ಮಾಡಿಕೊಳ್ಳುವುದು ಮುಖ್ಯ. ಇದಕ್ಕೆ ಜಾತಿಗಳ ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕ ಪರಿಸ್ಥಿತಿ ಗೊತ್ತಾಗಬೇಕು. ಇಲ್ಲವಾದರೆ ಸಾಮಾಜಿಕ ನ್ಯಾಯ ನೀಡುವುದು ಕಷ್ಟ' ಎಂದು ಸೋಮವಾರ ಇಲ್ಲಿ ಸುದ್ದಿಗಾರರಿಗೆ ಹೇಳಿದರು. ▶11

ಗಣತಿ ಯಾವಾಗ?

2026ರ ಅಕ್ಟೋಬರ್ 1: ಗುಡ್ಡಗಾಡು ಹಾಗೂ ಹಿಮ ಬೀಳುವ ಲಡಾಖ್, ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ ಹಾಗೂ ಉತ್ತರಾಖಂಡ.

2027ರ ಮಾರ್ಚ್ 1: ಕರ್ನಾಟಕ ಸೇರಿದಂತೆ ಉಳಿದ ರಾಜ್ಯಗಳು

ಎರಡು ಹಂತಗಳಲ್ಲಿ ಗಣತಿ

- ಮೊದಲ ಹಂತದಲ್ಲಿ ಮನೆ ಪಟ್ಟಿ ಕಾರ್ಯಾಚರಣೆ (ಎಚ್‌ಎಲ್‌ಒ) ನಡೆಸಲಾಗುವುದು. ಇಲ್ಲಿ ದೇಶದ ಪ್ರತಿಯೊಂದು ಕಟ್ಟಡಕ್ಕೆ ಭೇಟಿ ನೀಡಿ ಕಟ್ಟಡಗಳು ಮತ್ತು ಮನೆಗಳ ಗುಣಲಕ್ಷಣಗಳನ್ನು ದಾಖಲಿಸಲಾಗುತ್ತದೆ. ಗಣತಿದಾರರು ಮನೆಯ ಮುಖ್ಯಸ್ಥ, ಸದಸ್ಯರ ಸಂಖ್ಯೆ, ಕಟ್ಟಡದ ಬಳಕೆ (ವಸತಿ, ವಾಣಿಜ್ಯ, ಇತ್ಯಾದಿ), ಅದರ ನಿರ್ಮಾಣದಲ್ಲಿ ಬಳಸಿದ ವಸ್ತುಗಳು, ಕೊಠಡಿಗಳ ಸಂಖ್ಯೆ, ಮಾಲೀಕತ್ವದ ಸ್ಥಿತಿ, ನೀರು ಮತ್ತು ವಿದ್ಯುತ್ ಮೂಲಗಳು, ಶೌಚಾಲಯದ ಮಾದರಿ, ಅಡುಗೆಗೆ ಬಳಸುವ ಇಂಧನ ಮತ್ತು ಟಿವಿ, ಫೋನ್, ವಾಹನ ಇತ್ಯಾದಿ ಸ್ವತ್ತುಗಳ ದತ್ತಾಂಶ ಸಂಗ್ರಹಿಸುತ್ತಾರೆ. ಮೊದಲ ಹಂತವು ಮುಂದಿನ ವರ್ಷ ಏಪ್ರಿಲ್ 1ರಿಂದ ಸೆಪ್ಟೆಂಬರ್ 30ರವರೆಗೆ ನಡೆಯಲಿದೆ.
- ಎರಡನೇ ಹಂತದಲ್ಲಿ ಜನಸಂಖ್ಯಾ ಗಣತಿ ನಡೆಯುತ್ತದೆ. ಇಲ್ಲಿ ವೈಯಕ್ತಿಕ ದತ್ತಾಂಶಗಳ ಮೇಲೆ ಗಮನ ಕೇಂದ್ರೀಕರಿಸಲಾಗುತ್ತದೆ: ಹೆಸರು, ವಯಸ್ಸು, ಲಿಂಗ, ಹುಟ್ಟಿದ ದಿನಾಂಕ, ಮನೆಯ ಮುಖ್ಯಸ್ಥರೊಂದಿಗಿನ ಸಂಬಂಧ, ವೈವಾಹಿಕ ಸ್ಥಿತಿ, ಶಿಕ್ಷಣ, ಉದ್ಯೋಗ, ಧರ್ಮ, ಜಾತಿ/ಪಂಗಡ, ಅಂಗವೈಕಲ್ಯ ಸ್ಥಿತಿ ಮತ್ತಿತರ ಮಾಹಿತಿ ಸಂಗ್ರಹ. ಎರಡನೇ ಹಂತವು 2027ರ ಫೆಬ್ರುವರಿಯಲ್ಲಿ ನಡೆಯುವ ಸಂಭವವಿದೆ. ಆದರೆ, ಹಿಮ ಬೀಳುವ ಪ್ರದೇಶಗಳಲ್ಲಿ ಬೇರೆ ಸಮಯ ನಿಗದಿಮಾಡುವ ಸಾಧ್ಯತೆ ಇದೆ.
- ಗಣತಿದಾರರು ಮತ್ತು ಮೇಲ್ವಿಚಾರಕರಿಗೆ 2025ರ ಅಕ್ಟೋಬರ್‌ನಲ್ಲಿ ತರಬೇತಿ ಪ್ರಕ್ರಿಯೆ ಪ್ರಾರಂಭವಾಗಲಿದೆ.

₹13 ಸಾವಿರ ಕೋಟಿ ಜನಗಣತಿಗೆ ತಗಲುವ ವೆಚ್ಚ

1.3 ಲಕ್ಷ ಡಿಜಿಟಲ್ ಸಾಧನದೊಂದಿಗೆ ಸಜ್ಜಿತರಾದ ಗಣತಿ ಕಾರ್ಯಕರ್ತರಿಂದ ಎಣಿಕೆ

34 ಲಕ್ಷ ಗಣತಿದಾರರು ಹಾಗೂ ಮೇಲ್ವಿಚಾರಕರು ಭಾಗಿ

ಕೆಲವೆಡೆ ಜನನ ಪ್ರಮಾಣ ಕುಸಿತ?

● ಭರತ್ ಜೋಷಿ

ಬೆಂಗಳೂರು: ರಾಜ್ಯದ ಕೆಲವು ಜಿಲ್ಲೆಗಳಲ್ಲಿ 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರ ಸಂಖ್ಯೆ ಕುಸಿದಿರುವುದನ್ನು ಭಾರತೀಯ ಚುನಾವಣಾ ಆಯೋಗದ ದತ್ತಾಂಶ ವಿಶ್ಲೇಷಣೆಯು ಬಹಿರಂಗಪಡಿಸಿದೆ.

ಮತದಾರರ ಪಟ್ಟಿ ಪರಿಷ್ಕರಣೆ ಬಳಿಕ ದತ್ತಾಂಶವನ್ನು ಆಯೋಗವು ವಿಶ್ಲೇಷಣೆಗೆ ಒಳಪಡಿಸಿದೆ. ಈ ವೇಳೆ, 'ರಾಜ್ಯದ ಕೆಲವು ಜಿಲ್ಲೆಗಳಲ್ಲಿ 18 ವರ್ಷ ತುಂಬಿದವರ ಸಂಖ್ಯೆ ಅಸಾಧಾರಣವಾಗಿ ಹೆಚ್ಚಾಗಿದ್ದು, ಅದಕ್ಕಿಂತ ಕಡಿಮೆ ವಯಸ್ಸಿನವರ ಸಂಖ್ಯೆ ಕಡಿಮೆ ಇರುವುದು ಕಂಡುಬಂದಿದೆ. ಈ ವ್ಯತ್ಯಾಸವು ಜನನ ಪ್ರಮಾಣ ಕಡಿಮೆ ಆಗಿರುವುದನ್ನು ಸೂಚಿಸುತ್ತಿದ್ದು, ಇದು ಸಂಭವನೀಯ ಜನಸಂಖ್ಯಾ ಬಿಕ್ಕಟ್ಟಿನ ಸಂಕೇತ' ಎಂದು ಆಯೋಗದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'18–19 ವರ್ಷ ವಯಸ್ಸಿನ ಯುವತಿಯರ ಸಂಖ್ಯೆ ಕಡಿಮೆ ಇದೆಯೇ ಎಂದು ಪರಿಶೀಲಿಸಲು ನಾವು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ನೆರವು ಪಡೆದೆವು. ಅಲ್ಲಿ 0-5 ವರ್ಷ ವಯಸ್ಸಿನವರಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಕಡಿಮೆ ಇರುವುದು ನಮಗೆ ತಿಳಿದುಬಂತು' ಎಂದು ಅವರು ಮಾಹಿತಿ ನೀಡಿದರು.

ಕರ್ನಾಟಕದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಮತದಾರರ ಅನುಪಾತ (ಇಪಿಆರ್) 70.16 ಆಗಿದೆ. ಇದು ಅಂದಾಜು ಜನಸಂಖ್ಯೆಗೆ ಅನುಗುಣವಾದ ನೋಂದಾಯಿತ ಮತದಾರರ ಒಟ್ಟು ಸಂಖ್ಯೆ. ದತ್ತಾಂಶದ ಪ್ರಕಾರ 31 ಜಿಲ್ಲೆಗಳ ಪೈಕಿ, 24 ಜಿಲ್ಲೆಗಳಲ್ಲಿ ಈ ಅನುಪಾತವು ರಾಜ್ಯದ ಸರಾಸರಿಗಿಂತ ಹೆಚ್ಚಾಗಿದೆ. ಕೆಲವು ಜಿಲ್ಲೆಗಳಲ್ಲಿ ಈ ಅನುಪಾತವು ತುಂಬಾ ಹೆಚ್ಚಾಗಿದ್ದು, ಮತದಾರರ ಪಟ್ಟಿ ಪರಿಷ್ಕರಣೆಯ ಸಮಯದಲ್ಲಿ ಇದು ಬಹಿರಂಗವಾಗಿದೆ. ▶4A

ರಾಜ್ಯದ ಅಂದಾಜು ಜನಸಂಖ್ಯೆ (2025ರಲ್ಲಿ)	7,86,86,043
ಮತದಾರರ ಸಂಖ್ಯೆ	5,52,08,565

ಜನಸಂಖ್ಯೆಗೆ ಅನುಗುಣವಾಗಿ ಮತದಾರರ ಅನುಪಾತ (ಇಪಿಆರ್)

ಚಾಮುಂಡೇಶ್ವರಿ ಕ್ಷೇತ್ರ	97.94
ಚಿಕ್ಕಮಗಳೂರು ಕ್ಷೇತ್ರ	89.15
ನಾಗಮಂಗಲ ಕ್ಷೇತ್ರ	89.01
ನರಸಿಂಹರಾಜ ಕ್ಷೇತ್ರ	88.06
ಹಾಸನ ಕ್ಷೇತ್ರ	88.06

ಮೈದುಂಬಿದ ಜಲಪಾತಗಳು

ತುಂಗಾ, ಲಿಂಗನಮಕ್ಕಿ ಜಲಾಶಯಗಳಲ್ಲಿ ಒಳಹರಿವು ಹೆಚ್ಚಳ

ಪ್ರಜಾವಾಣಿ ವಾರ್ತೆ

ಮಂಗಳೂರು/ಮಡಿಕೇರಿ/ಶಿವಮೊಗ್ಗ: ದಕ್ಷಿಣ ಕನ್ನಡ ಜಿಲ್ಲೆ, ಚಿಕ್ಕಮಗಳೂರು, ಉಡುಪಿ, ಕೊಡಗು, ಶಿವಮೊಗ್ಗ ಸೇರಿದಂತೆ ರಾಜ್ಯದ ಹಲವು ಭಾಗಗಳಲ್ಲಿ ಸೋಮವಾರವೂ ಧಾರಾಕಾರ ಮಳೆಯಾಯಿತು.

ಕೆಲ ದಿನಗಳಿಂದ ಸುರಿಯುತ್ತಿರುವ ಸತತ ಮಳೆಯಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ನದಿಗಳಾದ ನೇತ್ರಾವತಿ, ನಂದಿನಿ, ಫಲ್ಗುಣಿ, ಶಾಂಭವಿ ನದಿಗಳು ಉಕ್ಕಿ ಹರಿಯುತ್ತಿವೆ. ತಗ್ಗು ಪ್ರದೇಶಗಳು ಜಲಾವೃತವಾಗಿವೆ.

ಶಿವಮೊಗ್ಗ ಜಿಲ್ಲೆಯಲ್ಲೂ ಮೃಗಶಿರಾ ಮಳೆ ಬಿರುಸುಗೊಂಡಿದೆ. ಜೋಗ ಜಲಪಾತ ಮೈದುಂಬಿದೆ. ಹಾಲ್ನೊರೆಯೊಂದಿಗೆ ಧುಮ್ಮಿಕ್ಕುವ ರಾಜ, ರಾಣಿ, ರೋರರ್, ರಾಕೆಟ್‌ನ ವೀಕ್ಷಣೆಗೆ ಬರುವ ಪ್ರವಾಸಿಗರ ಸಂಖ್ಯೆಯೂ ಹೆಚ್ಚಿದೆ. ಸುರಕ್ಷತೆಯ ದೃಷ್ಟಿಯಿಂದ ಹೊಸನಗರ ಹಾಗೂ ಸಾಗರ ತಾಲ್ಲೂಕುಗಳಲ್ಲಿ ಅಂಗನವಾಡಿ, ಶಾಲೆ ಹಾಗೂ ಕಾಲೇಜುಗಳಿಗೆ ಜಿಲ್ಲಾಡಳಿತ ಸೋಮವಾರ ರಜೆ ಘೋಷಣೆ ಮಾಡಿತ್ತು.

ಇಬ್ಬರ ಸಾವು: ಶಿವಮೊಗ್ಗ ತಾಲ್ಲೂಕಿನ ಕುಂಸಿ ಪೊಲೀಸ್ ಠಾಣೆ ವ್ಯಾಪ್ತಿಯ ಅಡಗಡಿ ಗ್ರಾಮದಲ್ಲಿ ಮಳೆಯ ಬಿರುಸಿಗೆ ಮನೆ ಕುಸಿದು ಸಿದ್ದಮ್ಮ (100) ಸಾವಿಗೀಡಾಗಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಿರುಗಾಳಿ ಸಹಿತ ಮಳೆಯಿಂದ ಹಲವೆಡೆ ರಸ್ತೆಗೆ ಅಡ್ಡಲಾಗಿ ಮರಗಳು ಉರುಳಿವೆ. ಬಾಳೆಹೊನ್ನೂರು ಸಮೀಪ ಮರದ ಕೊಂಬೆಯೊಂದು ಬೈಕ್ ಸವಾರನ ಮೇಲೆ ಬಿದ್ದಿದ್ದು, ಕಡಬಗೆರೆ ಬಿಳುಕೊಪ್ಪ ನಿವಾಸಿ ಅನಿಲ್ ರೊಜಾರಿಯೊ (50) ಮೃತಪಟ್ಟಿದ್ದಾರೆ. ▶5

ಚುಟುಕು ಸುದ್ದಿ

ವಿದ್ಯಾರ್ಥಿಗಳ ಸುರಕ್ಷತೆಗೆ ಆದ್ಯತೆ: ಕೇಂದ್ರ ಭರವಸೆ

ನವದೆಹಲಿ (ಪಿಟಿಐ): ಇರಾನ್‌ನಲ್ಲಿರುವ ಭಾರತೀಯ ವಿದ್ಯಾರ್ಥಿಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವ ಮತ್ತು ಅವರನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸುವ ನಿಟ್ಟಿನಲ್ಲಿ ಟೆಹರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಕಾರ್ಯೋನ್ಮುಖವಾಗಿದೆ ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ. ಅಲ್ಲಿನ ಭಾರತದ ರಾಯಭಾರ ಕಚೇರಿಯು ಇರಾನ್–ಇಸ್ರೇಲ್ ನಡುವಿನ ಸಂಘರ್ಷ ಮತ್ತು ಟೆಹರಾನ್‌ನಲ್ಲಿನ ಭದ್ರತಾ ಪರಿಸ್ಥಿತಿಯ ಮೇಲೆ ನಿಗಾವಹಿಸಿದೆ ಎಂದು ವಿದೇಶಾಂಗ ಸಚಿವಾಲಯ ಪ್ರಕಟಣೆಯಲ್ಲಿ ಹೇಳಿದೆ. ಕಳೆದ ವರ್ಷದ ಮಾಹಿತಿಯಂತೆ ಇರಾನ್‌ನಲ್ಲಿ ಸುಮಾರು 10 ಸಾವಿರ ಭಾರತೀಯರು ಇದ್ದಾರೆ.

ಎಲ್ಲ ಮತಗಟ್ಟೆಗಳಲ್ಲಿ ವೆಬ್‌ಕಾಸ್ಟಿಂಗ್

ನವದೆಹಲಿ (ಪಿಟಿಐ): ಎಲ್ಲ ಮತಗಟ್ಟೆಗಳಲ್ಲೂ ವೆಬ್‌ಕಾಸ್ಟಿಂಗ್ ವ್ಯವಸ್ಥೆಯನ್ನು ಜಾರಿಗೊಳಿಸಲು ಚುನಾವಣಾ ಆಯೋಗ ಸೋಮವಾರ ನಿರ್ಧರಿಸಿದೆ. ಈ ಮೊದಲು ಶೇ 50ರಷ್ಟು ಮತಗಟ್ಟೆಗಳಲ್ಲಿ ಮಾತ್ರ ವೆಬ್‌ಕಾಸ್ಟಿಂಗ್‌ಗೆ ಅವಕಾಶವಿತ್ತು. ಮತದಾನ ದಿನಗಳಲ್ಲಿ ಮತದಾನದ ಪ್ರಕ್ರಿಯೆ ಮೇಲೆ ಹೆಚ್ಚಿನ ಮೇಲ್ವಿಚಾರಣೆಯನ್ನು ಖಚಿತಪಡಿಸಿಕೊಳ್ಳಲು ಆಯೋಗ ಈ ನಿರ್ಧಾರ ತೆಗೆದುಕೊಂಡಿದೆ. ಈ ವರ್ಷದ ಕೊನೆಯಲ್ಲಿ ಬಿಹಾರ ವಿಧಾನಸಭಾ ಚುನಾವಣೆಗಳು ನಡೆಯಲಿದ್ದು, ಶೇ 100ರಷ್ಟು ವೆಬ್‌ಕಾಸ್ಟಿಂಗ್ ಜಾರಿಗೆ ತರುವ ಮೊದಲ ರಾಜ್ಯವಾಗಲಿದೆ. 'ಇಂಟರ್‌ನೆಟ್ ಸಂಪರ್ಕವಿರುವ ಪ್ರದೇಶಗಳಲ್ಲಿ ವೆಬ್‌ಕಾಸ್ಟಿಂಗ್ ಮಾಡಬೇಕು. ಇಂಟರ್‌ನೆಟ್ ಸಂಪರ್ಕ ದೊರೆಯದ ಪ್ರದೇಶಗಳಲ್ಲಿ ವಿಡಿಯೊಗ್ರಫಿ, ಫೋಟೊಗ್ರಫಿಯಂತಹ ಪರ್ಯಾಯ ವ್ಯವಸ್ಥೆಮಾಡಿ ಕೊಳ್ಳಬೇಕು' ಎಂದು ಆಯೋಗ ಹೇಳಿದೆ.

ಪಿಂಚಣಿ: 23.19 ಲಕ್ಷ ಅನರ್ಹರ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಧ್ಯಾ ಸುರಕ್ಷಾ ಮತ್ತು ವೃದ್ಧಾಪ್ಯ ವೇತನ ಯೋಜನೆಯಡಿ 23.19 ಲಕ್ಷ ಫಲಾನುಭವಿಗಳನ್ನು ಅನರ್ಹರೆಂದು ಸಾಮಾಜಿಕ ಭದ್ರತೆ ಹಾಗೂ ಪಿಂಚಣಿ ಇಲಾಖೆ ಗುರುತಿಸಿದೆ.

ಅನರ್ಹ ಫಲಾನುಭವಿಗಳ ಪಿಂಚಣಿ ರದ್ದುಪಡಿಸಲು ದಾಖಲೆ ಪತ್ರಗಳ ಪರಿಶೀಲನೆ ನಡೆಸಿ ನಿಯಮಾನುಸಾರ ಅಗತ್ಯ ಕ್ರಮ ತೆಗೆದುಕೊಳ್ಳಬೇಕು. ಅನರ್ಹ ಫಲಾನುಭವಿಗಳ ವಿರುದ್ಧ ಕೈಗೊಂಡ ಕ್ರಮದ ವಿವರವನ್ನೂ ಕಳಿಸಬೇಕು ಎಂದು ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಇಲಾಖೆ ಆಯುಕ್ತರು ಜಿಲ್ಲಾಧಿಕಾರಿಗಳಿಗೆ ಇದೇ 6ರಂದು ಪತ್ರ ಬರೆದಿದ್ದಾರೆ.

'ಯೋಜನೆಯಡಿ 21.87 ಲಕ್ಷ ಮತ್ತು ಸಂಧ್ಯಾ ಸುರಕ್ಷಾ ಯೋಜನೆಯಡಿ 31.33 ಲಕ್ಷ ಫಲಾನುಭವಿಗಳಿದ್ದಾರೆ ಎಂದು ಆಯುಕ್ತರು ವಿವರಿಸಿದ್ದಾರೆ.

ಅನರ್ಹ ಫಲಾನುಭವಿಗಳ ಪಟ್ಟಿಯನ್ನು ಶೀಘ್ರ ಸಲ್ಲಿಸುವಂತೆ ಅವರು ತಹಶೀಲ್ದಾರರಿಗೆ ತಿಳಿಸಿದ್ದಾರೆ. ▶4B

ಘನತ್ಯಾಜ್ಯ ವಿಲೇವಾರಿ: ಮರು ಟೆಂಡರ್‌ಗೆ ತಡೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿಯ ಗುತ್ತಿಗೆ ಟೆಂಡರ್‌ಗೆ ಇಲಾಖಾ ಸಚಿವರ ಅನುಮೋದನೆ ಪಡೆದುಕೊಳ್ಳಬೇಕೆಂಬ ಷರತ್ತು ವಿಧಿಸಿರುವ ಕಾರಣಕ್ಕೆ ಮರು ಟೆಂಡರ್ ಪ್ರಕ್ರಿಯೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

'ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ' (ಬಿಎಸ್‌ಡಬ್ಲ್ಯು-ಎಂಎಲ್) ಮೇ ತಿಂಗಳಲ್ಲಿ ಆಹ್ವಾನಿಸಿದ್ದ ಮರು ಟೆಂಡರ್‌ನ ಷರತ್ತುಗಳನ್ನು ಪ್ರಶ್ನಿಸಿ, 'ಬೆಂಗಳೂರು ಮಹಾನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರ ಸಂಘ ಹಾಗೂ ಗುತ್ತಿಗೆದಾರರ ಸಂಘ'ದ ಪ್ರಧಾನ ಕಾರ್ಯದರ್ಶಿ ಎಸ್.ಎನ್. ಬಾಲಸುಬ್ರಮಣಿಯಂ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಪಿ.ಪ್ರಸನ್ನ ಕುಮಾರ್, 'ಬಿಎಸ್‌ಡಬ್ಲ್ಯುಎಂಎಲ್ 2023ರಲ್ಲಿ ಆಹ್ವಾನಿಸಿದ್ದ ಟೆಂಡರ್ ನಿಯಮಗಳನ್ನು ಪ್ರಶ್ನಿಸಿ ಹಲವು ಗುತ್ತಿಗೆದಾರರು ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ಇದೇ ನ್ಯಾಯಪೀಠ ವಿಲೇವಾರಿ ಮಾಡಿತ್ತು' ಎಂದರು. ▶4B

ಚಿನಕುರುಳಿ ಪ್ರಕಾಶ್ ಶೆಟ್ಟಿ

₹51 ಲಕ್ಷ ದೇಣಿಗೆ

ಬೆಂಗಳೂರು: ಮಾರುತಿ ಮೆಡಿಕಲ್ಸ್‌ನ ಮಹೇಂದ್ರ ಮುನ್ನೋತ್ ಕುಟುಂಬ ಗೋ ಸೇವೆಗಾಗಿ ವಿವಿಧ ಗೋಶಾಲೆಗಳಿಗೆ ₹51 ಲಕ್ಷ ದೇಣಿಗೆ ನೀಡಿದೆ. ಕನಕಪುರ ರಸ್ತೆ ಅಮೃತಧಾರದಲ್ಲಿ ಗೋಪೂಜೆ ನಡೆಯಿತು.

ನಮೋ ಭಾರತ್: ಟಿಕೆಟ್ ದರ ಇಳಿಕೆ

ನವದೆಹಲಿ (ಪಿಟಿಐ): 'ನಮೋ ಭಾರತ್' ರೈಲಿನ ಪ್ರಯಾಣಿಕರು ನಿಗದಿತ ಟಿಕೆಟ್ ದರಕ್ಕಿಂತ ಶೇ 20ರಷ್ಟು ಹೆಚ್ಚು ಮೊತ್ತ ಪಾವತಿಸಿದರೆ 'ಪ್ರೀಮಿಯಂ' ಕೋಚ್‌ನ ಸೌಲಭ್ಯಗಳನ್ನು ಪಡೆಯಬಹುದು ಎಂದು ರಾಷ್ಟ್ರ ರಾಜಧಾನಿ ಪ್ರಾದೇಶಿಕ ಸಾರಿಗೆ ಸಂಸ್ಥೆ (ಎನ್‌ಸಿಆರ್‌ಟಿಸಿ) ಹೇಳಿದೆ.

'ಪ್ರೀಮಿಯಂ' ಕೋಚ್‌ನ ಟಿಕೆಟ್ ದರವನ್ನು 'ಎನ್‌ಸಿಆರ್‌ಟಿಸಿ' ತಗ್ಗಿಸಿದ್ದು, ಪರಿಷ್ಕೃತ ದರದ ಅನ್ವಯ 'ಸ್ಟ್ಯಾಂಡರ್ಡ್ ಕೋಚ್' ಟಿಕೆಟ್ ದರ ₹100 ಇದ್ದರೆ, ಅದಕ್ಕೆ ಹೆಚ್ಚುವರಿ ₹20 ಪಾವತಿಸಿ, ಅದನ್ನು ಪ್ರೀಮಿಯಂ ಕೋಚ್ ಟಿಕೆಟ್ ಆಗಿ ಬದಲಿಸಿಕೊಳ್ಳಬಹುದು.

ಪರಿಷ್ಕೃತ ದರದಂತೆ ನ್ಯೂ ಅಶೋಕ್ ನಗರ ಮತ್ತು ಮೀರತ್ ನಡುವಿನ ಪ್ರಯಾಣ ದರವು ಸ್ಟ್ಯಾಂಡರ್ಡ್ ಕೋಚ್‌ಗೆ ₹150 ಇದ್ದರೆ, ಪ್ರೀಮಿಯಂ ಕೋಚ್‌ಗೆ ₹180 ಇರಲಿದೆ. ಗಾಜಿಯಾಬಾದ್ ಮತ್ತು ಆನಂದ್ ವಿಹಾರ್ ನಡುವೆ ಸ್ಟ್ಯಾಂಡರ್ಡ್ ಕೋಚ್‌ನ ಟಿಕೆಟ್ ದರ ₹40 ಇದ್ದರೆ ₹50ಕ್ಕೆ ಪ್ರೀಮಿಯಂ ಟಿಕೆಟ್ ಲಭಿಸಲಿದೆ.

'ನಮೋ ಭಾರತ್' ಅಪ್ಲಿಕೇಷನ್ ಬಳಸಿ ಕ್ಯೂಆರ್ ಟಿಕೆಟ್ ಕಾಯ್ದಿರಿಸುವ ಪ್ರಯಾಣಿಕರಿಗೆ ಲಾಯಲ್ಟಿ ಪಾಯಿಂಟ್ಸ್ ಕೊಡುಗೆಯನ್ನು ಎನ್‌ಸಿಆರ್‌ಟಿಸಿ ಪ್ರಕಟಿಸಿದೆ. 1 ಪಾಯಿಂಟ್‌ಗೆ 10 ಪೈಸೆಯಂತೆ, 300 ಪಾಯಿಂಟ್ಸ್ ಸೇರ್ಪಡೆಗೊಂಡಾಗ ಗ್ರಾಹಕರು ಅವನ್ನು ಟಿಕೆಟ್ ಖರೀದಿಗೆ ಬಳಸಿಕೊಳ್ಳಬಹುದು. ಸದ್ಯ ನಮೋ ಭಾರತ್ ರೈಲುಗಳು 55 ಕಿ.ಮೀ ವ್ಯಾಪ್ತಿಯಲ್ಲಿ ಸಂಚರಿಸುತ್ತಿದ್ದು, ಈ ಮಾರ್ಗದಲ್ಲಿ 11 ನಿಲ್ದಾಣಗಳಿವೆ.

500 ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ

'ಕ್ಷೇತ್ರ ವ್ಯಾಪ್ತಿಯಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಒತ್ತು; ಕಂದಾಯ ಸಚಿವ ಕೃಷ್ಣ ಬೈರೇಗೌಡ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಕ್ರೀಡೆ, ಪಠ್ಯೇತರ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಆದ್ಯತೆ
- ಹೊಸ ಪ್ರೌಢಶಾಲೆ, ಪಿಯು, ಪದವಿ ಕಾಲೇಜು ಮಂಜೂರು

ಯಲಹಂಕ: 'ಶಿಕ್ಷಣ ಎಂಬ ಅಸ್ತ್ರ ನಮ್ಮ ಜೊತೆಯಲ್ಲಿದ್ದರೆ ಜೀವನದಲ್ಲಿ ಯಾವುದೇ ಸಾಧನೆ ಮಾಡಲು ಹಾಗೂ ಉನ್ನತಮಟ್ಟದಲ್ಲಿ ಯಶಸ್ಸನ್ನು ಗಳಿಸಲು ಸಾಧ್ಯವಾಗುತ್ತದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಭಿಪ್ರಾಯಪಟ್ಟರು.

ಕೆಬಿಜಿ ಸ್ವಯಂ ಸೇವಕರು ಹಾಗೂ ಬ್ಯಾಟರಾಯನಪುರ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಆಶ್ರಯದಲ್ಲಿ ವಿದ್ಯಾರಣ್ಯಪುರದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ದೊಡ್ಡ ಬೊಮ್ಮಸಂದ್ರ ಮತ್ತು ವಿದ್ಯಾರಣ್ಯಪುರ ವಾರ್ಡ್ ವ್ಯಾಪ್ತಿಯಲ್ಲಿ ಎಸ್ಎಸ್ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿದ 500 ವಿದ್ಯಾರ್ಥಿಗಳನ್ನು ಸನ್ಮಾನಿಸಿ ಅವರು ಮಾತನಾಡಿದರು.

'ಬಡ ಮಕ್ಕಳ ಹಾಗೂ ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಅನುಕೂಲವಾಗಲು ಹಲವು ಸರ್ಕಾರಿ ಪ್ರೌಢಶಾಲೆ, ಪಿಯು ಮತ್ತು ಪದವಿ ಕಾಲೇಜುಗಳನ್ನು ಸರ್ಕಾರದಿಂದ ಮಂಜೂರು ಮಾಡಿಸಿ, ನೂತನ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರಾಮುಖ್ಯ ನೀಡಲಾಗಿದೆ' ಎಂದರು.

ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಶೇಷಾದ್ರಿ, ಕಾಂಗ್ರೆಸ್ ಮುಖಂಡರಾದ ಎನ್.ಶ್ರೀನಿವಾಸಯ್ಯ, ಟಿ.ಜಿ. ಚಂದ್ರು, ವಿ.ಹು, ಆರ್.ಎಂ.ಶ್ರೀನಿವಾಸ್, ಬಿ.ಎಸ್.ಗೋಪಾಲಕೃಷ್ಣ, ತಿಂಡ್ಲು ಸತೀಶ್, ಮಲ್ಯಾದ್ರಿ, ಬಿ.ಸಿ.ಸುರೇಶ್, ಜನಾರ್ದನ್, ಬೇಬಿರಾಣಿ, ವಿಜಯಮ್ಮ ಇದ್ದರು.

ದೊಡ್ಡಬೊಮ್ಮಸಂದ್ರ ಮತ್ತು ವಿದ್ಯಾರಣ್ಯಪುರ ವಾರ್ಡ್ ವ್ಯಾಪ್ತಿ ವಿದ್ಯಾರ್ಥಿಗಳಿಗೆ ಕೃಷ್ಣಬೈರೇಗೌಡ, ಪ್ರಶಸ್ತಿಪತ್ರ ನೀಡಿ ಸನ್ಮಾನಿಸಿದರು

ನೈಋತ್ಯ ರೈಲ್ವೆ

ತಿದ್ದುಪಡಿ-02 ಟೆಂಡರ್ ಪ್ರಕಟಣೆ ಸಂ. 02/2025/ಎಸ್‌ಬಿಸಿ ದಿನಾಂಕ : 03-04-2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಐಟಂಗಳ ಸರಬರಾಜಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಸಂಕ್ಷಿಪ್ತ ವಿವರಣೆ : 1 ಸಂಖ್ಯೆಯ ಸಪ್ಲೈ ಏರ್ ಬಿಲೋ, 2 ಸಂಖ್ಯೆಗಳ ಫ್ರೆಶ್ ಬೆಲ್ಲೋಸ್ ಮತ್ತು 2 ಸಂಖ್ಯೆಗಳ ರಿಟರ್ನ್ ಏರ್ ಬೆಲ್ಲೋ ಡಕ್ಟ್‌ಗಳನ್ನು ಹೊಂದಿರುವ ಬೆಲ್ಲೋಸ್ ಸೆಟ್‌ನ ಸರಬರಾಜು. **(ಟೆಂಡರ್ ಸಂ. ಎಲ್8255530) (ಪ್ರಮಾಣ : 400 ಸೆಟ್)**

ಬಿಡ್‌ಗಳನ್ನು ಸಲ್ಲಿಸಲು ಬದಲಿಸಲಾದ ಕೊನೆಯ ದಿನಾಂಕ : **30-06-2025 ರಂದು 10:30 ಗಂಟೆಯವರೆಗೆ.**

ವಿವರಗಳಿಗೆ www.ireps.gov.in ಗೆ ಲಾಗ್ ಆನ್ ಮಾಡಿ

ಹಿರಿಯ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು ಬೆಂಗಳೂರು

ಪಿಯುಬಿ/185/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025-26

ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ

South Western Railway - SWR SWRRLY SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಬಿ-ಎಸ್‌ಜಿ-ಪಿಆರ್‌ಓಜೆ-ಎಸ್‌ಬಿಸಿ-ಆರ್‌ಪಿಎಫ್-ಟಿಹೆಚ್‌ಎಎನ್‌ಎ-ಸಿಸಿಟಿವಿ ದಿನಾಂಕ : 09-06-2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಹುಬ್ಬಳ್ಳಿ ವಿಭಾಗದ ಆರ್‌ಪಿಎಫ್ ಕಛೇರಿಯ 16 ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಒದಗಿಸುವುದು (ಹುಬ್ಬಳ್ಳಿ, ಧಾರವಾಡ, ಬಳ್ಳಾರಿ, ಹೊಸಪೇಟೆ, ಗದಗ, ಕೊಪ್ಪಳ, ವಿಜಯಪುರ, ಬಾಗಲಕೋಟೆ, ಬೆಳಗಾವಿ, ಲೋಂಡಾ, ಘಟಪ್ರಭಾ, ವಾಸ್ಕೋ-ಡ-ಗಾಮಾ, ಕ್ಯಾಸೆಲ್ ರಾಕ್, ಕಾರ್ಯಾಗಾರ / ಹುಬ್ಬಳ್ಳಿ, ಸಾದುಲ್‌ಶಹರ್, ಸಿಐಬಿ/ಹುಬ್ಬಳ್ಳಿ). ಮೈಸೂರು ವಿಭಾಗದ ಮೈಸೂರು, ಹಾಸನ, ಅರಸೀಕೆರೆ, ದಾವಣಗೆರೆ, ಶಿವಮೊಗ್ಗ ಟೌನ್ ನಿಲ್ದಾಣದಲ್ಲಿ ಆರೋಪಿಗಳನ್ನು ಇರಿಸುವ ಮತ್ತು ವಿಚಾರಣೆ ಉದ್ದೇಶಕ್ಕಾಗಿ ಒದಗಿಸಲಾದ ಸ್ಥಳವನ್ನು ಹೊಂದಿರುವ ಆರ್‌ಪಿಎಫ್ ಪೋಸ್ಟ್ ಮತ್ತು ಔಟ್‌ಪೋಸ್ಟ್‌ಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಒದಗಿಸುವುದು ಮತ್ತು ಹುಬ್ಬಳ್ಳಿ ನಿಲ್ದಾಣದಲ್ಲಿ ಹಳೆಯದಾದ ವೀಡಿಯೋ ಸರ್ವೇಲೆನ್ಸ್ ವ್ಯವಸ್ಥೆಯನ್ನು ಬದಲಿಸುವುದು.	ರೂ. 4,08,91,001.33

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **03-07-2025 ರಂದು 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್ ಇಂಜಿನಿಯರ್ / ಯೋಜನೆ, ಬೆಂಗಳೂರು

ಪಿಯುಬಿ/184/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025-26

ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ

South Western Railway - SWR SWRRLY SWRRLY

ನೈಋತ್ಯ ರೈಲ್ವೆ

ತಿದ್ದುಪಡಿ-03 ಟೆಂಡರ್ ಪ್ರಕಟಣೆ ಸಂ. 07/2025/ಎಸ್‌ಬಿಸಿ ದಿನಾಂಕ : 02-05-2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಐಟಂಗಳ ಸರಬರಾಜಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಸಂಕ್ಷಿಪ್ತ ವಿವರಣೆ : 3ಟಿ ಸಾಮರ್ಥ್ಯದ ಆಕ್ಸಿಲಿಯರಿ ಹಾಯಿಸ್ಟ್ ಜೊತೆಗೆ 10ಟಿ ಸಾಮರ್ಥ್ಯದ ಇಓಟಿ ಕ್ರೇನ್‌ನ ಸರಬರಾಜು, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವುದು **(ಟೆಂಡರ್ ಸಂ. ಎಲ್8255216ಎ) (ಪ್ರಮಾಣ : 02 ಸಂಖ್ಯೆಗಳು)**

ಬಿಡ್‌ಗಳನ್ನು ಸಲ್ಲಿಸಲು ಬದಲಿಸಲಾದ ಕೊನೆಯ ದಿನಾಂಕ : **30-06-2025 ರಂದು 10:30 ಗಂಟೆಯವರೆಗೆ.**

ವಿವರಗಳಿಗೆ www.ireps.gov.in ಗೆ ಲಾಗ್ ಆನ್ ಮಾಡಿ

ಹಿರಿಯ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು ಬೆಂಗಳೂರು

ಪಿಯುಬಿ/186/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025-26

ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ

South Western Railway - SWR SWRRLY SWRRLY

सत्यमेव जयते

IDEMI

(A Govt. of India Society)
Ministry of Micro, Small & Medium Enterprises
Organized By IDEMI, Mumbai, Ministry of MSME, Govt of India

Government Certificate course on Digital Marketing With AI

Course Duration 2 Days | Course Dates- 21,22 June 2025 | Course Timing - 10.30 am to 5.00 pm

VENUE: IDEMI EXTENTION CENTRE-C/O MSME DEVELOPMENT INSTITUTE, WEST OF CHORD RD, INDUSTRIAL ESTATE, RAJAJINAGAR, BENGALURU, KARNATAKA-560010

Email id : training@idemi.org Web : www.idemi.org Ph.: (022) 2405 0301/2/3/4

Content : Introduction of AI, Chat GTP, Gemini, Google, AI Image & Video Creator, Instagram & Facebook (Organic & Paid Marketing), Linkdin Professional Use, Google Business Profile Creation, YouTube & Earning, Search engine Optimization (SEO).

QR code for Registration

Fees 4000/-+18 % GST Regular (Include Lunch & Tea) | Student Fees- 2500+18 % GST (include lunch & tea)

50 % Discount

(Fees are not Refundable)
For people from IT & Management Field, Entrepreneur Students & all general citizen
After successful certificate will be issued
Call for details between 10 am to 6 pm
Contact- 9019870803, 9403566219, 9481236511, 9869087617

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ-562 101
ದೂರವಾಣಿ ಸಂಖ್ಯೆ: ಕಛೇರಿ: 08156-295427, ಫ್ಯಾಕ್ಸ್: 08156 - 295427
ಇಮೇಲ್ - eemidcbpura@gmail.com
ಸಂಖ್ಯೆ : ಕಾಸಬ/ತಾಂಶಾ/ತಾಂಸ/ ಟೆಂಡರ್ ಪ್ರಕಟಣೆ ಸಂಖ್ಯೆ: 03/2025-26
ದಿನಾಂಕ: 13/06/2025

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ, ಚಿಕ್ಕಬಳ್ಳಾಪುರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ **ಅಟಲ್ ಭೂಜಲ್ ಯೋಜನೆ ಅಡಿಯಲ್ಲಿ** ಅನುಮೋದನೆಯಾಗಿರುವ ಕಾಮಗಾರಿಗೆ ಕೆ.ಡಬ್ಲೂ 3 ನಿಬಂಧನೆಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಮೂಲಕ ದ್ವೀ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. **ಇ.ಎಂ.ಡಿ ಮೊತ್ತ ಕೆ.ಪಿ.ಪಿ ನಲ್ಲಿ ಇದ್ದಂತೆ.** ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 23/06/2025 ಸಾಯಂಕಾಲ 4.30 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ 24/06/2025 ರಂದು (ಸಾಧ್ಯವಾದ್ದಲ್ಲಿ) ಸದರಿ ಕಾಮಗಾರಿಯ ಟೆಂಡರ್‌ಗಳ ಮೊತ್ತ ಅಥವಾ ಇ.ಎಂ.ಡಿ ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ-ಪ್ರಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತಗಳು ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ - 08156-295427 ಮತ್ತು ಕೆ.ಪಿ.ಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆ: 91-8068948777 ಮತ್ತು 91-8046010000 ರಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

PUBLIC NOTICE

The public is hereby notified that my client, **Sri. NARAYANASWAMY L N**, S/o. Sri. Narayanappa, R/at. 22nd Ward, Shanthinagar, Devanahalli Town, Devanahalli, Bengaluru Rural District, intend to purchase the Schedule property from Vendors namely: (1) **R. RAMAKRISHNA** S/o. Late. S. Ramaiah, (2) Smt. **SHREELAKSHMI**, W/o. R. Ramakrishna (3) Smt. **MAMATHA. R**, D/o. R. Ramakrishna (4) Smt. **DEEPA PRASHANTH**, D/o. R. Ramakrishna and (5) Sri. **PUNEETH R**, S/o. R. Ramakrishna, all are residing at No. 84, 36th Main, 4th A Cross, BTM Dollars Layout, Madivala, Bengaluru- 560068 (Owners) and M/s. **TRIDENT DEVELOPERS**, Registered No. GDN-F334/2020-21, represented by its Partners, 1. DEEPAK S CHANDRASHEKAR; 2. RAVI A, Office at. No. 15, CA Towers, Opposite to Country Club, Sathnur Village, Bengaluru Post, Jala Hobli, Bengaluru-562149 (Developer).

General public are notified that if there are any claimants or objectors/financial institutions or any other entity opposing the sale transaction, who possess valid and tenable documents in that regard may put forth their claim if any to the title or possession of the schedule property to the address of the counsel of the purchaser **within 15 days** from publication. Any objection without copies of valid documents and which is made after 15 days of publication will not be considered and my client shall go ahead with the sale transaction if there is no objection or claim.

SCHEDULE PROPERTY

ITEM No. I: All that piece and parcel of the residentially converted land bearing Sy. No. 58, measuring 1 Acre, of Shrothreeyathellohalli Village, Channarayapatna Hobli, Devanahalli Taluk, Bengaluru Rural district, converted vide official Conversion No. 267662 dated 29.09.2021, passed by the Deputy Commissioner, Bengaluru Rural District and bounded on the East by : Land in Sy. No. 70, West by : Land in Sy. No. 10, North by : Land in Sy. No. 59, South by : Land in Sy. No. 70.

ITEM No.II: All that piece and parcel of the residentially converted land bearing Sy. No. 59, measuring 2 Acres of Shrothreeyathellohalli Village, Channarayapatna Hobli, Devanahalli Taluk, Bengaluru Rural district, vide official Conversion No. 274471 dated 10.11.2021, passed by the Deputy Commissioner, Bengaluru Rural District and bounded on the East by: Land in Sy. No. 70, West by : Land in Sy. No. 10, North by : Land in Sy. No. 9 and South by : Land in Sy. No. 58.

ITEM No. III: All that piece and parcel of the residentially converted land bearing Sy. No. 60, measuring 2 Acres of Shrothreeyathellohalli Village, Channarayapatna Hobli, Devanahalli Taluk, Bengaluru Rural district, vide official Conversion No. 274469 dated 10.11.2021, passed by the Deputy Commissioner, Bengaluru Rural District and bounded on the East by : Land in Sy. No. 10, West by : Land in Sy. No. 8 and 10, North by : Land in Sy. No. 4 and South by : Land in Sy. No. 61.

ITEM No. IV: All that piece and parcel of the residentially converted land bearing Sy. No. 61, measuring 2 Acres of Shrothreeyathellohalli Village, Channarayapatna Hobli, Devanahalli Taluk, Bengaluru Rural district, vide official Conversion No. 289680 dated 16.12.2021, passed by the Deputy Commissioner, Bengaluru Rural District and bounded on the East by : Land in Sy.No. 10, West by : Land in Sy.No. 10, North by : Land in Sy. No. 60 and South by : Land in Sy. No. 62.

ITEM No. V: All that piece and parcel of the residentially converted land bearing Sy. No. 62/2, measuring 1 Acre 38 Guntas of Shrothreeyathellohalli Village, Channarayapatna Hobli, Devanahalli Taluk, Bengaluru Rural district, vide official Conversion No. 289678 dated 16.12.2021, passed by the Deputy Commissioner, Bengaluru Rural District and bounded on the East by : Land in Sy. No. 10, West by : Land in Sy. No. 1, North by : Land in Sy. No. 61 and South by : Land in Sy. No. 63.

ITEM No. VI: All that piece and parcel of the residentially converted land bearing Sy. No. 70, measuring 3 Acres 14 Guntas of Shrothreeyathellohalli Village, Channarayapatna Hobli, Devanahalli Taluk, Bengaluru Rural district, vide official Conversion No. 274470 dated 10.11.2021, passed by the Deputy Commissioner, Bengaluru Rural District and bounded on the East by : Land in Sy. No. 63 and 64, West by : Land in Sy. No. 58, 59 &10 North by : Land in Sy. No. 63,58 &10 and South by : Land in Sy. No. 64,69 &10.

ITEM No .VII: All that piece and parcel of the residentially converted land bearing Sy. No. 73, measuring 1 Acre and 10 Guntas of Shrothreeyathellohalli Village, Channarayapatna Hobli, Devanahalli Taluk, Bengaluru Rural district, vide official Conversion No. 351023 dated 03.08.2022, passed by the Deputy Commissioner, Bengaluru Rural District and bounded on the East by : Land in Sy. No. 4, West by : Land in Sy. No. 4, North by: Land in Sy. No. 4 and South by : Land in Sy. No. 72.

ITEM No. VIII: All that piece and parcel of the residentially converted land bearing Sy. No. 71, measuring 2 Acres and 18 Guntas of Shrothreeyathellohalli Village, Channarayapatna Hobli, Devanahalli Taluk, Bengaluru Rural district, vide official Conversion No. 267665 dated 29.09.2021, passed by the Deputy Commissioner, Bengaluru Rural District and bounded on the East by : Land in Sy. No. 66 67, West by : Land in Sy. No. 10, North by : Land in Sy. No. 10 & 66 and South by : Land in Sy. No. 10.

ITEM No. IX: All that piece and parcel of the residentially converted land bearing Sy. No. 72, measuring 0-34 Guntas of Shrothreeyathellohalli Village, Channarayapatna Hobli, Devanahalli Taluk, Bengaluru Rural district, vide official Conversion No. 267668 dated 29.09.2021 passed by the Deputy Commissioner, Bengaluru Rural District and bounded on the East by : Land in Sy. No. 10, West by : Land in Sy. No. 10, North by : Land in Sy. No. 10 and South by : Land in Sy. No. 60.

ITEM No. X: All that piece and parcel of the residentially converted land bearing Sy. No. 66, measuring 1 Acre of Shrothreeyathellohalli Village, Channarayapatna Hobli, Devanahalli Taluk, Bengaluru Rural district, vide official Conversion No. 267663 dated 29.09.2021, passed by the Deputy Commissioner, Bengaluru Rural District and bounded on the East by : Land in Sy. No. 67, West by : Land in Sy. No. 10 & 71, North by : Land in Sy. No. 65 and South by : Land in Sy. No. 71.

ITEM No. XI: All that piece and parcel of the residentially converted land bearing Sy. No. 69, measuring 4 Acres of Shrothreeyathellohalli Village, Channarayapatna Hobli, Devanahalli Taluk, Bengaluru

Rural district, vide official Conversion No. 267664 dated 29.09.2021, passed by the Deputy Commissioner, Bengaluru Rural District and bounded on the East by : Land in Sy. No.10, West by : Land in Sy. No. 70 & Road, North by : Land in Sy. No. 70 and South by : Land in Sy. No. 10.

ITEM No. XII: (Owned by Sri. B.S. Suresh S/o. B.S.Srinivas)

All that piece and parcel of the agricultural land bearing Sy. No. 63/P2, measuring 2 Acres of Shrothreeyathellohalli Village, Channarayapatna Hobli, Devanahalli Taluk, Bengaluru Rural district and bounded on: East by : Land belongs to Sri. Nagarajappa, West by : Land belongs to Sri. R. Ramakrishna, North by : Land belongs to Sri. R. Ramakrishna and South by : Land belongs to Sri. R. Ramakrishna.

SRI. S.M. BIRADAR, Advocate
No.83, 2nd Floor, Sunkalpet Main Road, Cubbonpet, Bangalore-02.
Mob: 99809 49477. Date: 16-06-2025

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110.

ಸಂ: ಬಿಐಎಎಪಿಎ/ಟಿಪಿ/ಭೂಉಬ/25/2025-26/730 ದಿನಾಂಕ : 16.06.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ಭೂಉಪಯೋಗ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ ಭಾಗ್ಯಮ್ಮ ಕೋಂ ಆರ್.ಎ. ಚಂದ್ರೇಗೌಡ	ದೇವನಹಳ್ಳಿ	ಚನ್ನರಾಯಪಟ್ಟಣ	ಜೊನ್ನಹಳ್ಳಿ	102/1	1-07	ವ್ಯವಸಾಯ	ವಸತಿ

ಷರಾ :- ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ ಭೂಉಪಯೋಗ ವಲಯ' ದಿಂದ 'ವಸತಿ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ವಾಸಾಸಂಇ/ವಾಪ್ರ/1273/ಆಕಾರ್/2024-25

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110.

ಸಂ: ಬಿಐಎಎಪಿಎ/ಟಿಪಿ/ಭೂಉಬ/22/2025-26/686 ದಿನಾಂಕ : 13.06.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ಭೂಉಪಯೋಗ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆಯ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ ಸಂಜಯ್ ಸುರೇಶ್ ಬಿನ್ ಶ್ರೀ ಸುರೇಶ್ ಬಿ.ಎಸ್	ಯಲಹಂಕ	ಜಾಲ	ತರಹುಣಸೆ	88/4	2-26.08	ವ್ಯವಸಾಯ	ವಸತಿ
2.		ಯಲಹಂಕ	ಜಾಲ	ತರಹುಣಸೆ	251/1	6-22.08	ವ್ಯವಸಾಯ	ವಸತಿ
3.		ಯಲಹಂಕ	ಜಾಲ	ತರಹುಣಸೆ	251/2	6-22.08	ವ್ಯವಸಾಯ	ವಸತಿ
4.		ಯಲಹಂಕ	ಜಾಲ	ತರಹುಣಸೆ	254	1-20	ವ್ಯವಸಾಯ	ವಸತಿ
5.		ಯಲಹಂಕ	ಜಾಲ	ತರಹುಣಸೆ	257	4-00	ವ್ಯವಸಾಯ	ವಸತಿ
6.		ಯಲಹಂಕ	ಜಾಲ	ತರಹುಣಸೆ	258	3-00	ವ್ಯವಸಾಯ	ವಸತಿ

ಷರಾ :- ಪ್ರಸ್ತಾವನೆಯಲ್ಲಿನ ಅರ್ಜಿದಾರರುಗಳು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ ಭೂಉಪಯೋಗ ವಲಯ'** ದಿಂದ **'ವಸತಿ ವಲಯ'** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ವಾ.ಸಾ.ಸಂ.ಇ/ವಾಪ್ರ/1272/2025-26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರ ಕಚೇರಿ, ಅನೆಕ್ಸ್ ಕಟ್ಟಡ-1, ಎನ್.ಆರ್. ಚೌಕ, ಬೆಂಗಳೂರು-560002.

No: BBMP/C.Comm/PSR(G)/636/2025-26 FORM – III (See Sub-rule (3) of rule-3) Date: 16.06.2025

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಪಟ್ಟಣ **ಯೋಜನಾ ಕಾಯಿದೆ 1961ರ ಸೆಕ್ಷನ್ 14-ಬಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಪಣತ್ತೂರು ಬಲಗೆರೆ ರಸ್ತೆಯನ್ನು ಪಣತ್ತೂರು ಆರ್‌ಯುಬಿ ಯಿಂದ ವರ್ತೂರು ಗುಂಜೂರು ರಸ್ತೆಯವರೆಗೆ ಆರ್‌ಎಂಪಿ-2015 ರ ಪ್ರಕಾರ ಅಗಲೀಕರಣಕ್ಕಾಗಿ ಅನುಮೋದಿತ ಮಾಸ್ಟರ್ ಪ್ಲಾನ್‌ನ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು, ಅನುಮೋದಿತ ಮಾಸ್ಟರ್ ಪ್ಲಾನ್‌ನ 18.00 ಮೀಟರ್ ಅಗಲದ ರಸ್ತೆಯ ಅಗಲೀಕರಣ** ರಚನೆಗಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಈ ಕೆಳಗಿನ Mಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳ ಅವಶ್ಯಕವಿರುತ್ತದ.

ಈ ಕೆಳಗಿನ ಜಮೀನು ಕಟ್ಟಡದ ಮಾಲೀಕರು ನ್ಯಾಯೋಚಿತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ರೀಸೆಟಲ್‌ಮೆಂಟ್ ಪಾರದರ್ಶಕ ಕಾಯಿದೆ 2013ರಂತೆ ವಿತ್ತೀಯ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳನ್ನು ಮೌಲ್ಯವನ್ನು ಪ್ರಾಧಿಕಾರವು ಭೂಮಿಯನ್ನು ನೀಡಿದ, ಒಪ್ಪಿಸಿದ ದುಪ್ಪಟ್ಟು ಮತ್ತು ನೀಡಿದ/ ಒಪ್ಪಿಸಿದ ಕಟ್ಟಡ ಪ್ರದೇಶದ ಎರಡರಷ್ಟು ಹಾಗೂ ನೀಡಿದ/ಒಪ್ಪಿಸಿದ ಕಟ್ಟಡದ ಪ್ರದೇಶದ ಅಂದಾಜು ಮೌಲ್ಯವನ್ನು (ಲೋಕೋಪಯೋಗಿ ಇಲಾಖೆ ಮಾನದಂಡಗಳಂತೆ) ಭೂಮಿಯ ಪೈಕಿ ಕಟ್ಟಡ ನಿರ್ಮಿಸಿರುವ ಭಾಗದ ಮಾರುಕಟ್ಟೆ ಮೌಲ್ಯದಂತೆ ವಿಂಗಡಿಸಿ ನೀಡಲಾಗುವುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರ: ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು, ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ವಿಶೇಷ ಭೂಸ್ವಾಧೀನ ಅಧಿಕಾರಿ, ಉಪ ಆಯುಕ್ತರವರ ಕಚೇರಿ, (ಭೂಸ್ವಾಧೀನ ಮತ್ತು ಟಿಡಿಆರ್), ಕೇಂದ್ರ ಕಚೇರಿ, ಬೃ.ಬೆಂ.ಮ.ಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಡಿಆರ್‌ಸಿ ನೀಡಬೇಕಾದ ಭೂಮಿ / ಕಟ್ಟಡದ ಪ್ರದೇಶ ಮತ್ತು ಭೂ ಮಾಲೀಕರ ಪಟ್ಟಿ.

ಜಿಲ್ಲೆಯ ಹೆಸರು : **ಬೆಂಗಳೂರು ನಗರ** ತಾಲ್ಲೂಕಿನ ಹೆಸರು : **ಬೆಂಗಳೂರು ಪೂರ್ವ** ಗ್ರಾಮದ ಹೆಸರು : **ವರ್ತೂರು**

Sy. No / Khatha no.	Type of land: Vacant	Type of land: Built up	Nature of Land: Agriculture Converted Undeveloped Approved layout / developed land Building Site	Dimension of the land / plot and extent in Sq.m: Dimension Extent	Boundaries of the land / plot: East	West	North	South	Building details: Extent in Sq.m	Type of Construction and No. of floors	Floor Area Ratio	Present activity on land/ Building (Specify Specific activity such as shop, office, factory, apartment, Individual house etc.,	Market (guidelines) value of the land per Sq.m	Name and address of the owner of the plot/ land for which DRC is to be issued
Sy.No. 10/13	Vacant land		Agriculture Land	50.80	Sy. No. 10/4A	Sy.No. 10/14	Remaining Portion of Sy No.10/13	Road	None	None	None	Vacant	55,000/-	Sri. B.N. Venkatesh Kumar S/o Late B.V. Nanjareddy, Residing at No. 493, Sapthagiri Nilaya, Balagere Road, Varthur, Bengaluru-560087.

Note: Market guideline value of this property is considered subject to conditions of payment of fee as per Government Order No:ನಅಇ 137 ಎಂಎನ್‌ಯು 2024 (E), ದಿನಾಂಕ:09.09.2024 and as per the Circular No:ಆಯುಕ್ತರು/ಪಿ.ಎಸ್.ಆರ್/ಜಿ/1802/2024-25, ದಿನಾಂಕ:21.09.2024.

Objections and suggestions made be submitted at the address specified below:

ವಿಭಾಗ / ಉಪ ವಿಭಾಗ / ಶಾಖಾ ಕಚೇರಿಯ ಹೆಸರು ಮತ್ತು ವಿಳಾಸ
ಉಪ ಆಯುಕ್ತರು, ಭೂ ಸ್ವಾಧೀನ ಮತ್ತು ಟಿಡಿಆರ್, 2ನೇ ಮಹಡಿ, ಕೊಠಡಿ ಸಂಖ್ಯೆ: 208, ಅನೆಕ್ಸ್ ಕಟ್ಟಡ-3, ಎನ್.ಆರ್. ಚೌಕ, ಬಿಬಿಎಂಪಿ, ಬೆಂಗಳೂರು-560002.

ಸಹಿ/-
ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರ ಕಚೇರಿ, ಅನೆಕ್ಸ್ ಕಟ್ಟಡ-1, ಎನ್.ಆರ್. ಚೌಕ, ಬೆಂಗಳೂರು-560002.

No: BBMP/C.Comm/PSR(G)/626/2025-26 FORM – III (See Sub-rule (3) of rule-3) Date: 16.06.2025

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಪಟ್ಟಣ **ಯೋಜನಾ ಕಾಯಿದೆ 1961ರ ಸೆಕ್ಷನ್ 14-ಬಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಯಲಹಂಕ ಸ್ಯಾಟಲೈಟ್ ಪಟ್ಟಣ ಉಪ ವಿಭಾಗದ ವಾರ್ಡ್ ಸಂಖ್ಯೆ-03 ರಲ್ಲಿ ನೇಹಾ ಪ್ರಕಾಶ್ ಆಸ್ಪತ್ರೆಯಿಂದ ಅತ್ತೂರು ಅನಂತಪುರ ಮುಖ್ಯ ರಸ್ತೆಗೆ ಸಂಪರ್ಕಿಸುವ 18.00 ಮೀ ಅಗಲದ ರಸ್ತೆಯ ನಿರ್ಮಾಣ ಮತ್ತು ರಚನೆ, ಅನುಮೋದಿತ ಮಾಸ್ಟರ್ ಪ್ಲಾನ್-2015 ರ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು 18.00 ಮೀ ಅಗಲ** ರಚನೆಗಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳ ಅವಶ್ಯಕವಿರುತ್ತದೆ.

ಈ ಕೆಳಗಿನ ಜಮೀನು ಕಟ್ಟಡದ ಮಾಲೀಕರು ನ್ಯಾಯೋಚಿತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ರೀಸೆಟಲ್‌ಮೆಂಟ್ ಪಾರದರ್ಶಕ ಕಾಯಿದೆ 2013ರಂತೆ ವಿತ್ತೀಯ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳನ್ನು ಮೌಲ್ಯವನ್ನು ಪ್ರಾಧಿಕಾರವು ಭೂಮಿಯನ್ನು ನೀಡಿದ, ಒಪ್ಪಿಸಿದ ದುಪ್ಪಟ್ಟು ಮತ್ತು ನೀಡಿದ/ ಒಪ್ಪಿಸಿದ ಕಟ್ಟಡ ಪ್ರದೇಶದ ಎರಡರಷ್ಟು ಹಾಗೂ ನೀಡಿದ/ಒಪ್ಪಿಸಿದ ಕಟ್ಟಡದ ಪ್ರದೇಶದ ಅಂದಾಜು ಮೌಲ್ಯವನ್ನು (ಲೋಕೋಪಯೋಗಿ ಇಲಾಖೆ ಮಾನದಂಡಗಳಂತೆ) ಭೂಮಿಯ ಪೈಕಿ ಕಟ್ಟಡ ನಿರ್ಮಿಸಿರುವ ಭಾಗದ ಮಾರುಕಟ್ಟೆ ಮೌಲ್ಯದಂತೆ ವಿಂಗಡಿಸಿ ನೀಡಲಾಗುವುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರ: ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು, ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ವಿಶೇಷ ಭೂಸ್ವಾಧೀನ ಅಧಿಕಾರಿ, ಉಪ ಆಯುಕ್ತರವರ ಕಚೇರಿ, (ಭೂಸ್ವಾಧೀನ ಮತ್ತು ಟಿಡಿಆರ್), ಕೇಂದ್ರ ಕಚೇರಿ, ಬೃ.ಬೆಂ.ಮ.ಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಡಿಆರ್‌ಸಿ ನೀಡಬೇಕಾದ ಭೂಮಿ / ಕಟ್ಟಡದ ಪ್ರದೇಶ ಮತ್ತು ಭೂ ಮಾಲೀಕರ ಪಟ್ಟಿ.

ಜಿಲ್ಲೆಯ ಹೆಸರು : **ಬೆಂಗಳೂರು ನಗರ** ತಾಲ್ಲೂಕಿನ ಹೆಸರು : **ಬೆಂಗಳೂರು ಉತ್ತರ** ಗ್ರಾಮದ ಹೆಸರು : **ಅಟ್ಟೂರು**

Sy. No / Khatha no.		Type of land: Vacant	Type of land: Built up	Nature of Land: Agriculture Converted Undeveloped Approved layout / developed land Building Site	Dimension of the land / plot and extent in Sq.m: Dimension Extent	Boundaries of the land / plot: Easr	West	North	South	Building details: Extent in Sq.m	Type of Construction and No. of floors	Floor Area Ratio	Present activity on land/ Building (Specify Specific activity such as shop, office, factory, apartment, Individual house etc.,	Market (guidelines) value of the land per Sq.m	Name and address of the owner of the plot/ land for which DRC is to be issued
Katha No. 332, E.PI.E.D. No. 9559860959	Sy. No.66	Vacant land		Converted Land	3125.79	Mandiakunte Village Boundary	Remaining Portion of Sy.No. 67	Remianing Protion of Sy. No. 57, 65, 68, 75, 66	Remaining Portin of Sy.No. 66, 67	None	None	None	Vacant	35,000/-	Sri. Arun.B. Ranka S/o Banwaralal Hasthimal Ranka, R/at No. 553, Ranka Court Apartments, # 18, Cambridge Road, Bangalore North, Bangalore-560008.
	Sy..No.67				1745.03										

Note: Market guideline value of this property is considered subject to conditions of payment of fee as per Government Order No:ನಅಇ 137 ಎಂಎನ್‌ಯು 2024 (E), ದಿನಾಂಕ:09.09.2024 and as per the Circular No:ಆಯುಕ್ತರು/ಪಿ.ಎಸ್.ಆರ್/ಜಿ/1802/2024-25, ದಿನಾಂಕ:21.09.2024.

Objections and suggestions made be submitted at the address specified below:

ವಿಭಾಗ / ಉಪ ವಿಭಾಗ / ಶಾಖಾ ಕಚೇರಿಯ ಹೆಸರು ಮತ್ತು ವಿಳಾಸ
ಉಪ ಆಯುಕ್ತರು, ಭೂ ಸ್ವಾಧೀನ ಮತ್ತು ಟಿಡಿಆರ್, 2ನೇ ಮಹಡಿ, ಕೊಠಡಿ ಸಂಖ್ಯೆ: 208, ಅನೆಕ್ಸ್ ಕಟ್ಟಡ-3, ಎನ್.ಆರ್. ಚೌಕ ಬಿಬಿಎಂಪಿ, ಬೆಂಗಳೂರು-560002.

ಸಹಿ/-
ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಗಿಯದ ಕಾಮಗಾರಿ, ಸವಾರರಿಗೆ ಕಿರಿಕಿರಿ

ಆಗಸ್ಟ್‌ನಲ್ಲಿ ಹೆಬ್ಬಾಳ ಮೇಲ್ಸೇತುವೆ ಲೂಪ್ ಸಂಚಾರಕ್ಕೆ ಮುಕ್ತ: ಬಿಡಿಎ • 2024ಕ್ಕೇ ಪೂರ್ಣಗೊಳ್ಳಬೇಕಿದ್ದ ಕಾಮಗಾರಿ

• ಕೆ.ಎಸ್.ಸುನಿಲ್

ಬೆಂಗಳೂರು: ಹೆಬ್ಬಾಳ ಮೇಲ್ಸೇತುವೆ ಬಳಿ ವಾಹನ ದಟ್ಟಣೆ ಕಡಿಮೆ ಮಾಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ವತಿಯಿಂದ ನಡೆಯುತ್ತಿರುವ ಹೊಸ ಲೂಪ್ (ಪಥ) ನಿರ್ಮಾಣ ಕಾಮಗಾರಿ ಮಂದಗತಿಯಲ್ಲಿ ಸಾಗುತ್ತಿದೆ. ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳ್ಳದ ಕಾರಣ ವಾಹನ ಸವಾರರಿಗೆ ನಿತ್ಯವೂ ಕಿರಿಕಿರಿ ಉಂಟಾಗಿದೆ.

ಬ್ಯಾಪ್ಟಿಸ್ಟ್ ಆಸ್ಪತ್ರೆ ಬಳಿ ಪ್ರಾರಂಭವಾಗಿ ಕೆ.ಆರ್. ಪುರ ಲೂಪ್‌ನೊಂದಿಗೆ ಸೇರಿಕೊಳ್ಳುವ ಈ ರ್‍ಯಾಂಪ್‌ನಿಂದ, ಮೇಖ್ರಿ ಸರ್ಕಲ್ ಕಡೆಗೆ ಹೋಗುವ ವಾಹನ ಸವಾರರಿಗೆ ಅನುಕೂಲವಾಗಲಿದೆ. ಇದರಿಂದ ಸಂಚಾರ ದಟ್ಟಣೆ ಸ್ವಲ್ಪ ಕಡಿಮೆ ಆಗಲಿದೆ. ಅಲ್ಲದೆ ಈ ಲೂಪ್ ನಾಗವಾರ ಕಡೆಯಿಂದ ಬರುವ ವಾಹನಗಳ ಸಂಚಾರವನ್ನೂ ಸುಗಮಗೊಳಿಸಲಿದೆ.

ಮುಖ್ಯಾಂಶಗಳು

- 2022ರ ಅಕ್ಟೋಬರ್‌ನಲ್ಲಿ ಆರಂಭವಾಗಿದ್ದ ಲೂಪ್ ಕಾಮಗಾರಿ
- ಕಾಮಗಾರಿ ಪೂರ್ಣಗೊಳಿಸಲು ಪದೇ ಪದೇ ಗಡುವು ವಿಸ್ತರಣೆ
- ಉತ್ತರ ಭಾಗದಿಂದ ನಗರ ಪ್ರವೇಶಿಸುವವರಿಗೆ ತೊಂದರೆ

ಬಿಡಿಎ ಅಧಿಕಾರಿಗಳ ಹೊಸ ಗಡುವಿನ ಪ್ರಕಾರ, ಆಗಸ್ಟ್ ವೇಳೆಗೆ ಎಲ್ಲ ಕಾಮಗಾರಿಗಳು ಪೂರ್ಣಗೊಂಡು, ವಾಹನ ಸಂಚಾರ ಆರಂಭವಾಗಲಿದೆ.

2022ರ ಅಕ್ಟೋಬರ್‌ನಲ್ಲಿ ಕಾಮಗಾರಿ ಆರಂಭವಾಗಿತ್ತು. ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಗಳ ಪ್ರಕಾರ, ಲೂಪ್ ನಿರ್ಮಾಣ ಕಾರ್ಯ 2024ಕ್ಕೇ ಪೂರ್ಣಗೊಳ್ಳಬೇಕಿತ್ತು. 2025ರ ಮೇ ಎರಡನೇ ವಾರದೊಳಗೆ ಈ ಲೂಪ್ ಕಾರ್ಯಾರಂಭ ಮಾಡಲಿದೆ ಎಂದು ಬಿಡಿಎ ತಿಳಿಸಿತ್ತು. ಬಳಿಕ ಗಡುವನ್ನು ಜೂನ್‌ಗೆ ವಿಸ್ತರಿಸಲಾಗಿತ್ತು. ಈಗ ಮತ್ತೆ ಆಗಸ್ಟ್‌ಗೆ ವಿಸ್ತರಿಸಲಾಗಿದೆ.

ಮೊದಲ ಹಂತವಾಗಿ ಕೆ.ಆರ್. ಪುರ ಲೂಪ್ ನಿರ್ಮಿಸುವ ಕೆಲಸ ವರ್ಷ ಕಳೆದರೂ ಪೂರ್ಣಗೊಂಡಿಲ್ಲ. ಮಂದಗತಿಯಲ್ಲಿ ಕಾಮಗಾರಿ ನಡೆಯುತ್ತಿರುವುದನ್ನು ಗಮನಿಸಿ, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹಾಗೂ ಮುಖ್ಯ ಕಾರ್ಯದರ್ಶಿ ಹಲವು ಬಾರಿ ಗಡುವು ವಿಧಿಸಿದರೂ ಕಾಮಗಾರಿ ಮುಗಿದಿಲ್ಲ.

ರೈಲ್ವೆ ಹಳಿಯ ಮೇಲಿನ ಮೇಲ್ಸೇತುವೆಗೆ ಗರ್ಡರ್ ಅಳವಡಿಸಲು ಸಾಧ್ಯವಾಗಿರಲಿಲ್ಲ. ರೈಲ್ವೆ ಇಲಾಖೆಯಿಂದ ಅನುಮತಿ ಪಡೆಯಲು ಸಮಯ ಬೇಕಾಯಿತು ಎಂದು ಬಿಡಿಎ ಸಮಜಾಯಿಷಿ ನೀಡಿದೆ.

ಬೆಂಗಳೂರು ಉತ್ತರ ಭಾಗದಿಂದ ನಗರದೊಳಗೆ ಪ್ರವೇಶಿಸಲು ಹೆಬ್ಬಾಳ ಮಾರ್ಗ ಪ್ರಮುಖವಾಗಿದೆ. ಇದನ್ನು ಆಧರಿಸಿಯೇ ಕೆ.ಆರ್.ಪುರ ಲೂಪ್ ಅನ್ನು ಮೊದಲು ಪೂರ್ಣಗೊಳಿಸಿ ಆ ಭಾಗದಿಂದ ನಗರಕ್ಕೆ ಬರಲು ಅವಕಾಶ ನೀಡಲು ನಿರ್ಧರಿಸಲಾಗಿತ್ತು. ದಿನದ ಎರಡು ಪಾಳಿಯಲ್ಲಿ ಕೆಲಸ ಮಾಡುತ್ತಿದ್ದರೂ ನಿರೀಕ್ಷೆಯಂತೆ ಕೆಲಸ ಸಾಗುತ್ತಿಲ್ಲ.

ಸುಮಾರು 700 ಮೀಟರ್ ಉದ್ದದ ಈ ಲೂಪ್ ಅನ್ನು 26 ಕಂಬಗಳ ಆಧಾರದ ಮೇಲೆ 25 ಭಾಗಗಳಾಗಿ ನಿರ್ಮಿಸಲಾಗಿದೆ. ಜಂಕ್ಷನ್‌ನಲ್ಲಿರುವ ರೈಲ್ವೆ ಹಳಿಯ ಮೇಲೆ 99 ಗರ್ಡರ್‌ಗಳನ್ನು ಅಳವಡಿಸಲಾಗಿದೆ.

‘ಎಲ್ಲ ಗರ್ಡರ್‌ಗಳ (ತೊಲೆ) ನಿರ್ಮಾಣ ಪೂರ್ಣಗೊಂಡಿದ್ದು, ಕಾಂಕ್ರೀಟ್ ಕೆಲಸ ನಡೆಯುತ್ತಿದೆ. ಕಾಮಗಾರಿ ಅಂತಿಮ ಹಂತದಲ್ಲಿದೆ. ಬ್ಯಾಪ್ಟಿಸ್ಟ್ ಆಸ್ಪತ್ರೆಯಿಂದ ರೈಲ್ವೆ ಹಳಿಯವರೆಗಿನ ಡೆಕ್ ಕಾಸ್ಟಿಂಗ್ ಮತ್ತು ರಸ್ತೆ ನಿರ್ಮಾಣ ಕಾರ್ಯ ಮುಗಿದಿದೆ. ಕೆ.ಆರ್.ಪುರ ಲೂಪ್‌ವರೆಗಿನ ಉಳಿದ ಭಾಗದ ಕಾಮಗಾರಿ ಆಗಸ್ಟ್‌ಗೆ ಪೂರ್ಣಗೊಳ್ಳಲಿದೆ’ ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು.

ಈ ಹಿಂದೆ ಬ್ಯಾಪ್ಟಿಸ್ಟ್ ಆಸ್ಪತ್ರೆಯಿಂದ ಎಸ್ಟೀಮ್ ಮಾಲ್ ತನಕ ಲೂಪ್ ನಿರ್ಮಿಸಲು ಉದ್ದೇಶಿಸಲಾಗಿತ್ತು. ವಿಮಾನ ನಿಲ್ದಾಣಕ್ಕೆ ಹೋಗುವ ವಾಹನಗಳಿಗೆ ಮೀಸಲಾದ ರಸ್ತೆಯನ್ನು ನಿರ್ಮಿಸುವುದು ಗುರಿಯಾಗಿತ್ತು. ಆದರೆ, ಕಾಮಗಾರಿ ವಿಳಂಬ ಮತ್ತು ಸಂಚಾರ ದಟ್ಟಣೆ ಕಾರಣದಿಂದ ಯೋಜನೆ ಕೈಬಿಡಲಾಯಿತು.

ನಗರದ ಹೆಬ್ಬಾಳ ಮೇಲ್ಸೇತುವೆ ಬಳಿ ಲೂಪ್ (ಪಥ) ನಿರ್ಮಾಣ ಕಾಮಗಾರಿ ನಡೆಯುತ್ತಿದೆ –ಚಿತ್ರ ಬಿ.ಕೆ.ಜನಾರ್ದನ್

ಎರಡನೇ ಹಂತದಲ್ಲಿ ತುಮಕೂರಿಗೆ

ಎರಡನೇ ಹಂತದಲ್ಲಿ, ಎಸ್ಟೀಮ್ ಮಾಲ್ ಮತ್ತು ತುಮಕೂರು ರಸ್ತೆಯ ಬಳಿ ಇರುವ ಸರ್ವಿಸ್ ರಸ್ತೆಯಿಂದ ಮೇಖ್ರಿ ಸರ್ಕಲ್ ಕಡೆಗೆ ಹೋಗುವ ವಾಹನಗಳಿಗಾಗಿ ತುಮಕೂರು ರಸ್ತೆ ಕಡೆಗೆ ಹೋಗುವ ಲೂಪ್ ಅನ್ನು ಜೋಡಿಸಲು ನಿರ್ಧರಿಸಲಾಗಿದೆ ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು.

ಚಿಟಿಕೆ ಸುದ್ದಿ

ರಾಮ ನಾಯ್ಕ್ ನೇಮಕ



ಡಿ. ರಾಮ ನಾಯ್ಕ್

ಬೆಂಗಳೂರು: ಅಖಿಲ ಭಾರತ ಬಂಜಾರ ಸೇವಾ ಸಂಘದ (ಎಐಬಿಎಸ್‌ಎಸ್) ಕಾರ್ಯಾಧ್ಯಕ್ಷರನ್ನಾಗಿ ಡಿ. ರಾಮ ನಾಯ್ಕ್ ಅವರನ್ನು ಅಧ್ಯಕ್ಷ ಟಿ.ಸಿ. ರಾಥೋಡ್ ನೇಮಕ ಮಾಡಿದ್ದಾರೆ.

ನಾಯಕತ್ವ ಮತ್ತು ಸಮುದಾಯ ಸೇವೆಯನ್ನು ಗುರುತಿಸಿ ಡಿ. ರಾಮ ನಾಯ್ಕ್ ಅವರನ್ನು ಮುಂದಿನ ಐದು ವರ್ಷಗಳ ಅವಧಿಗೆ ಎಐಬಿಎಸ್‌ಎಸ್ ಕಾರ್ಯಾಧ್ಯಕ್ಷರನ್ನಾಗಿ ಮಾಡಲಾಗಿದೆ. ಅಲ್ಲದೇ ಈಗಿರುವ ಜವಾಬ್ದಾರಿಗಳ ಜೊತೆಗೆ ಕರ್ನಾಟಕ, ಬಿಹಾರ ಮತ್ತು ಒಡಿಶಾ ರಾಜ್ಯಗಳ ಉಸ್ತುವಾರಿಯನ್ನೂ ವಹಿಸಲಾಗಿದೆ ಎಂದು ರಾಥೋಡ್ ತಿಳಿಸಿದ್ದಾರೆ.

ಸಿಇಇ ಪರೀಕ್ಷೆ 30ರಿಂದ

ಬೆಂಗಳೂರು: ಆನ್‌ಲೈನ್ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಇ) ಜೂನ್ 30ರಿಂದ ಜುಲೈ 10ರವರೆಗೆ ನಡೆಯಲಿದೆ. ಈ ಪರೀಕ್ಷೆ ಬರೆಯಲು ನೋಂದಾಯಿಸಿಕೊಂಡ ಅಭ್ಯರ್ಥಿಗಳು ಜೂನ್ 14ರಿಂದ www.joinindianarmy.nic.in ವೆಬ್‌ಸೈಟ್‌ಗೆ ಭೇಟಿ ನೀಡಿ ಪರೀಕ್ಷೆ ಪ್ರವೇಶ ಪತ್ರಗಳನ್ನು ಪಡೆದುಕೊಳ್ಳಬಹುದು ಎಂದು ರಕ್ಷಣಾ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

19ರಂದು ಕಾವೇರಿ ನೀರು ಪೂರೈಕೆಯಲ್ಲಿ ವ್ಯತ್ಯಯ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಗೆ ನೀರು ಸರಬರಾಜು ಮಾಡುವ ಮಾರ್ಗದಲ್ಲಿನ ಟಿ.ಕೆ. ಹಳ್ಳಿಯಲ್ಲಿ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜೂನ್ 19ರಂದು ಬೆಳಿಗ್ಗೆ 6ರಿಂದ ಮರುದಿನ ಬೆಳಿಗ್ಗೆ 6ರವರೆಗೆ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಟಿ.ಕೆ.ಹಳ್ಳಿಯ ಕಾವೇರಿ 5ನೇ ಹಂತದ ಕೊಳವೆ ಮಾರ್ಗದಲ್ಲಿ ಹೊಸದಾಗಿ 3,000 ಮಿ.ಮೀ. ವ್ಯಾಸದ ಕೊಳವೆ ಜೋಡಣೆ ಮಾಡುವ ಕಾಮಗಾರಿ ನಡೆಯಲಿದೆ. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ಸೂಚಿಸಿರುವ ವಿದ್ಯುತ್ ಸ್ಥಾವರಗಳ ವಾರ್ಷಿಕ ನಿರ್ವಹಣೆ, ತುರ್ತು ಕಾಮಗಾರಿ ಮತ್ತು ವಿವಿಧ ವಾರ್ಷಿಕ/ನಿಯಮಿತ ತುರ್ತು ನಿರ್ವಹಣಾ ಕಾಮಗಾರಿಗಳನ್ನು ಕೂಡ ಕೈಗೆತ್ತಿಕೊಳ್ಳಲಾಗಿದೆ. ಇದರಿಂದಾಗಿ ಕಾವೇರಿ ನೀರು ಸರಬರಾಜು ಯೋಜನೆಯ ಹಂತ-1 ರಿಂದ ಹಂತ - 5ರ ಎಲ್ಲ ಯಂತ್ರಾಗಾರಗಳನ್ನು ಅಂದು ಸ್ಥಗಿತಗೊಳಿಸಲು ಸಕ್ಷಮ ಪ್ರಾಧಿಕಾರ ಅನುಮತಿ ನೀಡಿದೆ ಎಂದು ಜಲಮಂಡಳಿ ಅಧಿಕಾರಿಗಳು ತಿಳಿಸಿದ್ದಾರೆ.

ಕಟ್ಟಡಗಳ ವ್ಯತಿರಿಕ್ತ ಭಾಗ ತೆರವು

ಯಲಹಂಕದಲ್ಲಿ ನಕ್ಷೆ ಉಲ್ಲಂಘಿಸಿದವರಿಗೆ ದಂಡ: ಆಯುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ವಲಯ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ನಿರ್ಮಾಣವಾಗುತ್ತಿರುವ ಕಟ್ಟಡಗಳ ವ್ಯತಿರಿಕ್ತ ಭಾಗ ಅಥವಾ ಹೆಚ್ಚುವರಿ ಅಂತಸ್ತುಗಳನ್ನು ತೆರವುಗೊಳಿಸಲಾಗುತ್ತಿದೆ ಎಂದು ವಲಯ ಆಯುಕ್ತ ಕರೀಗೌಡ ತಿಳಿಸಿದ್ದಾರೆ.

ಯಲಹಂಕ ಹಾಗೂ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರಗಳಲ್ಲಿ ಮಂಜೂರಾತಿ ನಕ್ಷೆ ಉಲ್ಲಂಘನೆ, ಹೆಚ್ಚುವರಿ ಅಂತಸ್ತುಗಳನ್ನು ನಿರ್ಮಾಣ ಮಾಡುತ್ತಿರುವ 12 ಕಟ್ಟಡಗಳ ತೆರವು ಕಾರ್ಯ ಸೋಮವಾರ ಆರಂಭವಾಯಿತು.

ಯಲಹಂಕ ಉಪ ವಿಭಾಗದ ಕೆಂಪೇಗೌಡ ವಾರ್ಡ್‌ನ ಸುರಭಿ ಬಡಾವಣೆಯಲ್ಲಿ ನಕ್ಷೆ ಮಂಜೂರಾತಿ ಪಡೆಯದೆ ನಿರ್ಮಿಸಲಾಗುತ್ತಿದ್ದ ಒಂದು ಅಂತಸ್ತನ್ನು ತೆರವುಗೊಳಿಸಲಾಯಿತು. ಅಟ್ಟೂರು ವಾರ್ಡ್‌ನ ಮುನೇಶ್ವರ ಬಡಾವಣೆಯ ಒಂದು ಮತ್ತು ಐದನೇ ಅಡ್ಡರಸ್ತೆಯಲ್ಲಿ ಬಿ ಖಾತಾ ನಿವೇಶನದಲ್ಲಿ ಜಿ + 3 ಅಂತಸ್ತನ್ನು ನಿರ್ಮಿಸಲಾಗುತ್ತಿದ್ದು, ಅದನ್ನು ತೆರವುಗೊಳಿಸುವ ಕಾರ್ಯ ಆರಂಭವಾಯಿತು.

ಯಲಹಂಕ ನ್ಯೂಟೌನ್ ವಾರ್ಡ್‌ನ ಎ ಸೆಕ್ಟರ್‌ನಲ್ಲಿ ಹೆಚ್ಚುವರಿಯಾಗಿ ನಿರ್ಮಿಸುತ್ತಿದ್ದ ಒಂದು ಅಂತಸ್ತು, ಚಿಕ್ಕಬೊಮ್ಮಸಂದ್ರ ನಂಜುಂಡಪ್ಪ ಬಡಾವಣೆಯಲ್ಲಿ ನಕ್ಷೆ ಮಂಜೂರಾತಿ ಪಡೆಯದೆ ನಿರ್ಮಿಸುತ್ತಿದ್ದ ಜಿ + 2 ಕಟ್ಟಡ ತೆರವು ಕಾರ್ಯ ಆರಂಭವಾಗಿದೆ ಎಂದು ಕರೀಗೌಡ ತಿಳಿಸಿದರು.

ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಶ್ರೀರಾಂಪುರದಲ್ಲಿ ಜಿ + 2ಗೆ ನಕ್ಷೆ ಮಂಜೂರಾಗಿದ್ದರೂ, ಮಾಲೀಕರು ಎರಡು ಅಂತಸ್ತನ್ನು ಹೆಚ್ಚುವರಿಯಾಗಿ ನಿರ್ಮಿಸುತ್ತಿದ್ದು, ಅದನ್ನು ತೆರವು ಮಾಡಲಾಗುತ್ತಿದೆ. ಜಕ್ಕೂರು ವ್ಯಾಪ್ತಿಯ ಎಂಸಿಇಸಿಎಚ್‌ಎಸ್ ಬಡಾವಣೆ, ಕೊಡಿಗೇಹಳ್ಳಿಯ ಬಾಲಾಜಿ ಲೇಔಟ್, ಟೆನ್ನಿಸ್ ವಿಲೇಜ್ ಬಡಾವಣೆ, ಹೆಬ್ಬಾಳ ಕೆಂಪಾಪುರದ ಯೋಗೇಶ್ ನಗರ, ಹೊಸಟ್ಟಿ ಬಡಾವಣೆ, ವಿದ್ಯಾರಣ್ಯಪುರ ವಾರ್ಡ್‌ನ ಎಚ್‌ಎಂಟಿ ಬಡಾವಣೆಯಲ್ಲಿ ನಕ್ಷೆ ಮಂಜೂರಾತಿಯನ್ನು ಉಲ್ಲಂಘಿಸಿ ಹೆಚ್ಚುವರಿಯಾಗಿ ನಿರ್ಮಿಸುತ್ತಿದ್ದ ಕಟ್ಟಡಗಳ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸಲಾಗುತ್ತಿದೆ ಎಂದರು.



ಅನಧಿಕೃತವಾಗಿ ನಿರ್ಮಾಣವಾಗುತ್ತಿರುವ ಕಟ್ಟಡವನ್ನು ಬಿಬಿಎಂಪಿ ಸಿಬ್ಬಂದಿ ತೆರವುಗೊಳಿಸಿದರು

‘ಮಾಲೀಕರಿಂದಲೇ ವೆಚ್ಚ ವಸೂಲಿ’

ಯಲಹಂಕ ವಲಯ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣಕ್ಕಾಗಿ ನಕ್ಷೆ ಮಂಜೂರಾತಿ ಪಡೆದು, ಅದನ್ನು ಉಲ್ಲಂಘಿಸಿ ನಿರ್ಮಿಸುವ ಹಾಗೂ ಹೆಚ್ಚುವರಿ ಮಹಡಿಗಳನ್ನು ನಿರ್ಮಾಣ ಮಾಡುತ್ತಿರುವವರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಕೆಲ ಕಟ್ಟಡ ಮಾಲೀಕರು ಸ್ವಯಂಪ್ರೇರಿತವಾಗಿ ತೆರವುಗೊಳಿಸುತ್ತಿದ್ದಾರೆ. ಇನ್ನು ಕೆಲವರು ತೆರವುಗೊಳಿಸಿರುವುದಿಲ್ಲ. ಅಂತಹ ಕಟ್ಟಡಗಳ ವ್ಯತಿರಿಕ್ತ ಭಾಗ ಹಾಗೂ ಹೆಚ್ಚುವರಿ ಮಹಡಿಗಳನ್ನು ಪಾಲಿಕೆ ಅಧಿಕಾರಿಗಳ ಸಮ್ಮುಖದಲ್ಲಿ ತೆರವುಗೊಳಿಸಲಾಗುತ್ತಿದ್ದು, ತೆರವು ಕಾರ್ಯಾಚರಣೆಗೆ ತಗಲುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದಲೇ ವಸೂಲಿ ಮಾಡಲಾಗುವುದು. ದಂಡವನ್ನೂ ವಿಧಿಸಲಾಗುವುದು ಎಂದು ಕರೀಗೌಡ ಮಾಹಿತಿ ನೀಡಿದರು.

ಭೂಸ್ವಾಧೀನ ವಿರೋಧಿಸಿ ದೇವನಹಳ್ಳಿ ಚಲೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿ ವ್ಯಾಪ್ತಿಯಲ್ಲಿ ಕೃಷಿ ಜಮೀನು ಸ್ವಾಧೀನಕ್ಕೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಹೊರಡಿಸಿರುವ ಅಂತಿಮ ಅಧಿಸೂಚನೆ ರದ್ದುಪಡಿಸುವಂತೆ ಆಗ್ರಹಿಸಿ ಜೂನ್ 25ರಂದು ದೇವನಹಳ್ಳಿ ಚಲೋ ಹಮ್ಮಿಕೊಳ್ಳಲಾಗಿದೆ ಎಂದು ಸಂಯುಕ್ತ ಹೋರಾಟ ಕರ್ನಾಟಕ ತಿಳಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಯುಕ್ತ ಹೋರಾಟ ಕರ್ನಾಟಕದ ಸಂಚಾಲಕ ಬಡಗಲಪುರ ನಾಗೇಂದ್ರ, ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಟಿ. ಯಶವಂತ, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ‘ಈ ಅಧಿಸೂಚನೆಯನ್ನು ಸಂಪೂರ್ಣವಾಗಿ ರದ್ದುಪಡಿಸುವಂತೆ ಆಗ್ರಹಿಸಿ, ದೇವನಹಳ್ಳಿ ತಾಲ್ಲೂಕು ಕಚೇರಿ ಮುಂಭಾಗದಲ್ಲಿ ಅನಿರ್ದಿಷ್ಟ ಅವಧಿ ಪ್ರತಿಭಟನೆ ನಡೆಸಲಾಗುವುದು. ಈ ಹೋರಾಟದಲ್ಲಿ ರೈತ, ಕಾರ್ಮಿಕ, ದಲಿತ, ಮಹಿಳಾ, ವಿದ್ಯಾರ್ಥಿ ಸಂಘಟನೆಗಳು ಪಾಲ್ಗೊಳ್ಳಲಿವೆ. ಸರ್ಕಾರಗಳಿಗೆ ಈ ಜಮೀನು ಕೇವಲ ಮಾರಾಟದ ಸರಕಷ್ಟೇ. ಆದರೆ ಇಲ್ಲಿನ ರೈತರಿಗೆ ಇದು ಬದುಕಾಗಿದೆ. ಯಾವುದೇ ಕಾರಣಕ್ಕೂ ನಾವು ಜಮೀನು ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ’ ಎಂದು ಹೇಳಿದರು.

‘ಚನ್ನರಾಯಪಟ್ಟಣ ಹೋಬಳಿಯ ಭೂಸ್ವಾಧೀನ ಪ್ರಕ್ರಿಯೆ ಕೈಬಿಡುವಂತೆ 1,180 ದಿನಗಳಿಂದ 13 ಗ್ರಾಮಗಳ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ಶೇಕಡ 80ರಷ್ಟು ರೈತರು ಲಿಖಿತವಾಗಿ ಅಸಮ್ಮತಿ ವ್ಯಕ್ತಪಡಿಸಿದ್ದಾರೆ. ಆದರೂ ಕೆಐಎಡಿಬಿ ಬಲವಂತದಿಂದ ಭೂಸ್ವಾಧೀನ ಮಾಡುತ್ತಿದ್ದು, ಭೂಸ್ವಾಧೀನ ಕಾಯ್ದೆ–2013ರ ಉಲ್ಲಂಘನೆ ಮಾಡುತ್ತಿದೆ’ ಎಂದರು.

ಮನೆ ಕೆಲಸದವರ ಹಕ್ಕು: ಶಾಸನ ರಚಿಸಿ

ಸರ್ಕಾರಕ್ಕೆ ಕರ್ನಾಟಕ ಗೃಹ ಕಾರ್ಮಿಕರ ವೇದಿಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ಕೆಲಸದವರ ಹಕ್ಕುಗಳಿಗಾಗಿ ರಾಜ್ಯ ಸರ್ಕಾರ ಶಾಸನ ರಚನೆ ಮಾಡಬೇಕು. ಸುಪ್ರೀಂ ಕೋರ್ಟ್ ಆದೇಶದಂತೆ ಕೇಂದ್ರ ಸರ್ಕಾರವು ರಾಷ್ಟ್ರೀಯ ಕಾನೂನು ರೂಪಿಸಬೇಕು ಎಂದು ಕರ್ನಾಟಕ ಗೃಹ ಕಾರ್ಮಿಕರ ವೇದಿಕೆ (ಕೆಜಿಕೆವಿ) ಆಗ್ರಹಿಸಿದೆ.

ವಿಶ್ವ ಗೃಹ ಕಾರ್ಮಿಕರ ದಿನಾಚರಣೆಯ ಅಂಗವಾಗಿ ಸೋಮವಾರ ಕೆಜಿಕೆವಿ ಅಧ್ಯಕ್ಷೆ ರುತ್ ಮನೋರಮಾ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ವೇದಿಕೆ ವಿವಿಧ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದೆ.

ಗೃಹ ಕಾರ್ಮಿಕರ ಹಕ್ಕು ಮತ್ತು ರಕ್ಷಣೆಯನ್ನು ಖಾತರಿಪಡಿಸಲು ಭಾರತ ಸರ್ಕಾರವು ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಸಿ 189 ನಿಯಮವನ್ನು ಅನುಮೋದಿಸಬೇಕು. ಕೆಲಸದ ಸ್ಥಳದಲ್ಲಿ ಆಗುವ ಲೈಂಗಿಕ ಕಿರುಕುಳ ತಡೆಯಲು ಜಿಲ್ಲಾ ಮಟ್ಟದ ಸಮಿತಿ ಅಥವಾ ಮೊಬೈಲ್ ದೂರು ಸಮಿತಿ ರಚಿಸಬೇಕು. ಸರ್ಕಾರಿ ಆರೋಗ್ಯ ವಿಮೆಯನ್ನು ಗೃಹ ಕಾರ್ಮಿಕರಿಗೂ ಅನ್ವಯಿಸಬೇಕು. ಭವಿಷ್ಯನಿಧಿ ಮತ್ತು ಪಿಂಚಣಿ ನೀಡಬೇಕು. ಕನಿಷ್ಠ ವೇತನ ನಿಗದಿಪಡಿಸಬೇಕು ಎಂದು ಒತ್ತಾಯಿಸಿದೆ.

ಕೆಲಸದ ಸ್ಥಳದಲ್ಲಿ ಜಾತಿ ತಾರತಮ್ಯವನ್ನು ತಡೆಗಟ್ಟಲು ತಾರತಮ್ಯ ವಿರೋಧಿ ಕಾನೂನು ಜಾರಿಗೊಳಿಸಬೇಕು. ಉದ್ಯೋಗದಾತರು ಮತ್ತು ಉದ್ಯೋಗಿಗಳ ನೋಂದಣಿ ಮಾಡಿಕೊಳ್ಳಬೇಕು. ವಾರ್ಷಿಕ ಬೋನಸ್, ಹಬ್ಬದ ಬೋನಸ್, ವಾರದ ರಜೆ, ಅನಾರೋಗ್ಯ ರಜೆ, ಸಾಂದರ್ಭಿಕ ರಜೆ, ಮಾತೃತ್ವ ರಜೆ ನೀಡಬೇಕು. ವಲಸೆ ಗೃಹ ಕಾರ್ಮಿಕರನ್ನು ಗುರುತಿಸಬೇಕು. ಕೆಲಸದಿಂದ ವಜಾಗೊಳಿಸುವ ಮೊದಲು ತಿಳಿಸಬೇಕು ಮತ್ತು ಪರಿಹಾರ ನೀಡಬೇಕು. ಕಲ್ಯಾಣ ಮಂಡಳಿ ಸ್ಥಾಪಿಸಬೇಕು ಎಂದು ಆಗ್ರಹಿಸಿದೆ.

ಹೆಚ್ಚುವರಿ ಕಾರ್ಮಿಕ ಆಯುಕ್ತ ಮಂಜುನಾಥ್, ಸಿವಿಕ್ ಬೆಂಗಳೂರು ಸಂಸ್ಥೆಯ ಕಾತ್ಯಾಯಿನಿ ಚಾಮರಾಜ್, ಬಿಬಿಜಿಕೆಎಸ್ ಅಧ್ಯಕ್ಷೆ ಮುನಿಲಕ್ಷ್ಮೀ, ಕೆಬಿಬಿಜಿಎಸ್‌ನ ಸಿಸ್ಟರ್ ಸಹಾಯ, ಕೆಜಿಕೆವಿಯ ಕೇಮಾ ದೇವಿ, ಎಕೆಡಿಎನ್‌ಟಿವಿಯ ನಾಗಮ್ಮ, ಗ್ಲೋಬಲ್ ಕನ್ಸರ್ನ್ ಇಂಡಿಯಾದ ಬೃಂದಾ ಅಡಿಗೆ ಉಪಸ್ಥಿತರಿದ್ದರು.

ಕರ್ನಾಟಕ ಗೃಹ ಕಾರ್ಮಿಕರ ವೇದಿಕೆ ಅಧ್ಯಕ್ಷೆ ರುತ್ ಮನೋರಮಾ ಅವರು ಹೆಚ್ಚುವರಿ ಕಾರ್ಮಿಕ ಆಯುಕ್ತ ಮಂಜುನಾಥ್ ಅವರಿಗೆ ವಿವಿಧ ಬೇಡಿಕೆಗಳ ಮನವಿ ಸಲ್ಲಿಸಿದರು – ಪ್ರಜಾವಾಣಿ ಚಿತ್ರ

ಡಯೆಟ್‌ನಲ್ಲಿರುವವರು ಹಸಿತರಕಾರಿಗಳಿಂತಲೂ ಬೇಯಿಸಿದ ತರಕಾರಿಗಳ ಸಲಾಡ್ ಸೇವಿಸುವುದು ಒಳ್ಳೆಯದು. ಇದರಿಂದ ಮಳೆಗಾಲದಲ್ಲಿ ಹೆಚ್ಚು ಕ್ರಿಯಾಶೀಲವಾಗಿರುವ ಬ್ಯಾಕ್ಟೀರಿಯಾ ಮತ್ತು ವೈರಾಣುಗಳ ದಾಳಿಗಳಿಂದ ತಪ್ಪಿಸಿಕೊಳ್ಳಬಹುದು.

ಐಸಿಯು ಬೇಡ ಭಯ



• ಡಾ.ಶ್ರೀನಿವಾಸ ಹರಪನಹಳ್ಳಿ

ಕಾಯಿಲೆಗಳು ನಮ್ಮ ಜೀವನದ ಒಂದು ಪ್ರಮುಖ ಭಾಗವಾಗಿಬಿಟ್ಟಿವೆ. ಎಲ್ಲರ ತುಡಿತ ಆರೋಗ್ಯದತ್ತಲೇ ಇದ್ದರೂ ಆಗೀಗ ಅನಾರೋಗ್ಯ ನಮ್ಮನ್ನು ಕಾಡುವುದು ಸಾಮಾನ್ಯ. ನಾವು ಆರೋಗ್ಯದಿಂದ ಇದ್ದರೂ ನಮ್ಮ ಕುಟುಂಬದವರೋ ಸ್ನೇಹಿತರೋ ಅಥವಾ ಮತ್ಯಾರೋ ಪರಿಚಯದವರೋ ಅನಾರೋಗ್ಯದಿಂದ ಬಳಲಿರುವುದನ್ನು ನಾವು ನೋಡೇ ನೋಡಿರುತ್ತೇವೆ. ಆಯಾ ಕಾಯಿಲೆಗಳ ಅಗತ್ಯತೆಗೆ ತಕ್ಕಂತೆ ರೋಗಿಗೆ ಕೆಲವೊಮ್ಮೆ ಆಸ್ಪತ್ರೆಯಲ್ಲಿ ದಾಖಲಾಗುವ, ಶಸ್ತ್ರಚಿಕಿತ್ಸೆಗೆ ಒಳಗಾಗುವ ಪ್ರಮೇಯವೂ ಬರಬಹುದು.

ಒಮ್ಮೆ ದೊಡ್ಡಾಸ್ಪತ್ರೆಗೆ ಬಂದರೆ ರೋಗಿಗೆ ಅಲ್ಲಿ ಅನೇಕ ಚಿಕಿತ್ಸಾ ಸೌಲಭ್ಯಗಳು ದೊರಕುವುದಷ್ಟೇ ಅಲ್ಲ, ಕೆಲವೊಮ್ಮೆ ವಿಚಲಿತರಾಗುವ ಸನ್ನಿವೇಶಗಳೂ ಎದುರಾಗುತ್ತವೆ. ಒಂದೆಡೆ ಚೀಟಿ ಮಾಡಿಸಲು ಸರದಿ ಇದ್ದರೆ ಇನ್ನೊಂದೆಡೆ ಔಷಧಗಳನ್ನು ಪಡೆಯುವ ಸರದಿ ಇರುತ್ತದೆ. 'ಸ್ಕ್ಯಾನ್ ಮಾಡಿಸಲು ಬರೆದು ಕೊಟ್ಟಿದ್ದಾರೆ, ಎಲ್ಲಿದೆ ಆ ಕೋಣೆ?' ಎಂದು ಕೆಲವರು ಹುಡುಕಿದರೆ, 'ರಕ್ತಪರೀಕ್ಷೆಯ ರಿಪೋರ್ಟ್ ಎಲ್ಲಿ ಸಿಗುತ್ತದೆ' ಎಂದು ಮತ್ತೊಬ್ಬರು ಓಡಾಡುತ್ತಿರುತ್ತಾರೆ. ತಕ್ಕಮಟ್ಟಿಗೆ ಫಲಕಗಳು ಇದ್ದರೂ ಆಸ್ಪತ್ರೆಯಲ್ಲಿ ಕಾಲಿಟ್ಟಾಗ ರೋಗಿಗಾಗಲಿ, ಅವರ ಸಂಬಂಧಿಕರಿಗಾಗಲಿ ಕೊಂಚ ಗಾಬರಿ, ಅಳುಕು ಇದ್ದೇ ಇರುತ್ತದೆ.

ಈ ಎಲ್ಲದರ ನಡುವೆ ನಮಗೆ ಗಮನಕ್ಕೆ ಬರುವುದು ಮೂಲೆಯಲ್ಲೆಲ್ಲೋ ಕಂಡುಬರುವ 'ICU' (ಐಸಿಯು) ಎಂಬ ಹೆಸರಿನ ಫಲಕ. ICU (ಇಂಟೆನ್ಸಿವ್ ಕೇರ್ ಯೂನಿಟ್) ಅಥವಾ 'ತೀವ್ರನಿಗಾ ಘಟಕ' ಎಂದು ಪ್ರಾಮುಖ್ಯವನ್ನು ಪಡೆದಿರುವ ಈ ಕೋಣೆ ಆಸ್ಪತ್ರೆಯ ಒಂದು ವಿಶಿಷ್ಟ ಸ್ಥಳ. ಸಾಮಾನ್ಯವಾಗಿ ದೊಡ್ಡ ದೊಡ್ಡ ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ ಕಂಡುಬರುವ ಈ 'ಐಸಿಯು' ಎಂಬ ಘಟಕ ಹೆಸರೇ ಸೂಚಿಸುವಂತೆ ರೋಗ ತೀವ್ರ ಉಲ್ಬಣಗೊಂಡ ಸ್ಥಿತಿಯಲ್ಲಿರುವ ರೋಗಿಗಳನ್ನು ಆರೈಕೆ ಮಾಡುವ ವಿಭಾಗ. ಜನರಿಗೂ ಐಸಿಯು ಎಂದರೆ ಏನೋ ಒಂದು ರೀತಿಯ ಹೆದರಿಕೆ. ಇಲ್ಲಿಗೆ ರೋಗಿಯನ್ನು ದಾಖಲಿಸಿದರೆ ಆತನ ಕಥೆ ಮುಗಿದೇಹೋಯ್ತು ಎಂಬುದು ಜನರ ಸಾಮಾನ್ಯ ನಂಬಿಕೆ. ಹಾಗಾದರೆ ಈ ಐಸಿಯು ಎಂದರೇನು, ಜನ ಯಾತಕ್ಕಾಗಿ ಹೆದರುತ್ತಾರೆ ಎಂದು ಕೊಂಚ ತಿಳಿದುಕೊಳ್ಳೋಣ.

ಐಸಿಯು ಆಸ್ಪತ್ರೆಯ ಒಂದು ಪ್ರಮುಖ ವಿಭಾಗ. ಸಾಮಾನ್ಯವಾಗಿ ಇದು ಜನರ ಓಡಾಟದಿಂದ ಮುಕ್ತವಾಗಿದ್ದು ಪ್ರವೇಶ ಕೂಡ ನಿರ್ಬಂಧಿಸಿರುತ್ತದೆ. ಆಸ್ಪತ್ರೆಯ ಉಳಿದ ವಾರ್ಡುಗಳಿಗಿಂತ ತುಂಬಾ ಭಿನ್ನವಾಗಿರುವ ಇದರಲ್ಲಿ ಕಾಲಿಟ್ಟರೆ ಸಾಕು ಒಂದು ವಿಚಿತ್ರ ಲೋಕವೇ ತೆರೆದುಕೊಳ್ಳುತ್ತದೆ. ಬೆಡ್ಡಿನ ಮೇಲೆ ರೋಗಿಗಳು ಮಲಗಿದ್ದರೆ, ಅವರನ್ನು ಅನೇಕ ಎಲೆಕ್ಟ್ರಾನಿಕ್ ಉಪಕರಣಗಳು, ವೈರ್‌ಗಳು ಸುತ್ತುವರೆದಿರುತ್ತವೆ. ಅವುಗಳಿಂದ ಬೀಪ್‌ನಂಥ ಅಸಂಖ್ಯಾತ ಶಬ್ದಗಳು ಹೊರಹುಮ್ಮುತ್ತಿರುತ್ತದೆ. ಟಿ.ವಿ. ತರಹದ ಪರದೆ ಮೇಲೆ ಅನೇಕ ರೇಖೆಗಳು, ಅಂಕಿ–ಸಂಖ್ಯೆಗಳು ಮೂಡಿ ಮಾಯವಾಗುತ್ತಿರುತ್ತವೆ. ವೈದ್ಯರು, ದಾದಿಯರು ಲಗುಬಗೆಯಿಂದ ಓಡಾಡುತ್ತಾ ರೋಗಿಯ ಆರೈಕೆ ಮಾಡುತ್ತಿರುತ್ತಾರೆ. ಹವಾನಿಯಂತ್ರಣ, ಪ್ರತ್ಯೇಕ ಕ್ಯಾಬಿನ್, ವಿಶೇಷ ಹಾಸಿಗೆಗಳು, ಅತ್ಯಾಧುನಿಕ ಯಂತ್ರೋಪಕರಣಗಳು, ಮತ್ತು ಸೋಂಕುಮುಕ್ತ ವಾತಾವರಣಕ್ಕಾಗಿ ಪದೇಪದೇ ಮಾಡುವ ಸ್ವಚ್ಛತೆ ಇಲ್ಲಿನ ಕೆಲ ವಿಶೇಷಗಳು.

ಈ ಮೊದಲೇ ಹೇಳಿದಂತೆ ರೋಗ ವಿಷಮಿಸಿದಾಗ ರೋಗಿಯನ್ನು ಐಸಿಯುನಲ್ಲಿ ದಾಖಲಿಸಿ ಚಿಕಿತ್ಸೆಯನ್ನು ನೀಡುತ್ತಾರೆ. ಕೆಲಬಾರಿ ತೀವ್ರ ಅಪಘಾತಕ್ಕೀಡಾದ ರೋಗಿಗಳು, ಮಿದುಳು, ಹೃದಯದ ಅಥವಾ ಇನ್ನಾವುದೇ ದೊಡ್ಡ ಶಸ್ತ್ರಚಿಕಿತ್ಸೆಗಳ ನಂತರ ಕೂಡ ರೋಗಿಗೆ ಐಸಿಯು ಅವಶ್ಯಕತೆಯಿರುತ್ತದೆ. ವಾರ್ಡಿನಲ್ಲಿ ನೀಡಲಾಗದ ಹೆಚ್ಚಿನ ಚಿಕಿತ್ಸೆಗಳನ್ನು ಇಲ್ಲಿ ನೀಡಬಹುದು. ಉದಾಹರಣೆಗೆ, ವಾರ್ಡಿನಲ್ಲಿ ಆಮ್ಲಜನಕವನ್ನು ಮಾಸ್ಕ್ ಮುಖಾಂತರ ನೀಡಬಹುದಾದರೆ ಇಲ್ಲಿ ವೆಂಟಿಲೇಟರ್ ಮೂಲಕ ಉಸಿರಾಟವನ್ನೇ ನಿಯಂತ್ರಿಸಬಹುದು. ಕೆಲವು ಇಂಜೆಕ್ಷನ್‌ಗಳನ್ನು ಇಲ್ಲಿರುವ ವಿಶೇಷ ಉಪಕರಣಗಳ ಮೂಲಕ ನೀಡಬಹುದು. ರೋಗಿಗೆ ಮೂತ್ರಪಿಂಡದ ವೈಫಲ್ಯವಾದಾಗ ಇಲ್ಲಿಯೇ ಡಯಾಲಿಸಿಸ್ ನೀಡಬಹುದು. ಎಲ್ಲಕ್ಕಿಂತ ಮುಖ್ಯವಾಗಿ ಪ್ರತಿಯೊಬ್ಬ ರೋಗಿಗೆ ಒಬ್ಬ ದಾದಿ ಸತತವಾಗಿ ಆರೈಕೆ ಮಾಡುತ್ತಿರುತ್ತಾಳೆ. ಜೊತೆಗೆ 'ಇಂಟೆನ್ಸಿವಿಸ್ಟ್' ಎಂಬ ತಜ್ಞವೈದ್ಯ ಕೂಡ ಇಲ್ಲಿದ್ದು ರೋಗಿಯ ಆಗುಹೋಗುಗಳನ್ನು ಕೂಲಂಕಷವಾಗಿ ನೋಡಿಕೊಳ್ಳುತ್ತಾರೆ. ಇದರ ಜೊತೆ ಇತರೆ ತಜ್ಞವೈದ್ಯರೂ ಲಭ್ಯವಿರುತ್ತಾರೆ.

ವೆಂಟಿಲೇಟರ್ ಮೇಲೆ ರೋಗಿಯು ಅವಲಂಬಿತರಾದರೆ ಅವರ ಕಥೆ ಮುಗಿಯಿತು ಎಂದೇ ಬಹುತೇಕ ಜನ ಭಾವಿಸುತ್ತಾರೆ. ಕೋವಿಡ್ ಸಮಯದಲ್ಲಿ ಅನೇಕ ರೋಗಿಗಳು ವೆಂಟಿಲೇಟರಿನಿಂದ ಹೊರಬರಲಿಲ್ಲ. ಆದರೆ ನಿಜಾಂಶ ಅದಲ್ಲ. ವೆಂಟಿಲೇಟರ್ ತಾತ್ಪೂರ್ತಿಕವಾಗಿ ರೋಗಿಯ ಉಸಿರಾಟವನ್ನು ನಿಯಂತ್ರಿಸುತ್ತದೆ. ಬಹುತೇಕ ರೋಗಿಗಳು ವೆಂಟಿಲೇಟರಿನಿಂದ ಹೊರಬಂದು ಗುಣಮುಖರಾಗುತ್ತಾರೆ. ಅದರಂತೆ ಐಸಿಯುನಲ್ಲಿ ಡಯಾಲಿಸಿಸ್ ಮಾಡಿದರೆ ಜೀವನಪರ್ಯಂತ ಡಯಾಲಿಸಿಸ್ ಮಾಡಿಸಿಕೊಳ್ಳಬೇಕಾಗುತ್ತದೆ ಎಂಬುದು ಕೂಡ ನಿಜವಲ್ಲ. ಅನೇಕ ಬಾರಿ ಮೂತ್ರಪಿಂಡದ ವೈಫಲ್ಯ ಗುಣವಾಗುತ್ತದೆ ಮತ್ತು ಅವರಿಗೆ ಡಯಾಲಿಸಿಸ್ ಅವಶ್ಯಕತೆ ಇರುವುದಿಲ್ಲ. ಹಾಗಾಗಿ ಸಾಮಾನ್ಯವಾಗಿ ಶೇ 70-90ರಷ್ಟು ರೋಗಿಗಳು ಗುಣಮುಖರಾಗಿ ಐಸಿಯುನಿಂದ ಹೊರಬರುತ್ತಾರೆ.

ಜನರು ಐಸಿಯು ಎಂದರೆ ಬೆಚ್ಚಿಬೀಳುವ ಇನ್ನೊಂದು ವಿಷಯವೆಂದರೆ ಅಲ್ಲಿನ ಖರ್ಚು-ವೆಚ್ಚ. ಈಗಾಗಲೇ ತಿಳಿಸಿದಂತೆ ಐಸಿಯುನಲ್ಲಿ ಹೆಚ್ಚಿನ ಉಪಕರಣಗಳು, ದಾದಿಯರು, ತಜ್ಞವೈದ್ಯರು ರೋಗಿಯ ಆರೈಕೆಗೆ ನಿಯೋಜಿಸಲ್ಪಡುವುದರಿಂದ ಅಲ್ಲಿನ ಪ್ರತಿದಿನದ ಖರ್ಚು ವಾರ್ಡಿಗಿಂತ ಖಂಡಿತ ಹೆಚ್ಚಿರುತ್ತದೆ. ಅದಲ್ಲದೆ ಐಸಿಯುವನ್ನು ವಿಶೇಷವಾಗಿ ನಿರ್ಮಿಸಿರುವುದರಿಂದ ಆಸ್ಪತ್ರೆಗೂ ಹೆಚ್ಚಿನ ಭಾರ ಬೀಳುತ್ತದೆ. ಆದ್ದರಿಂದ ಐಸಿಯು ಎಂದರೆ ಜೀವನ್ಮರಣದ ನಡುವೆ ಹೋರಾಡುತ್ತಿರುವ ರೋಗಿಗಳಿಗೆ ಮರುಜನ್ಮ ನೀಡುವ ಸಂಜೀವಿನಿ ಎಂದರೆ ತಪ್ಪೇನಿಲ್ಲ. ❖

> ವೆಂಟಿಲೇಟರ್ ಮೇಲೆ ರೋಗಿಯು ಅವಲಂಬಿತರಾದರೆ ಅವರ ಕಥೆ ಮುಗಿಯಿತು ಎಂದೇ ಬಹುತೇಕ ಜನ ಭಾವಿಸುತ್ತಾರೆ. ವೆಂಟಿಲೇಟರ್ ತಾತ್ಪೂರ್ತಿಕವಾಗಿ ರೋಗಿಯ ಉಸಿರಾಟವನ್ನು ನಿಯಂತ್ರಿಸುತ್ತದೆ. ಬಹುತೇಕ ರೋಗಿಗಳು ವೆಂಟಿಲೇಟರಿನಿಂದ ಹೊರಬಂದು ಗುಣಮುಖರಾಗುತ್ತಾರೆ.

ಚರ್ಮಕ್ಕೆ ಅಂಟೀತು ಫಂಗಸ್ ರೋಗ!

> ಫಂಗಸ್ ರೋಗಗಳು ಡಯಾಬಿಟಿಸ್ ಅಥವಾ ಸಕ್ಕರೆ ಕಾಯಿಲೆ ಇರುವವರಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳಬಹುದು.

• ಡಾ.ಬಿ.ಆರ್.ಸುಹಾಸ್

ಚರ್ಮವನ್ನು ಬಾಧಿಸುವ ಅನೇಕ ರೋಗಗಳಲ್ಲಿ ಫಂಗಸ್ ರೋಗಗಳು ಬಹಳ ಸಾಮಾನ್ಯ. 'ಫಂಗಸ್' ಎಂದರೆ ಶಿಲೀಂಧ್ರ. ಶಿಲೀಂಧ್ರಗಳು ಯೀಸ್ಟ್, ಅಣಬೆ, ಮೊದಲಾದ ಜೀವಿಗಳು. ಫಂಗಸ್‌ಗಳು ನೋಡಲು ಸಸ್ಯಗಳಂತಿದ್ದರೂ ಅವು ಸಸ್ಯಗಳಲ್ಲ. ಅವು ತಮ್ಮ ಆಹಾರವನ್ನು ತಾವೇ ತಯಾರಿಸಿಕೊಳ್ಳಲಾಗದೇ, ಸತ್ತಿರುವ ಸಾವಯವ ಪದಾರ್ಥಗಳನ್ನು ಆಶ್ರಯಿಸಿ, ಅವುಗಳಿಂದ ಆಹಾರವನ್ನು ತೆಗೆದುಕೊಳ್ಳುತ್ತವೆ. ಎಲ್ಲ ಫಂಗಸ್‌ಗಳಿಗೂ ಒದ್ದೆ ಮತ್ತು ಬೆಚ್ಚಗಿನ ವಾತಾವರಣ ಬೇಕಾಗುತ್ತದೆ.

ಫಂಗಸ್ ರೋಗಗಳು ಮೂರು ಬಗೆಯಲ್ಲಾಗುತ್ತವೆ. ಚರ್ಮದ ಮೇಲ್ಮೈಯಲ್ಲಿ ಕಾಣಿಸಿಕೊಳ್ಳುವಂಥವು. ಚರ್ಮದ ಕೆಳಭಾಗದಲ್ಲಿ ಆಗುವಂಥವು, ದೇಹದ ಒಳಭಾಗದಲ್ಲಿ ಬರುವಂಥವು. ಮೊದಲನೆಯದು ಬಹಳ ಸಾಮಾನ್ಯವಾದುದಾದರೆ, ಎರಡನೆಯ ಹಾಗೂ ಮೂರನೆಯದು ಬಹಳ ಅಪರೂಪ. ಚರ್ಮದ ಮೇಲ್ಮೈಯಲ್ಲಿ ಆಗುವ ಸಾಮಾನ್ಯ ಫಂಗಸ್ ರೋಗಗಳ ಪರಿಚಯವನ್ನು ಇಲ್ಲಿ ಮಾಡಿಕೊಳ್ಳೋಣ.

ಸಿಬ್ಬು: ಸಿಬ್ಬು ಅಥವಾ 'ಪಿಟಿರಿಯಾಸಿಸ್ ವರ್ಸಿಕೊಲರ್' (Pytiriasis versicolor) ಬಹಳ ಸಾಮಾನ್ಯವಾದ ಒಂದು ಫಂಗಸ್ ಚರ್ಮರೋಗ. ಇದಕ್ಕೆ ಕಾರಣವಾಗುವ ಫಂಗಸ್, ಮೆಲಸೀಜಿಯ ಫರ್ಫರ್; ಇದು ನಮ್ಮೆಲ್ಲರ ಚರ್ಮದಲ್ಲೇ ವಾಸಿಸುವ ಒಂದು ನಿರುಪದ್ರವಿ ಜೀವಿ. ಆದರೆ ಅದಕ್ಕೆ ಅವಕಾಶ ದೊರೆತಾಗ ಅದು ಹೆಚ್ಚಾಗಿ ಬೆಳೆದು ಈ ತೊಂದರೆಯನ್ನು ಉಂಟುಮಾಡುತ್ತದೆ. ಚರ್ಮದ ಮೇಲೆ ಬಿಳಿಯ ಸಣ್ಣ ಕಲೆಗಳಾಗುತ್ತವೆ; ಸಾಮಾನ್ಯವಾಗಿ ತುರಿಸುವುದಿಲ್ಲ. ಈ ಕಲೆಗಳ ಮೇಲೆ ತೆಳುವಾದ ಬಿಳಿಯ ಪದರಗಳಿದ್ದು, ಕೆರೆದಾಗ ಹೆಚ್ಚು ಉದುರುತ್ತವೆ. ಬೆವರುವುದು, ಮಳೆಯಲ್ಲಿ ನೆನೆಯುವುದು, ಒದ್ದೆಬಟ್ಟೆಯನ್ನು ಧರಿಸುವುದು, ಮೊದಲಾದವುಗಳಿಂದ ಫಂಗಸ್ ಹೆಚ್ಚಿ ಈ ತೊಂದರೆ ಕಾಣಿಸಿಕೊಳ್ಳುತ್ತದೆ. ಇದು ಹೆಚ್ಚಾಗಿ ಎದೆ, ತೋಳು, ಬೆನ್ನುಗಳಲ್ಲಿ ಕಂಡುಬರುತ್ತದೆ.

ಹುಳುಕಡ್ಡಿ: ಹುಳುಕಡ್ಡಿ ಅಥವಾ ಗಜಕರ್ಣ ಕೂಡ ಬಹಳ ಸಾಮಾನ್ಯವಾದ ಫಂಗಸ್ ರೋಗ. ಇದು 'ಡರ್ಮಟೋಫೈಟ್' (Dermatophytes)ಗಳೆಂಬ ಫಂಗಸ್‌ಗಳಿಂದ ಉಂಟಾಗುತ್ತದೆ. ಇವು ಇತರ ರೋಗಗ್ರಸ್ತ ಜನರಿಂದ, ಪ್ರಾಣಿಗಳಿಂದ, ಹಾಗೂ ಮಣ್ಣಿನಿಂದ ಹರಡುತ್ತವೆ. ಇವುಗಳಲ್ಲಿ ಹಲವಾರು ಪ್ರಭೇದಗಳಿದ್ದು ಅವು ಚರ್ಮ, ಉಗುರು, ಮತ್ತು ಕೂದಲುಗಳನ್ನು ಬಾಧಿಸುತ್ತವೆ. ಇವುಗಳನ್ನು 'ಟೀನಿಯ' (Tinea) ರೋಗಗಳೆಂದು ಕರೆಯುತ್ತಾರೆ. ಇವು ಉಂಟಾಗುವ ದೇಹದ ಸ್ಥಳಕ್ಕೆ ಅನುಸಾರವಾಗಿ ಹೆಸರಿಸಲಾಗುತ್ತದೆ. ತೊಡೆಸಂದುಗಳಲ್ಲಾದರೆ 'ಟೀನಿಯ ಕ್ರೂರಿಸ್', ದೇಹದ ಮೇಲಾದರೆ 'ಟೀನಿಯ ಕಾರ್ಪೋರಿಸ್', ಮುಖದಲ್ಲಾದರೆ 'ಟೀನಿಯ ಫೇಷಿಯೈ', ಗಡ್ಡದ ಜಾಗದಲ್ಲಾದರೆ 'ಟೀನಿಯ ಬಾರ್ಬೆ', ಕೈಯಲ್ಲಾದರೆ 'ಟೀನಿಯ ಮ್ಯಾನಮ್', ಕಾಲಲ್ಲಾದರೆ 'ಟೀನಿಯ ಪೀಡಿಸ್', ತಲೆಯಲ್ಲಾದರೆ 'ಟೀನಿಯ ಕ್ಯಾಪಿಟಿಸ್', ಹಾಗೂ ಉಗುರಿನಲ್ಲಾರೆ 'ಟೀನಿಯ ಅಂಗ್ವಂ'. ಇವು ಕೆಂಪಾದ ಮಚ್ಚೆಗಳಾಗಿ ಮಧ್ಯದಲ್ಲಿ ಖಾಲಿಯಿರುತ್ತಾ ತುದಿಯಲ್ಲಿ ಬಿಳಿಯ ಪದರಗಳೊಂದಿಗೆ ಹರಡುತ್ತಾ ಹೋಗುತ್ತವೆ. ಇದಕ್ಕೆ ಕಾರಣವೆಂದರೆ ಚರ್ಮವು ಫಂಗಸ್ ಅನ್ನು ಓಡಿಸಿದಷ್ಟೂ ಅದು ತುದಿಯಿಂದ ಹರಡುತ್ತಾ ಹೋಗುತ್ತದೆ. ಹೀಗೆ ಉಂಗುರದಂತೆ ಕಾಣುವುದರಿಂದ ಇದನ್ನು 'ರಿಂಗ್ ವರ್ಮ್', ಹುಳುಕಡ್ಡಿ, ಗಜಕರ್ಣ ಎಂದೆಲ್ಲಾ ಕರೆಯುತ್ತಾರೆ. ಈ ಮಚ್ಚೆಗಳು ಬಹಳ ತುರಿಸುತ್ತವೆ. ಇವನ್ನು ಮುಟ್ಟಿ ಬೇರೆ ಕಡೆ ಮುಟ್ಟಿದರೆ ಅಲ್ಲಿಗೂ ಅಂಟುತ್ತವೆ. ಹೆಚ್ಚು ಕೆರೆದಷ್ಟೂ ಇವು ಕಪ್ಪಾಗುತ್ತವೆ. ಒದ್ದೆ ಮತ್ತು ಬೆಚ್ಚಗಿನ ವಾತಾವರಣ - ಇವು ಅಂಟಲು ಕಾರಣಗಳು.

ಕ್ಯಾಂಡಿಡಾ ರೋಗಗಳು: 'ಕ್ಯಾಂಡಿಡಾ ಆಲ್ಬಿಕನ್ಸ್' ಎಂಬ ಯೀಸ್ಟ್ ಜಾತಿಯ ಫಂಗಸ್ ಕೂಡ ನಮ್ಮ ಚರ್ಮದಲ್ಲಿ ವಾಸಿಸುವ ಒಂದು ಜೀವಿ; ಇದಕ್ಕೆ ಅವಕಾಶ ದೊರೆತಾಗ ರೋಗವನ್ನು ಉಂಟುಮಾಡುತ್ತದೆ. ಕ್ಯಾಂಡಿಡಾ ರೋಗಗಳು ಹಲವು ಬಗೆಗಳು. 'ಇಂಟರ್ ಟ್ರೈಗೋ' (Intertrigo) ಎಂಬುದು ಒಂದು ಬಗೆ. ಇದು ಚರ್ಮ ಚರ್ಮದೊಂದಿಗೆ ಸಂಯೋಗ ಹೊಂದುವ ಸ್ಥಳಗಳಲ್ಲಿ ಆಗುತ್ತದೆ. ಸಾಮಾನ್ಯವಾಗಿ ಇದು ತೊಡೆಸಂದುಗಳು ಹಾಗೂ ಕೊನೆಯ ಎರಡು ಕಾಲ್ಬೆರಳುಗಳ ಸಂದಿಯಲ್ಲಾಗುತ್ತದೆ. ತೊಡೆಸಂದುಗಳಲ್ಲಿ ತುರಿಸುವ, ಒದ್ದೆಯಾದ ಕೆಂಪು ಕಲೆಗಳಾದರೆ, ಕಾಲ್ಬೆರಳುಗಳ ಸಂದಿಯಲ್ಲಿ ಬಿಳಿಯ ಒದ್ದೆಯಾದ ಕಲೆಗಳಾಗುತ್ತವೆ. ಸಣ್ಣ ಶಿಶುಗಳಲ್ಲಿ ಶುದ್ಧವಲ್ಲದ ಶೀಶೆಯಲ್ಲಿ ಹಾಲು ಕುಡಿಸುವುದರಿಂದ ಬಾಯಲ್ಲಿ ಕೆಂಪು ಕಲೆಗಳ ಕ್ಯಾಂಡಿಡಿಯಾಸಿಸ್ ರೋಗವಾಗುತ್ತದೆ. ಇದನ್ನು 'ಓರಲ್ ಥ್ರಶ್' ಎನ್ನುತ್ತಾರೆ. ಅಂತೆಯೇ ಬಾಯಿಯ ಶುದ್ಧತೆ ಮಾಡಿಕೊಳ್ಳಲಾಗದ ರೋಗಗ್ರಸ್ತರಲ್ಲಿ ಹಾಗೂ ಏಡ್ಸ್ ರೋಗಿಗಳಲ್ಲಿ ಬಾಯಿಯಲ್ಲಿ ಕ್ಯಾಂಡಿಡಿಯಾಸಿಸ್ ಆಗುತ್ತದೆ. ಕ್ಯಾಂಡಿಡಿಯಾಸಿಸ್ ಜನನಾಂಗಗಳಲ್ಲೂ ಆಗುತ್ತದೆ. ಸಂಭೋಗ ಮಾಡುವಾಗ ಒದ್ದೆಯಾಗುವುದರಿಂದ ಸಹಜವಾಗಿಯೇ ಇರುವ ಕ್ಯಾಂಡಿಡಾ ಫಂಗಸ್ ಬೆಳೆದು ರೋಗವುಂಟುಮಾಡಬಹುದು. ಪುರುಷರಲ್ಲಿ ಶಿಶ್ನದ ಮೇಲೆ ಕೆಂಪು ಕಲೆಗಳು, ಬಿಳಿಯ ಪದರಗಳು, ಹಾಗೂ ತುದಿಗಳಲ್ಲಿ ಬಿರುಕುಗಳಾಗಿ ತುರಿಸುತ್ತವೆ. ಕೆಲವೊಮ್ಮೆ ಮುಂದೊಗಲು ಅಂಟಿಕೊಂಡು ಹಿಂದೆ ಸರಿಸಲು ಕಷ್ಟವಾಗಬಹುದು. ಸ್ತ್ರೀಯರಲ್ಲಿ ಯೋನಿಯಲ್ಲಿ ಬಿಳಿಯ ಕಲೆಗಳು, ಯೋನಿ ಕೆಂಪಾಗಿ ತುರಿಸುವುದು, ಬಿಳಿಯ ಸ್ರಾವವಾಗುವುದು - ಇವೆಲ್ಲಾ ಆಗಬಹುದು.

ಚಿಕಿತ್ಸೆ: ಫಂಗಸ್ ರೋಗಗಳಿಗೆ ಈಗ ಒಳ್ಳೆಯ ಚಿಕಿತ್ಸೆ ಇದೆ. ಕೀಟೋಕೋನಜೋಲ್, ಲುಲಿಕೋನಜೋಲ್, ಟರ್ಬಿನಫಿನ್, ಮೊದಲಾದ ಫಂಗಸ್ ನಿರೋಧಕ ಮುಲಾಮುಗಳೂ; ಫ್ಲುಕೋನಜೋಲ್, ಇಟ್ರಕೋನಜೋಲ್ ಮೊದಲಾದ ಮಾತ್ರೆಗಳೂ ಇವೆ. ಇವುಗಳನ್ನು ಚರ್ಮರೋಗತಜ್ಞರ ಸಲಹಾನುಸಾರ ಬಳಸಬೇಕು; ಸ್ವಯಂ ಚಿಕಿತ್ಸೆಯನ್ನು ಮಾಡಿಕೊಳ್ಳಬಾರದು. ಕೆಲವರು ಬೇಗನೆ ವೈದ್ಯರಿಗೆ ತೋರಿಸದೇ ರೋಗವು ಹೆಚ್ಚಿದ ನಂತರ ತೋರಿಸುತ್ತಾರೆ. ಆಗ ಇದು ವಾಸಿಯಾಗಲು ಬಹಳ ನಿಧಾನವಾಗಬಹುದು. ಕೆಲವೊಮ್ಮೆ ಫಂಗಸ್ ಕಾಯಿಲೆಗಳು ಕೆಲವು ಒಳ್ಳೆಯ ಔಷಧಗಳಿಗೆ ಕೂಡ ಬೇಗನೆ ವಾಸಿಯಾಗದಿರಬಹುದು. ಇದಕ್ಕೆ ಕಾರಣ, ಅವರಲ್ಲಿರುವ ಫಂಗಸ್ ಔಷಧಕ್ಕೆ ವಿರೋಧವೊಡ್ಡುವ ಶಕ್ತಿ ಬೆಳೆಸಿಕೊಂಡಿರುತ್ತದೆ. ಆಗ ರೋಗಿಗಳು ಧೃತಿಗೆಡದೆ ಪುನಃ ಚರ್ಮವೈದ್ಯರಿಗೆ ತೋರಿಸಿ ಬೇರೆ ಔಷಧಗಳ ಚಿಕಿತ್ಸೆಯನ್ನು ಪಡೆಯಬೇಕು. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿಗಳು

ಅಭ್ಯಾಸ 3.1

2) $\frac{a_1}{a_2}$, $\frac{b_1}{b_2}$, $\frac{c_1}{c_2}$ ಅನುಪಾತಗಳನ್ನು ಹೋಲಿಸುವ ಮೂಲಕ, ಕೆಳಗಿನ ರೇಖಾತ್ಮಕ ಸಮೀಕರಣಗಳ ಜೋಡಿಗಳು ಪ್ರತಿನಿಧಿಸುವ ಸರಳರೇಖೆಗಳು ಒಂದು ಬಿಂದುವಿನಲ್ಲಿ ಛೇದಿಸುತ್ತವೆಯೆ? ಸಮಾಂತರವಾಗಿವೆಯೆ? ಅಥವಾ ಐಕ್ಯಗೊಂಡಿವೆಯೆ? ಎಂಬುದನ್ನು ಕಂಡುಹಿಡಿಯಿರಿ.

(i) $5x - 4y + 8 = 0$
$7x + 6y - 9 = 0$

(ii) $9x + 3y + 12 = 0$
$18x + 6y + 24 = 0$

(iii) $6x - 3y + 10 = 0$
$2x - y + 9 = 0$

ಪರಿಹಾರ:– (ii) ನೀಡಿರುವ ಸಮೀಕರಣಗಳು

$9x + 3y + 12 = 0$
$18x + 6y + 24 = 0$

ಆದ್ದರಿಂದ ಸಮೀಕರಣಗಳನ್ನು $a_1x + b_1y + c_1 = 0$ ಮತ್ತು $a_2x + b_2y + c_2 = 0$ ತುಲನೆ ಮಾಡಿದಾಗ ನಾವು ಕೆಳಗಿನವುಗಳನ್ನು ಪಡೆಯುತ್ತೇವೆ

$a_1 = 9, b_1 = 3, c_1 = 12$
$a_2 = 18, b_2 = 6, c_2 = 24$
$(a_1 / a_2) = 9 / 18 = 1 / 2$
$(b_1 / b_2) = 3 / 6 = 1 / 2$
$(c_1/c_2) = 12 / 24 = 1 / 2$

ಹೀಗಾಗಿ $(a_1 / a_2) = (b_1 / b_2) = (c_1 / c_2)$

ಆದ್ದರಿಂದ ದತ್ತ ಸಮೀಕರಣಗಳ ಜೋಡಿಯನ್ನು ಪ್ರತಿನಿಧಿಸುವ ಸರಳ ರೇಖೆಗಳು ಐಕ್ಯಗೊಂಡಿವೆ

(iii) ನೀಡಿರುವ ಸಮೀಕರಣಗಳು

$6x - 3y + 10 = 0$
$2x - y + 9 = 0$

ಆದ್ದರಿಂದ ಸಮೀಕರಣಗಳನ್ನು $a_1x + b_1y + c_1 = 0$ ಮತ್ತು $a_2x + b_2y + c_2 = 0$ ತುಲನೆ ಮಾಡಿದಾಗ ನಾವು ಕೆಳಗಿನವುಗಳನ್ನು ಪಡೆಯುತ್ತೇವೆ

$a_1 = 6, b_1 = -3, c_1 = 10$
$a_2 = 2, b_2 = -1, c_2 = 9$
$(a_1/a_2) = 6/2 = 3/1$
$(b_1/b_2) = -3/-1 = 3/1$
$(c_1/c_2) = 10/9$

ಹೀಗಾಗಿ $(a_1/a_2) = (b_1/b_2) \neq (c_1/c_A)$

ಆದ್ದರಿಂದ ದತ್ತ ಸಮೀಕರಣಗಳ ಜೋಡಿಯನ್ನು ಪ್ರತಿನಿಧಿಸುವ ಸರಳ ರೇಖೆಗಳು ಪರಸ್ಪರ ಸಮಾಂತರವಾಗಿವೆ

3. $\frac{a_1}{a_2}$, $\frac{b_1}{b_2}$ ಮತ್ತು $\frac{c_1}{c_2}$ ಅನುಪಾತಗಳನ್ನು ಹೋಲಿಸುವ ಮೂಲಕ, ಕೆಳಗಿನ ರೇಖಾತ್ಮಕ ಸಮೀಕರಣಗಳ ಜೋಡಿಗಳು ಸ್ಥಿರವಾಗಿವೆಯೆ? ಅಥವಾ ಅಸ್ಥಿರವಾಗಿವೆಯೆ? ಎಂಬುದನ್ನು ಕಂಡುಹಿಡಿಯಿರಿ.

(i) $3x+2y=5;\ 2x-3y=7$ (ii) $2x-3y=8;\ 4x-6y=9$

iii) $\frac{3}{2}x+\frac{5}{3}y=7;\ 9x-10y=14$ (iv) $5x-3y=11;\ -10x+6y=-22$

(v) $\frac{4}{3}x+2y=8;\ 2x+3y=12$

ಪರಿಹಾರ:– (1) $3x + 2y = 5$ ಅಥವಾ $3x + 2y - 5 = 0$ ಮತ್ತು $2x - 3y = 7$ ಅಥವಾ $2x - 3y - 7 = 0$ (ದತ್ತ)

ಆದ್ದರಿಂದ ಸಮೀಕರಣಗಳನ್ನು $a_1x + b_1y + c_1 = 0$ ಮತ್ತು $a_2x + b_2y + c_2 = 0$ ತುಲನೆ ಮಾಡಿದಾಗ ನಾವು ಕೆಳಗಿನವುಗಳನ್ನು ಪಡೆಯುತ್ತೇವೆ

$a_1 = 3, b_1 = 2, c_1 = -5$
$a_2 = 2, b_2 = -3, c_2 = -7$
$(a_1/a_2) = 3/2$
$(b_1/b_2) = 2/-3$
$(c_1/c_2) = -5/-7 = 5/7$

ಹೀಗಾಗಿ $(a_1/a_2) \neq (b_1/b_2)$

ಆದ್ದರಿಂದ ದತ್ತ ಸಮೀಕರಣಗಳ ಜೋಡಿಯು ಒಂದೇ ಒಂದು ಪರಿಹಾರ ಹೊಂದಿರುತ್ತದೆ, ಆದ್ದರಿಂದ ರೇಖಾತ್ಮಕ ಸಮೀಕರಣಗಳ ಜೋಡಿಯು ಸ್ಥಿರವಾಗಿದೆ

(ii) $2x - 3y = 8$ ಮತ್ತು $4x - 6y = 9$

ಆದ್ದರಿಂದ

$a_1 = 2, b_1 = -3, c_1 = -8$
$a_2 = 4, b_2 = -6, c_2 = -9$
$(a_1/a_2) = 2/4 = 1/2$
$(b_1/b_2) = -3/-6 = 1/2$
$(c_1/c_2) = -8/-9 = 8/9$

ಹೀಗಾಗಿ $(a_1/a_2) = (b_1/b_2) \neq (c_1/c_2)$

ಆದ್ದರಿಂದ ರೇಖೆಗಳು ಸಮಾಂತರ ರೇಖೆಗಳಾಗಿವೆ, ಆದ್ದರಿಂದ ದತ್ತ ಜೋಡಿಗೆ ಪರಿಹಾರ ಇಲ್ಲ.

∴ ಸಮಿಕರಣಗಳ ಜೋಡಿಯು ಅಸ್ಥಿರವಾಗಿದೆ.

(iii) $\frac{3}{2}x + \frac{5}{3}y = 7;\ 9x - 10y = 14$ (ದತ್ತ)

ಆದ್ದರಿಂದ

$a_1 = 3/2, b_1 = 5/3, c_1 = -7$
$a_2 = 9, b_2 = -10, c_2 = -14$
$(a_1/a_2) = 3/(2\times9) = 1/6$
$(b_1/b_2) = 5/(3\times -10) = -1/6$
$(c_1/c_2) = -7/-14 = 1/2$

ಹೀಗಾಗಿ $(a_1/a_2) \neq (b_1/b_2)$

ಆದ್ದರಿಂದ ದತ್ತ ಸಮೀಕರಣಗಳ ಜೋಡಿಯು ಒಂದೇ ಒಂದು ಪರಿಹಾರ ಹೊಂದಿರುತ್ತದೆ, ಆದ್ದರಿಂದ ರೇಖಾತ್ಮಕ ಸಮೀಕರಣಗಳ ಜೋಡಿಯು ಸ್ಥಿರವಾಗಿದೆ

(iv) $5x - 3y = 11$ ಮತ್ತು $10x + 6y = -22$

ಆದ್ದರಿಂದ

$a_1 = 5, b_1 = -3, c_1 = -11$
$a_2 = -10, b_2 = 6, c_2 = 22$
$(a_1/a_2) = 5/(-10) = -5/10 = -1/2$
$(b_1/b_2) = -3/6 = -1/2$
$(c_1/c_2) = -11/22 = -1/2$

ಹೀಗಾಗಿ $(a_1/a_2) = (b_1/b_2) = (c_1/c_2)$

ಆದ್ದರಿಂದ ದತ್ತ ಸಮೀಕರಣಗಳ ಜೋಡಿಗೆ ಅಪರಿಮಿತ ಸಂಖ್ಯೆಯ ಪರಿಹಾರಗಳಿವೆ, ಆದ್ದರಿಂದ ರೇಖಾತ್ಮಕ ಸಮೀಕರಣಗಳ ಜೋಡಿಯು ಸ್ಥಿರವಾಗಿದೆ.

(v) $\frac{4}{3}x + 2y = 8;\ 2x + 3y = 12$

$a_1 = 4/3, b_1 = 2, c_1 = -8$
$a_2 = 2, b_2 = 3, c_2 = -12$
$(a_1/a_2) = 4/(3\times2) = 4/6 = 2/3$
$(b_1/b_2) = 2/3$
$(c_1/c_2) = -8/-12 = 2/3$

ಆದ್ದರಿಂದ $(a_1/a_2) = (b_1/b_2) = (c_1/c_2)$

ಆದ್ದರಿಂದ ದತ್ತ ಸಮೀಕರಣಗಳ ಜೋಡಿಗೆ ಅಪರಿಮಿತ ಸಂಖ್ಯೆಯ ಪರಿಹಾರಗಳಿವೆ, ಆದ್ದರಿಂದ ರೇಖಾತ್ಮಕ ಸಮೀಕರಣಗಳ ಜೋಡಿಯು ಸ್ಥಿರವಾಗಿದೆ.

4. ಮುಂದೆ ನೀಡಿದವುಗಳಲ್ಲಿ ಯಾವ ರೇಖಾತ್ಮಕ ಸಮೀಕರಣಗಳ ಜೋಡಿಗಳು ಸ್ಥಿರವಾಗಿವೆ/ಅಸ್ಥಿರವಾಗಿವೆ? ಸ್ಥಿರವಾಗಿದ್ದರೆ, ನಕ್ಷಾಕ್ರಮದಿಂದ ಪರಿಹಾರವನ್ನು ಪಡೆಯಿರಿ.

(i) $x + y = 5,\quad 2x + 2y = 10$ (ಮುಂದುವರಿಯುವುದು)

ದಿಕ್ಸೂಚಿ ನಿಮಗಿಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MATHS

DETERMINANTS

4) Evaluate the determinant

$$\begin{bmatrix} 1^2 & 2^2 & 3^2 \\ 2^2 & 3^2 & 4^2 \\ 4^2 & 5^2 & 6^2 \end{bmatrix}$$

Soln :– The given determinant is

$$\begin{bmatrix} 1^2 & 2^2 & 3^2 \\ 2^2 & 3^2 & 4^2 \\ 4^2 & 5^2 & 6^2 \end{bmatrix} = \begin{bmatrix} 1 & 4 & 9 \\ 4 & 9 & 16 \\ 16 & 25 & 36 \end{bmatrix}$$

$$= \begin{bmatrix} 1 & 4 & 9 \\ 3 & 5 & 7 \\ 12 & 16 & 20 \end{bmatrix}$$

here $R_2 \to R_2 - R_1$ and $R_3 \to R_3 - R_2$

$$= 4\begin{bmatrix} 1 & 4 & 9 \\ 3 & 5 & 7 \\ 3 & 4 & 5 \end{bmatrix}$$

using $R_1 \to R_1 - R_2$ and $R_2 \to R_2 - R_3$

$$= 4\begin{bmatrix} -2 & -1 & 2 \\ 0 & 1 & 2 \\ 3 & 4 & 5 \end{bmatrix}$$

$$= 4[-2(-3)+1(-6)+2(-3)] = -24$$

Some extra information:-

1) Eigen values of a square matrix

If A is a square matrix then $|A - \lambda I| = 0$ where I is a unit matrix and λ is an indeterminate is called the characteristic equation of A. The roots of this equation are called the eigen values of A.

If A is a square matrix of order 2 then the characteristic equation is quadratic in λ and hence there will be two eigen values. Similarly if A is a square matrix of order 3 then it has three eigen values.

If A is a square matrix then A & A^1 have the same eigen values.

A is singular if and only if 0 is its eigen value.

2) Cayley – Hamilton Theorem

Cayley – Hamilton Theorem states that -

Every square matrix satisfies its own characteristic equation. *Eg* - If A is a square matrix of order 2 and $a\lambda^2 + b\lambda + c = 0$ is the characteristic equation then A satisfies the above equation, that is $aA^2 + bA + cI = 0$ where I is a unit matrix of order 2.

3) The eigen value of a matrix A if and only if the matrix is singular.

For any equation, 0 will be a root, if and only if the constant term of the equation is zero. And also we know that the constant term of the characteristic equation of the matrix A is $|A|$.

Thus 0 is an eigen value of the matrix A if and only if the constant term of its characteristic equation is zero.

Thus 0 will be an eigen value of the matrix A if and only if $|A| = 0$. That is if and only if A is singular.

4) The eigen values of a diagonal matrix are its diagonal elements.

$A = \begin{bmatrix} x & 0 & 0 \\ 0 & y & 0 \\ 0 & 0 & z \end{bmatrix}$ be a matrix of order 3

Now, $|A - \lambda I| = 0$

$$\Rightarrow \begin{vmatrix} x-\lambda & 0 & 0 \\ 0 & y-\lambda & 0 \\ 0 & 0 & z-\lambda \end{vmatrix} = 0$$

$\Rightarrow (x-\lambda)(y-\lambda)(z-\lambda) = 0$

$\Rightarrow (x-\lambda)=0,\ (y-\lambda)=0,\ (z-\lambda)=0$

hence $\lambda = x,\ \lambda = y,\ \lambda = z$

That is the eigen values are a, b and c which are the diagonal elements.

VALUE BASED QUESTIONS

1. The cost of 4 kg. onion, 3 kg. wheat and 2 kg. rice is Rs. 60. The cost of 2 kg. onion, 4 kg. wheat and 6 kg. rice is Rs. 90. The cost of 6 kg. onion, 2 kg. wheat and 3 kg. rice is Rs.70. Find cost of each item per kg. by matrix method.

A shopkeeper wants to purchase carry bags. Which carry bag you will not suggest to buy and why?

Soln:- Let the cost of onion per kg. = Rs. x
and the cost of wheat per kg. = Rs. y
and the cost of rice per kg. = Rs. z

By the given conditions:

$4x + 3y + 2z = 60$
$2x + 4y + 6z = 90$
$6x + 2y + 3z = 70$

The given system of equations can be expressed as -

$AX = B$,

where, $A = \begin{bmatrix} 4 & 3 & 2 \\ 2 & 4 & 6 \\ 6 & 2 & 3 \end{bmatrix}, x = \begin{bmatrix} x \\ y \\ z \end{bmatrix}, B = \begin{bmatrix} 60 \\ 90 \\ 70 \end{bmatrix}$

$$|A| = \begin{vmatrix} 4 & 3 & 2 \\ 2 & 4 & 6 \\ 6 & 2 & 3 \end{vmatrix}$$

$= 4(12-12) - 3(6-36) + 2(4-24)$
$= 0 + 90 - 40 = 50 \neq 0$

$\therefore$ A is non – singular, i.e. A^{-1} exists.

Thus the given system of equations has unique solution.

Now $A_{11} = 0;\ A_{12} = 30;\ A_{13} = -20$
$A_{21} = -5;\ A_{22} = 0,\ A_{23} = 10$
$A_{31} = 10;\ A_{32} = -20;\ A_{33} = 10$

$$\text{adj.}A = \begin{bmatrix} 0 & 30 & -20 \\ -5 & 0 & 10 \\ 10 & -20 & 10 \end{bmatrix} = \begin{bmatrix} 0 & -5 & 10 \\ 30 & 0 & -20 \\ -20 & 10 & 10 \end{bmatrix}$$

(Contd.......)

ದ್ವೇಷ ಭಾಷಣ: ಕ್ರಮ ಕೈಗೊಳ್ಳದ ಪೊಲೀಸರ ವಿರುದ್ಧ ತನಿಖೆ ಮಾಡಿ

ಗೃಹಸಚಿವ ಜಿ. ಪರಮೇಶ್ವರಗೆ ಪತ್ರ ಬರೆದ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್

ಪ್ರಜಾವಾಣಿ ವಾರ್ತೆ

ಮಂಗಳೂರು: 'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಹಿಂದೆ ಕಾರ್ಯನಿರ್ವಹಿಸಿದ್ದ ಕೆಲ ಪೊಲೀಸ್ ಅಧಿಕಾರಿಗಳು ದ್ವೇಷಭಾಷಣ, ಪ್ರಚೋದನಕಾರಿ ಹೇಳಿಕೆಗಳು, ಸಾಮಾಜಿಕ ಮಾಧ್ಯಮಗಳಲ್ಲಿ ಸಮಾಜಘಾತುಕ ವದಂತಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯವಹಿಸಿದ್ದಾರೆ. ಅದಕ್ಕೆ ಕಾರಣಗಳೇನು ಎಂಬ ಬಗ್ಗೆ ಸೂಕ್ತ ತನಿಖೆಯಾಗಬೇಕು' ಎಂದು ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್ ಒತ್ತಾಯಿಸಿದ್ದಾರೆ.

ಯು.ಟಿ. ಖಾದರ್

ಈ ಕುರಿತು ಅಧಿಕಾರಿಗಳ ಹೆಸರು ಉಲ್ಲೇಖಿಸದೆಯೇ, ಗೃಹಸಚಿವ ಜಿ.ಪರಮೇಶ್ವರ ಅವರಿಗೆ ಇದೇ 15ರಂದು ಪತ್ರ ಬರೆದಿರುವ ಯು.ಟಿ.ಖಾದರ್, 'ದ್ವೇಷಭರಿತ ಭಾಷಣ, ಪ್ರಚೋದನಾತ್ಮಕ ಹೇಳಿಕೆ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಹರಡುತ್ತಿರುವ ಸಮಾಜ ಘಾತುಕ ವದಂತಿಗಳಿಂದಾಗಿ ಸಾರ್ವಜನಿಕ ಶಾಂತಿ ಮತ್ತು ಸೌಹಾರ್ದಕ್ಕೆ ಧಕ್ಕೆ ಉಂಟಾಗಿದೆ. ಒಂದು ವೇಳೆ ಹಿಂದಿನ ಅಧಿಕಾರಿಗಳು ಸೂಕ್ತ ಸಮಯದಲ್ಲಿ ಕ್ರಮ ಕೈಗೊಂಡಿದ್ದರೆ ಕರಾವಳಿಯಲ್ಲಿ ಧರ್ಮಾಧರಿತ ಕೊಲೆ ಮತ್ತು ಹಿಂಸಾಚಾರವನ್ನು ತಪ್ಪಿಸಬಹುದಾಗಿತ್ತು' ಎಂದಿದ್ದಾರೆ.

'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದರೋಡೆ, ಮಾದಕ ವಸ್ತು ಸಾಗಾಟದಂತಹ ಸಮಾಜಘಾತುಕ ಕೃತ್ಯಗಳಲ್ಲಿ ನಿಷ್ಠೆಯಿಂದ, ತ್ವರಿತಗತಿಯಲ್ಲಿ ಸೂಕ್ತ ಕ್ರಮ ಕೈಗೊಂಡ ಈ ಹಿಂದಿನ ಪೊಲೀಸ್ ಅಧಿಕಾರಿಗಳು ದ್ವೇಷ ಭಾಷಣಗಳ ವಿರುದ್ಧ ಏಕೆ ಕ್ರಮ ಕೈಗೊಳ್ಳಲಿಲ್ಲ' ಎಂದು ಅವರು ಪ್ರಶ್ನಿಸಿದ್ದಾರೆ.

'ಈಗಿನ ಪೊಲೀಸ್ ಅಧಿಕಾರಿಗಳು ದ್ವೇಷ ಭಾಷಣದ ವಿರುದ್ಧ ಸಮರ್ಪಕ ಹಾಗೂ ತ್ವರಿತ ಕ್ರಮ ಕೈಗೊಂಡಿದ್ದಾರೆ' ಎಂದೂ ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಈ ತನಿಖೆಯಿಂದ ರಾಜ್ಯದ ಆಂತರಿಕ ಶಾಂತಿ, ಸಾಮರಸ್ಯ ಹಾಗೂ ಸಾರ್ವಜನಿಕ ನಂಬಿಕೆಯನ್ನು ಮತ್ತಷ್ಟು ಬಲಪಡಿಸಬಹುದು. ತಾವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ಅವರು ಒತ್ತಾಯಿಸಿದ್ದಾರೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ

'ಶಾಲೆ ದುರಸ್ತಿಗೆ ಇನ್ಫೋಸಿಸ್ ನೆರವು'

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ರಾಜ್ಯದಲ್ಲಿ ಶಿಥಿಲಗೊಂಡಿರುವ ಶಾಲಾ ಕೊಠಡಿಗಳ ದುರಸ್ತಿಗೆ ಸರ್ಕಾರ ₹ 700 ಕೋಟಿಗೂ ಹೆಚ್ಚು ಹಣ ನೀಡಿದೆ. ಇದರ ಜತೆಗೆ, ಇನ್ಫೋಸಿಸ್ ಸೇರಿ ಇತರ ಸಂಸ್ಥೆಗಳ ನೆರವು ಪಡೆಯಲಾಗುವುದು' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ತಿಳಿಸಿದರು.

'ಶಿಥಿಲ ಕಟ್ಟಡಗಳ ದುರಸ್ತಿ ಕಾರ್ಯವು ಕಾಂಗ್ರೆಸ್ ಸರ್ಕಾರ ಬಂದ ಬಳಿಕ ವೇಗ ಪಡೆದಿದೆ. ಕಳೆದ ಬಾರಿ ಮಳೆ ಬಂದು ಕಟ್ಟಡಗಳು ಹಾಳಾಗಿವೆ. ಬಿಜೆಪಿಯವರು 8,200 ವಿವೇಕಾ ಕೊಠಡಿಗಳನ್ನು ಮಾಡುವುದಾಗಿ ಹೇಳಿ ಸಾವಿರಕ್ಕೆ ಮಾತ್ರ ಹಣ ಇಟ್ಟಿದ್ದರು. ಇನ್ನುಳಿದವಕ್ಕೆ ನಮ್ಮ ಸರ್ಕಾರ ಹಣ ಕೊಡಬೇಕಾಯಿತು' ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ಶಾಲಾ ಕೊಠಡಿಗಳು ಒಮ್ಮೆಲೇ ಶಿಥಿಲವಾಗಿಲ್ಲ. ಹಲವು ವರ್ಷಗಳ ಬಳಕೆ ಬಳಿಕ ಅವು ಶಿಥಿಲಗೊಂಡಿವೆ. ಅದರ ದುರಸ್ತಿ ಹೊಣೆ ನನ್ನ ಮೇಲಿದೆ. ಹಂತಹಂತವಾಗಿ ಎಲ್ಲವನ್ನೂ ಸರಿಪಡಿಸುವೆ' ಎಂದರು.

ಮಾಧ್ಯಮಗಳಲ್ಲಷ್ಟೇ ಮುಖ್ಯಮಂತ್ರಿ ಬದಲಾವಣೆ: 'ಮುಖ್ಯಮಂತ್ರಿ ಮತ್ತು ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಚರ್ಚೆಗಳು ಮಾಧ್ಯಮಗಳಲ್ಲಿ ಮಾತ್ರವಿದೆ. ಆ ವಿಷಯಗಳನ್ನು ಪಕ್ಷದ ಹೈಕಮಾಂಡ್ ನಿರ್ಧರಿಸಬೇಕು. ಸಚಿವ ಸಂಪುಟ ವಿಸ್ತರಣೆಯೂ ಅಲ್ಲಿಯೇ ನಿರ್ಧಾರವಾಗಬೇಕು. ಸಚಿವ ಸ್ಥಾನಕ್ಕಾಗಿ ಆಕಾಂಕ್ಷೆ ಪಡುವುದು ತಪ್ಪಲ್ಲ. ಆದರೆ, ನಿರ್ಧಾರ ನಮ್ಮದಲ್ಲ' ಎಂದು ಮಧು ಬಂಗಾರಪ್ಪ ತಿಳಿಸಿದರು.

ಬಳ್ಳಾರಿಯ ಪಟೇಲ್ ನಗರ ಬಡಾವಣೆಯ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಗೆ ಸೋಮವಾರ ಭೇಟಿ ನೀಡಿದ ಸಚಿವ ಮಧು ಬಂಗಾರಪ್ಪ ಮತ್ತು ಜಿಲ್ಲಾ ಪಂಚಾಯಿತಿ ಸಿಇಒ ಮೊಹಮದ್ ಹ್ಯಾರಿಸ್ ಸುಮೇರ್ ಅವರು ವಿದ್ಯಾರ್ಥಿಗಳ ಜೊತೆ ಊಟ ಮಾಡಿದರು ಪ್ರಜಾವಾಣಿ ಚಿತ್ರ: ಮುರಳಿಕಾಂತ ರಾವ್

ನೀಚ ರಾಜಕೀಯ ಮಾಡಲ್ಲ– ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೆಣದ ಮೇಲೆ ರಾಜಕೀಯ ಮಾಡುವುದು ಬಿಜೆಪಿ ಮತ್ತು ಜೆಡಿಎಸ್ ಪಕ್ಷದವರ ಕೆಲಸ. ನಾವು (ಕಾಂಗ್ರೆಸ್) ಆ ರೀತಿ ನೀಚ ರಾಜಕೀಯ ಮಾಡುವುದಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೋಮವಾರ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಅಹಮದಾಬಾದ್‌ನಲ್ಲಿ ಸಂಭವಿಸಿದ ವಿಮಾನ ದುರಂತದ ವಿಷಯದಲ್ಲಿ ನಾವು ರಾಜಕೀಯ ಮಾಡುವುದಿಲ್ಲ. ಅದೇನಿದ್ದರೂ ಬಿಜೆಪಿ ಮತ್ತು ಜೆಡಿಎಸ್ ಕೆಲಸ' ಎಂದರು.

ಕೆಲವೆಡೆ ಜನನ ಪ್ರಮಾಣ ಕುಸಿತ?

ಒಂದನೇ ಪುಟದಿಂದ....

ಈ ವಿಚಾರವು ಮುಖ್ಯ ಚುನಾವಣಾ ಅಧಿಕಾರಿ ಮನೋಜ್ ಕುಮಾರ್ ಮೀನಾ ನೇತೃತ್ವದ ತಂಡದ ಅಚ್ಚರಿಗೆ ಕಾರಣವಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಅತ್ಯಧಿಕ 85.84 ಇಪಿಆರ್ ಇದೆ. ಇದರರ್ಥ 100ರಲ್ಲಿ 85 ಜನರು 18 ವರ್ಷ ದಾಟಿದವರು. ಜಿಲ್ಲೆಯ ಒಟ್ಟು ಅಂದಾಜು ಜನಸಂಖ್ಯೆ 11.33 ಲಕ್ಷ, ಅದರಲ್ಲಿ 9.73 ಲಕ್ಷ ಜನರು ಮತದಾರರಾಗಿ ಗುರುತಿಸಿಕೊಂಡಿದ್ದಾರೆ.

'ಪಡಿತರ ಚೀಟಿಯಂತಹ ವಿವಿಧ ದಾಖಲೆ ಮೂಲಕ ಈ ಅನುಪಾತವನ್ನು ನಾವು ಪರಿಶೀಲಿಸಿದ್ದೇವೆ. ಜನನ ಪ್ರಮಾಣ ಕಡಿಮೆ ಆಗುತ್ತಿರುವುದನ್ನು ಇದು ಖಚಿತಪಡಿಸಿದೆ. ಜನಸಂಖ್ಯಾ ಬೆಳವಣಿಗೆ ನಕಾರಾತ್ಮಕವಾಗಿರುವುದರ ಸೂಚನೆಯಿದು' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಕೊಡಗು ಜಿಲ್ಲೆ 84.25ರ ಇಪಿಎಆರ್ ಹೊಂದಿದ್ದು, ಎರಡನೇ ಸ್ಥಾನದಲ್ಲಿದೆ. ನಂತರದ ಸ್ಥಾನದಲ್ಲಿ ಮಂಡ್ಯ (83.72), ಉಡುಪಿ (83.07), ಹಾಸನ (82.82) ಮತ್ತು ತುಮಕೂರು (81.78) ಇವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಮೈಸೂರು ಜಿಲ್ಲೆಯ ಇಪಿಆರ್ 76.51. ಇದು ರಾಜ್ಯದ ಸರಾಸರಿಗಿಂತ ಹೆಚ್ಚಾಗಿದೆ. ಮೈಸೂರಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಇಪಿಆರ್ 97.74 ಇರುವುದು ಬೆರಗು ಮೂಡಿಸುತ್ತದೆ.

ಬೆಂಗಳೂರು ನಗರದಲ್ಲಿ ಇಪಿಆರ್ ಅತ್ಯಂತ ಕಡಿಮೆಯಾಗಿದ್ದು, 51.78 ಮತ್ತು 63.21ರ ನಡುವೆ ಇದೆ.

ಮತದಾರರ ಪಟ್ಟಿಯ ದತ್ತಾಂಶವು ಲಿಂಗ ಅನುಪಾತದಲ್ಲಿನ ಸಮಸ್ಯೆಗಳನ್ನು ಕೂಡಾ ಸೂಚಿಸುತ್ತದೆ. ಒಟ್ಟಾರೆಯಾಗಿ, ಕರ್ನಾಟಕದ ಮತದಾರರಲ್ಲಿ ಲಿಂಗ ಅನುಪಾತವು 1,000 ಪುರುಷರಿಗೆ 1,003 ಮಹಿಳೆಯರಿದ್ದಾರೆ. ಆದರೆ, ಮೊದಲ ಬಾರಿಗೆ ಮತದಾರರಾಗುವ (18-19 ವಯೋಮಾನದವರು) ವಿಷಯಕ್ಕೆ ಬಂದಾಗ, ಅನುಪಾತವು 892ಕ್ಕೆ ಇಳಿಯುತ್ತದೆ.

'ಕರ್ನಾಟಕದಾದ್ಯಂತ ಫಲವಂತಿಕೆ ದರ ಕಡಿಮೆಯಾಗಿದೆ ಎಂಬುದು ನಿಜ' ಎಂದು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆಯ ಜನಸಂಖ್ಯಾ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕಿ ಲೇಖಾ ಸುಬಯ್ಯ ಹೇಳಿದರು.

ಸಂಕ್ಷಿಪ್ತ ಸುದ್ದಿ

ಸಿಗದ ಆರ್ಥಿಕ ನೆರವು ಪಂಚಾಯಿತಿಯೊಳಗೆ ಎಮ್ಮೆ ಕಟ್ಟಿದ ರೈತ

ಅಥಣಿ ತಾಲ್ಲೂಕಿನ ಸಂಬರಗಿ ಗ್ರಾಮದ ರೈತ ಸತೀಶ ಕೋಳಿ ಅವರು ಸೋಮವಾರ ಪಂಚಾಯಿತಿ ಒಳಗೆ ಎಮ್ಮೆ ತಂದು ಕಟ್ಟಿ ಪ್ರತಿಭಟನೆ ನಡೆಸಿದರು

ಅಥಣಿ (ಬೆಳಗಾವಿ ಜಿಲ್ಲೆ): ದನದ ಕೊಟ್ಟಿಗೆ ನಿರ್ಮಾಣಕ್ಕೆ ಹಣ ಮಂಜೂರಾದ ನೆರವಿನ ಹಣ ನೀಡದ ಕಾರಣ, ರೈತ ಸತೀಶ ಕೋಳಿ ಅವರು ಸಂಬರಗಿ ಗ್ರಾಮ ಪಂಚಾಯಿತಿ ಕಚೇರಿ ಒಳಗೆ ಎಮ್ಮೆ ಕಟ್ಟಿ ಆಕ್ರೋಶ ವ್ಯಕ್ತಪಡಿಸಿದರು.

ಗ್ರಾಮ ಪಂಚಾಯಿತಿ ಕಟ್ಟದ ಒಳಗಿನ ಕಿಟಕಿಗೆ ಎಮ್ಮೆ ಕಟ್ಟಿದ ರೈತ, ಅಲ್ಲೇ ಮೇವು ಹಾಕಿದರು. ಗಂಟೆಗಟ್ಟಲೇ ಎಮ್ಮೆಯನ್ನು ಅಲ್ಲೇ ಮಲಗಿಸಿದರು. ಸ್ಥಳಕ್ಕೆ ಬಂದ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಶಿವಾನಂದ ಕಲ್ಲಾಪುರ ರೈತನನ್ನು ಸಮಾಧಾನಪಡಿಸಿದರು.

'ದನದ ಕೊಟ್ಟಿಗೆ ನಿರ್ಮಾಣಕ್ಕೆ ವರ್ಷದ ಹಿಂದೆಯೇ ಸಂಬರಗಿ ಗ್ರಾಮ ಪಂಚಾಯಿತಿಯಿಂದ ನನಗೆ ನೆರವಿನ ಹಣ ಮಂಜೂರಾಗಿದೆ. ₹50 ಸಾವಿರ ವೆಚ್ಚದಲ್ಲಿ ಕೊಟ್ಟಿಗೆ ಕಟ್ಟಿ ವರ್ಷವಾದರೂ ಹಣ ನೀಡುತ್ತಿಲ್ಲ. ಅಧಿಕಾರಿಗಳನ್ನು ಕೇಳಿದರೆ ನಿಮಗೆ ಮಂಜೂರು ಮಾಡಿರುವ ಯೋಜನೆ ರದ್ದಾಗಿದೆ ಎಂದು ಹೇಳುತ್ತಾರೆ' ಎಂದು ರೈತ ಸತೀಶ ದೂರಿದ್ದಾರೆ. ಅಧಿಕಾರಿ ನೀಡಿದ ಭರವಸೆ ಮೇರೆಗೆ ಅವರು ಎಮ್ಮೆಯನ್ನು ಮನೆಗೆ ಒಯ್ದರು.

ರಷ್ಯಾ ಯೋಧನಿಗೆ ಗೋಕರ್ಣದಲ್ಲಿ ಮೋಕ್ಷ

ಗೋಕರ್ಣ (ಉತ್ತರ ಕನ್ನಡ ಜಿಲ್ಲೆ): ರಷ್ಯಾ ಮತ್ತು ಉಕ್ರೇನ್ ಯುದ್ಧದಲ್ಲಿ ಮಡಿದ ರಷ್ಯಾ ಯೋಧ ಸೆರ್ಗೆಯ್ ಗ್ರಾಬ್ಲೆವ್ಸ್ಕಿ ಅವರಿಗೆ ಶನಿವಾರ ಗೋಕರ್ಣದಲ್ಲಿ ಮೋಕ್ಷ ಕಾರ್ಯ ನೆರವೇರಿಸಲಾಯಿತು. ನಾರಾಯಣ ಬಲಿ ಪೂರ್ವಕವಾಗಿ ಅವರಿಗೆ ಪಿಂಡ ಪ್ರದಾನ ಮಾಡಲಾಯಿತು.

'ಗೋಕರ್ಣವನ್ನು ಅಪಾರವಾಗಿ ಪ್ರೀತಿಸುತ್ತಿದ್ದ ಸೆರ್ಗೆಯ್ ಭಾರತಕ್ಕೆ ಬಂದಾಗ, ಹಿಂದೂ ಧರ್ಮದತ್ತ ಆಕರ್ಷಣೆ ಹೊಂದಿದ್ದರು. ವಾರಾಣಸಿಯಲ್ಲಿ ಸಂಸ್ಕೃತ, ವೇದ ಮಂತ್ರ ಕಲಿತು, ಸ್ವತಃ ಹೋಮ ಹವನ ಮಾಡಲು ಪ್ರಾರಂಭಿಸಿ 'ಸೆರ್ಗೆಯ್ ಬಾಬಾ' ಆಗಿದ್ದರು. ಸಾವಿರಕ್ಕೂ ಹೆಚ್ಚು ಶಿಷ್ಯರನ್ನು ಹೊಂದಿದ್ದರು. 18 ವರ್ಷಗಳಿಂದ ಗೋಕರ್ಣಕ್ಕೆ ಬರುತ್ತಿದ್ದರು. ಸೇನೆ ತೊರೆದಿದ್ದ ಸೆರ್ಗೆಯ್, ಯುದ್ಧ ಘೋಷಣೆಯಾದ ಕೂಡಲೇ ಪುನಃ ಸೇರಿದ್ದರು. ಏಪ್ರಿಲ್ 26ರಂದು ಯುದ್ಧದಲ್ಲಿ ಮಡಿದಿದ್ದರು' ಎಂದು ಗೋಕರ್ಣದಲ್ಲಿ ಅವರ ಒಡನಾಡಿ ಪರಮೇಶ್ವರ ಶಾಸ್ತ್ರಿ 'ಪ್ರಜಾವಾಣಿ'ಗೆ ತಿಳಿಸಿದರು.

ಗೋಕರ್ಣಕ್ಕೆ ಬರುತ್ತಿದ್ದ ರಷ್ಯಾ ದೇಶದ ಸೆರ್ಗೆಯ್ ಗ್ರಾಬ್ಲೆವ್ಸ್ಕಿ

'ಮಧುಬಲೆ': ಕಾನ್‌ಸ್ಟೆಬಲ್ ಬಂಧನ

ಪಿರಿಯಾಪಟ್ಟಣ (ಮೈಸೂರು ಜಿಲ್ಲೆ): ತಾಲ್ಲೂಕಿನ ಕಂಪಲಾಪುರ ಗ್ರಾಮದ ಜವಳಿ ವರ್ತಕರೊಬ್ಬರಿಗೆ 'ಮಧುಬಲೆ' ಬೀಸಿ ₹10 ಲಕ್ಷಕ್ಕೆ ಬೇಡಿಕೆ ಇಟ್ಟ ಆರೋಪದ ಪ್ರಕರಣದಲ್ಲಿ ಪೊಲೀಸರು, ಕಾನ್‌ಸ್ಟೆಬಲ್ ಒಬ್ಬರನ್ನು ಬಂಧಿಸಿದ್ದಾರೆ. ಇತರ ಮೂವರ ಪತ್ತೆಗೆ ಬಲೆ ಬೀಸಿದ್ದಾರೆ.

ಶಿವಣ್ಣ

ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್ ಶಿವಣ್ಣ ಬಂಧಿತ.

ಇವರು ಹಾಗೂ ಇತರ ಮೂವರು, ಜವಳಿ ವರ್ತಕ ದಿನೇಶ್ ಅವರನ್ನು ಮಧುಬಲೆಗೆ ಬೀಳಿಸಿದ ಆರೋಪ ಎದುರಿಸುತ್ತಿದ್ದಾರೆ. ಬೈಲಕುಪ್ಪೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಪ್ರಾದೇಶಿಕ ಸಾರಿಗೆ ಸಾರಿಗೆ ಅಧಿಕಾರಿಗಳು ವಶಪಡಿಸಿಕೊಂಡ ಕಾರ್‌ಗಳು ಪ್ರಜಾವಾಣಿ ಚಿತ್ರ

ತೆರಿಗೆ ಬಾಕಿ: ಐದು 'ದುಬಾರಿ' ಕಾರು ವಶಕ್ಕೆ

ಮೈಸೂರು: ತೆರಿಗೆ ಪಾವತಿಸದೆ ರಾಜ್ಯದಲ್ಲಿ ಸಂಚರಿಸುತ್ತಿದ್ದ ಹೊರರಾಜ್ಯಗಳ ನೋಂದಣಿ ಸಂಖ್ಯೆಯುಳ್ಳ ಐದು ದುಬಾರಿ ಕಾರುಗಳನ್ನು ಇಲ್ಲಿನ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು (ಪಶ್ಚಿಮ) ಸೋಮವಾರ ವಶಕ್ಕೆ ಪಡೆದರು.

ಒಂದು ರೋಲ್ಸ್ ರಾಯ್ಸ್, 2 ಬೆಂಜ್, 1 ಔಡಿ ಕ್ಯೂ3, 1 ಪೋಶೆ ಕಂಪನಿಯ ಕಾರುಗಳನ್ನು ವಶಪಡಿಸಿಕೊಳ್ಳಲಾಯಿತು. ಈ ಕಾರುಗಳು ಪುದುಚೇರಿ, ಆಂಧ್ರಪ್ರದೇಶದಲ್ಲಿ ನೋಂದಣಿಯಾಗಿದ್ದು, ವರ್ಷದ ಬಳಿಕವೂ ಕರ್ನಾಟಕದಲ್ಲಿ ನೋಂದಣಿ ನವೀಕರಿಸದೇ ಸಂಚರಿಸುತ್ತಿದ್ದವು. ಹೀಗಾಗಿ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ವಾಹನಗಳನ್ನು ವಶಕ್ಕೆ ಪಡೆದರು.

'ಐದು ವಾಹನಗಳಿಂದ ₹4.5 ಕೋಟಿ ತೆರಿಗೆ ಬರಬೇಕಿದೆ. ಎರಡು ವಾಹನಗಳ ಮಾಲೀಕರು ₹2 ಕೋಟಿ ಪಾವತಿಸಿ ವಾಹನಗಳನ್ನು ವಾಪಸ್ ಪಡೆದಿದ್ದು, ಉಳಿದವರು ತೆರಿಗೆ ಕಟ್ಟಬೇಕಿದೆ' ಎಂದು ಆರ್‌ಟಿಒ ಸಿ.ಎನ್. ರಾಮಚಂದ್ರ ತಿಳಿಸಿದರು.

'ಅಂಜನಾದ್ರಿಯಲ್ಲಿ ಮಾರ್ಚ್ ಅಂತ್ಯಕ್ಕೆ ಕೇಬಲ್ ಕಾರ್'

ಕೊಪ್ಪಳ: 'ಅಂಜನಾದ್ರಿ ಬೆಟ್ಟಕ್ಕೆ ಸುಲಭವಾಗಿ ತೆರಳಲು ಕೇಬಲ್ ಕಾರ್ ಸೌಲಭ್ಯ ಅಳವಡಿಸಲು ನಿರ್ಧರಿಸಲಾಗಿದೆ. ಮಾ. 31ರ ಒಳಗೆ ಕಾಮಗಾರಿ ಮುಗಿಸುವಂತೆ ಗುತ್ತಿಗೆ ಪಡೆದ ಏಜೆನ್ಸಿಗೆ ಸೂಚಿಸಲಾಗಿದೆ. ಅಂಜನಾದ್ರಿಯೂ ಸೇರಿ ರಾಜ್ಯದ 11 ಪ್ರವಾಸಿ ತಾಣಗಳಲ್ಲಿ ಕೇಬಲ್ ಕಾರ್ ಅಳವಡಿಸಲಾಗುವುದು' ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ಹೇಳಿದರು.

ಅಂಜನಾದ್ರಿಯಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅಂಜನಾದ್ರಿ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಲಾಗಿದೆ. ಇಷ್ಟು ವರ್ಷಗಳ ಕಾಲ ಏನೂ ಅಭಿವೃದ್ಧಿ ಆಗದ್ದಕ್ಕೆ ಜನ ಆಕ್ರೋಶಗೊಂಡಿದ್ದಾರೆ. ತುರ್ತಾಗಿ ಮೂಲಸೌಕರ್ಯ ಕಲ್ಪಿಸಲಾಗುವುದು. ಯಾವುದೇ ತಾಣದಲ್ಲಿ ಆಧುನಿಕ ವ್ಯವಸ್ಥೆ ಕಲ್ಪಿಸಿದರೂ ಮೂಲ ಸ್ವರೂಪಕ್ಕೆ ಧಕ್ಕೆಯಾಗದ ರೀತಿಯಲ್ಲಿ ಎಚ್ಚರಿಕೆ ವಹಿಸಲಾಗುವುದು' ಎಂದು ತಿಳಿಸಿದರು.

ರಕ್ತ ಸಂಗ್ರಹ: ಶೇ 124ರಷ್ಟು ಪ್ರಗತಿ

ತಾಲ್ಲೂಕು ಕೇಂದ್ರಗಳಲ್ಲಿ ಪ್ಲಾಸ್ಮಾ ಸಂಗ್ರಹಣೆ : ದಿನೇಶ್ ಗುಂಡೂರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ನಿಗದಿಪಡಿಸಿದ ರಕ್ತ ಸಂಗ್ರಹಣೆಯ ಗುರಿಗಿಂತ ಶೇಕಡ 124ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ ವಿಶ್ವ ರಕ್ತದಾನಿಗಳ ದಿನಾಚರಣೆಯಲ್ಲಿ ಅವರು ನಗರದಲ್ಲಿ ಸೋಮವಾರ ಮಾತನಾಡಿದರು.

ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 1ರಷ್ಟು ಜನರಿಗೆ ರಕ್ತದ ಅವಶ್ಯವಿದ್ದು, ಅದಕ್ಕೆ ಅನುಗುಣವಾಗಿ ಪ್ರಸಕ್ತ ವರ್ಷ 10 ಲಕ್ಷ ಯೂನಿಟ್ ರಕ್ತ ಸಂಗ್ರಹಿಸಲಾಗಿದೆ. 1 ಯೂನಿಟ್ ರಕ್ತವು 4 ಜೀವಗಳನ್ನು ಉಳಿಸಬಹುದು. ಹೀಗಾಗಿ ಯುವಜನರು ರಕ್ತದಾನಕ್ಕೆ ಮುಂದಾಗಬೇಕು ಎಂದು ಕರೆ ನೀಡಿದರು.

ಹೊಸದಾಗಿ 11 ಸರ್ಕಾರಿ ರಕ್ತ ಕೇಂದ್ರಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದರಿಂದ ರಾಜ್ಯದ ಸರ್ಕಾರಿ ಆಸ್ಪತ್ರೆಗೆ ಬರುವ ಬಡಜನರಿಗೆ ರಕ್ತ ಹಾಗೂ ಅದರ ಅಂಗಾಂಶಗಳನ್ನು ಪೂರೈಸಲು ಸಾಧ್ಯವಾಗುತ್ತದೆ. ಅಲ್ಲದೇ ದೇಶದಲ್ಲಿಯೇ ಪ್ರಥಮ ಬಾರಿಗೆ ರಾಜ್ಯದಲ್ಲಿ ಅತಿ ಹೆಚ್ಚು ರಕ್ತ ಸಂಗ್ರಹಿಸುವ ನಾಲ್ಕು ಸರ್ಕಾರಿ ರಕ್ತ ಕೇಂದ್ರಗಳನ್ನು ರೀಜನಲ್ ಸೆಂಟರ್ ಆಫ್ ಎಕ್ಸಲೆನ್ಸ್ ರಕ್ತ ಕೇಂದ್ರಗಳಾಗಿ ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಹೊಸದಾಗಿ ನಾಲ್ಕು ರಕ್ತ ಸಾಗಾಣಿಕೆ ಮತ್ತು ರಕ್ತ ಸಂಗ್ರಹಣಾ ವಾಹನಗಳ ಖರೀದಿ ಪ್ರಕ್ರಿಯೆ ಚಾಲನೆಯಲ್ಲಿದೆ ಎಂದರು.

ಹೆಚ್ಚು ಬಾರಿ ರಕ್ತದಾನ ಮಾಡಿದ ಡಾ. ರಾಜನ್, ರಾಮದಾಸ್ ಗೌಡ, ದೇವಣ್ಣ, ಸುಜಾತಾ, ವೈಟ್ ಫೀಲ್ಡ್ ವಿಭಾಗದ ಸಹಾಯಕ ಪೊಲೀಸ್ ಆಯುಕ್ತೆ ಎನ್. ರೀನಾ ಸುವರ್ಣ ಅವರನ್ನು ಸನ್ಮಾನಿಸಲಾಯಿತು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಇದೇ ವೇಳೆ ದಿನೇಶ್ ಗುಂಡೂರಾವ್ ಅವರು ರಕ್ತದಾನ ಮಾಡಿದರು.

ನಗರದಲ್ಲಿ ಸೋಮವಾರ ಆಯೋಜಿಸಿದ್ದ ವಿಶ್ವ ರಕ್ತದಾನಿಗಳ ದಿನಾಚರಣೆಯಲ್ಲಿ ಸಚಿವ ದಿನೇಶ್ ಗುಂಡೂರಾವ್ ಅವರು ತಮ್ಮ ರಕ್ತವನ್ನು ಲಯನ್ಸ್ ಬ್ಲಡ್ ಬ್ಯಾಂಕ್‌ನ ಡಾ.ಪ್ರಕೃತ್ ಕೆ.ಎನ್ ಗೌಡ ಅವರಿಗೆ ಹಸ್ತಾಂತರಿಸಿದರು. (ಎಡದಿಂದ) ಲಯನ್ಸ್ ಬ್ಲಡ್ ಬ್ಯಾಂಕ್ ನ ಮ್ಯಾನೇಜಿಂಗ್ ಟ್ರಸ್ಟಿ ಮನೋಜ್ ಕುಮಾರ್, ಆರ್. ವಿನೋತ್ ಪ್ರಿಯ, ಬಸರೂರು ರಾಜೀವ್ ಶೆಟ್ಟಿ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಪ್ಲಾಸ್ಮಾ ಸಂಗ್ರಹಣೆ ವ್ಯವಸ್ಥೆ ಜಾರಿ

ತಾಯಂದಿರ ಸಾವುಗಳನ್ನು ತಡೆಯುವಲ್ಲಿ ರಕ್ತದ ಪಾತ್ರ ಪ್ರಮುಖವಾಗಿದೆ. 147 ತಾಲ್ಲೂಕು ಆಸ್ಪತ್ರೆಗಳಲ್ಲಿ ಪ್ಲಾಸ್ಮಾ ಸಂಗ್ರಹಣೆ ವ್ಯವಸ್ಥೆ ಜಾರಿಗೆ ತರಲಾಗುತ್ತಿದ್ದು, ಅಗತ್ಯ ಉಪಕರಣಗಳ ಖರೀದಿಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ ಎಂದು ದಿನೇಶ್ ಗುಂಡೂರಾವ್ ತಿಳಿಸಿದರು.

ರಾಜ್ಯ ರಕ್ತಚಲನ ಪರಿಷತ್ ನಿರ್ದೇಶಕಿ ಆರ್. ವಿನೋತ್ ಪ್ರಿಯಾ, ಆರೋಗ್ಯ ಇಲಾಖೆ ನಿರ್ದೇಶಕಿ ಡಾ. ಉಮಾ ಬುಗ್ಗಿ ಹಾಜರಿದ್ದರು.

ಯುವತಿ ಕೆನ್ನೆಗೆ ಹೊಡೆದ ಸವಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವತಿಯ ಕೆನ್ನೆಗೆ ಹೊಡೆದ ರ್‍ಯಾಪಿಡೊ ಸ್ಕೂಟಿ ಸವಾರನ ವಿರುದ್ಧ ಜಯನಗರ ಪೊಲೀಸ್ ಠಾಣೆಯಲ್ಲಿ ಸೋಮವಾರ ಪ್ರಕರಣ ದಾಖಲಾಗಿದೆ.

ಬಿಟಿಎಂ ಲೇಔಟ್‌ನಲ್ಲಿ (ವಾಟರ್ ಟ್ಯಾಂಕ್ ಬಳಿ) ನೆಲಸಿರುವ ಶ್ರೇಯಾ ಅವರು ನೀಡಿದ ದೂರು ಆಧರಿಸಿ ಕೆಎ 05 ಕೆಜೆ 2897 ನೋಂದಣಿ ಸಂಖ್ಯೆಯ ಬೈಕ್ ಸವಾರನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಯುವತಿಯ ಕೆನ್ನೆಗೆ ಸವಾರ ಹೊಡೆಯುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಸವಾರನ ವಿರುದ್ಧ ಆಕ್ರೋಶ ವ್ಯಕ್ತವಾಗುತ್ತಿದೆ. ಮತ್ತೊಂದು ಸಿಸಿಟಿವಿ ಕ್ಯಾಮೆರಾದಲ್ಲಿ ಸವಾರನಿಗೆ ಯುವತಿ ಹೊಡೆಯುತ್ತಿರುವ ದೃಶ್ಯವೂ ಸೆರೆಯಾಗಿದೆ. ಎರಡೂ ದೃಶ್ಯಾವಳಿ ಆಧರಿಸಿ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಯುವತಿಯ ದೂರಿನಲ್ಲಿ ಏನಿದೆ?: ‘ಜೂನ್ 13ರಂದು ಬೆಳಿಗ್ಗೆ 10 ಗಂಟೆಯ ಸುಮಾರಿಗೆ ಬಿಟಿಎಂ ಲೇಔಟ್‌ನಿಂದ ಜಯನಗರದ ಮೂರನೇ ಬ್ಲಾಕ್‌ಗೆ ರ್‍ಯಾಪಿಡೊ ಸ್ಕೂಟಿ ಬುಕ್ ಮಾಡಿದ್ದೆ. ಬುಕ್ ಆದ ಕೆಲವೇ ನಿಮಿಷಗಳಲ್ಲಿ ಸ್ಥಳಕ್ಕೆ ರ್‍ಯಾಪಿಡೊ ಸ್ಕೂಟಿ ಬಂದಿತ್ತು. ನಿಗದಿತ ಸ್ಥಳಕ್ಕೆ ತಲುಪಿದ ಬಳಿಕ ಸಂಚಾರ ನಿಯಮವನ್ನು ಪಾಲಿಸದೇ ಸ್ಕೂಟಿ ಚಾಲನೆ ಮಾಡಿದ್ದರ ಕುರಿತು ಪ್ರಶ್ನೆ ಮಾಡಿದ್ದೆ. ಅಡ್ಡಾದಿಡ್ಡಿ ಚಾಲನೆ ಮಾಡುವುದು ಕಾನೂನುಬಾಹಿರ ಎಂಬುದಾಗಿ ತಿಳಿಸಿದ್ದೆ. ಆಗ ಸವಾರ, ಸಾರ್ವಜನಿಕ ಸ್ಥಳದಲ್ಲಿ ಅಸಭ್ಯವಾಗಿ ವರ್ತಿಸಿ, ಅವಾಚ್ಯ ಪದಗಳಿಂದ ನಿಂದಿಸಿ ಹಲ್ಲೆ ಮಾಡಿದ್ದಾನೆ’ ಎಂದು ಶ್ರೇಯಾ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಘಟನೆಯು ಜೂನ್ 13ರಂದು ನಡೆದಿತ್ತು. ಈ ಸಂಬಂಧ ದೂರು ನೀಡುವುದಕ್ಕೆ ಶ್ರೇಯಾ ಅವರಿಗೆ ಇಷ್ಟ ಇರಲಿಲ್ಲ. ಹಲ್ಲೆಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಯುವತಿಯ ಸ್ನೇಹಿತರ ಮನವಿ ಮೇರೆಗೆ ಜೂನ್ 16ರಂದು ದೂರು ನೀಡಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ದೂರು ನೀಡಿದ ಬಳಿಕ ಶ್ರೇಯಾ ಅವರು ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿ ‘ಸವಾರ ಬೇರೊಂದು ಮಾರ್ಗದಲ್ಲಿ ನನ್ನನ್ನು ಕರೆದೊಯ್ಯುತ್ತಿದ್ದ. ಅದನ್ನು ಪ್ರಶ್ನಿಸಿದ್ದೆ. ಪದೇ ಪದೇ ಬ್ರೇಕ್ ಹಾಕುತ್ತಿದ್ದ’ ಎಂದರು.

‘ಮತ್ತೊಂದು ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ. ಬೈಕ್ ಸೀಟ್ ಮೇಲೆ ಕುಳಿತ ಸವಾರ ಹಾಗೂ ದೂರುದಾರೆ ಮಧ್ಯೆ ವಾಗ್ವಾದ ನಡೆಯುತ್ತದೆ. ಆಗ ಸವಾರನ ಮೇಲೆ ಯುವತಿ ಹಲ್ಲೆ ಮಾಡುತ್ತಾರೆ. ಈ ದೃಶ್ಯಾವಳಿಯನ್ನೂ ಪರಿಶೀಲಿಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಮೊದಲು ಹೊಡೆದಿದ್ದೇ ಯುವತಿ’: ‘ಬಂದ ಕೂಡಲೇ ಸಿಟ್ಟಿನಿಂದ ಮಾತನಾಡುತ್ತಿದ್ದರು. ಮಾರ್ಗ ಮಧ್ಯೆ ಜಂಕ್ಷನ್‌ನಲ್ಲಿ ರೆಡ್ ಸಿಗ್ನಲ್ ಇತ್ತು. ಯುವತಿ ಕಚೇರಿಗೆ ತೆರಳುವುದಕ್ಕೆ ತಡವಾಗಲಿದೆ ಎಂಬ ಕಾರಣಕ್ಕೆ ಪರ್ಯಾಯ ಮಾರ್ಗದಲ್ಲಿ ಕರೆದೊಯ್ಯುತ್ತಿದ್ದೆ. ಜಯನಗರದ ಮೂರನೇ ಬ್ಲಾಕ್‌ಗೆ ಬಂದಾಗ ಸ್ಕೂಟಿ ನಿಲುಗಡೆ ಮಾಡುವಂತೆ ಕೇಳಿಕೊಂಡರು. ಏಕಾಏಕಿ ಸ್ಕೂಟಿ ನಿಲ್ಲಿಸಿದರೆ ಹಿಂದಿನಿಂದ ಬರುತ್ತಿದ್ದ ವಾಹನಗಳು ಡಿಕ್ಕಿ ಹೊಡೆಯುವ ಸಾಧ್ಯತೆಯಿತ್ತು. 100 ಮೀಟರ್‌ನಷ್ಟು ಮುಂದಕ್ಕೆ ಹೋಗಿ ಸ್ಕೂಟಿ ನಿಲುಗಡೆ ಮಾಡಿದ್ದೆ. ನೀನು ಏನ್ ಓದಿರುವುದು ಎಂಬುದಾಗಿ ಪ್ರಶ್ನಿಸಿದ್ದರು. ಕುತ್ತಿಗೆಗೂ ಕೈಹಾಕಿದರು. ಟಿಫನ್ ಬಾಕ್ಸ್‌ನಲ್ಲಿ ಹೊಡೆದರು. ಯುವತಿ ಹೊಡೆಯುತ್ತಿರುವುದನ್ನು ಸ್ಥಳದಲ್ಲಿದ್ದ ಗಾರೆ ಕೆಲಸಗಾರರು ನೋಡಿದ್ದಾರೆ. ಆಗ ನಾನೂ ಹೊಡೆದಿದ್ದೇನೆ’ ಎಂದು ರ್‍ಯಾಪಿಡೊ ಸ್ಕೂಟಿ ಸವಾರ ಸುಹಾಸ್ ಹೇಳಿದರು.

‘ಕಚೇರಿಗೆ ತೆರಳಿ ದೂರು’: ‘ಘಟನೆ ನಡೆದ ಬಳಿಕ ಆಕೆ ಕೆಲಸ ಮಾಡುತ್ತಿದ್ದ ಕಚೇರಿಗೂ ತೆರಳಿ ಮಾಹಿತಿ ನೀಡಿದ್ದೇನೆ. ಪ್ರಕರಣ ಮುಂದುವರಿಸುವುದು ಬೇಡ. ಆಕೆಗೆ ಬುದ್ಧಿ ಹೇಳುತ್ತೇವೆ ಎಂದು ಅಲ್ಲಿನ ಸಿಬ್ಬಂದಿ ಹೇಳಿದ್ದರು. ಹೀಗಾಗಿ ಸುಮ್ಮನಾಗಿದ್ದೆ’ ಎಂದರು.

ಕಾಲ್ತುಳಿತದ ಹಿಂದೆ ಬಿಜೆಪಿ ಷಡ್ಯಂತ್ರ: ಕಾಂಗ್ರೆಸ್ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆರ್‌ಸಿಬಿ ತಂಡದ ವಿಜಯೋತ್ಸವದ ವೇಳೆ ನಡೆದ ಕಾಲ್ತುಳಿತ ಘಟನೆಯ ಹಿಂದೆ ಬಿಜೆಪಿಯ ಷಡ್ಯಂತ್ರ ಅಡಗಿದೆ’ ಎಂದು ಆರೋಪಿಸಿ ಕಾಂಗ್ರೆಸ್ ವಕ್ತಾರ ಎಂ. ಲಕ್ಷ್ಮಣ್ ನೇತೃತ್ವದ ಕಾಂಗ್ರೆಸ್ ನಿಯೋಗ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕೆಲ್ ಕುನ್ಹ ಆಯೋಗಕ್ಕೆ ಸೋಮವಾರ ದೂರು ನೀಡಿದೆ.

ದೂರು ನೀಡಿದ ಬಳಿಕ ಮಾತನಾಡಿದ ಲಕ್ಷ್ಮಣ್, ‘ಬಿಜೆಪಿಯವರ ಟ್ವೀಟ್‌ಗಳು ಮತ್ತು ವಿಡಿಯೊಗಳನ್ನು ದೂರಿನ ಜೊತೆ ಸಾಕ್ಷ್ಯವಾಗಿ ಆಯೋಗಕ್ಕೆ ನೀಡಲಾಗಿದೆ’ ಎಂದರು.

‘ಆರ್‌ಸಿಬಿ ವಿಜಯೋತ್ಸವದ ವೇಳೆ ಜನಸಂದಣಿ ನಡುವೆ ಬಿಜೆಪಿಯ ಕೆಲವು ಗೂಂಡಾಗಳು ಸೇರಿಕೊಂಡು ನೂಕಾಟ, ತಳ್ಳಾಟ ಉಂಟಾಗುವಂತೆ ಮಾಡಿದ್ದಾರೆ. ಯಾರು ಆ ರೀತಿ ತಳ್ಳಿದ್ದಾರೆ ಎಂಬುದನ್ನು ಗುರುತು ಮಾಡಿ ವಿಡಿಯೊ ನೀಡಿದ್ದೇವೆ. ಇದರ ಹಿಂದೆ ದೊಡ್ಡ ಸಂಚು ಇರುವುದು ನಿಶ್ಚಿತ. ಹೀಗಾಗಿ, ವಿವಿಧ ಆಯಾಮಗಳಿಂದ ತನಿಖೆ ಆಗಬೇಕು’ ಎಂದರು.

ಘನತ್ಯಾಜ್ಯ ವಿಲೇವಾರಿ: ಮರು ಟೆಂಡರ್‌ಗೆ ತಡೆ

ಒಂದನೇ ಪುಟದಿಂದ...

ಅಂತೆಯೇ, ‘ನಾಲ್ಕು ತಿಂಗಳಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ’ ಎಂದು ರಾಜ್ಯ ಸರ್ಕಾರ ಮತ್ತು ಬಿಬಿಎಂಪಿಗೆ ಆದೇಶಿಸಿತ್ತು’ ಎಂದರು.

‘ಈ ಆದೇಶದ ಅನುಸಾರ 2025 ಮೇ ತಿಂಗಳಲ್ಲಿ ಮರು ಟೆಂಡರ್ ಕರೆಯಲಾಗಿದೆ. ಆದರೆ, ಮರು ಟೆಂಡರ್ ಅಧಿಸೂಚನೆಯಲ್ಲಿ, ಸಕ್ಷಮ ಪ್ರಾಧಿಕಾರಗಳಿಂದ ಅಗತ್ಯ ಅನುಮೋದನೆ ಪಡೆದು ಇಲಾಖಾ ಸಚಿವರ ಅನುಮೋದನೆಯೊಂದಿಗೆ ತುರ್ತಾಗಿ ಅನುಷ್ಠಾನಗೊಳಿಸಲು ಆದೇಶಿಸಲಾಗಿದೆ ಎಂಬ ಷರತ್ತು ವಿಧಿಸಲಾಗಿದೆ. ಇದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ (ಕೆಟಿಪಿಪಿ) ಕಾಯ್ದೆ-1999ಕ್ಕೆ ಸಂಪೂರ್ಣ ತದ್ವಿರುದ್ಧವಾಗಿದೆ’ ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

‘ಅಲ್ಲದೆ, ಸರ್ಕಾರದ ಪರವಾಗಿ ಅಡ್ವೊಕೇಟ್ ಜನರಲ್ ಅವರು ನ್ಯಾಯಾಲಯಕ್ಕೆ ಸಲ್ಲಿಸಿದ್ದ ಪ್ರಮಾಣ ಪತ್ರದ ಉಲ್ಲಂಘನೆಯೂ ಆಗಿದೆ’ ಎಂದರು. ಈ ಮಾತಿಗೆ ಆಘಾತ ವ್ಯಕ್ತಪಡಿಸಿದ ನ್ಯಾಯಪೀಠ, ‘ಇಲ್ಯಾಕೆ ಇಲಾಖೆ ಸಚಿವರು ಬಂದರು’ ಎಂದು ಸರ್ಕಾರದ ಪರ ವಕೀಲರನ್ನು ಪ್ರಶ್ನಿಸುವ ಮೂಲಕ ಸರ್ಕಾರದ ನಡೆಯನ್ನು ಕುಟುಕಿತು.

ಇದಕ್ಕೆ ಸರ್ಕಾರದ ಪರ ವಕೀಲ ಸ್ಫೂರ್ತಿ ಹೆಗಡೆ, ‘ಈ ಪ್ರಕರಣದಲ್ಲಿ ಅಡ್ವೊಕೇಟ್ ಜನರಲ್ ಬಂದು ವಾದ ಮಂಡಿಸಲಿದ್ದಾರೆ. ಅದಕ್ಕಾಗಿ ಒಂದಷ್ಟು ಕಾಲಾವಕಾಶ ನೀಡಬೇಕು’ ಎಂದು ಕೋರಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, ಅರ್ಜಿದಾರರ ಮಧ್ಯಂತರ ಮನವಿಯನ್ನು ಮನ್ನಿಸಿ ಮರು ಟೆಂಡರ್‌ಗೆ ಮಧ್ಯಂತರ ತಡೆ ನೀಡಿ ಆದೇಶಿಸಿತು. ವಿಚಾರಣೆಯನ್ನು ಇದೇ 19ಕ್ಕೆ ಮುಂದೂಡಲಾಗಿದೆ.

₹4,791 ಕೋಟಿ ಮೊತ್ತದ ಟೆಂಡರ್

ಏಳು ವರ್ಷಗಳ ಅವಧಿಗೆ ಆಹ್ವಾನಿಸಿರುವ 33 ಪ್ಯಾಕೇಜ್‌ಗಳ ಮರು ಟೆಂಡರ್‌ನ ಮೊತ್ತ ₹4,791 ಕೋಟಿ ಎಂದು ಅಂದಾಜಿಸಿರುವ ನಗರಾಭಿವೃದ್ಧಿ ಇಲಾಖೆ ಟೆಂಡರ್ ಆಹ್ವಾನಿಸಲು ಮೇ 26ರಂದು ಬಿಎಸ್‌ಡಬ್ಲ್ಯುಎಂಎಲ್‌ಗೆ ಅನುಮತಿ ನೀಡಿತ್ತು.

ಬಿಎಸ್‌ಡಬ್ಲ್ಯುಎಂಎಲ್ ತ್ಯಾಜ್ಯ ನಿರ್ವಹಣೆಗೆ 2022ರ ಸೆಪ್ಟೆಂಬರ್‌ನಲ್ಲಿ 89 ಪ್ಯಾಕೇಜ್‌ಗಳಲ್ಲಿ ಟೆಂಡರ್ ಕರೆದಿತ್ತು. ತಾಂತ್ರಿಕ ಬಿಡ್ ಅರ್ಹತೆ ಸಮಸ್ಯೆಯಿಂದ ಟೆಂಡರ್ ರದ್ದಾಗಿತ್ತು. 2023ರ ಜನವರಿಯಲ್ಲಿ ಎರಡನೇ ಬಾರಿಗೆ ಟೆಂಡರ್ ಆಹ್ವಾನಿಸಿದ್ದಾಗ, ಅರ್ಹತಾ ಸುತ್ತಿನಲ್ಲಿ ಕೆಲವರನ್ನು ಅನರ್ಹಗೊಳಿಸಿದ್ದರಿಂದ ವಿಷಯ ಹೈಕೋರ್ಟ್ ಹಂತಕ್ಕೆ ತಲುಪಿತ್ತು. ಮರು ಟೆಂಡರ್ ಪ್ರಕ್ರಿಯೆ ನಡೆಸುವುದಾಗಿ ಹೈಕೋರ್ಟ್‌ಗೆ ಸರ್ಕಾರ ಪ್ರಮಾಣಪತ್ರ ಸಲ್ಲಿಸಿತ್ತು. ‘ನಾಲ್ಕು ತಿಂಗಳಲ್ಲಿ ಮರು ಟೆಂಡರ್ ಅನ್ನು ಅಂತಿಮಗೊಳಿಸಬೇಕು’ ಎಂದು ಹೈಕೋರ್ಟ್ 2025ರ ಏಪ್ರಿಲ್ 22ರಂದು ಆದೇಶ ನೀಡಿತ್ತು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರಾಥಮಿಕ ತ್ಯಾಜ್ಯ ಸಂಗ್ರಹ, ಎರಡನೇ ಹಂತದ ತ್ಯಾಜ್ಯ ವರ್ಗಾವಣೆ, ರಸ್ತೆ ಗುಡಿಸಿದ ಕಸ ಸಂಗ್ರಹಿಸಲು 89 ಪ್ಯಾಕೇಜ್‌ಗಳ ಬದಲು 33 ವಿಭಾಗವಾರು ಪ್ಯಾಕೇಜ್‌ನ ಮರು ಟೆಂಡರ್ ಅನ್ನು ಬಿಎಸ್‌ಡಬ್ಲ್ಯುಎಂಎಲ್ ಮೇ 28ರಂದು ಆಹ್ವಾನಿಸಿತ್ತು. ಜೂನ್ 9ರಂದು ನಡೆದ ಪ್ರೀ–ಬಿಡ್ ಸಭೆಯಲ್ಲಿ ಚರ್ಚಿಸಲಾಗದಂತಹ ವಿನಾಯಿತಿ, ಷರತ್ತುಗಳನ್ನು ವಿಧಿಸಿ ಹೊಸ ಅನುಬಂಧವನ್ನು ಎಂಜಿನಿಯರ್‌ಗಳು ಸೇರಿಸಿದ್ದಾರೆ ಎಂದೂ ಗುತ್ತಿಗೆದಾರರು ಆರೋಪಿಸಿದ್ದರು.

ಪಿಂಚಣಿ: 23.19 ಲಕ್ಷ ಅನರ್ಹರ ಪತ್ತೆ

ಒಂದನೇ ಪುಟದಿಂದ...

ಈ ಫಲಾನುಭವಿಗಳ ವಿವರಗಳನ್ನು ಕುಟುಂಬದ ದತ್ತಾಂಶದ ಮಾಹಿತಿಯೊಂದಿಗೆ ವಯಸ್ಸು, ಆದಾಯ ಮಿತಿ, ಆದಾಯ ತೆರಿಗೆ ಪಾವತಿ, ಎಚ್‌ಆರ್‌ಎಂಎಸ್ ವಿವರಗಳನ್ನು ಸಂಯೋಜಿಸಿ ನೋಡಿದಾಗ, ವೃದ್ಧಾಪ್ಯ ಯೋಜನೆ ಅಡಿ ಸುಮಾರು 9.04 ಲಕ್ಷ ಮತ್ತು ಸಂಧ್ಯಾ ಸುರಕ್ಷಾ ಯೋಜನೆಯಡಿ ಅಂದಾಜು 14.15 ಲಕ್ಷ ಅನರ್ಹ ಫಲಾನುಭವಿಗಳು ಇರುವುದನ್ನು ಗುರುತಿಸಲಾಗಿದೆ’ ಎಂದು ಆಯುಕ್ತರು ವಿವರಿಸಿದ್ದಾರೆ.

ಆದ ಕಾರಣ ಗ್ರಾಮವಾರು, ತಾಲ್ಲೂಕುವಾರು ಮತ್ತು ಜಿಲ್ಲಾವಾರು ಫಲಾನುಭವಿಗಳ ವಿವರಗಳನ್ನು ಎಲ್ಲ ತಹಶೀಲ್ದಾರರಿಗೆ ಒದಗಿಸಲಾಗಿದೆ. ಈ ಫಲಾನುಭವಿಗಳ ವಯಸ್ಸು, ಆದಾಯ ಮಿತಿ, ಎಪಿಎಲ್, ಆದಾಯ ತೆರಿಗೆ ಪಾವತಿ ಮತ್ತು ಎಚ್‌ಆರ್‌ಎಂಎಸ್ ಮಾನದಂಡಗಳನ್ನು ಭೌತಿಕವಾಗಿ ಪರಿಶೀಲಿಸಬೇಕು. ಅನರ್ಹ ಫಲಾನುಭವಿಗಳ ಪಿಂಚಣಿಯನ್ನು ರದ್ದುಪಡಿಸಲು ನಿಯಮಾನುಸಾರ ಕ್ರಮ ತೆಗೆದುಕೊಳ್ಳಬೇಕು. ಅನರ್ಹ ಫಲಾನುಭವಿಗಳ ವಿವರಗಳನ್ನು ಇದೇ 11ರ ಒಳಗೆ ಆಯುಕ್ತರ ಕಚೇರಿಗೆ ಮಾಹಿತಿ ಒದಗಿಸಲು ಎಲ್ಲ ತಹಶೀಲ್ದಾರ್ ಮತ್ತು ಅಧೀನ ಸಿಬ್ಬಂದಿಗೆ ಸೂಕ್ತ ನಿರ್ದೇಶನ ನೀಡಬೇಕು ಎಂದು ಅವರು ಹೇಳಿದ್ದಾರೆ.

ಸಂಧ್ಯಾ ಸುರಕ್ಷಾ ಯೋಜನೆ: 65 ವರ್ಷ ಮತ್ತು ಅದಕ್ಕೂ ಮೇಲ್ಪಟ್ಟ ವಯಸ್ಸಿನ ಹಿರಿಯ ವ್ಯಕ್ತಿಗಳು ಆರ್ಥಿಕ ಸಂಕಷ್ಟದಲ್ಲಿದ್ದರೆ ಅವರ ನೆರವಿಗಾಗಿ ಈ ಯೋಜನೆ ಆರಂಭಿಸಲಾಯಿತು. ಸಣ್ಣ ರೈತರು, ಅತಿ ಸಣ್ಣ ರೈತರು, ಕೃಷಿ ಕಾರ್ಮಿಕರು, ನೇಕಾರರು, ಮೀನುಗಾರರು ಮತ್ತು ಅಸಂಘಟಿತ ವಲಯದ ಕಾರ್ಮಿಕರು (ಕಟ್ಟಡ ಕಾರ್ಮಿಕರನ್ನು ಹೊರತುಪಡಿಸಿ) ಈ ಯೋಜನೆ ವ್ಯಾಪ್ತಿಗೆ ಬರುತ್ತಾರೆ. ಪಿಂಚಣಿ ಮೊತ್ತ ತಿಂಗಳಿಗೆ ₹1,200.

ವೃದ್ಧಾಪ್ಯ ವೇತನ ಯೋಜನೆ: ಬಡತನ ರೇಖೆಗಿಂತ (ಬಿಪಿಎಲ್) ಕೆಳಗಿರುವ 60 ವರ್ಷ ಮತ್ತು ಅದಕ್ಕೂ ಮೇಲ್ಪಟ್ಟ ವಯೋಮಾನದ ಹಿರಿಯ ನಾಗರಿಕರು ಈ ಯೋಜನೆ ಅಡಿ ಮಾಸಾಶನ ಪಡೆಯಲು ಅರ್ಹರು. ಇವರ ವಾರ್ಷಿಕ ಆದಾಯ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ₹32,000ಕ್ಕಿಂತ ಕಡಿಮೆ ಇರಬೇಕು. ಫಲಾನುಭವಿಗಳು ವಿಧವಾ ವೇತನ, ಅಂಗವಿಕಲ ವೇತನ, ಸಂಧ್ಯಾ ಸುರಕ್ಷಾ ಯೋಜನೆ ಸೇರಿ ಯಾವುದೇ ರೀತಿಯ ಪಿಂಚಣಿಯನ್ನು ಸಾರ್ವಜನಿಕ ಅಥವಾ ಖಾಸಗಿ ಮೂಲಗಳಿಂದ ಪಡೆಯುತ್ತಿರಬಾರದು. 60ರಿಂದ 64 ವರ್ಷದೊಳಗಿನ ಹಿರಿಯ ನಾಗರಿಕರಿಗೆ ತಿಂಗಳಿಗೆ ₹600, 65 ವರ್ಷ ಮೇಲ್ಪಟ್ಟವರಿಗೆ ₹1,200 ನೀಡಲಾಗುತ್ತದೆ.

ಬಡವರ ವಿರೋಧಿ ಕ್ರಮ: ವಿ.ಸುನಿಲ್‌ಕುಮಾರ್

‘ಸಂಧ್ಯಾ ಸುರಕ್ಷಾ ಮತ್ತು ವೃದ್ಧಾಪ್ಯ ಯೋಜನೆಯಡಿ 23.19 ಲಕ್ಷ ಫಲಾನುಭವಿಗಳ ಪಿಂಚಣಿ ರದ್ದು ಮಾಡಲು ಹೊರಟಿರುವ ಕ್ರಮ ಬಡವರ ವಿರೋಧಿ’ ಎಂದು ಬಿಜೆಪಿ ಶಾಸಕ ವಿ.ಸುನಿಲ್‌ಕುಮಾರ್ ಟೀಕಿಸಿದ್ದಾರೆ.

‘ಬಡವರ ಬಗ್ಗೆ ಕಾಳಜಿ, ಸಹಾನುಭೂತಿ ಇರಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇತ್ತೀಚೆಗೆ ಜಿಲ್ಲಾಧಿಕಾರಿಗಳ ಸಭೆಯಲ್ಲಿ ಪ್ರವಚನ ಮಾಡಿದ್ದರು. ಈಗ ಬಡವರ ಮೇಲೆ ಪ್ರಹಾರ ಮಾಡಲು ಹೊರಟಿದ್ದಾರೆ. ವಿವಿಧ ಸಾಮಾಜಿಕ ಭದ್ರತಾ ಯೋಜನೆಯ ಅಡಿ ವೃದ್ಧರು, ಅಸಹಾಯಕರು, ದುರ್ಬಲರಿಗೆ ನೀಡುತ್ತಿದ್ದ ಪಿಂಚಣಿ ಹಣದ ಮೇಲೆ 60 ಪರ್ಸೆಂಟ್ ಸರ್ಕಾರದ ಕಣ್ಣು ಬಿದ್ದಿದೆ’ ಎಂದಿದ್ದಾರೆ,

‘ತಮ್ಮದು ಆಲಿಸುವ ಸರ್ಕಾರ ಎಂದು ಜಾಹೀರಾತಿನಲ್ಲಿ ಪೋಸು ಕೊಡುವ ಕಾಂಗ್ರೆಸ್ ಸರ್ಕಾರ ಬಡವರ ಪಿಂಚಣಿ ಹಣದಲ್ಲಿ ಉಳಿತಾಯ ಮಾಡಲು ಹೊರಟಿದೆ. ಸರ್ಕಾರ ದಿವಾಳಿ ಅಂಚಿಗೆ ತಲುಪಿದೆ ಎಂಬುದಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕೆ’ ಎಂದು ಸುನಿಲ್ ಪ್ರಶ್ನಿಸಿದ್ದಾರೆ.

‘ಅರ್ಹರನ್ನು ಕೈಬಿಡುವ ಪ್ರಶ್ನೆಯೇ ಇಲ್ಲ’

ಸಂಧ್ಯಾ ಸುರಕ್ಷಾ ಮತ್ತು ವೃದ್ಧಾಪ್ಯ ವೇತನ ಯೋಜನೆಯಡಿ ಒಬ್ಬನೇ ಒಬ್ಬ ಅರ್ಹ ಫಲಾನುಭವಿಯನ್ನು ಕೈಬಿಡುವ ಪ್ರಶ್ನೆಯೇ ಇಲ್ಲ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.

ಈ ಯೋಜನೆ ಅಡಿ ದೊಡ್ಡ ಸಂಖ್ಯೆಯಲ್ಲಿ ಅನರ್ಹರೂ ಸೇರಿಕೊಂಡಿದ್ದಾರೆ. ಭೌತಿಕವಾಗಿ ಪರಿಶೀಲಿಸಿ, ಅನರ್ಹರನ್ನು ಗುರುತಿಸುವ ಉದ್ದೇಶದಿಂದ ಅಧಿಕಾರಿಗಳು ಸುತ್ತೋಲೆ ಅಥವಾ ಪತ್ರ ಬರೆದಿರಬಹುದು. ಅನರ್ಹರನ್ನು ರದ್ದುಪಡಿಸುವ ಸಂಬಂಧ ಈವರೆಗೆ ಯಾವುದೇ ಆದೇಶ ಹೊರಡಿಸಿಲ್ಲ ಎಂದು ‘ಪ್ರಜಾವಾಣಿ’ಗೆ ತಿಳಿಸಿದರು.

ಬಹಳ ಪ್ರಕರಣಗಳಲ್ಲಿ ಯೋಜನೆಗೆ ನಿಗದಿ ಮಾಡಿದ ವಯಸ್ಸಿಗಿಂತ ನಾಲ್ಕರಿಂದ ಐದು ವರ್ಷಗಳು ವ್ಯತ್ಯಾಸವಿರುತ್ತದೆ. ಒಂದು ಅಥವಾ ಎರಡು ವರ್ಷ ವ್ಯತ್ಯಾಸವಿದ್ದರೆ ಪರವಾಗಿಲ್ಲ. ದೊಡ್ಡ ಅಂತರವಿದ್ದರೆ ಯೋಜನೆಗೆ ಅರ್ಹರಾಗುವುದಿಲ್ಲ. ಆಧಾರ್ ಅನ್ನು ಜತೆ ತಾಳೆ ಮಾಡಿ ನಿರ್ಧರಿಸಲಾಗುತ್ತಿದೆ ಎಂದು ಹೇಳಿದರು.

ಚಿಟಿಕೆ ಸುದ್ದಿ

ಎಸ್‌ಜಿಎಸ್‌ಗೆ ನೋಟಿಸ್ ಕೊಡುತ್ತೇವೆ: ರುದ್ರಪ್ಪ

ಬಳ್ಳಾರಿ: ‘ಬಳ್ಳಾರಿಯಲ್ಲಿ ನಡೆಯುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸರ್ಕಾರ ನಿಗದಿಪಡಿಸಿದ ಅನುದಾನ ಕುರಿತು ಆಕ್ಷೇಪಿಸಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಸ್.ಜಿ.ಸಿದ್ದರಾಮಯ್ಯ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಮಂಡ್ಯ ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ಜಯಪ್ರಕಾಶ್ ಗೌಡ ಅವರಿಗೆ ವಕೀಲರ ಮೂಲಕ ನೋಟಿಸ್ ನೀಡಲಾಗುವುದು’ ಎಂದು ಕಸಾಪ ಬಳ್ಳಾರಿ ಜಿಲ್ಲಾ ಘಟಕದ ಅಧ್ಯಕ್ಷ ನಿಷ್ಠಿ ರುದ್ರಪ್ಪ ಹೇಳಿದ್ದಾರೆ.

‘ಡಿಸೆಂಬರ್‌ನಲ್ಲಿ ನಡೆಯಲಿರುವ ಸಮ್ಮೇಳನಕ್ಕೆ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ₹40 ಕೋಟಿ ಅನುದಾನ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಲು ನಿರ್ಧರಿಸಿದ್ದಾರೆ. ಸರ್ಕಾರವು ಕನ್ನಡ ಸಂಸ್ಕೃತಿ ಇಲಾಖೆಯ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಸಮ್ಮೇಳನಕ್ಕೆ ಈಗಾಗಲೇ ₹10 ಕೋಟಿ ಮೀಸಲಿರಿಸಿದೆ. ಆದರೆ, ‘ಸಮ್ಮೇಳನಕ್ಕೆ ₹10 ಕೋಟಿ ಅನುದಾನ ಅಧಿಕ. ₹5 ಕೋಟಿಯಲ್ಲಿ ಸಮ್ಮೇಳನ ನಡೆಸಬಹುದು’ ಎಂದು ಎಸ್.ಜಿ. ಸಿದ್ದರಾಮಯ್ಯ ಹೇಳಿದ್ದಾರೆ. ಅವರ ಹೇಳಿಕೆಯನ್ನು ಜಿಲ್ಲಾ ಘಟಕ ಬಲವಾಗಿ ಖಂಡಿಸುತ್ತದೆ’ ಎಂದಿದ್ದಾರೆ.

ಶಿಕ್ಷೆಗೆ ತಡೆ: ಮುಂದಿನ ಅಧಿವೇಶನದಲ್ಲಿ ಭಾಗಿ

ಕೂಡ್ಲಿಗಿ (ಬಳ್ಳಾರಿ ಜಿಲ್ಲೆ): ‘ಭಗವಂತ ಹಾಗೂ ನ್ಯಾಯಸ್ಥಾನದ ಮೇಲೆ ನಂಬಿಕೆಯಿದೆ. ಇದರಿಂದ ನನಗೆ ನ್ಯಾಯಾಲಯದಲ್ಲಿ ವಿಧಿಸಿದ್ದ ಶಿಕ್ಷೆಗೆ ತಡೆಯಾಗಿದೆ. ಮುಂದಿನ ವಿಧಾನ ಮಂಡಲ ಅಧಿವೇಶನ-ದಲ್ಲಿ ಭಾಗಿಯಾಗುವೆ’ ಎಂದು ಅಮಾನತುಗೊಂಡ ಶಾಸಕ ಜನಾರ್ದನ ರೆಡ್ಡಿ ತಿಳಿಸಿದರು.

ಜನಾರ್ದನ ರೆಡ್ಡಿ

‘ನಮ್ಮ ಎದುರಾಳಿಗಳಿಗೆ ಖುಷಿ ಸಿಗಲಿ ಎಂದು ದೇವರು ನಮಗೆ ಆಗಾಗ ಕಷ್ಟ ಕೊಡುತ್ತಾನೆ. ಆದರೆ ನ್ಯಾಯಾಲಯ ಇದಕ್ಕೆ ಉತ್ತರ ಕೊಟ್ಟಿದೆ’ ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

‘ಅಕ್ರಮ ಗಣಿಗಾರಿಕೆ ಆರೋಪದಿಂದ ನನ್ನನ್ನು ನ್ಯಾಯಾಲಯ ಮುಕ್ತ ಮಾಡಿದ್ದು, ಎರಡು ಗಣಿಗಾರಿಕೆ ಪರವಾನಗಿ ಪಡೆಯಲು ಪ್ರಭಾವ ಬೀರಿದ್ದೇನೆ ಎಂದು ನ್ಯಾಯಾಲಯ ನನಗೆ ಶಿಕ್ಷೆ ನೀಡಿತ್ತು. ಇದಕ್ಕೆ ಹೈಕೋರ್ಟ್ ಈಗ ತಡೆನೀಡಿದೆ. ರಾಜಕೀಯ ದುರುದ್ದೇಶದಿಂದ ಗಣಿಗಾರಿಕೆ ಅಕ್ರಮದಲ್ಲಿ ನನ್ನನ್ನು ಸಿಲುಕಿಸಲಾಯಿತು’ ಎಂದರು.

ಮೃಗಶಿರಾ ಮಳೆ ಬಿರುಸುಗೊಂಡಿದ್ದು, ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಜೋಗ ಜಲಪಾತ ಮೈದುಂಬಿದೆ– ಪ್ರಜಾವಾಣಿ ಚಿತ್ರ (ಎಡಚಿತ್ರ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೋಮವಾರ ಭಾರಿ ಮಳೆಯಿಂದಾಗಿ ನಂದಿನಿ ನದಿ ತುಂಬಿ ಹರಿಯುತ್ತಿದ್ದು, ಕಟೀಲು ದುರ್ಗಾಪರಮೇಶ್ವರಿ ದೇವಸ್ಥಾನವನ್ನು ಸುತ್ತುವರಿದಿದೆ ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.

ಧರೆಗುರುಳಿದ ಮರ, ದೇಗುಲ ಜಲಾವೃತ

ಭಟ್ಕಳದ ನಾಲ್ಕು ಗ್ರಾಮಗಳಲ್ಲಿ ಸರಾಸರಿ 20 ಸೆಂ.ಮೀ. ಮಳೆ; ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಧಾರವಾಡ, ಗದಗ, ಬೆಳಗಾವಿ, ಉತ್ತರ ಕನ್ನಡ ಮತ್ತು ವಿಜಯಪುರ ಜಿಲ್ಲೆಯಲ್ಲಿ ಸೋಮವಾರ ಮಳೆ ಮುಂದುವರಿಯಿತು. ಕೆಲವಡೆ ಧಾರಾಕಾರ, ಬಹುತೇಕ ಕಡೆ ಜಿಟಿಜಿಟಿ ಮಳೆಯಾಯಿತು.

ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನ ಬಾಳೆಗದ್ದೆ ಬಳಿ ರಾಷ್ಟ್ರೀಯ ಹೆದ್ದಾರಿ–69ರಲ್ಲಿ ಸೋಮವಾರ ಮುಂಜಾನೆ ದೊಡ್ಡ ಗಾತ್ರದ ಮರ ಬಿದ್ದು, ಸಂಚಾರಕ್ಕೆ ವ್ಯತ್ಯಯ ಉಂಟಾಯಿತು. ಬೆಂಗಳೂರಿನಿಂದ ಹೊನ್ನಾವರ ಮಾರ್ಗವಾಗಿ ವಿವಿಧೆಡೆ ಸಾಗುತ್ತಿದ್ದ ಬಸ್‌ಗಳ ಸುಗಮ ಸಂಚಾರಕ್ಕೆ ತೊಂದರೆಯಾಯಿತು. ವಿದ್ಯುತ್ ಕಂಬಗಳ ಮೇಲೆ ಮರಗಳು ಬಿದ್ದ ಪರಿಣಾಮ ಹಲವು ಗಂಟೆಗಳವರೆಗೆ ವಿದ್ಯುತ್ ವ್ಯತ್ಯಯ ಉಂಟಾಯಿತು.

ಕುಮಟಾ ತಾಲ್ಲೂಕಿನ ಕಬ್ಬರ್ಗಿ ಕ್ರಾಸ್ ಬಳಿ ಗುಡ್ಡ ಕುಸಿದು, ರಾಷ್ಟ್ರೀಯ ಹೆದ್ದಾರಿ–766ಇ ಮೇಲೆ ಮಣ್ಣಿನ ರಾಶಿ ಆವರಿಸಿಕೊಂಡಿದೆ. ಅಂಕೋಲಾ ತಾಲ್ಲೂಕಿನ ರಾಮನಗುಳಿ ಬಳಿ ರಾಷ್ಟ್ರೀಯ ಹೆದ್ದಾರಿ-63ರ ಪಕ್ಕದ ಬೆಟ್ಟದಲ್ಲಿ ಸಣ್ಣ ಪ್ರಮಾಣದ ಭೂಕುಸಿತ ಉಂಟಾಗಿದೆ. ಭಟ್ಕಳ ತಾಲ್ಲೂಕಿನಲ್ಲಿ ಮಳೆ ಗಾಳಿಯಿಂದ ಮರಗಳು ಬಿದ್ದು, ಹಲವು ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಭಟ್ಕಳದ ನಾಲ್ಕು ಗ್ರಾಮಗಳಲ್ಲಿ ಸರಾಸರಿ 20 ಸೆಂ.ಮೀ.ನಷ್ಟು ಮಳೆ ಸುರಿಯಿತು. ಹಲವು ಹಳ್ಳಕೊಳ್ಳಗಳು ಭರ್ತಿಯಾಗಿವೆ. ಅರಬ್ಬಿ ಸಮುದ್ರ ಪ್ರಕ್ಷುಬ್ಧಗೊಂಡಿದ್ದು, ಕಡಲತೀರಕ್ಕೆ ಆಳೆತ್ತರದ ಅಲೆಗಳು ಅಪ್ಪಳಿಸುತ್ತಿವೆ.

ಚಿಕ್ಕಮಗಳೂರು ವರದಿ: ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ, ಕೊಟ್ಟಿಗೆಹಾರ, ಕಳಸ, ಕುದುರೆಮುಖ, ಮುಳ್ಳಯ್ಯನಗಿರಿ ಕೊಪ್ಪ, ಶೃಂಗೇರಿ ಎನ್.ಆರ್.ಪುರ, ಬಾಳೆಹೊನ್ನೂರು, ಆಲ್ದೂರು ಸೇರಿ ಮಲೆನಾಡು ಭಾಗದಲ್ಲಿ ಮಳೆ ಸೋಮವಾರ ಬೆಳಿಗ್ಗೆ ತನಕ ಆರ್ಭಟಿಸಿತು.

ಮುಳ್ಳಯ್ಯನಗಿರಿ, ಬಾಬಾಬುಡನ್ ಗಿರಿಗೆ ತೆರಳುವ ಮಾರ್ಗದಲ್ಲಿ ಕೈಮರ ದಿಂದ 4 ಕಿಲೋ ಮೀಟರ್ ದೂರದಲ್ಲಿ ದೊಡ್ಡ ಮರವೊಂದು ಬಿದ್ದಿದೆ. ಕೊಪ್ಪ ತಾಲ್ಲೂಕಿನ ಮೇಗೂರು ಬಳಿ ಮರವೊಂದು ಬೇರು ಸಹಿತ ರಸ್ತೆಗೆ ಉರುಳಿತ್ತು. ಮರಗಳನ್ನು ತೆರವುಗೊಳಿಸಿ ವಾಹನಗಳ ಸಂಚಾರಕ್ಕೆ ಮುಕ್ತಗೊಳಿಸ-ಲಾಗಿದೆ.

ಶಿವಮೊಗ್ಗ ವರದಿ: ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಸೊನಲೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಕೊಳಗಿ ನಿವಾಸಿ ವಿಶ್ವನಾಥ್ ಅವರ ಮನೆ ಮತ್ತು ಕೊಟ್ಟಿಗೆ ಗೋಡೆ ಕುಸಿದು ಹಾನಿ ಆಗಿದೆ.

ಹಾಸನ ವರದಿ: ಜಿಲ್ಲೆಯ ಸಕಲೇಶಪುರ ತಾಲ್ಲೂಕಿನಲ್ಲಿ ಜೋರು ಮಳೆಯಾಗುತ್ತಿದ್ದು, ಉಳಿದೆಡೆ ಜಿಟಿಜಿಟಿ ಮಳೆ ಬಿದ್ದಿದೆ. ರಾಷ್ಟ್ರೀಯ ಹೆದ್ದಾರಿಯ ಚತುಷ್ಪಥ ಕಾಮಗಾರಿ ನಡೆಯುತ್ತಿರುವ ಸಕಲೇಶಪುರ ತಾಲ್ಲೂಕಿನ ದೋಣಿಗಲ್ ಬಳಿ ಮರವೊಂದು ಉರುಳಿ ಬಿದ್ದಿತ್ತು.

ಮುಖ್ಯಾಂಶಗಳು

- ಮೈಸೂರು, ಚಾಮರಾಜನಗರ ಹಾಗೂ ಮಂಡ್ಯದಲ್ಲಿ ಸಾಧಾರಣ ಮಳೆ
- ಅಂಕೋಲಾದ ರಾಮನಗುಳಿ ಬಳಿ ಭೂಕುಸಿತ

ಜಿಲ್ಲೆಯಲ್ಲಿ ಭೂಕುಸಿತದ ಸಂಭವನೀಯ ಸ್ಥಳಗಳ ಗುರುತಿಸಿ ನಿಗಾ ವಹಿಸಲಾಗಿದೆ. ಮುಂಜಾಗರೂಕತಾ ಕ್ರಮವಾಗಿ ಆಗುಂಬೆ ಘಾಟಿಯಲ್ಲಿ ವಾಹನ ಸಂಚಾರ ನಿಷೇಧಿಸಲಾಗಿದೆ

ಗುರುದತ್ತ ಹೆಗಡೆ, ಶಿವಮೊಗ್ಗ ಜಿಲ್ಲಾಧಿಕಾರಿ

ಲೋಂಡಾ, ಕಣಕುಂಬಿಯಲ್ಲಿ ಮಳೆ ಹೆಚ್ಚಳ

ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಕಣಕುಂಬಿ ಮತ್ತು ಸುತ್ತಮುತ್ತಲಿನ ಅರಣ್ಯ ಪ್ರದೇಶದಲ್ಲಿ ಒಂದು ವಾರದಿಂದ ಮಳೆ ಸುರಿಯುತ್ತಿದ್ದು, ಮಲಪ್ರಭೆಯಲ್ಲಿ ನೀರಿನ ಹರಿವು ಹೆಚ್ಚಾಗಿದೆ. ಹಬ್ಬನಹಟ್ಟಿ ಗ್ರಾಮದ ಬಳಿ ಆಂಜನೇಯ ದೇವಾಲಯ ಅರ್ಧಭಾಗ ಮುಳುಗಿದೆ.

ಈ ದೇವಾಲಯವು ನದಿ ಹರಿಯುವ ತಗ್ಗು ಪ್ರದೇಶದಲ್ಲಿದ್ದು, ಮೊದಲ ಮಳೆಗೆ ಜಲಾವೃತವಾಗಿದೆ. ಕಣಕುಂಬಿ, ಜಾಂಬೋಟಿ, ಭೀಮಗಡ, ಗವ್ವಾಳಿ, ಜಾಮಗಾಂವ, ಲೋಂಡಾ, ಗುಂಜಿ ಮತ್ತು ನಾಗರಗಾಳಿ ಅರಣ್ಯ ಪ್ರದೇಶದಲ್ಲಿ ಮಳೆ ಮುಂದುವರಿದಿದೆ.

ನೇರಸಾ–ಗವ್ವಾಳಿ, ಚಿಕಲೆ–ಅಮಗಾಂವ, ಹೆಮ್ಮಡಗಾ–ದೇಗಾಂವ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಕಿರು ಸೇತುವೆಗಳ ಮೇಲೆ ನೀರು ಹರಿಯುತ್ತಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	109.60	6,631	915
ಹಾರಂಗಿ	2,859	2,851.91	8,764	10,000
ಕಬಿನಿ	2,284.00	2,277.10	9,820	5,000
ಹೇಮಾವತಿ	2,922	2,908.33	6,549	350
ಲಿಂಗನಮಕ್ಕಿ	1,819	1,766.40	39,961	3,012
ಸೂಪಾ (ಮೀ)	564	529.85	17,633	774.72
ಮಾಣಿ	595	579.9	6,381	-
ತುಂಗಭದ್ರಾ	1,633	1,604.49	12,278	180
ಮಲಪ್ರಭಾ	2,079.5	2,051.55	3,636	194
ಘಟಪ್ರಭಾ	2175	2,105.75	6,003	115
ಭದ್ರಾ *	186	149.9	5,417	1,170
ಆಲಮಟ್ಟಿ (ಮೀ)	519.6	515.15	20,478	15,050
ನಾರಾಯಣಪುರ (ಮೀ)	492.25	490.47	15,000	17,350

* ನೆಲಮಟ್ಟದಿಂದ

ಮೈದುಂಬಿದ ಜಲಪಾತಗಳು

ಒಂದನೇ ಪುಟದಿಂದ...

ಉಡುಪಿ ಜಿಲ್ಲೆಯ ಕುಂದಾಪುರ, ಬೈಂದೂರು, ಹೆಬ್ರಿ, ಕಾರ್ಕಳ ವ್ಯಾಪ್ತಿಯಲ್ಲಿ ಗಾಳಿ ಸಹಿತ ಮಳೆಯಾಗಿದೆ. ಬೈಂದೂರು ತಾಲ್ಲೂಕಿನ ಶಿರೂರು, ಯಡ್ತರೆ, ವಿರೂಪಾಕ್ಷಿ, ಕಳವಾಡಿ, ಮಯ್ಯಾಡಿ, ತಗ್ಗರ್ಸೆ, ಬಿಜೂರು, ಉಪ್ಪುಂದ, ಚಿಕ್ಕಳ್ಳಿ, ಸಾಲ್ಬುಡ ಮೊದಲಾದೆಡೆ ಕೃಷಿ ಭೂಮಿ ಹಾಗೂ ಸಂಪರ್ಕ ರಸ್ತೆಗಳು ಜಲಾವೃತವಾಗಿವೆ.

ಮೀನುಗಾರರು ಹಾಗೂ ಜಿಲ್ಲಾಡಳಿತದ ವತಿಯಿಂದ ಈ ಪ್ರದೇಶ ಜನರನ್ನು ಸುರಕ್ಷಿತ ಸ್ಥಳಗಳಿಗೆ ದೋಣಿಗಳ ಮೂಲಕ ಸ್ಥಳಾಂತರಿಸ-ಲಾಗಿದೆ. ಯಡ್ತರೆ ಬಂಟರ ಭವನದಲ್ಲಿ ಕಾಳಜಿ ಕೇಂದ್ರವನ್ನು ತೆರೆಯಲಾಗಿದೆ.

ಕುಂದಾಪುರ ತಾಲ್ಲೂಕಿನ ಕಮಲಶಿಲೆ ಪ್ರದೇಶದಲ್ಲಿ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದೆ. ಮಾರಣಕಟ್ಟೆ ಬ್ರಹ್ಮಲಿಂಗೇಶ್ವರ ದೇವಸ್ಥಾನದ ಪ್ರಾಂಗಣಕ್ಕೆ ನೆರೆ ನೀರು ನುಗ್ಗಿದೆ. ಕುಬ್ಜಾ ನದಿ ಉಕ್ಕಿ ಹರಿದಿದೆ. ಬ್ರಹ್ಮಾವರ ತಾಲ್ಲೂಕಿನ ಮಡಿಸಾಲು ಹೊಳೆ ಉಕ್ಕಿ ಹರಿಯುತ್ತಿದೆ.

ಭಾರಿ ವಾಹನ ನಿಷೇಧ: ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 169ರಲ್ಲಿ ತನಿಕೋಡಿನಿಂದ ಎಸ್.ಕೆ.ಬಾರ್ಡರ್ ತನಕ ಭಾರಿ ವಾಹನಗಳ ಸಂಚಾರ ನಿಷೇಧಿಸಿ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ. ಕಳಸ-ಕುದುರೆ ಮುಖ–ಎಸ್.ಕೆ.ಬಾರ್ಡರ್ ಬದಲಿ ಮಾರ್ಗದಲ್ಲಿ ಸಂಚರಿಸುವಂತೆ ಅವರು ಸೂಚಿಸಿದ್ದಾರೆ.

ಕೊಡಗಿನ ಹಾರಂಗಿ ಜಲಾಶಯಕ್ಕೆ ಭಾರಿ ಪ್ರಮಾಣದಲ್ಲಿ ನೀರು ಹರಿದುಬರುತ್ತಿದೆ. ಸೋಮವಾರ ಸಂಜೆ 10ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಬಿಡಲಾಗುತ್ತಿದ್ದು, ದಂಡೆಯ ನಿವಾಸಿಗಳು ಎಚ್ಚರ ವಹಿಸುವಂತೆ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಸೂಚಿಸಿದ್ದಾರೆ.

ಮಾಣಿಯಲ್ಲಿ 30.7 ಸೆಂ.ಮೀ ಮಳೆ

ಸೋಮವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡ 24 ಗಂಟೆಗಳಲ್ಲಿ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ವಾರಾಹಿ ಯೋಜನಾ ಪ್ರದೇಶದಲ್ಲಿ ದಾಖಲೆಯ ಮಳೆಯಾಗಿದೆ. ಮಾಣಿಯಲ್ಲಿ ಅತಿಹೆಚ್ಚು 30.7 ಸೆಂ.ಮೀ ಮಳೆ ಸುರಿದಿದ್ದು, ಹುಲಿಕಲ್‌ನಲ್ಲಿ 27.9 ಸೆಂ.ಮೀ, ಸಾವೆಹಕ್ಲು 26.2 ಸೆಂ.ಮೀ, ಮಾಸ್ತಿಕಟ್ಟೆ 25.5 ಸೆಂ.ಮೀ. ಹಾಗೂ ಯಡೂರಿನಲ್ಲಿ 23.2 ಸೆಂ.ಮೀ ಮಳೆ ದಾಖಲಾಗಿದೆ. ತೀರ್ಥಹಳ್ಳಿ ತಾಲ್ಲೂಕಿನ ಆಗುಂಬೆಯಲ್ಲಿ 21.7 ಸೆಂ.ಮೀ ಮಳೆ ಸುರಿದಿದೆ.

ಗಾಜನೂರಿನ ತುಂಗಾ ಜಲಾಶಯ ಈಗಾಗಲೇ ಭರ್ತಿಯಾಗಿದೆ. ಜಲಾಶಯಕ್ಕೆ 37,000 ಕ್ಯೂಸೆಕ್ ಒಳಹರಿವು ಇದ್ದು, ಅಷ್ಟೇ ಪ್ರಮಾಣದ ನೀರನ್ನು ನದಿಗೆ ಹರಿ-ಸಲಾಗುತ್ತಿದೆ. ಮುಂಗಾರು ಹಂಗಾಮಿನಲ್ಲಿ ಮೊದಲ ಬಾರಿಗೆ ಜಲಾಶಯದ 22 ಕ್ರಸ್ಟ್‌ಗೇಟ್‌ಗಳನ್ನು ತೆರೆದು ನೀರು ಹರಿಸಲಾಗುತ್ತಿದೆ. ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಚಿತ್ತೂರಲ್ಲಿ 27, ದಕ್ಷಿಣ ಕನ್ನಡ ಜಿಲ್ಲೆಯ ಬಾಳದಲ್ಲಿ ಗರಿಷ್ಠ 21 ಸೆಂ.ಮೀ. ಮಳೆಯಾಗಿದೆ ಎಂದು ಹವಾಮಾನ ಇಲಾಖೆಯ ಮೂಲಗಳು ತಿಳಿಸಿವೆ.

ನ್ಯಾಯಾಲಯದಲ್ಲೇ ಹೃದಯಾಘಾತದಿಂದ ನ್ಯಾಯಾಧೀಶ ಸಾವು

ಪ್ರಜಾವಾಣಿ ವಾರ್ತೆ

ಕಲಬುರಗಿ: ಇಲ್ಲಿನ ಜಿಲ್ಲಾ 3ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ವಿಶ್ವನಾಥ ವಿ. ಮುಗುತಿ (43) ಅವರು ನ್ಯಾಯಾಲಯದಲ್ಲಿ ಸೋಮವಾರ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ವಿಶ್ವನಾಥ ವಿ. ಮುಗುತಿ

ಮೃತರಿಗೆ ತಂದೆ, ಪತ್ನಿ ಹಾಗೂ ಒಬ್ಬರು ಪುತ್ರಿ ಇದ್ದಾರೆ. ಬಾಗಲಕೋಟೆ ಜಿಲ್ಲೆಯ ಬನಹಟ್ಟಿ ಮೂಲದ ವಿಶ್ವನಾಥ ಅವರು ಜೂನ್ 2ರಂದು ಕಲಬುರಗಿ ಜಿಲ್ಲಾ 3ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರಾಗಿ ನಿಯೋಜನೆಗೊಂಡಿದ್ದರು.

‘ವಿಶ್ವನಾಥ ಅವರು ಸೋಮವಾರ ಬೆಳಿಗ್ಗೆ ಮನೆಯಲ್ಲಿ ತಿಂಡಿ ಮಾಡಿಕೊಂಡು ನ್ಯಾಯಾಲಯ ಆವರಣದಲ್ಲಿನ ತಮ್ಮ ಕಚೇರಿಗೆ ಬಂದರು. ಎದೆ ನೋವಿನಿಂದ ಕುರ್ಚಿಯಲ್ಲಿ ಕುಸಿದು ಬಿದ್ದರು. ಮತ್ತೊಬ್ಬ ನ್ಯಾಯಾಧೀಶರು ಅವರನ್ನು ತಕ್ಷಣವೇ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಆಸ್ಪತ್ರೆಗೆ ಕರೆದೊಯ್ದರು. ತಪಾಸಣೆ ಮಾಡಿದ ವೈದ್ಯರು ಮಾರ್ಗದಲ್ಲಿಯೇ ಮೃತಪಟ್ಟಿದ್ದಾರೆ ಎಂದು ಖಚಿತಪಡಿಸಿದರು’ ಎಂದು ವಕೀಲರ ಸಂಘದ ಮಾಜಿ ಜಿಲ್ಲಾಧ್ಯಕ್ಷ ಗುಪ್ತಲಿಂಗ ಎಸ್.ಪಾಟೀಲ ‘ಪ್ರಜಾವಾಣಿ’ಗೆ ತಿಳಿಸಿದರು.

‘2014ರಲ್ಲಿ ನ್ಯಾಯಾಲಯದ ಅಧಿಕಾರಿಯಾಗಿ ಸೇರ್ಪಡೆಯಾದ ವಿಶ್ವನಾಥ ಅವರು, ದಾವಣಗೆರೆ, ಹಾಸನ ಸೇರಿ ಹಲವೆಡೆ ಕರ್ತವ್ಯ ನಿರ್ವಹಿಸಿದ್ದಾರೆ. ಅವರ ಅಂತ್ಯಕ್ರಿಯೆಯು ಬನಹಟ್ಟಿಯಲ್ಲಿ ನೆರವೇರಿತು’ ಎಂದರು.

AUCTION NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) CB_MARUTI SUPER CARRY
YOM – 2022
Reg No – KA15A6730
2) CB_JEETO_X_7_16
YOM – 2023
Reg No – KA11C5665
3) CB_EICHER_PRO_2095_K_HSD_22FT_BS6
YOM –
Reg No – KA13D7003
4) CB_AL_ECOMET_1615_FULLY_BUILT_GOODS_HSD_4200
YOM – 2021
Reg No – KA25AB5024
5) CB_TATALPT_1216_CABIN_CHASSIS_GOODS
YOM –
Reg No – KA19AE6039
6) CB_Ashok Leyland Dost GOODS
YOM – 2023
Reg No – KA11C5512
7) CB_ASHOK_LEYLAND_DOST_PLUS_LS_CABIN_CHASSIS
YOM – 2024
Reg No – KA19AE5371
8) CB_ASHOK LEYLAND 3718IL
YOM – 2017
Reg No – KA19AB6225
9) CB_AL_BADA_DOST
YOM – 2024
Reg No – KA25AB9743
10) CB_MAXXI PICKUP
YOM – -
Reg No – KA16AA7728
11) CB_TATA_ULTRA_T19_CHASSIS
YOM – -
Reg No – KA13D9404
12) CB_AL1815_HE_4750_FULLY_BUILT_GOODS
YOM – 2022
Reg No – KA05AL6041
13) CB_BOLERO PIK UP all Varients
YOM – 2020
Reg No – KA27C3168
14) AL_DOST_GOODS
YOM – 2023
Reg No – KA17AA8811
15) CB_AL_BADA_DOST
YOM – 2023
Reg No - KA25AB9318
16) CB_AL_BADA_DOST
YOM – 2024
Reg No – KA55A3788
17) CB_EICHER TERRA 16 HDR CAB CHASSIS TIPPER
YOM – 2017
Reg No – KA42A8083
18) CB_EICHER_PRO_3019_FULLY_BULT_VEHICLE
YOM – 2024
Reg No – KA711540
19) CB_TATA_LP_812_52_BUS_CHASSIS
YOM – -
Reg No – KA35D6971
20) CB_2095XP_CAB_CHASSIS
YOM – 2021
Reg No – KA53AA5680
21) CB_TATA_INTRA_TATAMOTORS
YOM – 2023
Reg No – KA19AE2530
22) CB_TATA_LP_812_52_BUS_CHASSIS
YOM – -
Reg No – KA356972
23) CB_SIGNA_2823_CHASIS_TRANSIT_MIXER_7RMC_TATAMOTORS
YOM – -
Reg No – KA53AB1663
24) CB_TIPPER_SIGNA_2830_TATA_MOTORS
YOM – -
Reg No – KA53AB3526
25) CB_SIGNA_2823_CHASIS_TRANSIT_MIXER_7RMC_TATAMOTORS
YOM – -
Reg No – KA53AB1665

UNDER HYPOTHECATION WITH M/S KOTAK MAHINDRA BANK IS UNDER SALE IN ITS “AS IS WHERE IS CONDITION”

INTERESTED PARTIES CAN GIVE THEIR QUOTATIONS (ONLINE/OFFLINE) WITHIN 15 DAYS FROM THIS PAPER PUBLICATION i.e. from 17.06.2025 (Please note that closing Auction date would not be a Weekly off / Holiday)

BRANCH ADDRESS:
KOTAK MAHINDRA BANK LTD.,
22, MG ROAD, BANGALORE
KARNATAKA – 560001
OR
Contact: Arunlaxman Kokare
Kotak Mahindra Bank Ltd.
Contact / 080 - 61564249

ಕೇರಳದಲ್ಲಿ ನಿಲ್ಲದ ಭಾರಿ ಮಳೆ

ಮಹಾರಾಷ್ಟ್ರದಲ್ಲಿ ವಾರಾಂತ್ಯದಿಂದ 18 ಮಂದಿ ಸಾವು

ಮುಂಬೈ/ ತಿರುವನಂತಪುರ (ಪಿಟಿಐ): ಮಹಾರಾಷ್ಟ್ರ, ಕೇರಳದ ವಿವಿಧೆಡೆ ಸೋಮವಾರವೂ ಭಾರಿ ಮಳೆಯಾಗಿದೆ.

‘ವಾರಾಂತ್ಯದಿಂದ ಇಲ್ಲಿಯವರೆಗೆ ಮಳೆಯಿಂದಿಂದಾಗಿ ಮಹಾರಾಷ್ಟ್ರದಲ್ಲಿ 18 ಮಂದಿ ಮೃತಪಟ್ಟಿದ್ದು, 65 ಮಂದಿ ಗಾಯಗೊಂಡಿದ್ದಾರೆ. 6 ಹಸುಗಳು ಮೃತಪಟ್ಟಿವೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಭಾರಿ ಮಳೆ, ರಸ್ತೆ ಅಪಘಾತ, ಸೇತುವೆ ಕುಸಿತ, ಸಿಡಿಲು ಬಡಿದಿರುವುದು ಹಾಗೂ ಅಗ್ನಿ ಅನಾಹುತದಿಂದ ಮೃತಪಟ್ಟಿರುವ-ವರ ಬಗ್ಗೆ ವರದಿಯಾಗಿದೆ’ ಎಂದು ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್) ಪ್ರಕಟಣೆಯಲ್ಲಿ ತಿಳಿಸಿದೆ.

ಮಹಾರಾಷ್ಟ್ರದಲ್ಲಿ ನೈಋತ್ಯ ಮಾರುತವು ಚುರುಕಾಗಿದೆ. ತಗ್ಗು ಪ್ರದೇಶಗಳಲ್ಲಿ ನೀರು ತುಂಬಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ನವಿ ಮುಂಬೈನಲ್ಲಿ ಭೂಕುಸಿತ ಉಂಟಾದ ಸ್ಥಳದಲ್ಲಿ ವ್ಯಾನ್ ಉರುಳಿಬಿತ್ತು –ಪಿಟಿಐ ಚಿತ್ರ

ಮುಂಬೈ ನಗರ, ರತ್ನಗಿರಿ, ಸಿಂಧುದುರ್ಗ, ರಾಯಗಢದಲ್ಲಿ ಗರಿಷ್ಠ ಪ್ರಮಾಣದಲ್ಲಿ ಮಳೆಯಾಗಿದೆ ಎಂದು ಎಸ್‌ಡಿಆರ್‌ಎಫ್ ತಿಳಿಸಿದೆ.

ಕೇರಳದಲ್ಲಿ ಭಾರಿ ಮಳೆ- ರೈಲು ಸಂಚಾರ ಅಸ್ತವ್ಯಸ್ತ: ಕೇರಳದಲ್ಲಿ ಸೋಮವಾರ ಭಾರಿ ಮಳೆ ಮುಂದುವರಿದಿದ್ದು, ರಸ್ತೆ, ರೈಲು ಸಂಚಾರದಲ್ಲಿ ವ್ಯತ್ಯಯ ಉಂಟಾಯಿತು.

ರಾಜ್ಯದ ಉತ್ತರ ಭಾಗದಲ್ಲಿ ವ್ಯಾಪಕ ಮಳೆಯಾಗುತ್ತಿರುವ ಕಾರಣ, ನದಿಗಳ ನೀರಿನ ಮಟ್ಟವು ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಕಣ್ಣೂರು, ಕಾಸರಗೋಡು ಜಿಲ್ಲೆಯಲ್ಲಿ ಹಲವು ಮನೆಗಳಿಗೆ ನೀರು ನುಗ್ಗಿದ್ದು, ನೂರಾರು ಮಂದಿಯನ್ನು ಮನೆಯಿಂದ ಆಶ್ರಯ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದೆ.

ಕಣ್ಣೂರಿನ ಕಕ್ಕಡ್ ಪ್ರದೇಶದ ಮುಖ್ಯ ರಸ್ತೆಯು ಸಂಪೂರ್ಣವಾಗಿ ಮುಳುಗಡೆಯಾಗಿದ್ದು, ಶಾಲೆ ಹಾಗೂ ಕಚೇರಿಗೆ ತೆರಳುತ್ತಿದ್ದವರಿಗೆ ಸಮಸ್ಯೆ ಉಂಟಾಯಿತು. ರಸ್ತೆಯಲ್ಲಿ 1ರಿಂದ 2 ಅಡಿಗಳವರೆಗೆ ನೀರು ನಿಂತ ಕಾರಣ, ವಾಹನಗಳ ಸಂಚಾರಕ್ಕೂ ತೊಂದರೆ ಉಂಟಾಯಿತು.

TATA INSTITUTE OF SOCIAL SCIENCES
SCHOOL OF SKILL EDUCATION, MUMBAI
"Tata Institute of Social Sciences (TISS), Mumbai (declared as an Institution deemed to be University under Section 3 of the UGC Act, 1956), a grant-in-aid Institute under Ministry of Education, Government of India".
Mumbai | Tuljapur | Hyderabad | Guwahati

TISS SSE ADMISSION NOTIFICATION FOR ACADEMIC YEAR 2025-26

TISS is a multi campus institution deemed to be University under Section 3 of the UGC ACT 1956, and a grant-in-aid Institute under Ministry of Education, GoI. TISS School of Skill Education announces the following Bachelor's Degree, Post Graduate Diploma and Diploma Programmes for the Academic Year 2025-26. For information about Eligibility, Admission Procedure, Online application form and other updates/amendments, please visit https://sve.tiss.edu/TISS/

ADMISSIONS OPEN
FOR THE ACADEMIC YEAR 2025-26
(Programmes to Commence in August 2025)

Bachelor Degree Programmes

1. Bachelor in Agriculture
2. Bachelor in Banking, Financial Services and Insurance
3. Bachelor in Social Research and Data Management
4. Bachelor in Office Automation
5. Bachelor in Electronic Manufacturing Services
6. Bachelor in Refrigeration and Air Conditioning
7. BSc in Artificial Intelligence and Machine Learning
8. Bachelor in Software Development
9. Bachelor in Graphics and Multimedia
10. Bachelor in Automotive Servicing Technology
11. Bachelor in Industrial Tools Manufacturing
12. Bachelor in Production Technology
13. Bachelor in Mechatronics Technology
14. Bachelor in Renewable Energy Technology
15. Bachelor in Retail Management (The Retail Ready Programme)
16. Bachelor in Hotel Management (The Golden Threshold Program)
17. Bachelor in Hotel Management
18. Bachelor in Travel and Tourism
19. B. Optom (Bachelor in Optometry)
20. BSc in Dialysis Technology
21. BSc in Medical Imaging Technology
22. BSc in Medical Laboratory Technology
23. Bachelor in Automotive Manufacturing Technology
24. Bachelor in Sports Management

Post Graduate Diploma Programmes

1. Post Graduate Diploma in Banking, Financial Markets and Insurance
2. Post Graduate Diploma in Food Technology
3. Post Graduate Diploma in Cyber Security
4. Post Graduate Diploma in Drones Operations - Logistics
5. Post Graduate Diploma in Supply Chain and Logistics Management
6. Post Graduate Diploma in Data Science For Logistics
7. Post Graduate Diploma in HR and Administration
8. Post Graduate Diploma in Training and Development
9. Post Graduate Diploma in Digital Marketing
10. Post Graduate Diploma in Medical Laboratory Technology

Diploma Programmes

1. Diploma in Operation Theatre Techniques
2. Diploma in Agriculture & Agri Input Management
3. Diploma in Computer Applications

Call us at 022-2552 5635/33 / 7710945578/ 7304805578
admissions@sve.tiss.edu
https://sve.tiss.edu/TISS/
Scan for more details
Registrar

'ಸಸ್ಯಕಾಶಿ' ಲಾಲ್‌ಬಾಗ್‌ಗೆ ಡಿಜಿಟಲ್ ಸ್ಪರ್ಶ

ಸಸ್ಯ ಪ್ರಭೇದಗಳ ಅಧ್ಯಯನಕ್ಕೆ ವಿದ್ಯಾರ್ಥಿಗಳು, ಪರಿಸರ ಪ್ರೇಮಿಗಳಿಗೆ, ಜೀವ ವೈವಿಧ್ಯ ಅಧ್ಯಯನಕಾರರಿಗೆ ಸಹಕಾರಿ

ಲಾಲ್‌ಬಾಗ್‌ನಲ್ಲಿರುವ ಗಿಡವೊಂದಕ್ಕೆ ಹಾಕಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಮಾಹಿತಿ ಪಡೆದುಕೊಂಡ ಯುವಕ

• ಖಲೀಲಅಹ್ಮದ ಶೇಖ

ಮುಖ್ಯಾಂಶಗಳು

- ಮೊಬೈಲ್‌ನಿಂದ ಸ್ಕ್ಯಾನ್ ಮಾಡಿದರೆ ಸಸ್ಯಗಳ ಮಾಹಿತಿ
- ಅಳಿವಿನಂಚಿನಲ್ಲಿರುವ ಸಸ್ಯ ಪ್ರಭೇದಗಳ ಸಂರಕ್ಷಣೆ
- ಲಾಲ್‌ಬಾಗ್‌ನ ಸಸ್ಯಗಳ ಮಾಹಿತಿಗೆ ಪ್ಲಾಂಟ್ ವೆಲ್ತ್ ಆಫ್ ಲಾಲ್‌ಬಾಗ್ ಪುಸ್ತಕ ಸಹಕಾರಿ

ಬೆಂಗಳೂರು: ಲಾಲ್‌ಬಾಗ್‌ನಲ್ಲಿ ನೂರಾರು ವರ್ಷಗಳಿಂದ ಬೆಳೆದು ನಿಂತಿರುವ ದೇಶ–ವಿದೇಶಗಳ ಸಾವಿರಾರು ಸಸ್ಯ ಪ್ರಭೇದಗಳ ಡಿಜಿಟಲೀಕರಣ ಕಾರ್ಯ ಪ್ರಾರಂಭವಾಗಿದೆ. ಆರಂಭಿಕ ಹಂತದಲ್ಲಿ 50ಕ್ಕೂ ಹೆಚ್ಚು ಪ್ರಭೇದಗಳಿಗೆ ಕ್ಯೂಆರ್ ಕೋಡ್ ನೀಡಿದ್ದು, ಮೊಬೈಲ್‌ನಿಂದ ಸ್ಕ್ಯಾನ್ ಮಾಡಿದರೆ ಈ ಗಿಡಗಳ ಸಂಪೂರ್ಣ ಮಾಹಿತಿ ಸಿಗಲಿದೆ.

ಸಸ್ಯದ ಮೂಲ ಹೆಸರು, ಉಗಮ ಸ್ಥಾನ, ದೇಶ, ಬೆಳವಣಿಗೆ, ಬೆಳೆಯುವ ಹವಾಗುಣ, ಹೂ–ಹಣ್ಣು ಮತ್ತು ಎಲೆಗಳು ಬಿಡುವ ಕಾಲ, ಅದರ ವೈಜ್ಞಾನಿಕ ಹೆಸರು ಸಹಿತ ಎಲ್ಲ ಮಾಹಿತಿ ಒಳಗೊಂಡಿರುತ್ತದೆ. ಇದು ಸಸ್ಯಗಳನ್ನು ಗುರುತಿಸಲು ಅನುಕೂಲವಾಗಲಿದೆ.

ಜೀವವೈವಿಧ್ಯಶಾಸ್ತ್ರಜ್ಞ ಕೇಶವ ಮೂರ್ತಿ ಅವರ ನೇತೃತ್ವದಲ್ಲಿ ವಿಜ್ಞಾನಿಗಳ ತಂಡ ಮರಗಳ ಮಾಹಿತಿ ದಾಖಲಿಸುವ ಕಾರ್ಯ ಮಾಡುತ್ತಿದೆ. ಸದ್ಯ 50 ಸಸ್ಯ ಪ್ರಭೇದಗಳ ಮಾಹಿತಿ ನೀಡುವ ಕ್ಯೂಆರ್ ಕೋಡ್ ನೀಡಲಾಗಿದೆ. ಹಂತ–ಹಂತವಾಗಿ ಲಾಲ್‌ಬಾಗ್‌ನ ಎಲ್ಲ ಮರಗಳ ಮಾಹಿತಿ ಸಂಗ್ರಹಿಸಿ, ಕ್ಯೂಆರ್ ಕೋಡ್ ಅಳವಡಿಸುವ ಕೆಲಸ ನಡೆಯಲಿದೆ. ಇದು ಪೂರ್ಣಗೊಂಡ ಬಳಿಕ ಲಾಲ್‌ಬಾಗ್‌ನ ಸಸ್ಯ ಸಂಪತ್ತಿನ ಸಂಪೂರ್ಣ ಮಾಹಿತಿ 'ಪ್ಲಾಂಟ್ ವೆಲ್ತ್ ಆಫ್ ಲಾಲ್‌ಬಾಗ್' ಎಂಬ ಪುಸ್ತಕ ರೂಪದಲ್ಲಿ ಪ್ರಕಟ ಆಗಲಿದೆ.

'ಸಸ್ಯವಿಜ್ಞಾನ ವಿದ್ಯಾರ್ಥಿಗಳಿಗೆ, ಗಿಡ–ಮರಗಳ ಬಗ್ಗೆ ಕುತೂಹಲ ಇರುವವರಿಗೆ, ಜೀವ ವೈವಿಧ್ಯ ಅಧ್ಯಯನಕಾರರಿಗೆ ಇದರಿಂದ ಅನುಕೂಲವಾಗಲಿದೆ. ಅಳಿವಿನಂಚಿನಲ್ಲಿರುವ ಸಸ್ಯ ಪ್ರಭೇದಗಳನ್ನು ಸಂರಕ್ಷಿಸಲು ಈ ದಾಖಲಾತಿ ನೆರವಾಗಲಿದೆ. ಜಗತ್ತಿನ ಪ್ರಮುಖ ಸಸ್ಯೋದ್ಯಾನಗಳ ಜತೆ ಪ್ರಭೇದಗಳ ವಿನಿಮಯ ಯೋಜನೆಗೆ ಇದರಿಂದ ನೆರವಾಗಲಿದೆ' ಎಂದು ಲಾಲ್‌ಬಾಗ್‌ನ ಉಪ ನಿರ್ದೇಶಕ ಎಚ್.ಟಿ. ಬಾಲಕೃಷ್ಣ 'ಪ್ರಜಾವಾಣಿ'ಗೆ ತಿಳಿಸಿದರು.

'ಪ್ರತಿಯೊಂದು ಸಸ್ಯವೂ ಆಯಾ ಋತುಮಾನಕ್ಕೆ ತಕ್ಕಂತೆ ಬದಲಾಗುತ್ತಲೇ ಇರುತ್ತದೆ. ಎಲೆ ಚಿಗುರುವ, ಉದುರುವ, ಹೂವು ಬಿಡುವ, ಕಾಯಿ ಕಟ್ಟುವ ಅವಧಿಗಳು ಬೇರೆ ಬೇರೆ. ಹೀಗಾಗಿ ಅವೆಲ್ಲವನ್ನೂ ಅಧ್ಯಯನ ಮಾಡಬೇಕು ಮತ್ತು ಛಾಯಾಗ್ರಹಣ ಮಾಡಬೇಕು. ಇದಕ್ಕೆ ದೀರ್ಘ ಸಮಯ ಬೇಕಾಗುತ್ತದೆ' ಎಂದರು.

ಟ್ರೈಸಿಕಲ್, ಬೈಸಿಕಲ್ ಪರಿಚಯ: 'ಫೆಚ್ ಮೊಬಿಲಿಟಿ ಸಂಸ್ಥೆಯ ವತಿಯಿಂದ ಲಾಲ್‌ಬಾಗ್‌ನಲ್ಲಿ ಓಡಾಡಲು ಪರಿಸರ ಸ್ನೇಹಿಯಾಗಿರುವ ಎಲೆಕ್ಟ್ರಿಕ್ ಟ್ರೈಸಿಕಲ್ ಮತ್ತು ಬೈಸಿಕಲ್‌ಗಳನ್ನು ಪರಿಚಯಿಸಲಾಗುತ್ತದೆ. ಮೂರು ತಿಂಗಳವರೆಗೆ ಪ್ರಾಯೋಗಿಕವಾಗಿ ಓಡಾಡಲು ಅವಕಾಶ ಕಲ್ಪಿಸಲಾಗಿದೆ. ಇದು ಯಶಸ್ವಿಯಾದರೆ, ಮುಂದಿನ ದಿನಗಳಲ್ಲಿ ಕಬ್ಬನ್ ಉದ್ಯಾನದಲ್ಲೂ ಪರಿಚಯಿಸಲಾಗುತ್ತದೆ' ಎಂದರು.

'ಪ್ಲಾಂಟ್ ವೆಲ್ತ್ ಆಫ್ ಲಾಲ್‌ಬಾಗ್ ಪುಸ್ತಕದಲ್ಲಿ ಲಾಲ್‌ಬಾಗ್‌ನ ಸಸ್ಯ ಸಂಪತ್ತಿನ ವಿವರ ದೊರಕುತ್ತದೆ. ಜತೆಗೆ ಹೊಸದಾಗಿ ತರಿಸಲಾದ ಗಿಡಗಳು, ತೋಟದ ಬೆಳವಣಿಗೆ ಕುರಿತ ದಾಖಲೆಯೂ ಆಗಲಿದೆ. 1980ರ ಅವಧಿಯಲ್ಲೊಮ್ಮೆ ಈ ದಾಖಲೆ ಮಾಡಲಾಗಿತ್ತು. ಆ ಬಳಿಕ ದೊಡ್ಡ ಸಂಖ್ಯೆಯ ಸಸ್ಯಗಳನ್ನು ತರಿಸಿ ಬೆಳೆಸಿದ್ದೇವೆ. ಅವುಗಳ ದಾಖಲೆ ಇರಲಿಲ್ಲ. ಈಗ ಆ ಕೆಲಸ ಮಾಡುತ್ತಿದ್ದೇವೆ' ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಜಗದೀಶ್ ಮಾಹಿತಿ ನೀಡಿದರು.

ಲಾಲ್‌ಬಾಗ್ ಕೆರೆಯಲ್ಲಿ ತೇಲುವ ಉದ್ಯಾನ: ಲಾಲ್‌ಬಾಗ್ ಆವರಣದ ಕೆರೆಯಲ್ಲಿ ಪರಿಸರ ಸ್ನೇಹಿ ತೇಲುವ ಉದ್ಯಾನ ನಿರ್ಮಿಸಲಾಗಿದೆ. ಇದರಲ್ಲಿ 9 ಸಾವಿರಕ್ಕೂ ಹೆಚ್ಚು ಸಸಿಗಳಿವೆ. ದಟ್ಸ್ ಇಕೊ ಫೌಂಡೇಷನ್‌ನ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ (ಸಿಎಸ್‌ಆರ್) ₹75 ಲಕ್ಷ ವೆಚ್ಚದಲ್ಲಿ ಈ ಉದ್ಯಾನ ನಿರ್ಮಿಸಲಾಗಿದೆ.

ಲಾಲ್‌ಬಾಗ್‌ನ ಕೆರೆಯಲ್ಲಿ ನಿರ್ಮಿಸಿರುವ ತೇಲುವ ಉದ್ಯಾನ

ಪ್ರಜಾವಾಣಿ ಚಿತ್ರಗಳು: ಪ್ರಶಾಂತ್ ಎಚ್‌.ಜಿ.

ಹರ್ಬೇರಿಯಂ ಎಂದರೇನು?

'ಸಸ್ಯ ಪ್ರಭೇದಗಳ ವಿವಿಧ ಭಾಗಗಳನ್ನು ಒಣಗಿಸಿ ವ್ಯವಸ್ಥಿತವಾಗಿ ಸಂಗ್ರಹಿಸಿಡುವ ಮಾದರಿಗೆ ಹರ್ಬೇರಿಯಂ ಎಂದು ಕರೆಯಲಾಗುತ್ತದೆ. ಸಸ್ಯಗಳ ಹೂವು, ಹಣ್ಣು, ಕಾಯಿ, ಎಲೆಗಳನ್ನು ಸಂಗ್ರಹಿಸಿ ಅವುಗಳನ್ನು ಒಂದು ಹಾಳೆಯಲ್ಲಿ ಹೊಲಿಗೆ ಹಾಕಿ ಒಣಗಿಸಲಾಗುತ್ತದೆ. ಅದರಲ್ಲಿ ಸಸ್ಯದ ಕುರಿತ ಸಂಕ್ಷಿಪ್ತ ಮಾಹಿತಿ ಸೇರಿಸಲಾಗಿರುತ್ತದೆ. ಸಸ್ಯಗಳನ್ನು ಗುರುತಿಸಲು ಈ ಪ್ರಕ್ರಿಯೆ ಸಹಾಯಕವಾಗುತ್ತದೆ. ಒಂದು ಹರ್ಬೇರಿಯಂ ಶೀಟ್ ತಯಾರಿಸಲು 15ರಿಂದ 20 ದಿನಗಳು ಬೇಕಾಗುತ್ತದೆ' ಎಂದು ಕೇಶವಮೂರ್ತಿ ತಿಳಿಸಿದರು.

ಲಾಲ್‌ಬಾಗ್ ಉದ್ಯಾನದಲ್ಲಿರುವ ಸಸ್ಯ ಪ್ರಭೇದಗಳ ಸಂರಕ್ಷಿತ ಸಸ್ಯ ಮಾದರಿ ಸಂಗ್ರಹ ಮತ್ತು ವೈಜ್ಞಾನಿಕ ಅಧ್ಯಯನ ನಡೆಸಲು ಸಹಕಾರಿಯಾಗುವಂತೆ ಸಸ್ಯ ಪ್ರಭೇದಗಳ ಪರ್ಣ ಸಂಗ್ರಹ (ಹರ್ಬೇರಿಯಂ)' ಕೈಗೊಳ್ಳಲಾಗಿದೆ. ಉದ್ಯಾನದಲ್ಲಿನ ಎಲ್ಲ ಸಸ್ಯಗಳನ್ನು ಹೀಗೆ ಸಂಗ್ರಹಿಸುವ ಕೆಲಸ ನಡೆಯುತ್ತಿದೆ. ಈಗಾಗಲೇ 1,580 ಹರ್ಬೇರಿಯಂಗಳನ್ನು ಸಂಗ್ರಹಿಸಲಾಗಿದೆ' ಎಂದು ಬಾಲಕೃಷ್ಣ ತಿಳಿಸಿದರು.

ಅಂಕಿ ಅಂಶಗಳು

240 ಎಕರೆ ಲಾಲ್‌ಬಾಗ್ ಉದ್ಯಾನದ ವಿಸ್ತೀರ್ಣ

2,350 ಲಾಲ್‌ಬಾಗ್‌ನಲ್ಲಿರುವ ವಿವಿಧ ದೇಶ–ವಿದೇಶಗಳ ಸಸ್ಯಪ್ರಭೇದಗಳು

6 ಸಾವಿರಕ್ಕೂ ಹೆಚ್ಚು ಲಾಲ್‌ಬಾಗ್‌ನಲ್ಲಿರುವ ಒಟ್ಟು ಮರಗಳ ಸಂಖ್ಯೆ

ನೂತನವಾಗಿ ಪರಿಚಯಿಸಿರುವ ಬೈಸಿಕಲ್‌ನಲ್ಲಿ ಲಾಲ್‌ಬಾಗ್ ಉಪನಿರ್ದೇಶಕ ಎಚ್. ಟಿ. ಬಾಲಕೃಷ್ಣ ಅವರು ಸಂಚರಿಸಿದರು

ಅಧಿಕಾರಿಗಳು ಏನಂತಾರೆ?

ಮುಂದಿನ ಒಂದು ವರ್ಷದಲ್ಲಿ ಲಾಲ್‌ಬಾಗ್‌ನ ಎಲ್ಲ ಮರಗಳಿಗೆ ಕ್ಯೂಆರ್ ಕೋಡ್ ಅಳವಡಿಸಲಾಗುವುದು. ಇದರ ಜೊತೆಗೆ ಲಾಲ್‌ಬಾಗ್ ಕೆರೆಯಲ್ಲಿ ತೇಲುವ ಉದ್ಯಾನ, ಬೊನ್ಸಾಯ್ ಉದ್ಯಾನ ಸಾರ್ವಜನಿಕರ ಆಕರ್ಷಣೆಯ ಕೇಂದ್ರಗಳಾಗಿವೆ. ಯುವಕರು ಹಾಗೂ ಮಕ್ಕಳನ್ನು ಸೆಳೆಯುವ ಉದ್ದೇಶದಿಂದ ಎಲೆಕ್ಟ್ರಿಕ್ ಟ್ರೈಸಿಕಲ್ ಮತ್ತು ಬೈಸಿಕಲ್‌ಗಳನ್ನು ಪರಿಚಯಿಸಲಾಗಿದೆ.

ಡಿ.ಎಸ್. ರಮೇಶ್, ತೋಟಗಾರಿಕೆ ಇಲಾಖೆ ನಿರ್ದೇಶಕ

ಲಾಲ್‌ಬಾಗ್‌ನ ಎಲ್ಲ ಗಿಡ–ಮರಗಳಿಗೆ ಕ್ಯೂಆರ್ ಕೋಡ್ ಅಳವಡಿಸುವ ಯೋಜನೆಗೆ ಸುಮಾರು ₹17 ಲಕ್ಷದಿಂದ ₹18 ಲಕ್ಷ ವೆಚ್ಚವಾಗಲಿದೆ. ಅಪರೂಪದ, ಅಳಿವಿನಂಚಿನಲ್ಲಿರುವ ಸಸ್ಯಗಳನ್ನು ನೆಟ್ಟು ಸಂರಕ್ಷಿಸುವ ಯೋಜನೆಯೂ ಜಾರಿಯಲ್ಲಿದೆ.

ಜಗದೀಶ್, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ

ಬೊನ್ಸಾಯ್ ಉದ್ಯಾನದ ಅಭಿವೃದ್ಧಿ

ಲಾಲ್‌ಬಾಗ್‌ನ ಬೊನ್ಸಾಯ್ ಉದ್ಯಾನ ಹೊಸ ಆಕರ್ಷಣೆಯೊಂದಿಗೆ ಸಾರ್ವಜನಿಕರನ್ನು ಸ್ವಾಗತಿಸಲು ಸಜ್ಜಾಗಿದೆ. ಸಹಜವಾಗಿ ಬೃಹತ್ ಗಾತ್ರದಲ್ಲಿ ಬೆಳೆಯುವ ಮರಗಳನ್ನು ಇಲ್ಲಿ ಕುಬ್ಜಗೊಳಿಸಿ, ಅವುಗಳನ್ನು ಕುಂಡಗಳಲ್ಲಿ ಬೆಳೆದು ಅದಕ್ಕೊಂದು ರೂಪ ನೀಡಲಾಗಿದೆ.

ಲಾಲ್‌ಬಾಗ್‌ನ 2.5 ಎಕರೆ ಪ್ರದೇಶದಲ್ಲಿರುವ ಬೊನ್ಸಾಯ್ ಉದ್ಯಾನಕ್ಕೆ ಆಧುನಿಕ ಸ್ಪರ್ಶ ನೀಡಲಾಗಿದೆ. ಇಲ್ಲಿ 10 ವರ್ಷದಿಂದ 80 ವರ್ಷದವರೆಗಿನ 100ಕ್ಕೂ ಹೆಚ್ಚು ಬೋನ್ಸಾಯ್ ಗಿಡಗಳನ್ನು ವಿವಿಧ ಹಂತಗಳಲ್ಲಿ ವಿನ್ಯಾಸಗೊಳಿಸಿ ಪ್ರದರ್ಶನಕ್ಕೆ ಇಡಲಾಗಿದೆ. ಬೊನ್ಸಾಯ್ ಕಲಾವಿದೆ ಅನುಪಮಾ ವೇದಾಚಲ ಮಾರ್ಗದರ್ಶನದಲ್ಲಿ ಈ ಉದ್ಯಾನದ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ.

'₹55 ಲಕ್ಷ ವೆಚ್ಚದಲ್ಲಿ ಈ ಉದ್ಯಾನದ ಮರು ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ದೇಶದ ಪ್ರಥಮ ಬೊನ್ಸಾಯ್ ಉದ್ಯಾನ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ' ಎಂದು ಜಂಟಿ ನಿರ್ದೇಶಕ ಜಗದೀಶ್ ಹೇಳಿದರು.

ಅವಳ ಹೆಜ್ಜೆ ಪ್ರಶಸ್ತಿ, ₹ 1ಲಕ್ಷ ನಗದು ಬಹುಮಾನ ಪ್ರದಾನ

'ಅನ್‌ಹರ್ಡ್ ಎಕೋಸ್'ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ವಿಶೇಷ ವರ್ಗದಲ್ಲಿ ನಗದು ಬಹುಮಾನ ಪಡೆದ 'ಪುಷ್ಪ'
- ರೇಣುಕಾ ನಿರ್ಮಿಸಿದ 'ನೀರೆಲ್ಲವೂ ತೀರ್ಥ' ಪ್ರದರ್ಶನ

ಬೆಂಗಳೂರು: 'ಅವಳ ಹೆಜ್ಜೆ ಕಿರುಚಿತ್ರೋತ್ಸವ'ದಲ್ಲಿ ನಿರ್ದೇಶಕಿ ಕವಿತಾ ಬಿ. ನಾಯಕ್ ಅವರ 'ಅನ್‌ಹರ್ಡ್ ಎಕೋಸ್' ಎಂಬ ಕಿರುಚಿತ್ರ ಪ್ರಥಮ ಸ್ಥಾನ ಪಡೆದು, ಅವಳ ಹೆಜ್ಜೆ ಪ್ರಶಸ್ತಿ ಹಾಗೂ ₹ 1ಲಕ್ಷ ನಗದು ಬಹುಮಾನಕ್ಕೆ ಪಾತ್ರವಾಯಿತು.

ಗುಬ್ಬಿವಾಣಿ ಟ್ರಸ್ಟ್ ಶನಿವಾರ ಆಯೋಜಿಸಿದ್ದ ಅವಳ ಹೆಜ್ಜೆ ಕಿರುಚಿತ್ರೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

'ಕವಿತಾ ಬಿ. ನಾಯಕ್ ರಂಗಭೂಮಿ ಕಲಾವಿದೆ ಮತ್ತು ನಿರ್ದೇಶಕಿಯಾಗಿದ್ದಾರೆ. ಸಿನಿಮಾ ಮೂಲಕ ಮಹಿಳೆಯರ ಸಮಸ್ಯೆಗಳನ್ನು ಪ್ರೇಕ್ಷಕರಿಗೆ ತಲುಪಿಸಬೇಕೆಂಬ ಅವರ ಬದ್ಧತೆಯ ಪ್ರತಿಫಲವೇ ಅನ್‌ಹರ್ಡ್ ಎಕೋಸ್ ಕಿರುಚಿತ್ರ. ಈ ಕಿರುಚಿತ್ರ ಪ್ರೇಕ್ಷಕರ ಆಯ್ಕೆ ವಿಭಾಗದಲ್ಲೂ ಬಹುಮಾನ ಪಡೆದುಕೊಂಡಿತು' ಎಂದು ಶಾಂತಲಾ ದಾಮ್ಲೆ ಹೇಳಿದರು.

ಕ್ಷಮಾ ಅಂಬೆಕಲ್ಲು ನಿರ್ದೇಶನದ 'ಪುಷ್ಪ' ಕಿರುಚಿತ್ರವು ವಿಶೇಷ ವರ್ಗದಲ್ಲಿ ನಗದು ಬಹುಮಾನ ಪಡೆದುಕೊಂಡಿದೆ. ಮಂದಾರ ಬಟ್ಟಲಹಳ್ಳಿ ನಿರ್ದೇಶನದ 'ದಿ ಲಾಸ್ಟ್ ಹ್ಯಾಪಿ ಕಸ್ಟಮರ್' (2024), ಸಿಂಚನಾ ಶೈಲೇಶ್ ನಿರ್ದೇಶನದ 'ಕೇಕ್‌ವಾಕ್' (2025) ಮತ್ತು ಸತ್ಯ ಪ್ರಮೋದ ಎಂ.ಎಸ್ ನಿರ್ದೇಶನದ 'ಆನ್‌ಲೈನ್' (2025) ಕಿರುಚಿತ್ರಗಳು ಚೊಚ್ಚಲ ನಿರ್ದೇಶನ ವಿಭಾಗದಲ್ಲಿ ನಗದು ಬಹುಮಾನಗಳನ್ನು ಪಡೆದವು.

ಹಾವೇರಿ ಜಿಲ್ಲೆಯ ರೈತ ಮಹಿಳೆ ರೇಣುಕಾ ಯಲ್ಲಪ್ಪ ಮಲ್ಲಿಗಾರ್ ನಿರ್ಮಿಸಿದ 'ನೀರೆಲ್ಲವೂ ತೀರ್ಥ' ಎಂಬ ಕಿರುಚಿತ್ರವನ್ನು ಸ್ಪರ್ಧಾತ್ಮಕವಲ್ಲದ ವಿಭಾಗದಲ್ಲಿ ಪ್ರದರ್ಶಿಸಲಾಯಿತು.

ಕಿರುಚಿತ್ರೋತ್ಸವದಲ್ಲಿ ಕನ್ನಡ ಸಿನಿಮಾದಲ್ಲಿ ಮಹಿಳಾ ಧ್ವನಿ ಎಂಬ ವಿಷಯದ ಕುರಿತು ನಿರ್ದೇಶಕಿ ರೂಪಾ ರಾವ್, ಟೆಂಟ್ ಸಿನಿಮಾ ಶಾಲೆಯ ಸ್ಥಾಪಕಿ, ನಿರ್ದೇಶಕಿ ಸಿ.ಎಸ್. ಶೋಭಾ, ನಿರ್ದೇಶಕಿ ಡಿ. ಸುಮನ್ ಕಿತ್ತೂರು ಭಾಗವಹಿಸಿದ್ದರು.

'ಇದು ಕೇವಲ ಕಿರುಚಿತ್ರ ಪ್ರದರ್ಶನವಲ್ಲ, ಮಹಿಳೆಯರ ಅನುಭವ, ದೃಷ್ಟಿಕೋನಗಳಿಗೆ ವೇದಿಕೆ ನೀಡುವ, ಲಿಂಗ ಸಮಾನತೆಯ ಚಿಂತನೆ ಉತ್ತೇಜಿಸುವ ಒಂದು ಚಳವಳಿಯಾಗಿದೆ' ಎಂದು ಟ್ರಸ್ಟ್‌ನ ಅಧ್ಯಕ್ಷೆ ಮಾಳವಿಕಾ ಗುಬ್ಬಿವಾಣಿ ಹೇಳಿದರು.

'ಬದ್ಧತೆ ಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು 10 ವರ್ಷಗಳಿಗೊಮ್ಮೆ ಮಾಡುವುದು ಕಡ್ಡಾಯ. ಅದರಂತೆ, ಸರ್ಕಾರ ಜಾತಿವಾರು ಮರು ಸಮೀಕ್ಷೆಗೆ ನಿರ್ಧರಿಸಿದೆ. ಆದರೆ, ಸಾಮಾಜಿಕ ಬದ್ಧತೆ ಇಲ್ಲದವರು ಸಬೂಬು ಹೇಳುತ್ತಾರೆ' ಎಂದು ಸಚಿವ ಎಚ್.ಸಿ. ಮಹದೇವಪ್ಪ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, '10 ವರ್ಷಗಳಿಗೊಮ್ಮೆ ಜನಗಣತಿ ಎನ್ನುವುದು ಒಂದು ಭಾಗವಾದರೆ, 10 ವರ್ಷಕ್ಕೊಮ್ಮೆ ಜಾತಿ ಗಣತಿ ಮಾಡಬೇಕು ಎಂದೂ ಕಾಯ್ದೆ ಹೇಳುತ್ತದೆ. ಆ ಮೂಲಕ, ಜನಸಂಖ್ಯೆಗೆ ಅನುಗುಣವಾಗಿ ಸವಲತ್ತುಗಳನ್ನು ನೀಡಬಹುದು. ಬದ್ಧತೆ ಇರುವ ಸರ್ಕಾರ ಈ ನಿಟ್ಟಿನಲ್ಲಿ ಕೆಲಸ ಮಾಡುತ್ತದೆ' ಎಂದರು.

ಗೋಥೆನ್‌ಬರ್ಗ್‌ನಲ್ಲಿ ರೋಡ್‌ಶೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕವನ್ನು ಶುದ್ಧ ಇಂಧನ ಸಂಚಾರ (ಕ್ಲೀನ್ ಮೊಬಿಲಿಟಿ) ಮತ್ತು ವಿದ್ಯುತ್ ಚಾಲಿತ ವಾಹನಗಳ (ಇವಿ) ತಯಾರಿಕೆಯ ನಾವೀನ್ಯತೆಯ ಜಾಗತಿಕ ಕೇಂದ್ರವಾಗಿ ಅಭಿವೃದ್ಧಿಪಡಿಸಲು ಹೂಡಿಕೆದಾರರನ್ನು ಆಕರ್ಷಿಸಲು ಸ್ವೀಡನ್‌ನ ಗೋಥೆನ್‌ಬರ್ಗ್‌ನಲ್ಲಿ ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರ ನೇತೃತ್ವದಲ್ಲಿ ಉನ್ನತ ಮಟ್ಟದ ನಿಯೋಗ ರೋಡ್ ಶೋ ನಡೆಸಿತು.

ಕಳೆದ ಫೆಬ್ರುವರಿಯಲ್ಲಿ ಬೆಂಗಳೂರಿನಲ್ಲಿ ನಡೆದಿದ್ದ ಜಾಗತಿಕ ಹೂಡಿಕೆದಾರರ ಸಮಾವೇಶ 'ಇನ್ವೆಸ್ಟ್ ಕರ್ನಾಟಕ 2025'ರಲ್ಲಿ ಆಗಿರುವ ಹೂಡಿಕೆ ಒಪ್ಪಂದಗಳನ್ನು ತ್ವರಿತವಾಗಿ ಜಾರಿಗೊಳಿಸಲು ಮತ್ತು ಜಾಗತಿಕ ಹೂಡಿಕೆದಾರರನ್ನು ಆಕರ್ಷಿಸಲು 10 ದಿನಗಳ ಅಂತರರಾಷ್ಟ್ರೀಯ ರೋಡ್ ಶೋ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಇಲ್ಲಿ ನಡೆಯುತ್ತಿರುವ ಇವಿಎಸ್ 38 ಶೃಂಗಸಭೆಯು ವಿದ್ಯುತ್ ಚಾಲಿತ ವಾಹನಗಳ ತಯಾರಿಕೆ, ಬಳಕೆ ಹೆಚ್ಚಳ ಮತ್ತು ಅತ್ಯಾಧುನಿಕ ವಾಹನ ತಯಾರಿಕೆಯ ತಂತ್ರಜ್ಞಾನಗಳ ಕುರಿತ ಪ್ರಮುಖ ಜಾಗತಿಕ ಸಮ್ಮೇಳನವಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ಎಂ.ಬಿ.ಪಾಟೀಲ, ಕರ್ನಾಟಕ ಸರ್ಕಾರ ಜಾರಿಗೆ ತಂದಿರುವ ಸದೃಢ ಇ.ವಿ ನೀತಿ, ತಯಾರಿಕಾ ಸಾಮರ್ಥ್ಯ ಮತ್ತು ಅಭಿವೃದ್ಧಿ ಪಥದಲ್ಲಿ ಮುನ್ನಡೆದಿರುವ ನವೋದ್ಯಮಗಳ ಸಾಧನೆಯನ್ನು ಜಾಗತಿಕ ಹೂಡಿಕೆದಾರರಿಗೆ, ಉದ್ಯಮ ದಿಗ್ಗಜರಿಗೆ ಮನವರಿಕೆ ಮಾಡಿಕೊಟ್ಟು, ಹೂಡಿಕೆಗೆ ಆಹ್ವಾನ ನೀಡಿದರು.

ಪಾಟೀಲ ಅವರು ವೋಲ್ವೊ ಗ್ರೂಪ್ ಅಧ್ಯಕ್ಷ ಮತ್ತು ಸಿಇಒ ಮಾರ್ಟಿನ್ ಲುಂಡ್‌ಸ್ಟೆಡ್ ಅವರನ್ನು ಭೇಟಿಯಾಗಿ ಸಮಾಲೋಚನೆ ನಡೆಸಿದರು. ಕರ್ನಾಟಕದಲ್ಲಿ ತನ್ನ ವಾಹನಗಳ ತಯಾರಿಕಾ ಸಾಮರ್ಥ್ಯ ವಿಸ್ತರಿಸಲು ಬದ್ಧರಿರುವುದಾಗಿ ಮಾರ್ಟಿನ್ ತಿಳಿಸಿದರು.

ವೋಲ್ವೊ ಗ್ರೂಪ್ ಅಧ್ಯಕ್ಷ ಮತ್ತು ಸಿಇಒ ಮಾರ್ಟಿನ್ ಲುಂಡ್‌ಸ್ಟೆಡ್ ಜತೆ ಎಂ.ಬಿ. ಪಾಟೀಲ ಚರ್ಚೆ ನಡೆಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

PERSONAL

Change of Name

CHANGE OF NAME

I, NAJIHA, residing at # 406, B Block, Sai Krupa Heritage, Behind Venus Hydra, Gedalahalli, Kothanur, Bengaluru-560077. have changed my name to NAJIHA A R vide affidavit dated 16.06.2025 before notary M Rajendra Bengaluru. Henceforth I shall be called NAJIHA A R only.

CHANGE OF NAME

I, AMANDEEP, residing at SA-12, NAL Staff Qtrs, NAL Campus, Jeevan Bima Nagar, Kodihalli, Vimanapura, Bengaluru- 560017, have changed my name to AMANDEEP GUPTA vide affidavit dated 20-05-2025 before Notary A.R. Muneer Ahmed, Bengaluru. Henceforth I shall be called as AMANDEEP GUPTA only

CHANGE OF NAME

I, Deepak Bhandari, Residing at Flat No.101, First Floor, Sai Krishna Springs, K.R. Road, Opposite VTC, Basavangudi, Bengalore-560 004, have changed my minor son's name from MUKESH BHANDARI to MEETH D BHANDARI vide affidavit dated 16-06-2025 before notary H.S. Dharma Prasad, Bengaluru.

BUSINESS

Business Offers

Finance

MSME LOANS

Available for any start up company,any existing Companies avail this opportunity contact-7204995189

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

DH Classifieds More value, more impact — ಪ್ರಜಾವಾಣಿ

RECRUITMENT

BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY

@ 2481/-* FOR 15 WORDS

www.dhclassifieds.com BOOK NOW

For more details contact:

+91 9731810277 | +91 9845114560 | +91 9900428036

*Conditions apply

'ಮುಖ್ಯವಾಹಿನಿಗೆ ಬರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಲೆಮಾರಿ ಬುಡಕಟ್ಟು ಹಿನ್ನೆಲೆಯ ಬಂಜಾರರು ಮುಖ್ಯವಾಹಿನಿಯ ಸಾಂಸ್ಕೃತಿಕ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ತೊಡಗಿಸಿಕೊಳ್ಳಬೇಕು' ಎಂದು ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷ ಎ.ಆರ್. ಗೋವಿಂದಸ್ವಾಮಿ ತಿಳಿಸಿದರು.

ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ವತಿಯಿಂದ ಸಾಹಿತ್ಯ ಮತ್ತು ಸಂಸ್ಕೃತಿ ವೇದಿಕೆ ಮತ್ತು ಪ್ರಜಾಕೀಯ ಆಶ್ರಮ ಆಯೋಜಿಸಿದ್ದ ಬಂಜಾರ ಸಾಹಿತ್ಯ, ಕಾವ್ಯ ಹಾಗೂ ನಾಟಕ ರಚನಾ ಕಾರ್ಯಾಗಾರಕ್ಕೆ ಚಾಲನೆ ನೀಡಿದ ಅವರು ಮಾತನಾಡಿದರು.

'ಕಲೆ, ಸಾಹಿತ್ಯ, ನಾಟಕದಂತಹ ಸಾಂಸ್ಕೃತಿಕ ವಲಯದಲ್ಲಿ ಯುವಕರು ಗುರುತಿಸಿಕೊಳ್ಳಬೇಕು. ಸಾಮಾಜಿಕ ಜಾಗೃತಿ, ಅರಿವು, ವ್ಯಕ್ತಿತ್ವ ವಿಕಸನ, ಜನಪರ ಕಾಳಜಿ, ಪರಿಸರ ಕಾಳಜಿ ಅಗತ್ಯ' ಎಂದು ಹೇಳಿದರು.

'ಬಂಜಾರ ಭಾಷೆ, ಸಾಹಿತ್ಯ, ಸಂಸ್ಕೃತಿಯನ್ನು ಮುಖ್ಯವಾಹಿನಿಗೆ ತರಲು ಅಕಾಡೆಮಿ ಅಧ್ಯಕ್ಷರು ಅವಿರತವಾಗಿ ಶ್ರಮಿಸುತ್ತಿದ್ದಾರೆ. ಸಾಹಿತ್ಯ ರಚನಾ ತರಬೇತಿ ಕಾರ್ಯಾಗಾರದಲ್ಲಿ ಬಂಜಾರರ ಜೊತೆಗೆ ಇತರರಿಗೂ ಸಮಾನ ಅವಕಾಶ ನೀಡಿರುವುದು ಶ್ಲಾಘನೀಯ' ಎಂದು ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಕೆ. ಪ್ರಕಾಶ್ ಹೇಳಿದರು.

ಪ್ರಜಾಕೀಯ ಆಶ್ರಮದ ರಾಹುಲ್ ಗುಳಿ, ಸಾಹಿತ್ಯ ಸಂಸ್ಕೃತಿ ವೇದಿಕೆ ಅಧ್ಯಕ್ಷ ಆರ್. ಸದಾಶಿವಯ್ಯ, ಶಿಬಿರದ ನಿರ್ದೇಶಕರಾದ ಛಾಯಾ ಭಾರ್ಗವಿ, ಅಕಾಡೆಮಿ ಸಹ ಸದಸ್ಯ ಗಿರೀಶ್ ನಾಯ್ಕ್, ಬಂಜಾರ ಸಮುದಾಯದ ಮುಖಂಡರಾದ ಬಿ. ರವಿನಾಯ್ಕ್, ಚಂದ್ರನಾಯ್ಕ್, ಸೌಂದರ್ಯ, ಪ್ರೊ. ಶಿವಣ್ಣನಾಯ್ಕ್, ರಂಗಕರ್ಮಿ ಮೈಕೊ ಶಿವಶಂಕರ್, ಪರಮೇಶ್ ಉಪಸ್ಥಿತರಿದ್ದರು.

ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ್ ಮತ್ತು ಕಂಚಿ ಕಾಮಕೋಟಿ ಪೀಠದ ಶಂಕರ ವಿಜಯೇಂದ್ರ ಸರಸ್ವತಿ ಸ್ವಾಮೀಜಿ ಕುಶಲೋಪರಿಯಲ್ಲಿ ತೊಡಗಿದ್ದರು

ಆರ್ಟ್ ಆಫ್ ಲಿವಿಂಗ್‌ಗೆ ಕಂಚಿಶ್ರೀ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂಚಿ ಕಾಮಕೋಟಿ ಪೀಠದ 70ನೇ ಪೀಠಾಧಿಪತಿ ಶಂಕರ ವಿಜಯೇಂದ್ರ ಸರಸ್ವತಿ ಸ್ವಾಮೀಜಿ ಬೆಂಗಳೂರಿನ ಕನಕಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರಕ್ಕೆ ಭೇಟಿ ನೀಡಿದರು.

'ಆಧ್ಯಾತ್ಮಿಕ ಜ್ಞಾನ, ಧ್ಯಾನ ಮತ್ತು ಶಾಂತಿಯನ್ನು ಜಾಗತಿಕ ಮಟ್ಟದಲ್ಲಿ ಪಸರಿಸಲು ಶ್ರೀ ಶ್ರೀ ರವಿಶಂಕರ್ ಅವರು ನಿರಂತರವಾಗಿ ಪ್ರಯತ್ನ ಮಾಡುತ್ತಿದ್ದಾರೆ. ಅವರ ಸೇವಾ ಕಾರ್ಯ, ಭಾರತದ ಪ್ರಾಚೀನ ಜ್ಞಾನ ಪರಂಪರೆಯನ್ನು ಉಳಿಸುವಲ್ಲಿನ ಬದ್ಧತೆ ಮೆಚ್ಚುವಂಥದ್ದಾಗಿದೆ. ಆಧ್ಯಾತ್ಮಿಕ ಅಭ್ಯಾಸಗಳು ಎಲ್ಲರೂ ಅನುಸರಿಸುವಂತೆ ಸರಳ ಮತ್ತು ಪ್ರಸ್ತುತವಾಗಿಸಿದ್ದಾರೆ' ಎಂದು ಕಂಚಿ ಸ್ವಾಮೀಜಿ ಶ್ಲಾಘಿಸಿದರು.

ಕಂಚಿ ಶ್ರೀಗಳನ್ನು ಶ್ರೀ ಶ್ರೀ ರವಿಶಂಕರ್ ಬರಮಾಡಿಕೊಂಡರು. ಆಶ್ರಮದ ಗುರುಕುಲ, ಗೋಶಾಲೆ ಮತ್ತು ವಿವಿಧ ಆಧ್ಯಾತ್ಮಿಕ ಕಲಿಕಾ ಕೇಂದ್ರಗಳಿಗೆ ಸ್ವಾಮೀಜಿ ಭೇಟಿ ನೀಡಿದರು. ವೇದ ಮಂತ್ರಗಳ ಪಠಣ, ಭಕ್ತಿ-ಗೌರವದಿಂದ ಪರಸ್ಪರ ಸನ್ಮಾನ ಹಾಗೂ ಭಾರತದ ಆಧ್ಯಾತ್ಮಿಕ ಪರಂಪರೆಯ ಮೌಲ್ಯಗಳನ್ನು ಶಾಶ್ವತವಾಗಿ ಸಂರಕ್ಷಿಸಿ ಬೆಳೆಸುವ ದೃಢ ಸಂಕಲ್ಪದೊಂದಿಗೆ ಸಮಾರಂಭವು ಮುಕ್ತಾಯಗೊಂಡಿತು.

ನಗರದಲ್ಲಿ ಇಂದು

ವಿಶ್ವ ಪರಿಸರ ದಿನದ ಅಂಗವಾಗಿ 'ನಮ್ಮ ನಡಿಗೆ ಸ್ವಚ್ಛ ಪರಿಸರದ ಕಡೆಗೆ' ಜಾಥಾಕ್ಕೆ ಚಾಲನೆ: ಸಿದ್ದರಾಮಯ್ಯ, ಉಪಸ್ಥಿತಿ: ಈಶ್ವರ ಬಿ. ಖಂಡ್ರೆ, ಪಿ.ಎಂ. ನರೇಂದ್ರಸ್ವಾಮಿ, ಆಯೋಜನೆ: ಅರಣ್ಯ ಇಲಾಖೆ, ಸ್ಥಳ: ವಿಧಾನಸೌಧದ ಪೂರ್ವದ್ವಾರ, ವಿಧಾನಸೌಧದ ಗೇಟ್ ಸಂಖ್ಯೆ–1, ಬೆಳಿಗ್ಗೆ 8

ವಿಶ್ವ ಪರಿಸರ ದಿನಾಚರಣೆ, ಕರ್ನಾಟಕ ರಾಜ್ಯ ಪರಿಸರ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಸ್ಥಿತಿ: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ, ಪಿ.ಎಂ. ನರೇಂದ್ರಸ್ವಾಮಿ, ಅಧ್ಯಕ್ಷತೆ: ಮಲ್ಲೇಶ್ವರ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ: ಅರಣ್ಯ ಇಲಾಖೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಸ್ಥಳ: ತ್ರಿಪುರ ವಾಸಿನಿ, ಗೇಟ್ ಸಂಖ್ಯೆ–2, ಅರಮನೆ ಮೈದಾನ, ಬೆಳಿಗ್ಗೆ 11

ಹಸಿರು ಹಬ್ಬ: ಅತಿಥಿಗಳು: ಯು.ಟಿ. ಖಾದರ್, ಈಶ್ವರ ಬಿ. ಖಂಡ್ರೆ, ಎಚ್.ಸಿ. ಮಹದೇವಪ್ಪ, ಸೌಮ್ಯಾ ರಾಮಲಿಂಗಾರೆಡ್ಡಿ, ಎಚ್.ಎನ್. ಗೋಪಾಲಕೃಷ್ಣ, ಮೀನಾ ಪಾಟೀಲ್, ಸಂತೋಷ್ ಹಿಪ್ಪರಗಿ, ಬಾಬು ಮ್ಯಾಥ್ಯೂ, ಆರ್. ಮೋಹನ್‌ರಾಜ್, ಆಯೋಜನೆ: ಹಸಿರು ದಳ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 11

ಕೃಷ್ಣಪ್ರಸಾದ ಬದಿ ಅನುವಾದಿಸಿರುವ 'ಶ್ರೀ ಬಾಳಾಸಾಹೇಬ ದೇವರಸ್–ಸಾರ್ಥಕ ಬದುಕಿನ ಪರಿಚಯ' ಪುಸ್ತಕ ಬಿಡುಗಡೆ, ಸಂವಾದ ಕಾರ್ಯಕ್ರಮ: ಭಾಗವಹಿಸುವವರು: ಜಿ.ಎಸ್. ಉಮಾಪತಿ, ವಿ. ನಾಗರಾಜ್, ಆಯೋಜನೆ: ಮಂಥನ, ಸ್ಥಳ: ಗಿರಿಜಾರಾಮ ದೈವಜ್ಞ ಭವನ, ಈಸ್ಟ್‌ಪಾರ್ಕ್ ರಸ್ತೆ, 13ನೇ ಅಡ್ಡರಸ್ತೆ, ಮಲ್ಲೇಶ್ವರ, ಸಂಜೆ 6.30

'ಮಾರೀಕಾಡು' ನಾಟಕ ಪ್ರದರ್ಶನ: ನಿರ್ವಹಣೆ: ಛಾಯಾಭಾರ್ಗವಿ, ನಿರ್ದೇಶನ: ಮಾಲತೇಶ ಬಡಿಗೇರ, ಆಯೋಜನೆ: ಅದಮ್ಯ ರಂಗ ಸಂಸ್ಕೃತಿ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಬೇಡಿಕೆ ಈಡೇರಿಸಲು 'ಆಶಾ'ಗಳ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಶಾ ಕಾರ್ಯಕರ್ತೆಯರಿಗೆ ಪ್ರತಿ ತಿಂಗಳು ಪ್ರೋತ್ಸಾಹಧನ ಸೇರಿಸಿ ಕನಿಷ್ಠ ₹10 ಸಾವಿರ ಗೌರವಧನ ನೀಡಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಘೋಷಿಸಿ ಐದು ತಿಂಗಳು ಕಳೆದರೂ ಈ ಭರವಸೆ ಈಡೇರಿಲ್ಲ ಎಂದು ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ (ಎಐಯುಟಿಯುಸಿ) ಆಕ್ರೋಶ ವ್ಯಕ್ತಪಡಿಸಿದೆ.

'ಮುಖ್ಯಮಂತ್ರಿ ನೀಡಿರುವ ಹೇಳಿಕೆಗೆ ಅನುಗುಣವಾಗಿ ಸರ್ಕಾರ ತಕ್ಷಣ ಆದೇಶ ಹೊರಡಿಸಬೇಕು. ನಗರ ಪ್ರದೇಶದ ಆಶಾ ಕಾರ್ಯಕರ್ತೆಯರಿಗೆ ಹೆಚ್ಚುವರಿ ಕೆಲಸ ಮತ್ತು ನಗರ ಜೀವನದ ದುಬಾರಿ ಖರ್ಚು ವೆಚ್ಚಗಳಿಗೆ ಅನುಗುಣವಾಗಿ ಕನಿಷ್ಠ ₹2 ಸಾವಿರದಷ್ಟು ಗೌರವಧನ ಹೆಚ್ಚಿಸಬೇಕು. ಸೇವಾ ನಿವೃತ್ತಿ ಪಡೆಯುವ ಕಾರ್ಯಕರ್ತೆಯರಿಗೆ ಪಶ್ಚಿಮ ಬಂಗಾಳದಲ್ಲಿ ಇರುವಂತೆ ₹5 ಲಕ್ಷ ನೀಡಬೇಕು' ಎಂದೂ ಆಗ್ರಹಿಸಿದೆ.

ಎಲ್ಲೆಲ್ಲೂ ಗುಂಡಿ

ರಸ್ತೆ ಗುಂಡಿ ಅಪಾಯಕ್ಕೆ ದಾರಿ

ಚಿಕ್ಕಲ್ಲಸಂದ್ರದ ಸಂಪರ್ಕ ಕಲ್ಪಿಸುವ ರಸ್ತೆ ಕಿರಿದಾಗಿದ್ದು, ಈ ರಸ್ತೆಯಲ್ಲಿ ಅಲ್ಲಲ್ಲಿ ಗುಂಡಿಗಳು ಬಿದ್ದಿವೆ. ಇದರಿಂದ ವಾಹನ ಸಂಚಾರಕ್ಕೆ ಅಡಚಣೆ ಆಗುತ್ತಿದೆ

ಜ್ಯೋತಿ, ಚಿಕ್ಕಲ್ಲಸಂದ್ರ

ಕೊಟ್ಟಿಗೆಪಾಳ್ಯ, ಒಂದನೇ ಮುಖ್ಯರಸ್ತೆಯಲ್ಲಿ ಗುಂಡಿ ಬಿದ್ದಿದೆ

ವಿಜಯಲಕ್ಷ್ಮಿ, ಕೊಟ್ಟಿಗೆಪಾಳ್ಯ

ಶೇಷಾದ್ರಿಪುರದ ನೆಹರೂ ನಗರಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು

ಕುಮಾರ್ ಎನ್., ನೆಹರೂನಗರ

ರಸ್ತೆ ಗುಂಡಿ ಕಂಡರೆ ಫೋಟೊ ಕಳುಹಿಸಿ

ನಾಗರಿಕರು ತಾವು ವಾಸಿಸುವ ಹಾಗೂ ಸಂಚರಿಸುವ ರಸ್ತೆಗಳಲ್ಲಿ ಗುಂಡಿ ಕಂಡರೆ ಅದರ ಚಿತ್ರಸಹಿತ ಮಾಹಿತಿಯನ್ನು 'ಪ್ರಜಾವಾಣಿ'ಗೆ ಕಳುಹಿಸಿಕೊಡಬಹುದು. ನಿಮ್ಮ ಹೆಸರು ಹಾಗೂ ವಿಳಾಸವಿರಲಿ.

ವಾಟ್ಸ್ ಆ್ಯಪ್: 9606038256

ಬೈಕ್ ಟ್ಯಾಕ್ಸಿ ನಿರ್ಬಂಧ: 103 ವಾಹನ ವಶ

'ನಮ್ಮ ಹೊಟ್ಟೆಗೆ ಹೊಡೆಯಬೇಡಿ ಬೈಕ್ ಟ್ಯಾಕ್ಸಿಗಾಗಿ ಹೊಸ ನಿಯಮ ರೂಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್ ಆದೇಶದಂತೆ ಬೈಕ್ ಟ್ಯಾಕ್ಸಿ ಸೇವೆ ಸ್ಥಗಿತಗೊಳಿಸಲು ಸಾರಿಗೆ ಅಧಿಕಾರಿಗಳು ಸೋಮವಾರ ವಿವಿಧೆಡೆ ಕಾರ್ಯಾಚರಣೆ ನಡೆಸಿ, 103 ಬೈಕ್ ಟ್ಯಾಕ್ಸಿಗಳನ್ನು ವಶಪಡಿಸಿಕೊಂಡಿದ್ದಾರೆ.

ಇದೇ ಸಂದರ್ಭದಲ್ಲಿ 'ನಮ್ಮ ಹೊಟ್ಟೆಗೆ ಹೊಡೆಯಬೇಡಿ. ಬೈಕ್ ಟ್ಯಾಕ್ಸಿಗಳಿಗಾಗಿಯೇ ಹೊಸ ನಿಯಮ ರೂಪಿಸಿ' ಎಂದು ಬೈಕ್ ಟ್ಯಾಕ್ಸಿ ಅಸೋಸಿಯೇಶನ್ ಆಗ್ರಹಿಸಿದೆ.

ಬೆಂಗಳೂರು ಕೇಂದ್ರ, ಬೆಂಗಳೂರು ಪಶ್ಚಿಮ, ಬೆಂಗಳೂರು ಪೂರ್ವ, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಜ್ಞಾನಭಾರತಿ, ದೇವನಹಳ್ಳಿ, ಯಲಹಂಕ, ಎಲೆಕ್ಟ್ರಾನಿಕ್ ಸಿಟಿ, ಕೆ.ಆರ್. ಪುರ, ಚಂದ್ರಾಪುರ ಪ್ರಾದೇಶಿಕ ಸಾರಿಗೆ ಕಚೇರಿಯ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದರು.

ಉಬರ್ ಇಂಡಿಯಾ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್, ರೊಪ್ಪೆನ್ ಟ್ರಾನ್ಸ್‌ಪೋರ್ಟೇಷನ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ (ರ್‍ಯಾಪಿಡೊ), ಎಎನ್‌ಐ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ (ಓಲಾ) ಮುಂತಾದ ಕಂಪನಿಗಳ ಅಡಿಯಲ್ಲಿ ಬೈಕ್ ಟ್ಯಾಕ್ಸಿಗಳು ಕಾರ್ಯನಿರ್ವಹಿಸುತ್ತಿದ್ದವು.

'ವೈಯಕ್ತಿಕ ಬಳಕೆಗೆ ಇರುವ ದ್ವಿಚಕ್ರ ವಾಹನಗಳನ್ನು ಪ್ರಯಾಣಿಕರನ್ನು ಕರೆದೊಯ್ಯಲು ಅನಧಿಕೃತವಾಗಿ ಬಳಸಲಾಗುತ್ತಿದೆ. ಪ್ರಯಾಣಿಕರಿಗಾಗಿಯೇ ಇರುವ ಆಟೊಗಳಿಗೆ ಇದರಿಂದ ನಷ್ಟ ಉಂಟಾಗುತ್ತಿದೆ' ಎಂದು ನಗರದ ವಿವಿಧ ಆಟೊ ಸಂಘಟನೆಗಳು ನಾಲ್ಕೈದು ವರ್ಷಗಳಿಂದ ಬೈಕ್ ಟ್ಯಾಕ್ಸಿಗಳ ವಿರುದ್ಧ ಪ್ರತಿಭಟನೆ, ಕಾನೂನು ಹೋರಾಟ ಮಾಡಿಕೊಂಡು ಬಂದಿದ್ದವು. ಹಲವು ಬಾರಿ ಹೊಡೆದಾಟಗಳೂ ಆಗಿದ್ದವು.

ಮೋಟಾರು ವಾಹನ ಕಾಯ್ದೆ–1988ರ ಕಲಂ 93ರ ಅನುಸಾರ ರಾಜ್ಯ ಸರ್ಕಾರ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸುವ ತನಕ ಸಂಬಂಧಿತ ಸಂಸ್ಥೆಗಳಾದ ಓಲಾ, ಉಬರ್ ಮತ್ತು ರ್‍ಯಾಪಿಡೊಗಳು ಬೈಕ್ ಟ್ಯಾಕ್ಸಿ ಸೇವೆಯನ್ನು ಸ್ಥಗಿತಗೊಳಿಸಬೇಕು. ಆರು ವಾರಗಳ ಒಳಗೆ ಕ್ರಮ ಕೈಗೊಳ್ಳಬೇಕು ಎಂದು ಏಪ್ರಿಲ್ 2ರಂದು ಹೈಕೋರ್ಟ್‌ನ ಏಕಸದಸ್ಯ ನ್ಯಾಯಪೀಠ ಆದೇಶ ಹೊರಡಿಸಿತ್ತು. ಇದರ ವಿರುದ್ಧ ಉಬರ್, ಓಲಾ, ರ್‍ಯಾಪಿಡೋ ಕಂಪನಿಗಳು ಮೇಲ್ಮನವಿ ಸಲ್ಲಿಸಿದ್ದವು. ಮೇಲ್ಮನವಿಯ ವಿಚಾರಣೆ ಕಾಯ್ದಿರಿಸಿ ಜೂನ್ 15ರವರೆಗೆ ಬೈಕ್ ಟ್ಯಾಕ್ಸಿ ಓಡಿಸಲು ಅವಕಾಶ ನೀಡಲಾಗಿತ್ತು.

ವಿಚಾರಣೆಯನ್ನು ಜೂನ್ 13ರಂದು ನಡೆಸಿದ ಹೈಕೋರ್ಟ್ ವಿಭಾಗೀಯ ನ್ಯಾಯಪೀಠವು ಏಕಸದಸ್ಯ ನ್ಯಾಯಪೀಠದ ಆದೇಶಕ್ಕೆ ತಡೆಯಾಜ್ಞೆ ನೀಡಲು ನಿರಾಕರಿಸಿತು. ಹಾಗಾಗಿ ಸೋಮವಾರದಿಂದ ಬೈಕ್ ಟ್ಯಾಕ್ಸಿಗಳನ್ನು ನಿರ್ಬಂಧಿಸಲು ಸಾರಿಗೆ ಇಲಾಖೆ ಕಾರ್ಯಾಚರಣೆ ಆರಂಭಿಸಿದೆ.

ಪ್ರಾದೇಶಿಕ ಸಾರಿಗೆ ಇಲಾಖೆಯ ಅಧಿಕಾರಿಗಳು ವಶಪಡಿಸಿಕೊಂಡಿರುವ ಬೈಕ್ ಟ್ಯಾಕ್ಸಿಗಳು

ವಶಪಡಿಸಿಕೊಂಡ ವಾಹನಗಳ ವಿವರ

ಆರ್‌ಟಿಒ	ವಾಹನ
ಬೆಂಗಳೂರು ಕೇಂದ್ರ	8
ಬೆಂಗಳೂರು ಪಶ್ಚಿಮ	16
ಬೆಂಗಳೂರು ಪೂರ್ವ	12
ಬೆಂಗಳೂರು ಉತ್ತರ	10
ಬೆಂಗಳೂರು ದಕ್ಷಿಣ	10
ಜ್ಞಾನಭಾರತಿ	5
ದೇವನಹಳ್ಳಿ	5
ಯಲಹಂಕ	4
ಎಲೆಕ್ಟ್ರಾನಿಕ್ ಸಿಟಿ	15
ಕೆ.ಆರ್.ಪುರ	13
ಚಂದ್ರಾಪುರ	5

ಸಾರಿಗೆ ಇಲಾಖೆಗೆ ಮನವಿ: ಅಸೋಸಿಯೇಶನ್

'ಬೈಕ್ ಟ್ಯಾಕ್ಸಿ ತಕ್ಷಣಕ್ಕೆ ನಿಷೇಧಿಸಬೇಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಪತ್ರ ಬರೆದಿದ್ದೆವು. ಆದರೂ ಬೈಕ್ ಟ್ಯಾಕ್ಸಿಗಳನ್ನು ವಶಪಡಿಸಿಕೊಳ್ಳುವ ಕಾರ್ಯ ಆರಂಭವಾಗಿದೆ. ಕೂಡಲೇ ನಿಯಮಾವಳಿ ರೂಪಿಸಿ ಎಂದು ಸಾರಿಗೆ ಇಲಾಖೆ ಮೇಲೆ ಒತ್ತಡ ಹೇರಲಾಗುವುದು' ಎಂದು ನಮ್ಮ ಬೈಕ್ ಟ್ಯಾಕ್ಸಿ ಅಸೋಸಿಯೇಶನ್ ಅಧ್ಯಕ್ಷ ಮೊಹಮ್ಮದ್ ಸಲೀಂ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಈಗಿನ ಕಾನೂನಿನಲ್ಲಿ ಬೈಕ್ ಟ್ಯಾಕ್ಸಿ ಓಡಿಸಲು ಪರವಾನಗಿ ನೀಡಲು ಅವಕಾಶ ಇಲ್ಲದೇ ಇದ್ದರೆ, ಹೊಸ ನಿಯಮಾವಳಿಗಳನ್ನು ರೂಪಿಸಿ ಪರವಾನಗಿ ನೀಡಬೇಕು. ತರಬೇತಿ, ವಿಮೆ ಸಹಿತ ಏನೆಲ್ಲ ಷರತ್ತುಗಳಿವೆಯೋ ಅದನ್ನೆಲ್ಲ ನಿಯಮಾವಳಿಗಳಲ್ಲಿ ಸೇರಿಸಲಿ. ನಾವು ಪಾಲನೆ ಮಾಡಲು ತಯಾರಿದ್ದೇವೆ. ಅದು ಬಿಟ್ಟು ಬೈಕ್ ಟ್ಯಾಕ್ಸಿ ಓಡಿಸುವುದನ್ನೇ ನಿರ್ಬಂಧಿಸುವುದು ಸರಿಯಲ್ಲ. ಇದನ್ನೇ ನಂಬಿರುವ ಒಂದು ಲಕ್ಷಕ್ಕೂ ಹೆಚ್ಚು ಜನರ ಬದುಕು ಬೀದಿಗೆ ಬೀಳುವಂತಾಗಿದೆ' ಎಂದು ತಿಳಿಸಿದರು.

'ಸರ್ಕಾರ ನಿಯಮಾವಳಿ ರೂಪಿಸಲು ನಿರಾಸಕ್ತಿ ತೋರಿಸುತ್ತಿರುವುದು ಬೇಸರದ ಸಂಗತಿ' ಎಂದರು.

ಸರ್ಕಾರದೊಂದಿಗೆ ಚರ್ಚೆ- ಉಬರ್: ಬೈಕ್ ಟ್ಯಾಕ್ಸಿ ಕಾರ್ಯಾಚರಣೆ ಸ್ಥಗಿತಗೊಳಿಸುವ ಕಠಿಣ ನಿರ್ಧಾರದಿಂದ ದೈನಂದಿನ ಸಂಚಾರಕ್ಕಾಗಿ ಬೈಕ್ ಟ್ಯಾಕ್ಸಿಗಳನ್ನು ಅವಲಂಬಿಸಿರುವ ಪ್ರಯಾಣಿಕರಿಗೆ ತೊಂದರೆ ಉಂಟಾಗಲಿದೆ. ಜೀವನೋಪಾಯಕ್ಕಾಗಿ ಬೈಕ್ ಟ್ಯಾಕ್ಸಿ ಅವಲಂಬಿಸಿದ್ದ ಚಾಲಕರಿಗೂ ತೊಂದರೆಯಾಗಲಿದೆ. ಸುರಕ್ಷಿತ ಮತ್ತು ಸುಲಭವಾಗಿ ಕೈಗೆಟುಕುವ ದರದ ಸಂಚಾರ ಸೇವೆಗಳು ಎಲ್ಲರಿಗೂ ಲಭ್ಯವಾಗುವಂತೆ ಮಾಡಲು ಸಹಾಯವಾಗುವ ನೀತಿ ಚೌಕಟ್ಟನ್ನು ರೂಪಿಸಲು ಕರ್ನಾಟಕ ಸರ್ಕಾರದ ಜೊತೆ ಚರ್ಚೆ ನಡೆಸಲಾಗುವುದು ಎಂದು ಉಬರ್ ಸಂಸ್ಥೆ ಪ್ರಕಟಣೆ ನೀಡಿದೆ.

ಚಿಟಿಕೆ ಸುದ್ದಿ

ಪ್ರಧಾನಿಗೆ ಅವಹೇಳನದ ಆರೋಪ: ಕಲಾವಿದನ ವಿರುದ್ಧ ದೂರು

ಬೆಂಗಳೂರು: ಕಲಾವಿದ ಟಿ.ಎಫ್.ಹಾದಿಮನಿ ಅವರು ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಫೇಸ್‌ಬುಕ್‌ನಲ್ಲಿ ಅವಹೇಳನಾಕಾರಿಯಾಗಿ ಪೋಸ್ಟ್ ಹಾಕಿದ್ದಾರೆ ಎಂದು ಆರೋಪಿಸಿ, ಯಶವಂತಪುರ ಸೈಬರ್ ಠಾಣೆಗೆ ಬಿಜೆಪಿ ರಾಜ್ಯ ವಕ್ತಾರ ಮತ್ತು ವಕೀಲ ವೆಂಕಟೇಶ ದೊಡ್ಡೇರಿ ಅವರು ದೂರು ನೀಡಿದ್ದಾರೆ. 'ಹಾದಿಮನಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ಬಂಧಿಸಬೇಕು' ಎಂದು ಒತ್ತಾಯಿಸಿದ್ದಾರೆ. ಕಾನೂನು ತಜ್ಞರ ಜೊತೆಗೆ ಚರ್ಚಿಸಿ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗುವುದು ಎಂಬುದಾಗಿ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ ಎಂದು ಬಿಜೆಪಿ ಮುಖಂಡರು ಹೇಳಿದರು.

ಅರ್ಜಿ ಆಹ್ವಾನ

ನೆಲಮಂಗಲ: ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇಕಡ 90ಕ್ಕಿಂತ ಹೆಚ್ಚು ಅಂಕ ಗಳಿಸಿದ ಒಕ್ಕಲಿಗ ಸಮುದಾಯದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ನೆಲಮಂಗಲ ತಾಲ್ಲೂಕು ಸೇರಿದಂತೆ ಮಾಗಡಿ ತಾಲ್ಲೂಕಿನ ಸೋಲೂರು ಹೋಬಳಿ ಮತ್ತು ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿ ವಿದ್ಯಾರ್ಥಿಗಳೂ ಅಗತ್ಯ ದಾಖಲೆಗಳೊಂದಿಗೆ ಜೂನ್ 30ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಒಕ್ಕಲಿಗ ಕ್ಷೇಮಾಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಎಂ.ಕೆ.ನಾಗರಾಜು ತಿಳಿಸಿದ್ದಾರೆ. **ಸಂಪರ್ಕ:** 9343705608, 9449638143, 9980525501.

'ಕಾಲ್ತುಳಿತ: ವರದಿ ಬಂದ ಬಳಿಕ ಕ್ರಮ'

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣದ ಸಂಬಂಧ ನ್ಯಾಯಾಂಗ ತನಿಖೆ ನಡೆಯುತ್ತಿದ್ದು, ವರದಿ ಬಂದ ಬಳಿಕ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ದಿನೇಶ್ ಗುಂಡೂರಾವ್

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಈ ಘಟನೆ ನಡೆಯಬಾರದಿತ್ತು. ಈ ಸಂಬಂಧ ಸರ್ಕಾರ ಈಗಾಗಲೇ ಕ್ರಮವಹಿಸಿದ್ದು, ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಸಮಿತಿ ರಚಿಸಿ ತನಿಖೆಗೆ ವಹಿಸಲಾಗಿದೆ. ಜೊತೆಗೆ ಲೋಪಕ್ಕೆ ಕಾರಣವಾದ ಉನ್ನತ ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿದೆ. ಬಿಜೆಪಿ ಯಾವ ಉದ್ದೇಶದಿಂದ ಪ್ರತಿಭಟನೆ ನಡೆಸುತ್ತಿದೆ' ಎಂದರು.

ಕೋರ್ಟ್ ಆದೇಶವಿದ್ದರೂ ಕುಂಭಮೇಳದ ಕಾಲ್ತುಳಿತದಲ್ಲಿ ಮೃತಪಟ್ಟವರ ಬಗ್ಗೆ ಈವರೆಗೂ ಸ್ಪಷ್ಟ ಮಾಹಿತಿ ನೀಡಿಲ್ಲ. ಪರಿಹಾರದ ವಿಚಾರದಲ್ಲಿಯೂ ಉತ್ತರ ಪ್ರದೇಶದ ಯೋಗಿ ಆದಿತ್ಯನಾಥ ಸರ್ಕಾರಕ್ಕೆ ಕೋರ್ಟ್ ಛೀಮಾರಿ ಹಾಕಿದೆ ಎಂದರು.

58 ಚಾಲಕರ ವಿರುದ್ಧ ಎಫ್‌ಐಆರ್

ಶಾಲಾ ವಾಹನ ಚಾಲಕರನ್ನು ತಪಾಸಣೆಗೆ ಒಳಪಡಿಸಲಾಯಿತು

ಬೆಂಗಳೂರು: ಮದ್ಯಪಾನ ಮಾಡಿ ಶಾಲಾ ವಾಹನ ಚಾಲನೆ ಮಾಡುತ್ತಿದ್ದ ಚಾಲಕರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಿದ ನಗರದ ವಿವಿಧ ಠಾಣೆಯ ಸಂಚಾರ ಪೊಲೀಸರು, 58 ಚಾಲಕರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

'ಸೋಮವಾರ ಬೆಳಿಗ್ಗೆ 7ರಿಂದ 10ರವರೆಗೆ ವಿಶೇಷ ಕಾರ್ಯಾಚರಣೆ ನಡೆಸಲಾಯಿತು. ಕಾರ್ಯಾಚರಣೆಯಲ್ಲಿ 4,559 ವಾಹನಗಳ ತಪಾಸಣೆ ನಡೆಸಲಾಯಿತು. ಈ ವೇಳೆ ಮದ್ಯ ಸೇವಿಸಿ ವಾಹನ ಚಾಲನೆ ಮಾಡುತ್ತಿದ್ದವರ ವಿರುದ್ಧ ಮೋಟಾರು ವಾಹನಗಳ ಕಾಯ್ದೆ ಅಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಯಿತು. ಚಾಲಕರ ಚಾಲನಾ ಪರವಾನಗಿಯನ್ನು ಅಮಾನತು ಮಾಡುವಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. ಕಾರ್ಯಾಚರಣೆ ಮುಂದುವರಿಯಲಿದೆ' ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ಮಣ್ಣು ಕುಸಿತ ಕಾರ್ಮಿಕ ಸಾವು

ನೆಲಮಂಗಲ: ತಾಲ್ಲೂಕಿನ ತ್ಯಾಮಗೊಂಡ್ಲು ಕೆರೆ ಬಳಿ ಪೈಪ್‌ಲೈನ್ ಅಳವಡಿಕೆ ವೇಳೆ ಮಣ್ಣು ಕುಸಿದು ಕಾರ್ಮಿಕ ಉತ್ತರ ಪ್ರದೇಶದ ಜಿಗ್ನೇಶ್ (25) ಮೃತಪಟ್ಟಿದ್ದಾರೆ. ವೆಲ್ಡಿಂಗ್ ಕಾರ್ಮಿಕನಾಗಿದ್ದ ಜಿಗ್ನೇಶ್, ಭಾನುವಾರ ಮಧ್ಯಾಹ್ನ ಪೈಪ್‌ಗಳ ವೆಲ್ಡಿಂಗ್ ಮಾಡುತ್ತಿದ್ದ ಸಮಯದಲ್ಲಿ ಮಣ್ಣು ಕುಸಿದಿದೆ. ತ್ಯಾಮಗೊಂಡ್ಲು ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಅಪಘಾತ: ನೃತ್ಯ ಕಲಾವಿದರ ಸಾವು

ಪ್ರಜಾವಾಣಿ ವಾರ್ತೆ

ಪ್ರಜ್ವಲ್

ಸಹನಾ

ನೆಲಮಂಗಲ: ರಾಷ್ಟ್ರೀಯ ಹೆದ್ದಾರಿ–75ರ ನೆಲಮಂಗಲ–ಕುಣಿಗಲ್ ಬೈಪಾಸ್‌ನಲ್ಲಿ ಲಾರಿ ಹಾಗೂ ಬೈಕ್ ನಡುವೆ ಭಾನುವಾರ ತಡರಾತ್ರಿ ಸಂಭವಿಸಿದ ಅಪಘಾತದಲ್ಲಿ ಬೆಂಗಳೂರಿನ ಇಬ್ಬರು ನೃತ್ಯ ಕಲಾವಿದರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಬೆಂಗಳೂರು ಶ್ರೀರಾಮಪುರದ ಪ್ರಜ್ವಲ್ (22) ಹಾಗೂ ಸಹನಾ (21) ಮೃತಪಟ್ಟ ಕಲಾವಿದರು. ಇಬ್ಬರೂ ಸ್ನೇಹಿತರಾಗಿದ್ದು, ನೃತ್ಯ ಕಲಾವಿದರಾಗಿದ್ದರು. ಕಿರುತೆರೆಯಲ್ಲಿ ಕೆಲವು ಕಾರ್ಯಕ್ರಮಗಳನ್ನು ನೀಡಿದ್ದರು.

ಕುಣಿಗಲ್‌ನಲ್ಲಿ ಭಾನುವಾರ ಮದುವೆ ಇತ್ತು. ಮದುವೆ ಮುಗಿಸಿಕೊಂಡು ಇಬ್ಬರೂ ಬೈಕ್‌ನಲ್ಲಿ ವಾಪಸ್ ಬರುತ್ತಿದ್ದರು. ಪಟ್ಟಣದ ಕುಣಿಗಲ್ ವೃತ್ತವನ್ನು ದಾಟುವಾಗ ಬೆಂಗಳೂರು ಕಡೆಯಿಂದ ಬಂದ ಲಾರಿ ಡಿಕ್ಕಿ ಹೊಡೆದು, ಲಾರಿ ಚಕ್ರಕ್ಕೆ ಸಿಲುಕಿ ಇಬ್ಬರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ಲಾರಿ ಜಪ್ತಿ ಮಾಡಿಕೊಂಡು ಚಾಲಕನನ್ನು ವಶಕ್ಕೆ ಪಡೆಯಲಾಗಿದೆ. ನೆಲಮಂಗಲ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅವೈಜ್ಞಾನಿಕ ಜಂಕ್ಷನ್: ನೆಲಮಂಗಲ ಜಂಕ್ಷನ್ ಅವೈಜ್ಞಾನಿಕವಾಗಿದ್ದು, ರಾತ್ರಿ ವೇಳೆ ನಾಲ್ಕೂ ದಿಕ್ಕಿನಿಂದ ವಾಹನಗಳು ವೇಗವಾಗಿ ಬರುತ್ತಿರುತ್ತವೆ. ಇದರಿಂದ ಪದೇ ಪದೇ ಅಪಘಾತಗಳು ಸಂಭವಿಸಿ ಸಾವು– ನೋವು ಆಗುತ್ತಿದೆ ಎಂದು ಸ್ಥಳೀಯರು ನೋವು ತೋಡಿಕೊಂಡರು.

ಶಾಲೆಗಳಿಗೆ ಹುಸಿ ಬಾಂಬ್ ಬೆದರಿಕೆ ಸಂದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕಲಾಸಿಪಾಳ್ಯ, ಕುಂಬಳಗೋಡು ಹಾಗೂ ರಾಜರಾಜೇಶ್ವರಿ ನಗರ ಪೊಲೀಸ್ ಠಾಣೆಗಳ ವ್ಯಾಪ್ತಿಯ ಕೆಲವು ಶಾಲೆಗಳಿಗೆ ಸೋಮವಾರ ಬಾಂಬ್ ಬೆದರಿಕೆ ಸಂದೇಶದ ಇ–ಮೇಲ್ ಬಂದಿದ್ದು, ಶಾಲಾ ಆವರಣದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

'ಹೈದರಾಬಾದ್ ನಲ್ಲಿ ನಡೆದಿರುವ ಅತ್ಯಾಚಾರ ಪ್ರಕರಣದಲ್ಲಿ ನ್ಯಾಯ ಕೊಡಿಸಬೇಕು. ಇಲ್ಲವಾದಲ್ಲಿ ಶಾಲೆಗಳ ಕಟ್ಟಡವನ್ನು ಸ್ಫೋಟಿಸುತ್ತೇವೆ ಎಂಬುದಾಗಿ ಇ–ಮೇಲ್‌ನಲ್ಲಿ ಉಲ್ಲೇಖಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಬಾಂಬ್ ನಿಷ್ಕ್ರಿಯ ದಳ, ಬಾಂಬ್ ತಪಾಸಣೆ ದಳ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ತೆರಳಿ ಪರಿಶೀಲನೆ ನಡೆಸಿದರು. ಯಾವುದೇ ಸ್ಫೋಟಕ ವಸ್ತುಗಳಾಗಲಿ, ರಾಸಾಯನಿಕ ಪದಾರ್ಥಗಳಾಗಲಿ ಪತ್ತೆ ಆಗಿಲ್ಲ. ಇದೊಂದು ಹುಸಿ ಬಾಂಬ್ ಬೆದರಿಕೆ ಎಂಬುದು ದೃಢವಾಯಿತು. ಶಾಲಾ ವಿಳಾಸಕ್ಕೆ ಬಂದ ಇ–ಮೇಲ್ ಮೂಲವನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಓಡಾಡುವುದೂ ಕಷ್ಟ

ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ್

ನಗರದ ಬಳ್ಳಾರಿ ರಸ್ತೆಯಲ್ಲಿ ಮೇಖ್ರಿ ವೃತ್ತದಲ್ಲಿರುವ ವಾಯುಪಡೆ ಟ್ರೈನಿಂಗ್ ಕಮಾಂಡ್ ಹೆಡ್ ಕ್ವಾರ್ಟರ್ಸ್ ಬಳಿ ಬಿಬಿಎಂಪಿ ವತಿಯಿಂದ ಪಾದಚಾರಿ ಮಾರ್ಗದ ದುರಸ್ತಿ ಕಾಮಗಾರಿಗಾಗಿ ಅಗೆದು, ಹಾಗೆಯೇ ಬಿಟ್ಟಿದ್ದು ಪಾದಚಾರಿಗಳು ಪ್ರಯಾಸಪಟ್ಟುಕೊಂಡು ಸಾಗುವಂತಾಗಿದೆ

ಟಿಕೆಟ್ ರಹಿತ ಪ್ರಯಾಣ: 4,010 ಜನರಿಗೆ ದಂಡ

ಬೆಂಗಳೂರು: ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮೇ ತಿಂಗಳಲ್ಲಿ ಟಿಕೆಟ್ ಪಡೆಯದೇ ಪ್ರಯಾಣಿಸುತ್ತಿದ್ದ 4,010 ಪ್ರಯಾಣಿಕರಿಂದ ₹7.76 ಲಕ್ಷ ದಂಡ ವಸೂಲಿ ಮಾಡಲಾಗಿದೆ.

ಕೆಎಸ್‌ಆರ್‌ಟಿಸಿ ತನಿಖಾ ತಂಡದಲ್ಲಿನ ಅಧಿಕಾರಿಗಳು 41,209 ಬಸ್‌ಗಳನ್ನು ತಪಾಸಣೆ ನಡೆಸಿದ್ದರು. ನಿಗಮದ ಆದಾಯದಲ್ಲಿ ₹1.08 ಲಕ್ಷ ಸೋರಿಕೆ ಪತ್ತೆ ಹಚ್ಚಿದ್ದರು. ಅದನ್ನು ದಂಡ ಸಹಿತ ವಸೂಲಿ ಮಾಡಲಾಗಿದೆ. ಪ್ರಯಾಣಿಕರು ಟಿಕೆಟ್ ಅಥವಾ ಬಸ್ ಪಾಸ್ ಪಡೆದು ಪ್ರಯಾಣಿಸಬೇಕು ಎಂದು ಕೆಎಸ್‌ಆರ್‌ಟಿಸಿಯ ಅಧಿಕಾರಿಗಳು ತಿಳಿಸಿದ್ದಾರೆ.

ಲೈಂಗಿಕ ಕಿರುಕುಳ: ಅರ್ಚಕ ಸೆರೆ

ತಲೆಮರೆಸಿಕೊಂಡಿರುವ ಆರೋಪಿಗೆ ಬೆಳ್ಳಂದೂರು ಠಾಣೆ ಪೊಲೀಸರ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂಜೆಯ ನೆಪದಲ್ಲಿ ಮಹಿಳೆಯನ್ನು ಬ್ಲ್ಯಾಕ್‌ಮೇಲ್ ಮಾಡಿ ಲೈಂಗಿಕ ಕಿರುಕುಳ ನೀಡಿದ್ದ ಆರೋಪದ ಅಡಿ ಕೇರಳದ ಪೆರಿಂಗೋಟ್ಟುಕಾರ ದೇವಸ್ಥಾನದ ಅರ್ಚಕನನ್ನು ಬೆಳ್ಳಂದೂರು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಟಿ.ಎ.ಅರುಣ್ (40) ಬಂಧಿತ ಅರ್ಚಕ. ನಗರದ 38 ವರ್ಷದ ಮಹಿಳೆ ನೀಡಿದ ದೂರಿನ ಮೇರೆಗೆ ಅರುಣ್‌ನನ್ನು ಬಂಧಿಸಲಾಗಿದೆ. ತಲೆಮರೆಸಿಕೊಂಡಿರುವ ಮತ್ತೊಬ್ಬ ಆರೋಪಿ ಉನ್ನಿ ದಾಮೋದರನ್ ಪತ್ತೆಗೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.


ಅರುಣ್

ಸಂತ್ರಸ್ತೆಗೆ ಇಬ್ಬರು ಮಕ್ಕಳಿದ್ದಾರೆ. ಇವರ ಪತಿ, 2016ರಲ್ಲಿ ನಿಧನರಾಗಿದ್ದರು. ಸಂತ್ರಸ್ತೆಯು ನಗರದ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು ಎಂದು ಮೂಲಗಳು ತಿಳಿಸಿವೆ.

ಪತಿಯ ನಿಧನದ ಬಳಿಕ ಸಂತ್ರಸ್ತೆ ಕೌಟುಂಬಿಕ ಸಮಸ್ಯೆ ಎದುರಿಸುತ್ತಿದ್ದರು. ಕೇರಳದ ಪೆರಿಂಗೋಟ್ಟುಕಾರ ದೇವಸ್ಥಾನದಲ್ಲಿ ಪೂಜೆ ನೆರವೇರಿಸಿದರೆ ಸಮಸ್ಯೆಗಳು ಬಗೆಹರಿಯುತ್ತವೆ ಎಂಬ ವಿಚಾರವನ್ನು ತಿಳಿದುಕೊಂಡಿದ್ದರು. ಈ ಸಂಬಂಧ ಅಕ್ಕಪಕ್ಕದ ಮನೆಯವರನ್ನೂ ವಿಚಾರಿಸಿದ್ದರು. ಅದಾದ ಮೇಲೆ ಪೂಜೆಗೆಂದು ಕೇರಳಕ್ಕೆ ತೆರಳಿದ್ದರು. ಅಲ್ಲಿಗೆ ತೆರಳಿದಾಗ ಅರ್ಚಕ ಅರುಣ್‌ನ ಪರಿಚಯವಾಗಿತ್ತು. ಸಂತ್ರಸ್ತೆ ಜೊತೆಗೆ ಅರುಣ್ ಮಾತನಾಡಿ, 'ನಿಮ್ಮ ಸಮಸ್ಯೆ ಬಹಳ ಗಂಭೀರವಾಗಿದ್ದು, ನಿಮ್ಮ ಮೇಲೆ ಮಾಟ ಮಂತ್ರ ಪ್ರಯೋಗವಾಗಿದೆ. ಪೂಜೆ ನಡೆಸಬೇಕಿದೆ' ಎಂದು ಹೇಳಿದ್ದ. 'ತನ್ನ ಬಳಿ ಅಷ್ಟೊಂದು ಹಣ ಇಲ್ಲ' ಎಂಬುದಾಗಿ ಸಂತ್ರಸ್ತೆ ಹೇಳಿದ್ದರು. ತಾನು ವಿಡಿಯೊ ಕರೆ ಮಾಡಿದಾಗ ಅದನ್ನು ಸ್ವೀಕರಿಸುವಂತೆ ಆರೋಪಿ ಸೂಚಿಸಿದ್ದ ಎಂದು ಪೊಲೀಸರು ಹೇಳಿದರು.

'ಬೆಂಗಳೂರಿಗೆ ಸಂತ್ರಸ್ತೆ ಬಂದ ನಂತರ ಹಲವು ಬಾರಿ ವಾಟ್ಸ್‌ಆ್ಯಪ್ ಮೂಲಕ ವಿಡಿಯೊ ಕರೆ ಮಾಡಿದ್ದ ಆರೋಪಿ, ಮಹಿಳೆಯನ್ನು ಬೆತ್ತಲಾಗುವಂತೆ ಒತ್ತಾಯಿಸಿದ್ದ. ಇದೊಂದು ಪೂಜೆ. ನಾನು ಹೇಳಿದಂತೆ ಮಾಡದೇ ಇದ್ದರೆ ಮಕ್ಕಳಿಗೆ ತೊಂದರೆ ಆಗಲಿದೆ ಎಂದು ಬೆದರಿಸಿದ್ದ. ಆರೋಪಿ ಮಾತು ನಂಬಿ ಸಂತ್ರಸ್ತೆ ನಡೆದುಕೊಂಡಾಗ ಬೆತ್ತಲೆಯ ದೃಶ್ಯಗಳನ್ನು ಆರೋಪಿ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದ' ಎಂದು ಪೊಲೀಸರು ಹೇಳಿದರು.

ಪೂಜೆಗೆ ಬರುವಂತೆ ಸೂಚನೆ: 'ಕೆಲವು ದಿನಗಳು ಕಳೆದ ಬಳಿಕ ವಿಶೇಷ ಪೂಜೆಗೆಂದು ಕೇರಳದ ದೇವಸ್ಥಾನಕ್ಕೆ ಬರುವಂತೆ ಸಂತ್ರಸ್ತೆಗೆ ತಿಳಿಸಿದ್ದ. ಬರಲು ಸಾಧ್ಯವಿಲ್ಲ ಎಂದು ಸಂತ್ರಸ್ತೆ ಹೇಳಿದಾಗ, ಬೆತ್ತಲೆ ದೃಶ್ಯಗಳನ್ನು ಚಿತ್ರೀಕರಣ ಮಾಡಿಟ್ಟುಕೊಂಡಿರುವುದಾಗಿ ಬ್ಲ್ಯಾಕ್‌ಮೇಲ್ ಮಾಡಲಾರಂಭಿಸಿದ್ದ' ಎಂದು ಪೊಲೀಸರು ತಿಳಿಸಿದರು.

ವಿಡಿಯೊ ಇಟ್ಟುಕೊಂಡು ಬೆದರಿಕೆ

'ಅರ್ಚಕನ ಬ್ಲ್ಯಾಕ್‌ಮೇಲ್‌ಗೆ ಹೆದರಿ ಸಂತ್ರಸ್ತೆ ಮೇ 5ರಂದು ಮತ್ತೆ ದೇವಾಲಯಕ್ಕೆ ಹೋಗಿದ್ದರು. ಆಗ ಅರುಣ್ ಹಾಗೂ ಉನ್ನಿ ದಾಮೋದರನ್ ಭೇಟಿ ಮಾಡಿದ್ದರು. ಉನ್ನಿ ದಾಮೋದರನ್ ಸಹ ನಿಮ್ಮ ಬೆತ್ತಲೆ ವಿಡಿಯೊ ನೋಡಿದ್ದು, ಆತನ ಜತೆಗೆ ಸಲುಗೆಯಿಂದ ಇರಬೇಕು ಎಂದು ಹೇಳಿದ್ದ. ನಂತರ, ಅರುಣ್ ದೇವಾಲಯದ ಕೊಠಡಿಗೆ ಕರೆದುಕೊಂಡು ಹೋಗಿ ಲೈಂಗಿಕ ಕಿರುಕುಳ ನೀಡಿದ್ದ. ಉನ್ನಿ ದಾಮೋದರನ್ ಕಾವಲು ಕಾಯುತ್ತಿದ್ದ. ಯಾರಿಗೂ ವಿಷಯ ತಿಳಿಸದಂತೆ ಬೆದರಿಸಿ ಕಳುಹಿಸಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

'ಮೇ 21ರಂದು ಮತ್ತೆ ಕರೆ ಮಾಡಿದ್ದ ಆರೋಪಿ, ದೇವಾಲಯಕ್ಕೆ ಬರುವಂತೆ ಸೂಚಿಸಿದ್ದ. ಹೇಳಿದಂತೆ ಕೇಳದ ಇದ್ದರೆ ಬೆತ್ತಲೆ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕುವುದಾಗಿ ಬೆದರಿಸಿದ್ದ. ಅಲ್ಲಿಗೆ ಸಂತ್ರಸ್ತೆ ಹೋದಾಗ, ನಿರ್ಜನ ಪ್ರದೇಶಕ್ಕೆ ಕಾರಿನಲ್ಲಿ ಕರೆದುಕೊಂಡು ಹೋಗಿ ಲೈಂಗಿಕ ಕಿರುಕುಳ ನೀಡಿದ್ದ' ಎಂದು ಸಂತ್ರಸ್ತೆ ದೂರಿನಲ್ಲಿ ವಿವರಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ತೆರಿಗೆ ವಂಚನೆ: ಕಾರುಗಳಿಗೆ ದಂಡ

ಬೆಂಗಳೂರು: ಬೇರೆ ರಾಜ್ಯಗಳಲ್ಲಿ ನೋಂದಣಿ ಮಾಡಿಕೊಂಡು ರಾಜ್ಯದಲ್ಲಿ ಮೋಟಾರು ವಾಹನ ತೆರಿಗೆ ಪಾವತಿಸದೇ ಸಂಚರಿಸುತ್ತಿದ್ದ ರೋಲ್ಸ್ ರಾಯ್ಸ್ ಕುಲಿನನ್, ಮರ್ಸಿಡಿಸ್ ಬೆಂಜ್, ಪೋರ್ಷೆ, ಔಡಿ ಕಾರು ಸೇರಿದಂತೆ ದುಬಾರಿ ಬೆಲೆಯ ಐದು ಐಷಾರಾಮಿ ಕಾರುಗಳನ್ನು ಸಾರಿಗೆ ಇಲಾಖೆಯ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಈ ವೇಳೆ ನಕಲಿ ನೋಂದಣಿ ಹೊಂದಿದ್ದ ಒಂದು ಕಾರು ಕೂಡ ಪತ್ತೆಯಾಗಿದೆ.

ಸಾರಿಗೆ ಇಲಾಖೆ (ಪ್ರವರ್ತನ) ಹೆಚ್ಚುವರಿ ಆಯುಕ್ತ ಸಿ. ಮಲ್ಲಿಕಾರ್ಜುನ ನೇತೃತ್ವದಲ್ಲಿ ಬೆಂಗಳೂರು ಮತ್ತು ಮೈಸೂರಿನ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಾದ ರಂಜಿತ್ ಎನ್., ಇಮ್ತಿಯಾಜ್ ಪಾಷ, ಕುಮಾರಸ್ವಾಮಿ, ವಿಜಯಕುಮಾರ್, ರಾಮಚಂದ್ರ, ಅಲಿ ಉದ್ದೀನ್ ತಂಡ ಕಾರ್ಯಾಚರಣೆ ನಡೆಸಿತ್ತು.

₹2 ಕೋಟಿ ಮೌಲ್ಯದ ಮರ್ಸಿಡಿಸ್ ಬೆಂಜ್ ಕಾರು ನಕಲಿ ದಾಖಲೆಗಳನ್ನು ಹೊಂದಿತ್ತು. ಉಳಿದ ನಾಲ್ಕು ಕಾರುಗಳು ಪುದುಚೇರಿಯ ನೋಂದಣಿ ಹೊಂದಿರುವ ರಾಜ್ಯದ ಕಾರುಗಳಾಗಿದ್ದವು.

ವಶಪಡಿಸಿಕೊಂಡಿರುವ ಕಾರುಗಳ ಮಾಲೀಕರಿಂದ ₹3.02 ಕೋಟಿ ತೆರಿಗೆ ವಸೂಲಿ ಮಾಡಲಾಗಿದೆ ಎಂದು ಸಿ. ಮಲ್ಲಿಕಾರ್ಜುನ ತಿಳಿಸಿದ್ದಾರೆ.

ವಂಚನೆ: ನಿವೃತ್ತ ಹೆಡ್ ಕಾನ್‌ಸ್ಟೆಬಲ್ ನ್ಯಾಯಾಂಗ ಬಂಧನ

ಬೆಂಗಳೂರು: ಲೋಕಾಯುಕ್ತ ಅಧಿಕಾರಿಗಳ ಹೆಸರಿನಲ್ಲಿ ಹಣ ವಸೂಲಿ ಮಾಡಿದ ಪ್ರಕರಣದಲ್ಲಿ ಬಂಧಿತರಾಗಿರುವ ನಿವೃತ್ತ ಹೆಡ್ ಕಾನ್‌ಸ್ಟೆಬಲ್ ನಿಂಗಪ್ಪ ಅವರನ್ನು ಲೋಕಾಯುಕ್ತ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು.

ಆರೋಪಿಯನ್ನು 14 ದಿನ ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ. ಈ ವೇಳೆ ಆರೋಪಿ ಪರ ವಕೀಲರು ಜಾಮೀನಿಗೆ ಅರ್ಜಿ ಸಲ್ಲಿಸಿದರು. ಜೂನ್ 19ರಂದು ಜಾಮೀನು ಅರ್ಜಿಗೆ ಆಕ್ಷೇಪಣೆ ಸಲ್ಲಿಸುವಂತೆ ನ್ಯಾಯಾಲಯ ಆದೇಶಿಸಿತು.

ಪಿಎಸ್‌ಐ ನೇಮಕಾತಿ: ನಾಲ್ವರ ಅಮಾನತು ಆದೇಶ ರದ್ದು

ಬೆಂಗಳೂರು: ಪಿಎಸ್‌ಐ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಅಮಾನತುಗೊಂಡಿದ್ದವರ ಪೈಕಿ ನಾಲ್ವರು ಪೊಲೀಸ್ ಅಧಿಕಾರಿಗಳ ಅಮಾನತು ಆದೇಶ ತೆರವು ಮಾಡಲಾಗಿದೆ.

ಡಿವೈಎಸ್‌ಪಿಯಾಗಿದ್ದ ಶಾಂತಕುಮಾರ್ ಸೇರಿ ನಾಲ್ವರು ಪೊಲೀಸ್ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರಿಸಿ ಅಮಾನತು ತೆರವು ಮಾಡಿ, ಗೃಹ ಇಲಾಖೆ ಜೂನ್ 13ರಂದು ಆದೇಶ ಹೊರಡಿಸಿದೆ. ಮಲ್ಲಿಕಾರ್ಜುನ ಸಾಲಿ (ಡಿವೈಎಸ್‌ಪಿ) ಶಾಂತಕುಮಾರ್ (ಡಿವೈಎಸ್‌ಪಿ, ಸಶಸ್ತ್ರ), ವೈಜ್ಯನಾಥ ಕಲ್ಯಾಣಿ ರೇವೂರ (ಸಹಾಯಕ ಕಮಾಂಡೆಂಟ್), ಆನಂದ ಮೇತ್ರಿ (ಇನ್‌ಸ್ಪೆಕ್ಟರ್) ಅವರ ಅಮಾನತು ಆದೇಶ ತೆರವು ಮಾಡಲಾಗಿದೆ. ನಾಲ್ವರನ್ನು ಐಎಸ್‌ಡಿ, ಪಿಟಿಎಸ್, ಕೆಎಸ್‌ಆರ್‌ಪಿಯ ಏಳನೇ ಪಡೆ ಹಾಗೂ ಎಫ್‌ಪಿಬಿಗೆ ವರ್ಗಾವಣೆ ಮಾಡಲಾಗಿದೆ.

ಪಿಎಸ್‌ಐ ನೇಮಕಾತಿ ಹಗರಣದ ತನಿಖೆಯನ್ನು ಹಿಂದಿನ ಬಿಜೆಪಿ ಸರ್ಕಾರವು ಸಿಐಡಿಗೆ ವಹಿಸಿತ್ತು. ಮಲ್ಲಿಕಾರ್ಜುನ ಸಾಲಿ, ಶಾಂತಕುಮಾರ್, ವೈಜ್ಯನಾಥ ಕಲ್ಯಾಣಿ ರೇವೂರ ಹಾಗೂ ಆನಂದ ಮೇತ್ರಿ ಕರ್ತವ್ಯ ಲೋಪ ಎಸಗಿದ್ದು, ಸಾಬೀತಾಗಿತ್ತು. ಅವರನ್ನು ಹಿಂದಿನ ಸರ್ಕಾರ ಕೆಲಸದಿಂದ ಅಮಾನತು ಮಾಡಿತ್ತು.

ಲಂಚಕ್ಕೆ ಬೇಡಿಕೆ: ತನಿಖೆ

ಬೆಂಗಳೂರು: ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ (ಬೆಸ್ಕಾಂ) ಕಾರ್ಯಾಚರಣೆ ಮತ್ತು ನಿರ್ವಹಣಾ ವಿಭಾಗದ ಸಹಾಯಕ ಎಂಜಿನಿಯರ್ ವೈ.ಎಚ್.ಪಿ.ಯತೀಶ್ ವಿರುದ್ಧದ ಲಂಚ ಪಡೆದ ಆರೋಪದ ಪ್ರಕರಣವನ್ನು ರದ್ದುಗೊಳಿಸಲು ಹೈಕೋರ್ಟ್ ನಿರಾಕರಿಸಿದೆ.

'ನನ್ನ ವಿರುದ್ಧದ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ ಎಂಜಿನಿಯರ್ ವೈ.ಎಚ್.ಪಿ.ಯತೀಶ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಮೇಲ್ನೋಟಕ್ಕೆ ಲಂಚಕ್ಕೆ ಬೇಡಿಕೆ ಒಡ್ಡಿರುವುದು ಸ್ಪಷ್ಟವಾಗುತ್ತದೆ ಮತ್ತು ಅರ್ಜಿದಾರರ ಕಾರಿನಲ್ಲಿ ಹಣ ಸಿಕ್ಕಿರುವುದು ಸ್ಪಷ್ಟವಾಗಿದೆ. ತನಿಖೆಯಲ್ಲಿ ಹಸ್ತಕ್ಷೇಪ ಮಾಡಲಾಗದು' ಎಂದು ನ್ಯಾಯಪೀಠ ಅರ್ಜಿಯನ್ನು ತಿರಸ್ಕರಿಸಿದೆ.

ಸಂಸ್ಕೃತ ಅಧ್ಯಯನಕ್ಕೆ ಅವಕಾಶ

ಬೆಂಗಳೂರು: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ನಡೆಸುವ 'ವಿದ್ವನ್ ಮಾಧ್ಯಮಾ' ಪರೀಕ್ಷೆಯ ತರಗತಿಗಳು ಬೆಂಗಳೂರಿನ ಗಿರಿನಗರದಲ್ಲಿರುವ ಸಂಸ್ಕೃತಭಾರತೀ ಅಕ್ಷರಂನಲ್ಲಿ ಆಯೋಜಿಸಲಾಗಿದೆ.

ಸಂಸ್ಕೃತ ಮಾಧ್ಯಮದಲ್ಲಿ ತರಗತಿಗಳು ನಡೆಯಲಿದ್ದು, ಬೆಳಿಗ್ಗೆ 10ರಿಂದ ಮಧ್ಯಾಹ್ನ 1ಗಂಟೆಯವರೆಗೆ ವಾರಕ್ಕೆ ಮೂರು ದಿನ ಈ ವಿಶೇಷ ತರಗತಿಗಳು ಇರಲಿವೆ. ಯಾವುದೇ ವಿಷಯದಲ್ಲಿ ಸ್ನಾತಕ ಪದವಿ ಪಡೆದಿರುವ ಅಥವಾ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಾಹಿತ್ಯ ಪರೀಕ್ಷೆಯಲ್ಲಿ ತೇರ್ಗಡೆಆದವರು ಈ ತರಗತಿಗಳಿಗೆ ಸೇರಿಕೊಳ್ಳಬಹುದು. ಸಾಹಿತ್ಯ (ಅಲಂಕಾರ) ಶಾಸ್ತ್ರದ ತರಗತಿಗಳು ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ: 94814 84065.

ವಿಧಾನಪರಿಷತ್‌ನ ಜೆಡಿಎಸ್ ಸದಸ್ಯ ಜವರಾಯಿಗೌಡ ವಾಗ್ದಾಳಿ

ಮತ ಹಾಕಿದವರಿಗೆ ಮಾತ್ರ ಎಸ್‌ಟಿಎಸ್ ಶಾಸಕ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಅವೈಜ್ಞಾನಿಕ ಕಾಮಗಾರಿಯಿಂದಾಗಿ ದೊಡ್ಡಬಿದರಕಲ್ಲು ವಾರ್ಡ್‌ನ ಹಲವೆಡೆ ಮಳೆ ನೀರು ಮನೆಗಳಿಗೆ ನುಗ್ಗುವ ಆತಂಕ ಎದುರಾಗಿದೆ. ಅವಘಡ ಸಂಭವಿಸಿದರೆ ಯಾರು ಹೊಣೆ ಎಂದು ವಿಧಾನ ಪರಿಷತ್ ಸದಸ್ಯ ಟಿ.ಎನ್. ಜವರಾಯಿಗೌಡ, ಸ್ಥಳೀಯ ಶಾಸಕ ಎಸ್.ಟಿ.ಸೋಮಶೇಖರ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ದೊಡ್ಡಬಿದರಕಲ್ಲು ವಾರ್ಡ್‌ನ ಗೋಪಾಲಪ್ಪ ಬಡಾವಣೆ ಹಾಗೂ ಮಾರಣ್ಣ ಬಡಾವಣೆಯಲ್ಲಿ ನಡೆಯುತ್ತಿರುವ ಚರಂಡಿ ಕಾಮಗಾರಿ ಪರಿಶೀಲನೆ ನಡೆಸಿದ ಬಳಿಕ ಅವರು ಮಾತನಾಡಿದರು.

ರಸ್ತೆ ಅಗೆದು ಕಾಮಗಾರಿ ಮಾಡಲಾಗುತ್ತಿದೆ. ನೀರು ಸರಾಗವಾಗಿ ಮುಂದೆ ಹರಿದು ಹೋಗಲು ಸೂಕ್ತ ಚರಂಡಿ ವ್ಯವಸ್ಥೆಯನ್ನೇ ಮಾಡಿಲ್ಲ. ಮುಂಗಾರು ಆರಂಭವಾಗಿದ್ದು, ಜೋರು ಮಳೆಯಾಗಿ ಮನೆಗಳಿಗೆ ನೀರು ನುಗ್ಗುತ್ತದೆ ಎಂಬ ಸಾಮಾನ್ಯ ಪ್ರಜ್ಞೆಯೂ ಇಲ್ಲಿನ ಅಧಿಕಾರಿಗಳು ಹಾಗೂ ಶಾಸಕರಿಗೆ ಇಲ್ಲವೇ ಎಂದು ಪ್ರಶ್ನಿಸಿದರು.

ತಮಗೆ ಮತ ಹಾಕುವ ಭಾಗದಲ್ಲಿ ಮಾತ್ರ ಶಾಸಕ ಎಸ್.ಟಿ.ಸೋಮಶೇಖರ್ ಅಭಿವೃದ್ಧಿ ಮಾಡುತ್ತಾರೆ. ಹೀಗಾಗಿಯೇ ಕೆಲ ಬಡಾವಣೆಗಳ ಅಭಿವೃದ್ಧಿಯನ್ನು ಉದ್ದೇಶಪೂರ್ವಕವಾಗಿ ಕೈಬಿಟ್ಟಿದ್ದಾರೆ. ಮತ ಹಾಕಿದವರಿಗೆ ಮಾತ್ರ ಇವರು ಶಾಸಕರೇ ಎಂದು ಕೇಳಿದರು.

'ಇಲ್ಲಿನ ಶಾಸಕರು ಸರ್ಕಾರಿ ನಿಯಮಗಳನ್ನು ಪಾಲಿಸದೆ ತಮ್ಮ ಸಂಬಂಧಿಕರಿಗೆ ಹಾಗೂ ಹಿಂಬಾಲಕರಿಗೆ ಗುತ್ತಿಗೆ ನೀಡಿ ಅಕ್ರಮ ಹಣ ಗಳಿಕೆಯಲ್ಲಿ ತೊಡಗಿದ್ದಾರೆ. ಹೀಗಾಗಿ ಕಾಮಗಾರಿಯಲ್ಲಿ ಗುಣಮಟ್ಟದ ಕೊರತೆಯಾಗುತ್ತಿದ್ದು, ಸ್ಥಳೀಯ ನಿವಾಸಿಗಳು ಮೂಲ ಸೌಕರ್ಯಗಳಿಲ್ಲದೆ ಸೊರಗುವಂತಾಗಿದೆ' ಎಂದು ದೂರಿದರು.

ನಂತರ ಅಲ್ಲಿಂದಲೇ, ಬಿಬಿಎಂಪಿ ಅಧಿಕಾರಿಗಳಿಗೆ ಕರೆ ಮಾಡಿ, ಕಾಮಗಾರಿ ಸ್ಥಳದಲ್ಲಿ ಗುತ್ತಿಗೆದಾರರ ಹೆಸರು ಹಾಗೂ ಕಾಮಗಾರಿಯ ವಿವರ ನಮೂದಿಸುವಂತೆ ತಾಕೀತು ಮಾಡಿದರು.

ಜೆಡಿಎಸ್ ಮುಖಂಡರಾದ ಟ್ರಾವೆಲ್ಸ್ ಮಂಜು, ಬೈರೇಗೌಡ, ವಿಜಯ್ ಕುಮಾರ್, ಪುನೀತ್, ಜಯಣ್ಣ, ಮಾರುತಿ, ಚಂದ್ರಣ್ಣ, ಶ್ರೀನಿವಾಸ್ ಮತ್ತಿತರರು ಉಪಸ್ಥಿತರಿದ್ದರು.

ವಿಧಾನಪರಿಷತ್ ಸದಸ್ಯ ಜವರಾಯಿಗೌಡ ಅವರು ಗೋಪಾಲಪ್ಪ ಬಡಾವಣೆ ಹಾಗೂ ಮಾರಣ್ಣ ಬಡಾವಣೆಯಲ್ಲಿ ನಡೆಯುತ್ತಿರುವ ಚರಂಡಿ ಕಾಮಗಾರಿ ಪರಿಶೀಲನೆ ನಡೆಸಿದರು

28ರಿಂದ ವಾರಾಂತ್ಯ ಸಮಾಲೋಚನಾ ತರಗತಿ

ಬೆಂಗಳೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ (ಕೆಎಸ್‌ಒಯು) ಬೆಂಗಳೂರು ಪ್ರಾದೇಶಿಕ ಕೇಂದ್ರ-6ರಲ್ಲಿ 2024-25ನೇ ಸಾಲಿನ ಜುಲೈ ಮತ್ತು ಜನವರಿ ಆವೃತ್ತಿಯ ಪ್ರಥಮ, ದ್ವಿತೀಯ ಮತ್ತು ತೃತೀಯ ವರ್ಷದ ಬಿ.ಎ, ಬಿ.ಕಾಂ ಶಿಕ್ಷಣ ಕ್ರಮಗಳಿಗೆ ನೋಂದಣಿಯಾಗಿರುವ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ಜೂನ್ 28 ರಿಂದ ಆಗಸ್ಟ್ 3ರವರೆಗೆ ಸಮಾಲೋಚನಾ ತರಗತಿ ನಡೆಯಲಿದೆ.

ಮಾಹಿತಿಗಾಗಿ ಪ್ರಾದೇಶಿಕ ನಿರ್ದೇಶಕರು, ಬೆಂಗಳೂರು ಪ್ರಾದೇಶಿಕ ಕೇಂದ್ರ-06, ನಂ.4 & 5, 1ನೇ ಮಹಡಿ, ಶ್ರೀಲಕ್ಷ್ಮಿ ಕಾಲೇಜ್ ಆಫ್ ಸೈನ್ಸ್ ಮತ್ತು ಮ್ಯಾನೇಜ್‌ಮೆಂಟ್ ಆವರಣ, ಶ್ರೀಗಂಧಕಾವಲ್, ಮಾಗಡಿ ಮುಖ್ಯ ರಸ್ತೆ, ಸುಂಕದಕಟ್ಟೆ, ಬೆಂಗಳೂರು-560091 ಇಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 8453458238, 9844556968, 8884772421, ಇ-ಮೇಲ್: ksoubengalurure06@gmail.com

ಪ್ರತ್ಯೇಕ ಅಪಘಾತ: ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ದಾಬಸ್‌ಪೇಟೆ ವ್ಯಾಪ್ತಿ ಯಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ಅಪಘಾತಗಳಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ವಿನಾಯಕ ಕ್ರಷರ್‌ಗೆ ಸೇರಿದ ಟಿಪ್ಪರ್‌ವೊಂದು ಟ್ರ್ಯಾಕ್ಟರ್‌ಗೆ ಡಿಕ್ಕಿಯಾಗಿ ಚಾಲಕ, ಹಾಲೇನಹಳ್ಳಿಯ ನಿವಾಸಿ ಉಮೇಶ್ (38) ಮೃತಪಟ್ಟಿದ್ದಾರೆ. ಸೋಂಪುರ ಹೋಬಳಿ ನರಸೀಪುರ ಪಂಚಾಯಿತಿ ಮಾಕೇನಹಳ್ಳಿ ಗ್ರಾಮದಲ್ಲಿ ಸೋಮವಾರ ಅಪಘಾತ ಆಗಿದೆ.


ಉಮೇಶ್

ಉಮೇಶ್ ಅವರು ಕಲ್ಲು ತುಂಬಿಕೊಂಡು ಬರಲು ಟ್ರ್ಯಾಕ್ಟರ್ ತೆಗೆದುಕೊಂಡು ಕ್ರಷರ್‌ಗೆ ಹೋಗಿದ್ದರು. ಹಿಂದಿನಿಂದ ಬರುತ್ತಿದ್ದ ಟಿಪ್ಪರ್‌ನ ಬ್ರೇಕ್ ವಿಫಲಗೊಂಡು ಟ್ರ್ಯಾಕ್ಟರ್‌ಗೆ ಡಿಕ್ಕಿಯಾಗಿದೆ. ಟ್ರ್ಯಾಕ್ಟರ್ ಪಲ್ಟಿಯಾಗಿ ಚಾಲಕನ ಮೇಲೆ ಕಲ್ಲುಗಳು ಬಿದ್ದು ಮೃತಪಟ್ಟಿದ್ದಾರೆ. ದಾಬಸ್‌ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಿಳೆ ಸಾವು: ಟ್ರ್ಯಾಕ್ಟರ್ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿ ಬೈಕ್ ಹಿಂಬದಿ ಕುಳಿತಿದ್ದ ಮಹಿಳೆ ಮೃತಪಟ್ಟಿದ್ದಾರೆ. ಬಳ್ಳಾರಿಯ ಸಂಡೂರು ತಾಲ್ಲೂಕಿನ ಸುಶೀಲನಗರದ ನಿವಾಸಿ ಗಂಗಾಬಾಯಿ (46) ಮೃತಪಟ್ಟವರು. ಬೈಕ್ ಸವಾರ ನಾಗೇಶ್ ನಾಯ್ಕ್ (21) ಗಾಯಗೊಂಡಿದ್ದಾರೆ. ಸೋಂಪುರ ಹೋಬಳಿಯ ಪೆಮ್ಮನಹಳ್ಳಿ ಗ್ರಾಮದಲ್ಲಿ ವಾಸವಿದ್ದರು.

ಸೋಮವಾರ ಬೆಳಿಗ್ಗೆ 8.45ರ ಸುಮಾರಿಗೆ ತಾಯಿ, ಮಗ ಬರುತ್ತಿದ್ದ ಬೈಕ್‌ಗೆ ಟ್ರ್ಯಾಕ್ಟರ್ ಡಿಕ್ಕಿ ಹೊಡೆದಿದ್ದರಿಂದ ಗಂಗಾಬಾಯಿ ಮೃತಪಟ್ಟಿದ್ದಾರೆ.

ಘಟನಾ ಸ್ಥಳಕ್ಕೆ ಬೆಂಗಳೂರು ಗ್ರಾಮಾಂತರ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವೆಂಕಟೇಶ್ ಪ್ರಸನ್ನ, ಡಿವೈಎಸ್ಪಿ ಜಗದೀಶ್, ಇನ್‌ಸ್ಪೆಕ್ಟರ್ ರಾಜು ಭೇಟಿ ನೀಡಿ ಪರಿಶೀಲನೆ ನಡೆಸಿದರು. ದಾಬಸ್‌ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನದಿಮೂಲ ಮಾಲಿನ್ಯ ನಿಯಂತ್ರಣಕ್ಕೆ ಕ್ರಮ

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರ ಸ್ವಾಮಿ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮ, ಪಟ್ಟಣ, ನಗರಗಳಿಗೆ ಕುಡಿಯುವ ನೀರು ಪೂರೈಸುತ್ತಿರುವ ನದಿಮೂಲಗಳಲ್ಲಿ ಮಾಲಿನ್ಯ ನಿಯಂತ್ರಣಕ್ಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ.ನರೇಂದ್ರಸ್ವಾಮಿ ತಿಳಿಸಿದರು.

'ಪ್ರಜಾವಾಣಿ' ಜತೆ ಸೋಮವಾರ ಮಾತನಾಡಿದ ಅವರು, ಕಾವೇರಿ, ತುಂಗಭದ್ರಾ ಸೇರಿದಂತೆ ಹಲವು ನದಿಗಳಿಂದ ಕುಡಿಯುವ ನೀರನ್ನು ನಗರಗಳಿಗೆ ಒದಗಿಸಲಾಗುತ್ತಿದೆ. ನದಿಮೂಲಗಳಲ್ಲಿ ಮಾಲಿನ್ಯ ಹೆಚ್ಚಳ ವಾಗುತ್ತಿದೆ ಎಂಬ ಬಗ್ಗೆ ಹಲವು ವರದಿಗಳು ಬಂದಿವೆ. ಹೀಗಾಗಿ, ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಜಲ ಮೂಲಗಳಲ್ಲಿನ ಮಾಲಿನ್ಯ ತಡೆಯಲು ಆದ್ಯತೆ ನೀಡಲಾಗುತ್ತದೆ ಎಂದು ಹೇಳಿದರು.

ರಾಜ್ಯದ ಎಲ್ಲ ಭಾಗಗಳಲ್ಲೂ ಅಂತರ್ಜಲ, ನದಿಗಳು ಮಲಿನಗೊಳ್ಳುತ್ತಿವೆ. ಶೇ 50ರಷ್ಟು ಜನರಿಗೆ ಕುಡಿಯು ನೀರು ಪೂರೈಸುವ ಕಾವೇರಿ ನದಿಯಲ್ಲಿ ಮಾಲಿನ್ಯ ಹೆಚ್ಚಾಗಿದೆ. ಇದನ್ನು ತಡೆಯಲು ಕಠಿಣ ಕ್ರಮ ಜಾರಿಗೊಳಿಸಲಾಗುತ್ತದೆ ಎಂದು ಹೇಳಿದರು.

ಮಾಲಿನ್ಯ ನಿಯಂತ್ರಣ ಮಂಡಳಿ ಸ್ಥಾಪನೆಯಾಗಿ ಸೆಪ್ಟೆಂಬರ್ 1ಕ್ಕೆ 50 ವರ್ಷ ಪೂರ್ಣಗೊಳ್ಳಲಿದೆ. ಇದರ ಅಂಗವಾಗಿ, ವರ್ಷಪೂರ್ತಿ ಪರಿಸರದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಪ್ರಾಥಮಿಕ ಶಿಕ್ಷಣದಲ್ಲಿ ಪರಿಸರದ ಪಠ್ಯ ಸೇರಿಸಬೇಕು ಎಂದು ರಾಜ್ಯ, ಕೇಂದ್ರ ಸರ್ಕಾರಕ್ಕೂ ಪ್ರಸ್ತಾವ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಮಂಡಳಿಯಲ್ಲಿ 750ಕ್ಕೂ ಹೆಚ್ಚು ಹುದ್ದೆಗಳಲ್ಲಿ 230 ಹುದ್ದೆಗಳಲ್ಲಿ ಮಾತ್ರ ಸಿಬ್ಬಂದಿ ಇದ್ದಾರೆ. ಖಾಲಿ ಇರುವ ಹುದ್ದೆಗಳ ಭರ್ತಿಗೆ ಸರ್ಕಾರ ಅನುಮೋದನೆ ನೀಡಿದ್ದು, ಮೀಸಲಾತಿ ಅಂತಿಮಗೊಂಡ ಕೂಡಲೇ ನೇಮಕಾತಿ ಮಾಡಿಕೊಳ್ಳಲಾಗುತ್ತದೆ ಎಂದರು.

ಮುಖ್ಯಾಂಶಗಳು

- ರಾಜ್ಯ ಪರಿಸರ ಪ್ರಶಸ್ತಿ ಪ್ರದಾನ ಇಂದು
- ಪ್ರಾಥಮಿಕ ಶಿಕ್ಷಣದಲ್ಲಿ ಪರಿಸರ ಪಠ್ಯಕ್ಕೆ ಪ್ರಸ್ತಾವ

ಪ್ಲಾಸ್ಟಿಕ್ ಮುಕ್ತ ರಾಜ್ಯವನ್ನಾಗಿಸಲು ಕಠಿಣ ಕ್ರಮ ಜಾರಿಗೊಳಿಸಲಾಗುತ್ತದೆ. ಪರಿಸರ, ನೀರು, ವಾಯು ಮಾಲಿನ್ಯವನ್ನೂ ನಿಯಂತ್ರಣ ಮಾಡಲಾಗುತ್ತದೆ

ಪಿ.ಎಂ. ನರೇಂದ್ರಸ್ವಾಮಿ, ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ

ಇಂದು ಪರಿಸರ ದಿನಾಚರಣೆ

ಮಾಲಿನ್ಯ ಮಂಡಳಿಯಿಂದ ಜೂನ್ 5ರಂದು ನಡೆಯಬೇಕಿದ್ದ ಪರಿಸರ ದಿನಾಚರಣೆಯನ್ನು ಜೂನ್ 17ರಂದು ಆಯೋಜಿಸಲಾಗಿದೆ. ಜೂನ್ 17ರಂದು ಬೆಳಿಗ್ಗೆ 8 ಗಂಟೆಗೆ ವಿಧಾನಸೌಧದ ಪೂರ್ವದ್ವಾರದ ಮೆಟ್ಟಿಲುಗಳ ಮುಂಭಾಗದಲ್ಲಿ 'ಪರಿಸರ ನಡಿಗೆ' ಏರ್ಪಡಿಸಲಾಗಿದೆ. ಸ್ಕೌಟ್ ಆ್ಯಂಡ್ ಗೈಡ್ಸ್ ಮತ್ತು ಎನ್‌ಸಿಸಿ ಕೆಡೆಟ್ ಸೇರಿದಂತೆ 3,000 ಜನರು ಭಾಗವಹಿಸುತ್ತಾರೆ. ಅರಮನೆ ಮೈದಾನದಲ್ಲಿ 11 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಕರ್ನಾಟಕ ರಾಜ್ಯ ಪರಿಸರ ಪ್ರಶಸ್ತಿ' ಪ್ರದಾನ ಮಾಡಲಿದ್ದಾರೆ ಎಂದು ನರೇಂದ್ರ ಸ್ವಾಮಿ ತಿಳಿಸಿದರು.

ಎಸ್‌ಟಿಪಿಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಕಡ್ಡಾಯ

ರಾಜ್ಯದಲ್ಲಿರುವ ಎಲ್ಲ ತ್ಯಾಜ್ಯ ನೀರು ಸಂಸ್ಕರಣೆ ಘಟಕಗಳಲ್ಲಿ (ಎಸ್‌ಟಿಪಿ) ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆಯನ್ನು ಕಡ್ಡಾಯಗೊಳಿಸಲಾಗುತ್ತದೆ. ಎಸ್‌ಟಿಪಿಯಿಂದ ಸಂಸ್ಕರಣೆಯಾಗಿ ಹೊರಹೊಮ್ಮುವ ನೀರಿನ ಬಗ್ಗೆಯೂ ಸಂಶಯಗಳಿವೆ. ಕೆಲವು ಎಸ್‌ಟಿಪಿಗಳು ಕಾರ್ಯ ನಿರ್ವಹಿಸುತ್ತಿಲ್ಲ ಎಂಬ ಆರೋಪವೂ ಇದೆ. ಹೀಗಾಗಿ, ಎಸ್‌ಟಿಪಿಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲಾಗುತ್ತದೆ. ಸೆನ್ಸಾರ್‌ಗಳನ್ನು ಅಳವಡಿಸಿ, ಸಂಸ್ಕರಿತ ನೀರಿನ ಗುಣಮಟ್ಟವನ್ನೂ ಅಳೆಯಲಾಗುವುದು. ಸಿ.ಸಿ.ಟಿ.ವಿ ಕ್ಯಾಮೆರಾಗಳ ನೇರಪ್ರಸಾರ ಹಾಗೂ ಸೆನ್ಸಾರ್‌ಗಳ ಮಾಹಿತಿ ಆನ್‌ಲೈನ್ ಮೂಲಕ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ರವಾನೆಯಾಗುವಂತೆ ಮಾಡಲಾಗುವುದು ಎಂದು ಪಿ.ಎಂ.ನರೇಂದ್ರ ಸ್ವಾಮಿ ಹೇಳಿದರು.

ಬೆಂಗಳೂರಿನ ಕೆರೆಗಳಿಗೆ ನೀರು ಹರಿಯುವ ಮುನ್ನ ಸಂಸ್ಕರಣೆಯಾಗಬೇಕು. ಇದಕ್ಕಾಗಿ ಎಲ್ಲೆಡೆ ಎಸ್‌ಟಿಪಿ ಸ್ಥಾಪಿಸಲು ಯೋಜನೆ ರೂಪಿಸಲಾಗಿದೆ ಎಂದರು.

'ಸೌದೆ ಒಲೆಗೆ ಮರಳುತ್ತಿರುವ ಜನ'

ಪ್ರಜಾವಾಣಿ ವಾರ್ತೆ

ದಾವಣಗೆರೆ: ಇಂಧನ, ಚಿನ್ನ-ಬೆಳ್ಳಿಯೂ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಸರ್ಕಾರದ ನೀತಿಗಳೇ ಕಾರಣ. ಅಡುಗೆ ಅನಿಲದ ಬೆಲೆ ಏರಿಕೆಯಿಂದ ಗ್ರಾಮೀಣ ಪ್ರದೇಶದ ಜನರು ಮತ್ತೆ ಸೌದೆ ಒಲೆಗೆ ಮರಳುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯಿತಿ ವತಿಯಿಂದ ಸೋಮವಾರ ಇಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ₹1,356 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಉದ್ಘಾಟಿಸಿ, ಫಲಾನುಭವಿಗಳಿಗೆ ಸವಲತ್ತು ವಿತರಿಸಿ ಅವರು ಮಾತನಾಡಿದರು.

'ನರೇಂದ್ರ ಮೋದಿ 2014ರಲ್ಲಿ ಪ್ರಧಾನಿಯಾದಾಗ 10 ಗ್ರಾಂ ಚಿನ್ನದ ಬೆಲೆ ₹28,000 ಇತ್ತು. ಈಗ ಇದು ₹1 ಲಕ್ಷಕ್ಕೆ ಏರಿಕೆಯಾಗಿದೆ. ₹43,000 ಇದ್ದ 1 ಕೆ.ಜಿ. ಬೆಳ್ಳಿಯ ಬೆಲೆ ₹95 ಸಾವಿರಕ್ಕೆ ಹೆಚ್ಚಾಗಿದೆ. ₹416 ಇದ್ದ ಅಡುಗೆ ಅನಿಲದ ಸಿಲಿಂಡರ್ ಬೆಲೆ ₹875ಕ್ಕೆ ಏರಿಕೆಯಾಗಿದೆ. ಸಬ್ಸಿಡಿ ರದ್ದುಪಡಿಸಿದ್ದರಿಂದ ಜನರು ಸೌದೆ ಒಲೆಯತ್ತ ಹೊರಳಿದ್ದಾರೆ' ಎಂದರು.

'ಕರ್ನಾಟಕಕ್ಕೆ ₹11,495 ಕೋಟಿ ನೀಡುವಂತೆ 15ನೇ ಹಣಕಾಸು ಆಯೋಗ ಶಿಫಾರಸು ಮಾಡಿದೆ. ಆದರೆ, ಕೇಂದ್ರ ಸರ್ಕಾರ ಈವರೆಗೆ ಬಿಡಿಗಾಸನ್ನೂ ನೀಡಿಲ್ಲ. ಭದ್ರಾ ಮೇಲ್ದಂಡೆ ಯೋಜನೆಗೆ ಘೋಷಣೆ ಮಾಡಿದ್ದ ₹5,300 ಕೋಟಿಯಲ್ಲಿ ಒಂದು ರೂಪಾಯಿಯನ್ನೂ ಕೊಟ್ಟಿಲ್ಲ. ನಾನು ಯಾರ ವಿರುದ್ಧವೂ ಸುಳ್ಳು ಆರೋಪ ಮಾಡುವುದಿಲ್ಲ. ನಾನು ಹೇಳಿದ್ದು ಸುಳ್ಳಾದರೆ ಸಾರ್ವಜನಿಕ ಬದುಕಿನಲ್ಲಿ ಮುಂದುವರಿಯುವುದಿಲ್ಲ' ಎಂದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗೃಹ ಸಚಿವ ಜಿ. ಪರಮೇಶ್ವರ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ.ಸುಧಾಕರ್, ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಇದ್ದರು.

ದಾವಣಗೆರೆಯಲ್ಲಿ ಸೋಮವಾರ ಆಯೋಜಿಸಿದ್ದ ಜಿಲ್ಲಾ ಪ್ರಗತಿಯ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೆರವೇರಿಸಿದರು –ಪ್ರಜಾವಾಣಿ ಚಿತ್ರ

ಪ್ರಧಾನಿ ನರೇಂದ್ರ ಮೋದಿ ಅವರು 56 ಇಂಚಿನ ಎದೆ ಹೊಂದಿರುವುದಾಗಿ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. 'ಇಂತಹ ಎದೆಯಲ್ಲಿ ಮನುಷ್ಯತ್ವ, ಕರುಣೆಯೂ ಇರಬೇಕು

ಸಿದ್ದರಾಮಯ್ಯ, ಮುಖ್ಯಮಂತ್ರಿ

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಚಿಕ್ಕೋಡಿ

ನಂ.ಲೋ.ಇ/ಚಿ.ವಿ/ಸ.ಇಂ–1/ಟೆಂಡರ/2025–26/1384 ದಿನಾಂಕ: 13.06.2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2024–25ನೇ ಸಾಲಿನ ಲೆಕ್ಕ ಶೀರ್ಷಿಕೆ 5054–ಜಿಲ್ಲಾ ಮುಖ್ಯ ರಸ್ತೆ, ಸುಧಾರಣೆ ಅಡಿ 2 ಕಾಮಗಾರಿಗಳು ಇದ್ದು, ಗುತ್ತಿಗೆಗೆ ಇಟ್ಟ ಮೊತ್ತ ಕ್ರಮವಾಗಿ ರೂ. 160.00 ಲಕ್ಷ ಹಾಗೂ ಮೊತ್ತ ರೂ. 120.00 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1. ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ : 26.06.2025 ರಂದು (11:00 ಗಂಟೆಗೆ)
2. ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ: 27.06.2025 (ಸಾಯಂಕಾಲ 5.30 ಗಂಟೆಯವರೆಗೆ)
3. ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 01.07.2025 (ಸಾಯಂಕಾಲ 5.00ಗಂಟೆಗೆ)
4. ತಾಂತ್ರಿಕ ಬಿಡ್‌ನ್ನು ತೆರೆಯುವ (Two Cover System) ದಿನಾಂಕ: 03.07.2025 (ಸಾಯಂಕಾಲ 4.30 ಗಂಟೆಗೆ)
5. ಹಣಕಾಸು ಬಿಡ್ ನ್ನು ತೆರೆಯುವ (Two Cover System) ದಿನಾಂಕ ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ
6. ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆ ಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು
DIPO/RO.NO 490/2025-26 ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ,
(ದಾಸರಹಳ್ಳಿ–ಕೆರೆಗಳು), 3ನೇ ಮಹಡಿ, ಅನೆಕ್ಸ್ ಕಟ್ಟಡ–3,
ಎನ್.ಆರ್. ಚೌಕ, ಬೆಂಗಳೂರು– 02.

ಸಂಖ್ಯೆ: ಕಾಪಾಅ(ದಾವ–ಕೆರೆಗಳು)ಟೆಂಡರ್–01/2025–26 ದಿನಾಂಕ: 16.06.2025

ಅಲ್ಪಾವಧಿ ಟೆಂಡರ್‌ಗೆ ಆಹ್ವಾನ
(ದ್ವಿ ಲಕೋಟೆ ಪದ್ಧತಿ) (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
website: https://kppp.karnataka.gov.in

ಕಾರ್ಯಪಾಲಕ ಅಭಿಯಂತರರು, (ದಾಸರಹಳ್ಳಿ ಕೆರೆಗಳು) ಬಿಬಿಎಂಪಿ, ಬೆಂಗಳೂರು ರವರು ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ರೈಲ್ವೇ/ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ನೋಂದಣಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಕೆಳಗೆ ತಿಳಿಸಲಾದ ಕಾಮಗಾರಿಗಳಿಗಾಗಿ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1.	ಶಿವಪುರ ಸರೋವರಕ್ಕೆ ಮಾರ್ಗ ಸುಧಾರಣೆ ಮತ್ತು ಜೌಗು ಪ್ರದೇಶದ ಏರಿ ನಿರ್ಮಾಣ. ಅಂದಾಜು ಮೊತ್ತ: (ರೂ. ಲಕ್ಷಗಳಲ್ಲಿ) 125.25, ಇಎಂಡಿ. (ರೂ.ಲಕ್ಷಗಳಲ್ಲಿ) 1.90.
2.	ಅಬ್ಬಿಗೆರೆ ಕೆರೆಯಲ್ಲಿ ಹೊರಮಾರ್ಗ, ಪಾದಚಾರಿ ಸೇತುವೆ ಮತ್ತು ಪ್ರವಾಹ ತಗ್ಗಿಸುವ ದ್ವಾರಗಳ ನಿರ್ಮಾಣ, ಪಾದಚಾರಿ ಮಾರ್ಗದ ಸುಧಾರಣೆ ಮತ್ತು ಸಂಬಂಧಿತ ಕೆಲಸಗಳು. ಅಂದಾಜು ಮೊತ್ತ: (ರೂ. ಲಕ್ಷಗಳಲ್ಲಿ) 167.00, ಇಎಂಡಿ. (ರೂ.ಲಕ್ಷಗಳಲ್ಲಿ) 2.51.
3.	ನೆಲಗದರೇನಹಳ್ಳಿ ಕೆರೆಯಲ್ಲಿ ಪಾದಚಾರಿ ಮಾರ್ಗ ಸುಧಾರಣೆ ಮತ್ತು ಬೇಲಿ ದುರಸ್ತಿ. ಅಂದಾಜು ಮೊತ್ತ: (ರೂ. ಲಕ್ಷಗಳಲ್ಲಿ) 167.00, ಇಎಂಡಿ. (ರೂ.ಲಕ್ಷಗಳಲ್ಲಿ) 2.51.
4.	ದೊಡ್ಡಬಿದರಕಲ್ಲು ಕೆರೆಯಲ್ಲಿ ಪಾದಚಾರಿ ಮಾರ್ಗ ಸುಧಾರಣೆ ಮತ್ತು ಕಲ್ವರ್ಟ್‌ಗಳು ಮತ್ತು ಕೊಳಚೆ ನೀರು ತಿರುವು ಚರಂಡಿ ನಿರ್ಮಾಣ. ಅಂದಾಜು ಮೊತ್ತ: (ರೂ. ಲಕ್ಷಗಳಲ್ಲಿ) 250.00, ಇಎಂಡಿ. (ರೂ.ಲಕ್ಷಗಳಲ್ಲಿ) 3.75.

ಟೆಂಡರ್‌ನ ಕಾರ್ಯಸೂಚಿ: (1) ಟೆಂಡರ್ ದಾಖಲೆಗಳ ಲಭ್ಯತೆ ದಿನಾಂಕ: **18.06.2025 ಸಂಜೆ 4:00 ಗಂಟೆಯ ನಂತರ** (2) ಪೂರ್ವ ಬಿಡ್ ಸಭೆಯ **ದಿನಾಂಕ: 27.06.2025ರ ಸಂಜೆ 4:00 ಗಂಟೆಗೆ** (3) ಟೆಂಡರ್‌ಗಳನ್ನು ಸ್ವೀಕರಿಸುವ **ಕೊನೆಯ ದಿನಾಂಕ: 02.07.2025ರ ಸಂಜೆ 4:00 ಗಂಟೆಯವರೆಗೆ** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 03.07.2025ರ ಸಂಜೆ 4:30 ಗಂಟೆಗೆ.** (5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ತಾಂತ್ರಿಕ ಬಿಡ್‌ಗಳ ಅನುಮೋದನೆಯ (ನಂತರ ತಿಳಿಸಲಾಗುವುದು).

ಸಹಿ/– ಕಾರ್ಯಪಾಲಕ ಅಭಿಯಂತರರು, (ದಾಸರಹಳ್ಳಿ–ಕೆರೆಗಳು) ಬಿಬಿಎಂಪಿ.

ಸಚಿವ ಚಲುವರಾಯಸ್ವಾಮಿ ಹೇಳಿಕೆ; ತಜ್ಞರು, ಅಧಿಕಾರಿಗಳೊಂದಿಗೆ ಚರ್ಚೆ

'ರಾಸಾಯನಿಕ ಮುಕ್ತ ಕೃಷಿಯತ್ತ ಚಿತ್ತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಕ್ಷಣದಲ್ಲಿ ಸಂಪೂರ್ಣ ಕೃಷಿ ಪದ್ಧತಿ ಬದಲಾಯಿಸುವುದು ಕಷ್ಟ. ಪ್ರತಿ ಗ್ರಾಮದಲ್ಲೂ ಪ್ರಾಯೋಗಿಕವಾಗಿ ಕೃಷಿ ಜಮೀನನ್ನು ಭಾಗಶಃ ರಾಸಾಯನಿಕ ಮುಕ್ತವಾಗಿ ಪರಿವರ್ತಿಸಲು ಜಾಗೃತಿ ಮೂಡಿಸುವ ಮತ್ತು ಮಾರ್ಗದರ್ಶನ ನೀಡಲು ಕ್ರಮ ಕೈಗೊಳ್ಳಲಾಗುವುದು' ಎಂದು ಕೃಷಿ ಸಚಿವ ಎನ್.ಚಲುವರಾಯ ಸ್ವಾಮಿ ತಿಳಿಸಿದರು.

ಸುಭಾಷ್ ಪಾಳೇಕರ್ ಕೃಷಿಯ ಸಾಧಕ- ಬಾಧಕಗಳ ಕುರಿತು ವಿಕಾಸ ಸೌಧದಲ್ಲಿ ತಜ್ಞರು, ಅನುಭವಿಗಳು ಹಾಗೂ ಅಧಿಕಾರಿಗಳೊಂದಿಗೆ ಅವರು ಚರ್ಚೆ ನಡೆಸಿದರು.

'ಭೂಮಿಯ ಫಲವತ್ತತೆ ಮತ್ತು ಹವಾಮಾನ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ. ರಾಸಾಯನಿಕ ಮುಕ್ತ ಕೃಷಿಯ ಕಡೆಗೆ ಗಮನ ಹರಿಸಬೇಕಾಗಿದೆ. ರಾಜ್ಯ ಸರ್ಕಾರ ನೈಸರ್ಗಿಕ, ಸಾವಯವ ಕೃಷಿಯ ಜಾಗೃತಿ ಹಾಗೂ ಪ್ರೋತ್ಸಾಹಕ ಕ್ರಮಗಳನ್ನು ಕೈಗೊಳ್ಳಲಿದೆ. ನಾಲ್ಕೂ ಕೃಷಿ ವಿಶ್ವ ವಿದ್ಯಾಲಯಗಳಲ್ಲಿ ಈ ಸಂಬಂಧ ಸಂಶೋಧನೆಗಳನ್ನು ಹೆಚ್ಚಿಸುವ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕು' ಎಂದು ಸೂಚಿಸಿದರು.

'ಪ್ರತಿ ಜಿಲ್ಲೆಯಲ್ಲೂ ಸಾವಯವ ಕೃಷಿ ವಿಸ್ತರಣೆ ಜೊತೆಗೆ ಸುಭಾಷ್ ಪಾಳೇಕರ್ ನೈಸರ್ಗಿಕ ಕೃಷಿ ಪದ್ಧತಿ ಅಳವಡಿಸುವ ಬಗ್ಗೆಯೂ ಪ್ರಾತ್ಯಕ್ಷಿಕೆ ಹಾಗೂ ಕಾರ್ಯಾಗಾರಗಳನ್ನು ಏರ್ಪಡಿಸಲು ಇಲಾಖಾಧಿಕಾರಿಗಳಿಗೆ ಮತ್ತು ವಿಶ್ವ ವಿದ್ಯಾಲಯಗಳಿಗೆ ನಿರ್ದೇಶನ ನೀಡಲಾಗುವುದು' ಎಂದು ಹೇಳಿದರು.

ಮಾಜಿ ಶಾಸಕ ಡಿ.ಆರ್.ಪಾಟೀಲ, ಕೃಷಿ ಇಲಾಖೆ ಕಾರ್ಯದರ್ಶಿ ಡಾ.ರವಿಶಂಕರ್, ಆಯುಕ್ತ ವೈ.ಎಸ್. ಪಾಟೀಲ, ನಿರ್ದೇಶಕ ಡಾ.ಜಿ.ಟಿ.ಪುತ್ರ, ವಿವಿಧ ಕೃಷಿ ವಿಶ್ವವಿದ್ಯಾಲಯಗಳ ಉಪ ಕುಲಪತಿಗಳು, ಅಧಿಕಾರಿಗಳು, ಕೃಷಿ ತಜ್ಞರು ಸಭೆಯಲ್ಲಿ ಹಾಜರಿದ್ದರು.

ಮಾಜಿ ಶಾಸಕ ಡಿ.ಆರ್.ಪಾಟೀಲ ಸಭೆಯಲ್ಲಿ ಮಾತನಾಡಿದರು. ನೈಸರ್ಗಿಕ ಕೃಷಿಕ ಸುಭಾಷ್ ಪಾಳೇಕರ್, ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ಇಲಾಖೆ ಕಾರ್ಯದರ್ಶಿ ರವಿಶಂಕರ್, ಆಯುಕ್ತ ವೈ.ಎಸ್.ಪಾಟೀಲ ಪಾಲ್ಗೊಂಡಿದ್ದರು

ಮುಖ್ಯಾಂಶಗಳು

- ಭೂಮಿಯ ಫಲವತ್ತತೆ, ಹವಾಮಾನ ಸಂರಕ್ಷಣೆ ಎಲ್ಲರ ಹೊಣೆ
- ನೈಸರ್ಗಿಕ, ಸಾವಯವ ಕೃಷಿಯ ಜಾಗೃತಿಗೆ ಒತ್ತು
- ಪ್ರಾತ್ಯಕ್ಷಿಕೆ, ಕಾರ್ಯಾಗಾರ ಏರ್ಪಡಿಸಲು ಸೂಚನೆ

'ತಿನ್ನುವ ಆಹಾರವೂ ವಿಷಕಾರಿ'

ಸಭೆಯಲ್ಲಿ ಭಾಗವಹಿಸಿದ್ದ ನೈಸರ್ಗಿಕ ಕೃಷಿಕ ಡಾ.ಸುಭಾಷ್ ಪಾಳೇಕರ್ ಮಾತನಾಡಿ, 'ಕೃಷಿಯಲ್ಲಿ ಅತಿಯಾದ ರಾಸಾಯನಿಕ, ಕೀಟನಾಶಕಗಳ ಬಳಕೆಯಿಂದ ಭೂಮಿಯ ಫಲವತ್ತತೆ ನಾಶವಾಗುತ್ತಿದೆ. ತಿನ್ನುವ ಆಹಾರ ಕೂಡ ವಿಷಕಾರಿಯಾಗುತ್ತಿದೆ. ಜೀವಾಮೃತಗಳ ಬಳಕೆಯ ಮೂಲಕ ಅತ್ಯಂತ ಕಡಿಮೆ ವೆಚ್ಚದಲ್ಲಿ ಆರೋಗ್ಯಪೂರ್ಣ ಆಹಾರ ಬೆಳೆಯುವ ಪದ್ಧತಿ ಅನುಸರಿಸುವುದು ಅತ್ಯಗತ್ಯ' ಎಂದು ಪ್ರತಿಪಾದಿಸಿದರು.

'ದೇಶದಲ್ಲಿ ಸ್ವಾವಲಂಬಿ ಕೃಷಿ ಮಾರ್ಗವಿದೆ. ಆದರೆ, ಅತಿಯಾದ ರಸಗೊಬ್ಬರ, ಕೀಟನಾಶಕಗಳ ಬಳಕೆಯಿಂದ ಭೂಮಿ ಬರಡಾಗುತ್ತಿದೆ. ಮಣ್ಣಿನಲ್ಲಿ ಇಂಗಾಲದ ಅಂಶ ಕಡಿಮೆಯಾಗಿ ಲವಣದ ಅಂಶ ಹೆಚ್ಚಾಗುತ್ತಿದೆ. ಇದಕ್ಕೆ ತುರ್ತು ಕಡಿವಾಣ ಹಾಕದಿದ್ದರೆ ಮಾನವ ಕುಲಕ್ಕೆ ಅಪಾಯ ತಪ್ಪಿದ್ದಲ್ಲ' ಎಂದು ಹೇಳಿದರು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಅಲ್ಪಸಂಖ್ಯಾತರ ನಿರ್ದೇಶನಾಲಯ,
ನಂ.16ಸಿ, ಮೌಲಾನಾ ಅಬುಲ್ ಕಲಾಂ ಅಜಾದ್ ಭವನ,
ಮಿಲ್ಲರ್ ಟ್ಯಾಂಕ್‌ಬಂಡ್ ರಸ್ತೆ, ವಸಂತನಗರ, ಬೆಂಗಳೂರು–560052.
Website: https://dom.karnataka.gov.in

ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ

ಕರ್ನಾಟಕ ರಾಜ್ಯದ ಅರ್ಹ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ವಿದೇಶಿ ವಿದ್ಯಾರ್ಥಿವೇತನ ಯೋಜನೆಯಡಿ ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಕೆ

2025–26ನೇ ಶೈಕ್ಷಣಿಕ ವರ್ಷಕ್ಕೆ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕರ್ನಾಟಕ ರಾಜ್ಯದ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಮಯಾವಕಾಶ

ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭ ದಿನಾಂಕ: **13.06.2025.**
ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **30.09.2025.**

ಅರ್ಹತೆಗಳು

- ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
- ವಿದ್ಯಾರ್ಥಿಗಳು ಅಲ್ಪಸಂಖ್ಯಾತ ಸಮುದಾಯದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ ಸೇರಿದವರಾಗಿರಬೇಕು.
- ಕೋರ್ಸ್ – ಪೂರ್ಣಕಾಲಿಕ ಸ್ನಾತಕೋತ್ತರ.
- ವಿದ್ಯಾರ್ಥಿಯ ಗರಿಷ್ಠ ವಯೋಮಿತಿ 38 ವರ್ಷ ಮೀರಿರಬಾರದು.
- ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ಆದಾಯವು ರೂ.15.00 ಲಕ್ಷಗಳು ಮೀರಿರಬಾರದು.
- ವಿದ್ಯಾರ್ಥಿಯು ವ್ಯಾಸಂಗ ಮಾಡುತ್ತಿರುವ ವಿದೇಶಿ ವಿಶ್ವವಿದ್ಯಾಲಯವು QS Top 500 University Ranking ಪಟ್ಟಿಯಲ್ಲಿ ಸ್ಥಾನ ಪಡೆದಿರಬೇಕು.
- ವಿದ್ಯಾರ್ಥಿವೇತನ ಪಡೆಯಲು NPCI Active Status & ಬ್ಯಾಂಕ್‌ನೊಂದಿಗೆ ಆಧಾರ್ ಜೋಡಣೆ ಮಾಡಿಸುವುದು ಕಡ್ಡಾಯವಿದೆ.
- ವಿದೇಶಿ ವಿದ್ಯಾರ್ಥಿವೇತನ ಯೋಜನೆಯ ಪ್ರಕ್ರಿಯೆಯು ಸರ್ಕಾರಿ ಆದೇಶದಲ್ಲಿನ ಇತರೆ ಷರತ್ತಿಗೊಳಪಟ್ಟಿರುತ್ತದೆ. ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾಗುವ ಆದೇಶ ಹಾಗೂ ಷರತ್ತಿಗೊಳಪಟ್ಟು ಯಾವುದೇ ಅಂಶಗಳನ್ನು ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ.

ಅರ್ಜಿದಾರರಿಗೆ ಸೂಚನೆಗಳು

- ಅರ್ಜಿದಾರರು https://sevasindhu.karnataka.gov.in/Sevasindhu/DepartmentServices ಈ ಲಿಂಕ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.
- ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ 1 ಪ್ರತಿಯನ್ನು ಅಗತ್ಯ ದಾಖಲೆಗಳೊಂದಿಗೆ ಅಲ್ಪಸಂಖ್ಯಾತರ ನಿರ್ದೇಶನಾಲಯ, ನಂ.16ಸಿ, ಮೌಲಾನಾ ಅಬುಲ್ ಕಲಾಂ ಅಜಾದ್ ಭವನ, ಮಿಲ್ಲರ್ ಟ್ಯಾಂಕ್ ಬಂಡ್ ರಸ್ತೆ, ವಸಂತನಗರ, ಬೆಂಗಳೂರು–560 052 ಇಲ್ಲಿಗೆ ನಿಗದಿಪಡಿಸಿದ ದಿನಾಂಕದಂದು ಸಲ್ಲಿಸುವುದು. ಹಾರ್ಡ್ ಕಾಪಿಯನ್ನು ಸಲ್ಲಿಸುವ ದಿನಾಂಕವನ್ನು ಮುಂದಿನ ದಿನಗಳಲ್ಲಿ ಇ–ಮೇಲ್ ಮೂಲಕ ತಿಳಿಸಲಾಗುವುದು.
- ಆನ್‌ಲೈನ್‌ನಲ್ಲಿ ಅರ್ಜಿಯನ್ನು ಭರ್ತಿ ಮಾಡಲು ವಿವರವಾದ ಸೂಚನೆಗಳು/ವಿಧಾನಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ https://dom.karnataka.gov.in/new-page/Online%20Application/kn ವೆಬ್‌ಸೈಟ್‌ಗೆ ಭೇಟಿ ನೀಡಬಹುದಾಗಿರುತ್ತದೆ.

ದಿನಾಂಕ : 13.06.2025
ಸ್ಥಳ : ಬೆಂಗಳೂರು
ಸಹಿ/–
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು
ವಾಸಾಸಂಇ/ವಾಪ್ರ/1265/25–26

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಅಲ್ಪಸಂಖ್ಯಾತರ ನಿರ್ದೇಶನಾಲಯ,
ನಂ.16ಸಿ, ಮೌಲಾನಾ ಅಬುಲ್ ಕಲಾಂ ಅಜಾದ್ ಭವನ,
ಮಿಲ್ಲರ್ ಟ್ಯಾಂಕ್‌ಬಂಡ್ ರಸ್ತೆ, ವಸಂತನಗರ, ಬೆಂಗಳೂರು–560052.
Website: https://dom.karnataka.gov.in

ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ

2025–26ನೇ ಸಾಲಿನ IIT, IIIT, NIT, IIM, IISER, AIIMS,NLU, INI & IUSLA ಮುಂತಾದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕರ್ನಾಟಕ ರಾಜ್ಯದ ಅರ್ಹ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಂದ ಆನ್ ಲೈನ್ ಮೂಲಕ ಪ್ರೋತ್ಸಾಹಧನ/ಉತ್ತೇಜನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ

ಅರ್ಜಿ ಸಲ್ಲಿಕೆ

2025–26ನೇ ಸಾಲಿಗೆ IIT, IIIT, NIT, IIM, IISER, AIIMS, NLU, INI & IUSLA, etc., ಸರ್ಕಾರದಿಂದ ಶಾಸನಬದ್ಧ ಅನುಮತಿ ಪಡೆದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕರ್ನಾಟಕ ರಾಜ್ಯದ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗೆ ಕೋರ್ಸ್‌ನ ಪೂರ್ಣ ಅವಧಿಯಲ್ಲಿ ಒಂದು ಬಾರಿಗೆ ಪ್ರೋತ್ಸಾಹಧನ/ ಉತ್ತೇಜನವನ್ನು ನೀಡಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಮಯಾವಕಾಶ

ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭ ದಿನಾಂಕ: **13.06.2025.**
ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **30.09.2025.**

ಅರ್ಹತೆಗಳು

- ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
- ವಿದ್ಯಾರ್ಥಿಗಳು ಅಲ್ಪಸಂಖ್ಯಾತ ಸಮುದಾಯದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ ಜನಾಂಗಕ್ಕೆ ಸೇರಿದವರಾಗಿರಬೇಕು.
- ಕೋರ್ಸ್ – ಪೂರ್ಣಾವಧಿ.
- ಹಿಂದಿನ ವರ್ಷದ ಪರೀಕ್ಷೆಯಲ್ಲಿ ಅನುತ್ತೀರ್ಣರಾದ (ಬ್ಯಾಕ್ ಲಾಗ್) ವಿದ್ಯಾರ್ಥಿಗಳಿಗೆ ಈ ಪ್ರೋತ್ಸಾಹಧನ ಪಡೆಯಲು ಅವಕಾಶವಿರುವುದಿಲ್ಲ.
- ವಿದ್ಯಾರ್ಥಿಯ ಕುಟುಂಬದ ಒಟ್ಟು ವಾರ್ಷಿಕ ಆದಾಯ ರೂ.8.00 ಲಕ್ಷಗಳು ಮೀರಿರಬಾರದು.
- ಸದರಿ ಯೋಜನೆಯ ಪ್ರಯೋಜನ ಪಡೆಯಲು ವಿದ್ಯಾರ್ಥಿಗಳು ತಮ್ಮ ಬ್ಯಾಂಕ್ ಖಾತೆಗೆ ಆಧಾರ್ ಸೀಡಿಂಗ್ ಆಗಿರುವ ಬಗ್ಗೆ ಹಾಗೂ NPCI mapping Active ಆಗಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.
- ಸದರಿ ಯೋಜನೆಯ ಪ್ರಕ್ರಿಯೆಯು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾಗುವ ಸರ್ಕಾರದ ಆದೇಶಗಳು ಹಾಗೂ ಮಾರ್ಗಸೂಚಿಗಳಿಗೆ ಒಳಪಟ್ಟಿರುತ್ತದೆ.

ಅರ್ಜಿದಾರರಿಗೆ ಸೂಚನೆಗಳು

- ಅರ್ಜಿದಾರರು https://sevasindhu.karnataka.gov.in/Sevasindhu/DepartmentServices ಈ ಲಿಂಕ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

ಅರ್ಜಿ ಸಲ್ಲಿಸುವ ವಿಧಾನ ಮತ್ತು ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧಿಕೃತ ಜಾಲತಾಣ https://dom.karnataka.gov.in ಅನ್ನು ಭೇಟಿ ನೀಡಬಹುದಾಗಿರುತ್ತದೆ. ಹಾಗೂ ಹತ್ತಿರದ ಜಿಲ್ಲಾ ಮತ್ತು ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಿಗೆ ಸಂಪರ್ಕಿಸಬಹುದಾಗಿದೆ.

ದಿನಾಂಕ : 13.06.2025
ಸ್ಥಳ : ಬೆಂಗಳೂರು
ಸಹಿ/–
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು
ವಾಸಾಸಂಇ/ವಾಪ್ರ/1266/25–26

ಕರ್ನಾಟಕ ಉಚ್ಚ ನ್ಯಾಯಾಲಯ,
ಉಚ್ಚ ನ್ಯಾಯಾಲಯ ಕಟ್ಟಡಗಳು, ಬೆಂಗಳೂರು-01

ಸಂಖ್ಯೆ:ಹೆಚ್‌ಸಿಎ–II/04/2016 ದಿನಾಂಕ: 09.06.2025

ಕೊಟೇಷನ್ ಪ್ರಕಟಣೆ

ಕೆ.ಎಲ್.ಆರ್.ಸಿ ಗೆ ಸಂಬಂಧಿಸಿದ ಹಾಳಾಗಿರುವ/ಬಳಸಲಾಗದ, ಸರಿಪಡಿಸಲಾಗದ ಪುಸ್ತಕಗಳನ್ನು ವಿಲೇವಾರಿ ಮಾಡಲು ಮೊಹರು ಮಾಡಿದ ಕೊಟೇಶನ್‌ಗಳನ್ನು ಕೆಳಸಹಿದಾರರು ಆಹ್ವಾನಿಸಿದ್ದಾರೆ. ಇವುಗಳನ್ನು ಖರೀದಿಸಲು ಆಸಕ್ತಿ ಹೊಂದಿರುವ ವ್ಯಕ್ತಿಗಳು/ಸಂಸ್ಥೆಗಳು ಖರೀದಿಗೆ ತಮ್ಮ ಹೆಚ್ಚಿನ ದರವನ್ನು ನಮೂದಿಸಿದ ಮೊಹರು ಮಾಡಿದ ಕೊಟೇಶನ್‌ಗಳನ್ನು **"15.07.2025 ರಂದು ಸಂಜೆ 4.30ಕ್ಕೆ ಅಥವಾ ಅದಕ್ಕೂ ಮೊದಲು"** ಸಲ್ಲಿಸಬಹುದು. ಮೊಹರು ಮಾಡಿದ ಕೊಟೇಶನ್ ಒಳಗೊಂಡ ಲಕೋಟೆ ಮೇಲೆ **" ಕೆ.ಎಲ್.ಆರ್.ಸಿ ಗೆ ಸಂಬಂಧಿಸಿದ ಹಾಳಾಗಿರುವ/ಬಳಸಲಾಗದ, ಸರಿಪಡಿಸಲಾಗದ ಪುಸ್ತಕಗಳನ್ನು ವಿಲೇವಾರಿ ಮಾಡಲು"** ಎಂದು ಬರೆದಿರಬೇಕು. ಇಎಂಡಿ **ರೂ. 10,000/–** ಅನ್ನು **"ರಿಜಿಸ್ಟ್ರಾರ್ ಜನರಲ್, ಹೈ ಕೋರ್ಟ್ ಆಫ್ ಕರ್ನಾಟಕ"** ಇವರ ಪರವಾಗಿ ಬೆಂಗಳೂರಿನಲ್ಲಿ ಪಾವತಿಯಾಗುವಂತೆ ಪಡೆದ ಡಿಡಿ ರೂಪದಲ್ಲಿ ಲಗತ್ತಿಸಬೇಕು. ಈ ಕಛೇರಿಯ ಹೆಚ್.ಸಿ.ಎ–I(JD) ಶಾಖೆಯಲ್ಲಿ ರೂ.100/– ಪಾವತಿಸಿ ಪಡೆದ ರಸೀದಿಯನ್ನು ಹೆಚ್.ಸಿ.ಎ–II ಶಾಖೆಯಲ್ಲಿ ಸಲ್ಲಿಸಿ "ಟೆಂಡರ್ ದಾಖಲೆ"ಯನ್ನು ಪಡೆಯಬಹುದು. ಕೊಟೇಶನ್‌ಗಳನ್ನು ಆಹ್ವಾನಿಸುವ ಅಧಿಕಾರಿಯವರು **ದಿನಾಂಕ: 16.07.2025 ರಂದು ಮಧ್ಯಾಹ್ನ 12.00 ಗಂಟೆಗೆ** ಕೊಟೇಶನ್‌ಗಳನ್ನು ತೆರೆಯುವರು. ಹೆಚ್ಚಿನ ಮಾಹಿತಿ ಮತ್ತು ವಿವರಗಳನ್ನು ಕೆಳಗೆ ಸಹಿ ಮಾಡಿದವರ ಕಛೇರಿಯನ್ನು ಸಂಪರ್ಕಿಸುವ ಮೂಲಕ ಪಡೆಯಬಹುದು.

ಸಹಿ/–(ವಿ ನಾಗರಾಜ)
ರಿಜಿಸ್ಟ್ರಾರ್ (ಆಡಳಿತ)
ವಾಸಾಸಂಇ/ಉನಿ-ಸಿ.ಪಿ./1268/ಕೆಎಸ್‌ಎಂಸಿಎ/2025-26

'ಸಚಿವ ಸಂಪುಟ ಬದಲಾವಣೆಗೆ ಒತ್ತಡವಿದೆ'

ಪ್ರಜಾವಾಣಿ ವಾರ್ತೆ

ರಾಯಚೂರು: 'ಪಕ್ಷದ ವರಿಷ್ಠರ ಮೇಲೆ ಹಿರಿಯ ಶಾಸಕರ ಒತ್ತಡ ಇದೆ. ಪಕ್ಷದಲ್ಲಿ ಐದು ಬಾರಿ ಗೆದ್ದವರೂ ಇದ್ದಾರೆ. ನಮಗೂ ಅವಕಾಶ ಕೊಡಿ ಎಂದು ಕೆಲವರು ಕೇಳಿದ್ದಾರೆ. ಹೀಗಾಗಿ ಸಚಿವ ಸಂಪುಟದಲ್ಲಿ ಬದಲಾವಣೆ ಆದರೂ ಆಗಬಹುದು' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೇಳಿ ಹೇಳಿದರು.

ಸತೀಶ ಜಾರಕಿಹೊಳಿ

'ಸಚಿವ ಸಂಪುಟ ವಿಸ್ತರಣೆ ಮಾಡುವುದು ಬಿಡುವುದು ವರಿಷ್ಠರಿಗೆ ಬಿಟ್ಟ ವಿಚಾರ. ಸಂಪುಟ ವಿಸ್ತರಣೆ ಆಗುತ್ತೋ, ಪುನರ್ ರಚನೆ ಆಗುತ್ತೊ ಎರಡೂ ಗೊತ್ತಿಲ್ಲ. ಯಾವ ವಿಷಯವನ್ನೂ ಮೈಮೇಲೆ ಎಳೆದುಕೊಳ್ಳುವುದಿಲ್ಲ. ನಮ್ಮ ಸ್ಥಾನ ಉಳಿಸಿಕೊಳ್ಳುವುದೇ ಸಾಕಾಗಿದೆ' ಎಂದು ನಗರದಲ್ಲಿ ಮಂಗಳವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

'ನಮ್ಮಲ್ಲಿ ಮುಖ್ಯಮಂತ್ರಿ ಬದಲಾವಣೆ ಇಲ್ಲ. ಬಿಜೆಪಿ ಅಧಿಕಾರದಲ್ಲಿದ್ದಾಗ ಮೂವರು ಸಿ.ಎಂ ಬದಲಾದರು. ಮಂತ್ರಿ ಮಂಡಲವೂ ಬದಲಾಯಿತು. ನಮ್ಮಲ್ಲಿ ಏನೂ ಬದಲಾಗಿಲ್ಲ. ಎರಡು ವರ್ಷದಿಂದ ಸರ್ಕಾರ ಗಟ್ಟಿಯಾಗಿಯೇ ಇದೆ' ಎಂದು ಸ್ಪಷ್ಟಪಡಿಸಿದರು.

'ಭವಿಷ್ಯದಲ್ಲಿ ನಾಯಕರನ್ನು ಬೆಳೆಸಲು ಬಿಜೆಪಿಯವರು ಪ್ರಯೋಗ ಮಾಡುತ್ತಾರೆ. ಹೊಸದಾಗಿ ಗೆದ್ದವರನ್ನು ಸಚಿವರನ್ನಾಗಿ ಮಾಡಿದ್ದರು. ನಮ್ಮಲ್ಲೂ ಅಂತಹ ಪ್ರಯೋಗ ನಡೆಯಬೇಕು' ಎಂದರು.

'ವಿಧಾನ ಪರಿಷತ್ ಸದಸ್ಯರನ್ನು ಸಚಿವರನ್ನಾಗಿ ಮಾಡುವ ವಿಷಯ ಕುರಿತು ನಾನು ಮಾತನಾಡುವುದಿಲ್ಲ. ದೆಹಲಿಗೆ ಹೋದಾಗಲೂ ನಾನು ನನ್ನ ಇಲಾಖೆಗೆ ಸಂಬಂಧಿಸಿದ ವಿಷಯವನ್ನು ಮಾತ್ರ ಮಾತನಾಡಿರುವೆ' ಎಂದು ತಿಳಿಸಿದರು.

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ ಕಲಬುರಗಿ
(ಜಿಲ್ಲಾ ನಗರಾಭಿವೃದ್ಧಿ ಕೋಶ)
ದೂರವಾಣಿ ಸಂಖ್ಯೆ: 08472 – 278604, ಇಮೇಲ್ ವಿಳಾಸ: ka.kalaburagi.dudc@gmail.com

ಸಂ:ಜಿನಕೋ/ಅಮೃತ ನಗರೋತ್ಥಾನ(ಮುನಿಸಿಪಾಲಿಟಿ)–4/ಶೇ.5%/87/2024–25 ದಿ: 16.06.2025

:: ಕಾಲ್–2 ಟೆಂಡರ್ ಅಧಿಸೂಚನೆ ::

ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ಕಲಬುರಗಿ ಜಿಲ್ಲೆ, ಕಲಬುರಗಿರವರು ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ–4)ಯ ಶೇಕಡಾ 5%ರ ಪ್ರೋತ್ಸಾಹಧನದಡಿ ತೆಗೆದುಕೊಂಡ ಈ ಕೆಳಕಂಡ ವಿವಿಧ ಕಾಮಗಾರಿಗಳ ಸಮರ್ಪಕ ಅನುಷ್ಠಾನಕ್ಕಾಗಿ ಕೆ.ಟಿ.ಪಿ.ಪಿ. ಕಾಯ್ದೆ 1999 ನಿಯಮ 2000ರನ್ವಯ ಕೆ.ಪಿ.ಪಿ ಪೋರ್ಟಲ್ ಮುಖಾಂತರ ಕೆ.ಡಬ್ಲ್ಯೂ–4ರ ದಾಖಲಾತಿಯಂತೆ ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತಿಯುಳ್ಳ ಗುತ್ತಿಗೆದಾರರು ಭಾಗವಹಿಸಬಹುದಾಗಿದ್ದು, ವಿವರ ಈ ಕೆಳಗಿನಂತಿದೆ.

1) ಕಾಮಗಾರಿಯ ವಿವರ : ಸೇಡಂ ಪುರಸಭೆ ವ್ಯಾಪ್ತಿಯಲ್ಲಿ ವಾರ್ಡ್ ಸಂಖ್ಯೆ 13, 14, 17 ರಲ್ಲಿ ಸಿಸಿ ರಸ್ತೆ ಮತ್ತು ಆರ್‌ಸಿಸಿ ಚರಂಡಿ ನಿರ್ಮಾಣ ಮತ್ತು ವಾರ್ಡ್ ಸಂಖ್ಯೆ 16 ರ ಗಣೇಶ ನಗರದಲ್ಲಿ ಉದ್ಯಾನಕ್ಕೆ ಕಾಂಪೌಂಡ್ ಗೋಡೆ ನಿರ್ಮಾಣ, ವಾರ್ಡ್ ಸಂಖ್ಯೆ 19, 21, 22 ರಲ್ಲಿ ಸಿಸಿ ರಸ್ತೆ ಮತ್ತು ಆರ್‌ಸಿಸಿ ಚರಂಡಿ ನಿರ್ಮಾಣ ಮತ್ತು ವಾರ್ಡ್ ಸಂಖ್ಯೆ 23 ರ ಇನ್ಫೋಸಿಸ್ ಕಾಲೋನಿಯಲ್ಲಿ ಬಸವಣ್ಣ ದೇವಸ್ಥಾನ ಮತ್ತು ಉದ್ಯಾನದ ಎದುರು ಉದ್ಯಾನವನದ ಸುಧಾರಣೆ, ವಾರ್ಡ್ ಸಂಖ್ಯೆ 1, 2, 3, 4, 5 ರಲ್ಲಿ ಸಿಸಿ ರಸ್ತೆ ಮತ್ತು ಆರ್‌ಸಿಸಿ ಚರಂಡಿ ನಿರ್ಮಾಣ ಮತ್ತು ವಾರ್ಡ್ ಸಂಖ್ಯೆ 6 ರಲ್ಲಿ ಆರ್‌ಓ ಪ್ಲಾಂಟ್ ನಿರ್ಮಾಣ, ವಾರ್ಡ್ ಸಂಖ್ಯೆ 7, 8, 10, 11 ಮತ್ತು 12 ರಲ್ಲಿ ಸಿಸಿ ರಸ್ತೆ ಮತ್ತು ಆರ್‌ಸಿಸಿ ಚರಂಡಿ ನಿರ್ಮಾಣ. TENDER NO:- **DMA/2025-26/OW/WORK_INDENT38912/CALL-2,** 2) ನಿಗಧಿಪಡಿಸಿದ ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ) : **169.46 (Excluding GST),** 3) ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ) : **2,55,000/-,** 4) ಗುತ್ತೇದಾರರ ದರ್ಜೆ : Eligible PWD registered contractor, 5) ಕಾಲಾವಕಾಶ: ಕಾರ್ಯಾದೇಶ ನೀಡಿದ ನಂತರದ 12 ತಿಂಗಳು.

ಗುತ್ತಿಗೆದಾರರು ಸದರಿ ಕಾಮಗಾರಿಯ ಕುರಿತು ಸಮಗ್ರ ಮಾಹಿತಿಯನ್ನು ದಿನಾಂಕ: **16.06.2025** ರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನ ಅಧಿಕೃತ ಅಂತರ್ಜಾಲ ತಾಣ https://kppp.karnataka.gov.in/ ರ ಮುಖಾಂತರ ಪಡೆದುಕೊಂಡು ಇ.ಎಂ.ಡಿ. ಮತ್ತು ಟೆಂಡರ್‌ಗಾಗಿ ತಗಲುವ ವೆಚ್ಚವನ್ನು ಸಹ ವಿದ್ಯುನ್ಮಾನ ರೀತಿಯಲ್ಲಿ ಭರಿಸತಕ್ಕದ್ದು. ಟೆಂಡರ್‌ಗಾಗಿ ನಿಗದಿಪಡಿಸಲಾದ ದಿನಾಂಕಗಳ ವಿವರ ಕೆಳಗಿನಂತಿದೆ ;

1) ಟೆಂಡರ್ ಕುರಿತಂತೆ ಪ್ರಶ್ನೆಗಳಿದ್ದಲ್ಲಿ **(Queries) : 01.07.2025 ಸಂಜೆ 5.30 ಗಂಟೆಗೆ,** 2) ಪೂರ್ಣಗೊಂಡ ಟೆಂಡರ್ ದಾಖಲೆಗಳನ್ನು ಅಪಲೋಡ್ ಮಾಡಲು ಕೊನೆಯ ದಿನಾಂಕ: **02.07.2025 ಸಂಜೆ 5.30 ಗಂಟೆವರೆಗೆ,** 3) ಟೆಂಡರ್ ತೆರೆಯುವ ದಿನಾಂಕ : (ತಾಂತ್ರಿಕ ಬಿಡ್) : **04.07.2025 ಬೆಳಿಗ್ಗೆ 11.00 ಗಂಟೆಗೆ,** 4) ಟೆಂಡರ್ ತೆರೆಯುವ ದಿನಾಂಕ : (ಆರ್ಥಿಕ ಬಿಡ್): **11.07.2025 ಬೆಳಿಗ್ಗೆ 11.00 ಗಂಟೆಗೆ**

ಈ ಮೇಲ್ಕಂಡ ನಿಗಧಿತ ದಿನಾಂಕದಲ್ಲಿ ವ್ಯತ್ಯಾಸವಾದಲ್ಲಿ ಅದು ಕೇವಲ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ ಪ್ರಚುರಪಡಿಸಲಾಗುವುದು. ಯಾವುದೇ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/210/ಕೆ.ಎಸ್.ಎಂ.ಸಿ.&ಎ/2025–26

ರಾಜೇಗೌಡ ಪ್ರಶಸ್ತಿಗೆ ವೆಂಕಟಾಚಲಶಾಸ್ತ್ರಿ ಆಯ್ಕೆ

ಪ್ರಜಾವಾಣಿ ವಾರ್ತೆ

ಮಂಡ್ಯ: ಕರ್ನಾಟಕ ಸಂಘ ನೀಡುವ 2ನೇ ವರ್ಷದ ಹ.ಕ.ರಾಜೇಗೌಡ ಪ್ರಶಸ್ತಿಗೆ ಮೈಸೂರಿನ ವಿದ್ವಾಂಸ ಟಿ.ವಿ. ವೆಂಕಟಾಚಲಶಾಸ್ತ್ರಿ ಅವರನ್ನು ಆಯ್ಕೆ ಮಾಡಲಾಗಿದೆ.

'₹25 ಸಾವಿರ ಹಾಗೂ ಫಲಕ ಒಳಗೊಂಡಿರುವ ಪ್ರಶಸ್ತಿಯನ್ನು ಜೂನ್ 17ರಂದು ಸಂಜೆ 5ಕ್ಕೆ ನಗರದ ಕೆ.ವಿ. ಶಂಕರಗೌಡ ಶತಮಾನೋತ್ಸವ ಭವನದಲ್ಲಿ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಪ್ರದಾನ ಮಾಡುವರು' ಎಂದು ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ ತಿಳಿಸಿದ್ದಾರೆ.



ವೆಂಕಟಾಚಲ ಶಾಸ್ತ್ರಿ

'ಆದಿಚುಂಚನಗಿರಿ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, ಪುರುಷೋತ್ತಮಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ನಿವೃತ್ತ ಕುಲಪತಿ ಪದ್ಮಾಶೇಖರ್ ಅಭಿನಂದನಾ ಭಾಷಣ ಮಾಡುವರು. ವೆಂಕಟಾಚಲಶಾಸ್ತ್ರಿ ಅವರು ಕನ್ನಡ ಭಾಷೆ, ವ್ಯಾಕರಣ, ಛಂದಸ್ಸು, ಅಲಂಕಾರಶಾಸ್ತ್ರ, ಗ್ರಂಥ ಸಂಪಾದನೆ, ನಿಘಂಟು ರಚನೆ ಸೇರಿದಂತೆ 130ಕ್ಕೂ ಹೆಚ್ಚು ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ' ಎಂದು ಹೇಳಿದ್ದಾರೆ.

ಚಟಿಕೆ ಸುದ್ದಿ

ಮೋದಿ ಕಾಲಿಗೆ ಬಿದ್ದ ಸೈಪ್ರಸ್ ಕೌನ್ಸಿಲ್ ಸದಸ್ಯೆ

ನಿಕೋಷಿಯಾ (ಪಿಟಿಐ): ಸೈಪ್ರಸ್ ದೇಶದ ಪ್ರವಾಸದಲ್ಲಿದ್ದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸ್ವಾಗತಿಸಿದ ಇಲ್ಲಿನ ಕೌನ್ಸಿಲ್‌ನ ಸದಸ್ಯೆಯೊಬ್ಬರು ನಂತರ ಕಾಲಿಗೆರಗಿ ನಮಸ್ಕರಿಸಿದ್ದಾರೆ. ಈ ವೇಳೆ ಸೈಪ್ರಸ್ ಅಧ್ಯಕ್ಷ ನಿಕೋಸ್ ಕ್ರಿಸ್ಟೊಡೌಲಿಡ್ಸ್ ಹಾಜರಿದ್ದರು.

ಮೋದಿ ಅವರನ್ನು ಸಾಂಪ್ರದಾಯಿಕವಾಗಿ ಸ್ವಾಗತಿಸಿದ ನಿಕೋಷಿಯಾದ ಕೌನ್ಸಿಲ್ ಸದಸ್ಯೆ ಮೈಕೆಲಾ ಕಿಥ್ರೊಟಿ ಅವರು ನಂತರ ಕಾಲಿಗೆರಗಿ ನಮಸ್ಕರಿಸಿದ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

ಸದಸ್ಯೆಯು ನಮಸ್ಕರಿಸುವುದನ್ನು ಸ್ವೀಕರಿಸಿದ ಪ್ರಧಾನಿ, 'ಇಡೀ ವಿಶ್ವದಲ್ಲಿಯೇ ಎಲ್ಲ ರಾಷ್ಟ್ರಗಳೊಂದಿಗೆ ಭಾರತವು ಆಳವಾದ ಸಾಂಸ್ಕೃತಿಕ ನಂಟು ಹೊಂದಿರುವುದನ್ನು ಸೂಚಿಸುತ್ತದೆ' ಎಂದರು.

'ಡಬಲ್ ಎಂಜಿನ್' ಸರ್ಕಾರದ ವಸ್ತುಪ್ರದರ್ಶನ

ನವದೆಹಲಿ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ 11 ವರ್ಷಗಳು' ಹಾಗೂ 'ದೆಹಲಿ ಸರ್ಕಾರದ 100 ದಿನಗಳು' ವಸ್ತುಪ್ರದರ್ಶನವನ್ನು ಕೇಂದ್ರ ಸಚಿವ ಸಚಿವ ಹರ್ದೀಪ್ ಸಿಂಗ್ ಪುರಿ, ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಹಾಗೂ ಬಿಜೆಪಿ ದೆಹಲಿ ಘಟಕದ ಅಧ್ಯಕ್ಷ ವೀರೇಂದ್ರ ಸಚ್‌ದೇವ್ ಸೋಮವಾರ ಉದ್ಘಾಟಿಸಿದರು.

ದೆಹಲಿಯ ಬಿಜೆಪಿ ಕೇಂದ್ರ ಕಚೇರಿಯಲ್ಲಿ ವಸ್ತುಪ್ರದರ್ಶನ ಆಯೋಜಿಸಲಾಗಿದ್ದು, ಕಳೆದ 11 ವರ್ಷಗಳ ಎನ್‌ಡಿಎ ಸರ್ಕಾರದ ಸಾಧನೆ ಹಾಗೂ ಮೈಲಿಗಲ್ಲಿನ ಅಂಶಗಳನ್ನು ಎತ್ತಿ ತೋರಿಸುತ್ತಿದೆ.

ದೆಹಲಿಯಲ್ಲಿ ಹೊಸದಾಗಿ ರಚನೆಯಾದ ಬಿಜೆಪಿ ಸರ್ಕಾರದ 100 ದಿನಗಳ ಪ್ರಗತಿಯ ಕುರಿತೂ ಬೆಳಕು ಚೆಲ್ಲುತ್ತಿದೆ.

ಕಾಲುವೆಯಲ್ಲಿ ಯುವತಿ ಶವ ಪತ್ತೆ

ಚಂಡೀಗಢ (ಪಿಟಿಐ): ಸೋನಿಪತ್‌ನ ಖಾರ್ಖೋಡಾ ಪ್ರದೇಶದ ಕಾಲುವೆಯಲ್ಲಿ ಹರಿಯಾಣ ಮೂಲದ ಯುವತಿಯ ಶವವು ಪತ್ತೆಯಾಗಿದೆ ಎಂದು ಪೊಲೀಸರು ಸೋಮವಾರ ತಿಳಿಸಿದರು.

ಮಾಡೆಲ್ ಆಗಿದ್ದ ಶೀತಲ್ ಅಲಿಯಾಸ್ ಸಿಮ್ಮಿ ಶವ ಅದು ಎಂಬುದು ಗೊತ್ತಾಗಿದೆ. ಶವವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದ್ದು, ಪ್ರಕರಣದ ತನಿಖೆ ನಡೆಸಲಾಗುತ್ತಿದೆ ಎಂದರು.

119 ಮೃತದೇಹಗಳ ಗುರುತು ಪತ್ತೆ

76 ಮೃತದೇಹ ಕುಟುಂಬಸ್ಥರಿಗೆ ಹಸ್ತಾಂತರ
• ಮೃತದೇಹ ಗುರುತಿಗೆ ಡಿಎನ್‌ಎ ಪರೀಕ್ಷೆ

ಅಹಮದಾಬಾದ್ (ಪಿಟಿಐ): ಏರ್‌ಇಂಡಿಯಾ ವಿಮಾನ ದುರಂತದಲ್ಲಿ ಮೃತಪಟ್ಟ 270 ಜನರ ಪೈಕಿ, 119 ಮಂದಿಯ ಮೃತದೇಹಗಳನ್ನು ಡಿಎನ್‌ಎ ಪರೀಕ್ಷೆ ಮೂಲಕ ಈವರೆಗೆ ಗುರುತಿಸಲಾಗಿದೆ. ಗುಜರಾತ್‌ನ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾನಿ ಸೇರಿದಂತೆ 76 ಮಂದಿಯ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದರು.

'ಸಾಧ್ಯವಾದಷ್ಟು ಬೇಗ ಡಿಎನ್‌ಎ ಪರೀಕ್ಷೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಪ್ರಯತ್ನಿಸುತ್ತಿದ್ದೇವೆ. 72 ತಾಸುಗಳ ಬಳಿಕವೂ ಪರೀಕ್ಷೆ ಫಲಿತಾಂಶ ಲಭ್ಯವಾಗಿಲ್ಲ ಎಂದು ಕೆಲವರು ದೂರುತ್ತಿದ್ದಾರೆ. ಆತಂಕಕ್ಕೊಳಗಾಗದಿರಿ ಎಂದು ಅವರಲ್ಲಿ ಮನವಿ ಮಾಡುತ್ತೇನೆ' ಎಂದು ಸಿವಿಲ್ ಸೂಪರಿಂಟೆಂಡೆಂಟ್ ಡಾ.ರಾಕೇಶ್ ಜೋಶಿ ಅವರು ತಿಳಿಸಿದರು.

ಏರ್‌ಇಂಡಿಯಾ ವಿಮಾನದಲ್ಲಿದ್ದ 242 ಮಂದಿ ಪೈಕಿ 241 ಮಂದಿ ಮೃತಪಟ್ಟಿದ್ದಾರೆ. ಘಟನಾಸ್ಥಳದಲ್ಲಿದ್ದ ಎಂಬಿಬಿಎಸ್ ವಿದ್ಯಾರ್ಥಿಗಳೂ ಸೇರಿ 29 ಮಂದಿ ಮೃತಪಟ್ಟಿದ್ದಾರೆ.ಡ

ಪವಾಡದ ರೀತಿ ಎದ್ದು ಬಂದ ವಿಶ್ವಾಸ್

ಭೀಕರ ವಿಮಾನ ದುರಂತದಲ್ಲಿ ಪವಾಡದ ರೀತಿ ಬದುಕುಳಿದಿರುವ ವಿಶ್ವಾಸ್ ಕುಮಾರ್ ರಮೇಶ್ ಅವರು, ವಿಮಾನ ಪತನವಾದ ಸ್ಥಳದಿಂದ ನಡೆದು ಬರುತ್ತಿರುವ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ.

ಬಿಳಿ ಬಣ್ಣದ ಟಿ–ಶರ್ಟ್ ಧರಿಸಿರುವ, ಎಡಗೈನಲ್ಲಿ ಮೊಬೈಲ್ ಹಿಡಿದಿರುವ ರಮೇಶ್ ಅವರು ವಿಮಾನ ಪತನವಾದ ಸ್ಥಳದಿಂದ ನಡೆದು ಬರುತ್ತಿರುವ ಮತ್ತು ಅವರ ಹಿಂದೆ ದಟ್ಟವಾದ ಹೊಗೆ ಆವರಿಸಿರುವ ದೃಶ್ಯವು ವಿಡಿಯೊದಲ್ಲಿದೆ.

ಸ್ಥಳೀಯರು ವಿಶ್ವಾಸ್ ಅವರ ಕೈಹಿಡಿದು ಆಸ್ಪತ್ರೆಗೆ ಕರೆದೊಯ್ಯುತ್ತಿರುವ ದೃಶ್ಯವೂ ಅದರಲ್ಲಿದೆ.

ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾನಿ ಅವರಿಗೆ ಭದ್ರತಾ ಸಿಬ್ಬಂದಿ ಅಂತಿಮ ನಮನ ಸಲ್ಲಿಸಿದರು –ಪಿಟಿಐ ಚಿತ್ರ

ವಿಮಾನ ಅಪಘಾತ ತನಿಖಾ ಸಂಸ್ಥೆಯು ಘಟನೆಯ ತಾಂತ್ರಿಕ ಅಂಶಗಳ ಬಗ್ಗೆ ತನಿಖೆ ನಡೆಸಿದರೆ, ಉನ್ನತ ಮಟ್ಟದ ಸಮಿತಿಯು ವಿಶ್ಲೇಷಣೆ ನಡೆಸಿ, ಭವಿಷ್ಯದ ಸುರಕ್ಷತೆಗಾಗಿ ಮಾರ್ಗಸೂಚಿ ನೀಡುತ್ತದೆ

ಕೆ.ರಾಮಮೋಹನ್ ನಾಯ್ಡು, ನಾಗರಿಕ ವಿಮಾನಯಾನ ಸಚಿವ

ವಿಜಯ್ ರೂಪಾನಿ ಅಂತ್ಯಸಂಸ್ಕಾರ

ವಿಜಯ್ ರೂಪಾನಿ ಅವರ ಮೃತದೇಹವನ್ನು ಅವರ ಪತ್ನಿ ಅಂಜಲಿ ರೂಪಾನಿ ಮತ್ತು ಕುಟುಂಬದ ಸದಸ್ಯರಿಗೆ ಸೋಮವಾರ ಹಸ್ತಾಂತರಿಸಲಾಯಿತು. ಅದೇ ದಿನ ಸಂಜೆ ರಾಜ್‌ಕೋಟ್‌ನಲ್ಲಿ ಅವರ ಅಂತ್ಯಸಂಸ್ಕಾರ ನೆರವೇರಿಸಲಾಯಿತು.

ಕುಟುಂಬಸ್ಥರ ಡಿಎನ್‌ಎ ಮಾದರಿ ಪಡೆದು ಮೃತದೇಹವನ್ನು ಭಾನುವಾರ ಗುರುತಿಸಲಾಗಿತ್ತು.

ಬ್ಲ್ಯಾಕ್ ಬಾಕ್ಸ್ ಪತ್ತೆ: ತನಿಖೆಗೆ ನೆರವು

ನವದೆಹಲಿ: ಪತನಗೊಂಡಿದ್ದ ಏರ್ ಇಂಡಿಯಾ ಬೋಯಿಂಗ್ 787–8 ವಿಮಾನದ ಬ್ಲ್ಯಾಕ್ ಬಾಕ್ಸ್ 'ಕಾಕ್‌ಪಿಟ್ ವಾಯ್ಸ್ ರೆಕಾರ್ಡರ್' (ಸಿವಿಆರ್) ಮತ್ತು 'ಡಿಜಿಟಲ್ ಫ್ಲೈಟ್ ಡೇಟಾ ರೆಕಾರ್ಡರ್' (ಡಿಎಫ್‌ಡಿಆರ್) ಪತ್ತೆಯಾಗಿರುವುದು, ದುರಂತದ ಕಾರಣ ಪತ್ತೆಗೆ ತನಿಖಾಧಿಕಾರಿಗಳಿಗೆ ಮತ್ತಷ್ಟು ನೆರವಾಗಿದೆ.

ಉನ್ನತ ಮಟ್ಟದ ಸಮಿತಿಯ ಮೊದಲ ಸಭೆ

ವಿಮಾನ ಅಪಘಾತಕ್ಕೆ ಕಾರಣ ಏನು ಎಂಬುದನ್ನು ತಿಳಿದುಕೊಳ್ಳಲು ಕೇಂದ್ರ ಸರ್ಕಾರವು ರಚಿಸಿದ್ದ ಉನ್ನತ ಮಟ್ಟದ ಸಮಿತಿಯ ಮೊದಲ ಸಭೆಯು ದೆಹಲಿಯಲ್ಲಿ ಸೋಮವಾರ ನಡೆಯಿತು. ಕೇಂದ್ರ ಗೃಹ ಕಾರ್ಯದರ್ಶಿ ಗೋವಿಂದ್ ಮೋಹನ್ ಅವರು ಸಭೆಯ ನೇತೃತ್ವ ವಹಿಸಿದ್ದರು.

ಇನ್ನೊಂದೆಡೆ, ಟಾಟಾ ಸನ್ಸ್ ಮತ್ತು ಏರ್ ಇಂಡಿಯಾ ಮುಖ್ಯಸ್ಥ ಎನ್. ಚಂದ್ರಶೇಖರನ್ ಅವರು ತಮ್ಮ 700 ಸಿಬ್ಬಂದಿಯನ್ನು ಉದ್ದೇಶಿಸಿ ಮಾತನಾಡಿ, 'ಅಪಘಾತಕ್ಕೆ ಕಾರಣವೇನು ಎಂಬುದು ತನಿಖೆಯಿಂದ ತಿಳಿಯಲಿದೆ. ಅದು ಪೂರ್ಣಗೊಳ್ಳುವವರೆಗೂ ನಾವು ಸಂಯಮದಿಂದ ಇರಬೇಕು. ಇನ್ನಷ್ಟು ಸುರಕ್ಷಿತವಾದ ವಿಮಾನಯಾನ ಸಂಸ್ಥೆಯನ್ನಾಗಿ ರೂಪಿಸಲು ಶ್ರಮಿಸಬೇಕು' ಎಂದರು.

ತನಿಖೆಗೆ ಅಮೆರಿಕ, ಬ್ರಿಟನ್ ತಂಡ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: 'ಏರ್ ಇಂಡಿಯಾ' (ಎಐ–171) ಅಪಘಾತಕ್ಕೆ ಕಾರಣ ಏನಾಗಿರಬಹುದು ಎಂಬುದನ್ನು ತಿಳಿದುಕೊಳ್ಳಲು ಅಮೆರಿಕದ ಎಂಟು ಮತ್ತು ಬ್ರಿಟನ್‌ನ ಐವರು ಸದಸ್ಯರ ತನಿಖಾ ತಂಡವು ಭಾನುವಾರ ಅಹಮದಾಬಾದ್‌ಗೆ ಬಂದಿದೆ.

ಇವರೇ ಅಲ್ಲದೆ ತನಿಖೆ ನಡೆಸಲು ಬೋಯಿಂಗ್‌ನ ತಜ್ಞರ ತಂಡವೂ ಸೋಮವಾರ ಬಂದಿಳಿದಿದೆ ಎಂದು ಮೂಲಗಳು ತಿಳಿಸಿವೆ.

ಬೋಯಿಂಗ್ 787–8 ಡ್ರೀಮ್‌ಲೈನರ್ ವಿಮಾನವು ಜೂನ್ 12ರಂದು ಟೇಕಾಫ್ ಆದ ಕೆಲ ಕ್ಷಣಗಳಲ್ಲಿಯೇ ಬಿಜೆ ವೈದ್ಯಕೀಯ ಕಾಲೇಜಿನ ಹಾಸ್ಟೆಲ್ ಕಟ್ಟಡಕ್ಕೆ ಅಪ್ಪಳಿಸಿತ್ತು. ವಿಮಾನದಲ್ಲಿದ್ದ 241 ಜನರು ಮತ್ತು ವೈದ್ಯಕೀಯ ವಿದ್ಯಾರ್ಥಿಗಳು ಸೇರಿ 30 ಮಂದಿ ಮೃತಪಟ್ಟಿದ್ದರು.

'ಅಮೆರಿಕದ ಎಂಟು, ಬ್ರಿಟನ್‌ನ ಐವರು ತನಿಖಾ ತಂಡದಲ್ಲಿ ಇರಲಿದ್ದಾರೆ. ಅವರಿಗೆ ಭಾರತದ ವಿಮಾನ ಅಪಘಾತ ತನಿಖಾ ಬ್ಯೂರೊದ ಹಿರಿಯ ಅಧಿಕಾರಿಗಳು ನೆರವು ನೀಡಲಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಅಪಹರಣ: ಎಡಿಜಿಪಿ ಬಂಧನ

ಪ್ರಜಾವಾಣಿ ವಾರ್ತೆ

ಚೆನ್ನೈ: ಕುಟುಂಬದವರ ಇಚ್ಛೆಗೆ ವಿರುದ್ಧವಾಗಿ ಮದುವೆಯಾಗಿದ್ದಕ್ಕೆ ಹುಡುಗಿ ಮನೆಯವರು ಹುಡುಗನ 17 ವರ್ಷದ ತಮ್ಮನನ್ನು ಅಪಹರಣ ಮಾಡಿಸಿದ್ದಾರೆ. ಈ ಅಪಹರಣಕ್ಕೆ ಸಹಕಾರ ನೀಡಿದ ಆರೋಪದ ಮೇಲೆ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಎಚ್.ಎಂ. ಜಯರಾಮ್ ಅವರನ್ನು ಸೋಮವಾರ ಬಂಧಿಸಲಾಗಿದೆ. ಮದ್ರಾಸ್ ಹೈಕೋರ್ಟ್ ಆದೇಶದ ಮೇರೆಗೆ ಜಯರಾಮ್ ಅವರನ್ನು ಬಂಧಿಸಲಾಗಿದೆ. ಹುಡುಗಿಯ ಮನೆಯವರು ಶಾಸಕ ಕೆ.ವಿ. ಕುಪ್ಪಮ್ ಅವರ ಸಹಕಾರ ಪಡೆದು ಕೊಂಡಿದ್ದರು. ತನಿಖೆಗೆ ಸಹಕಾರ ನೀಡುವಂತೆ ಶಾಸಕ ಕುಪ್ಪಮ್, ದಲಿತ ಸಂಘದ ಮುಖ್ಯಸ್ಥ ಜಗನ್ ಮೂರ್ತಿ ಅವರಿಗೆ ನ್ಯಾಯಮೂರ್ತಿ ಪಿ. ವೇಲ್‌ಮುರುಗನ್ ಆದೇಶ ನೀಡಿದ್ದಾರೆ.

'ಅಪರಾಧದಲ್ಲಿ ಭಾಗಿಯಾದರೆ ಪರಿಣಾಮ ಏನಾಗುತ್ತದೆ ಎಂದು ಜನ ಸೇವಕರಿಗೆ ತಿಳಿದಿರಬೇಕು. ಇಬ್ಬರನ್ನು ಬಂಧಿಸಲಾಗಿದ್ದು, ಜಯರಾಮ್ ಅಪಹರಣದಲ್ಲಿ ಭಾಗಿಯಾಗಿದ್ದಾರೆನ್ನುವ ಬಗ್ಗೆ ಅವರು ಹೇಳಿದ್ದಾರೆ' ಎಂದು ಕೋರ್ಟ್ ಹೇಳಿದೆ.

'ಕುಸಿದಿದ್ದು ಅಪಾಯಕಾರಿ ಸೇತುವೆ'

ಪಾಲ್ಘರ್ (ಪಿಟಿಐ): ನಾಲ್ವರ ಸಾವಿಗೆ ಕಾರಣವಾದ ಪುಣೆಯ ಇಂದ್ರಾಯಣಿ ನದಿ ಮೇಲಿನ ಕಬ್ಬಿಣದ ಪಾದಚಾರಿ ಸೇತುವೆಯನ್ನು 'ಅಪಾಯಕಾರಿ ಸೇತುವೆ' ಎಂದು ಜಿಲ್ಲಾಧಿಕಾರಿ ಘೋಷಣೆ ಮಾಡಿದ್ದರು. ದುರಂತಕ್ಕೂ ಮುನ್ನವೇ ಸೇತುವೆಯ ಮೇಲೆ ಎಚ್ಚರಿಕೆ ಫಲಕವನ್ನು ಅಳವಡಿಸಲಾಗಿತ್ತು ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಸೋಮವಾರ ತಿಳಿಸಿದ್ದಾರೆ.

32 ವರ್ಷ ಹಳೆಯದಾದ ಸೇತುವೆ ಪ್ರವಾಸಿಗರ ಹೆಚ್ಚಳದಿಂದಾಗಿ ಭಾನುವಾರ ಮುರಿದು ಬಿದ್ದು, ನಾಲ್ವರು ಸಾವಿಗೀಡಾಗಿದ್ದರು. 18 ಮಂದಿಗೆ ಗಂಭೀರ ಗಾಯಗಳಾಗಿದ್ದವು. ಪಾಲ್ಘರ್‌ನ ಕಾರ್ಯಕ್ರಮವೊಂದರಲ್ಲಿ ದುರಂತದ ಬಗ್ಗೆ ಮಾತನಾಡಿದ ಫಡಣವೀಸ್, 'ಹೊಸ ಸೇತುವೆ ನಿರ್ಮಾಣಕ್ಕೆ ಗುತ್ತಿಗೆ ನೀಡಿ, ಶೀಘ್ರವೇ ಕಾಮಗಾರಿ ಆರಂಭಿಸಲಾಗುವುದು' ಎಂದರು.

ಸೇತುವೆ ಮೇಲೆ 100ಕ್ಕೂ ಹೆಚ್ಚು ಜನರಿದ್ದರು. ಕಳೆದ ಕೆಲವು ದಿನಗಳಿಂದ ಈ ಭಾಗದಲ್ಲಿ ಹೆಚ್ಚು ಮಳೆಯಾಗಿದ್ದರಿಂದ ನದಿಯಲ್ಲಿ ನೀರಿನ ಹರಿವೂ ಹೆಚ್ಚಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. 51 ಜನರನ್ನು ರಕ್ಷಿಸಲಾಗಿದೆ ಎಂದು ಜಿಲ್ಲಾಡಳಿತ ತಿಳಿಸಿದೆ.

ಹೆಲಿಕಾಪ್ಟರ್ ಅಪಘಾತಕ್ಕೆ ನೈಪುಣ್ಯದ ಕೊರತೆ

ಡೆಹ್ರಾಡೂನ್ (ಪಿಟಿಐ): 'ಪ್ರತಿಕೂಲ ಹವಾಮಾನ ಪರಿಸ್ಥಿತಿ, ವಲಯ ಆಧಾರಿತ ತರಬೇತಿಯಲ್ಲಿ ಪೈಲಟ್‌ಗಳಿಗೆ ಇರುವ ನೈಪುಣ್ಯದ ಕೊರತೆ ಹಾಗೂ ವಾಯುಯಾನ ಮೂಲಸೌಕರ್ಯ ಕೊರತೆಗಳಿಂದಾಗಿ ಚಾರ್‌ಧಾಮ್ ಪ್ರದೇಶದಲ್ಲಿ ವೈಮಾನಿಕ ಅಪಘಾತಗಳು ಹೆಚ್ಚಾಗಿವೆ' ಎಂದು ಹಿರಿಯ ಪೈಲಟ್ ಒಬ್ಬರು ತಿಳಿಸಿದ್ದಾರೆ.

ಗೌರಿಕುಂಡ ಅರಣ್ಯ ಪ್ರದೇಶದಲ್ಲಿ ಖಾಸಗಿ ಸಂಸ್ಥೆಯ ಹೆಲಿಕಾಪ್ಟರ್ ಭಾನುವಾರ ಪತನಗೊಂಡು 7 ಮಂದಿ ಮೃತಪಟ್ಟಿದ್ದರು. ಈ ವರ್ಷ ಚಾರ್‌ಧಾಮ್ ಯಾತ್ರೆ ಆರಂಭವಾದಾಗಿನಿಂದ (ಏಪ್ರಿಲ್ 30) ಇದು 5ನೇ ವೈಮಾನಿಕ ಅವಘಡವಾಗಿದ್ದು, ಈ ಬಗ್ಗೆ ತೀವ್ರ ಚರ್ಚೆ ಶುರುವಾಗಿದೆ.

ಕಾರಣಗಳೇನು ?

- ಹೆಲಿಕಾಪ್ಟರ್‌ಗಳ ಮೇಲ್ವಿಚಾರಣೆಗೆ ಕೇಂದ್ರೀಕೃತ ಪ್ರಾಧಿಕಾರ ಇಲ್ಲ
- ಎತ್ತರ ಪ್ರದೇಶ, ಕಿರಿದಾದ ಕಣಿವೆ, ಬದಲಾಗುವ ಹವಾಮಾನ
- ಅನುಭವಿ ಪೈಲಟ್‌ಗಳಿಗೂ ವಲಯ ಆಧಾರಿತ ತರಬೇತಿ ಕೊರತೆ
- ಖಾಸಗಿ ಕಾಪ್ಟರ್‌ಗಳಲ್ಲಿನ ಪೈಲಟ್‌ಗಳಿಗಿರುವ ಹೆಚ್ಚಿನ ಒತ್ತಡ
- ವಲಯ ಆಧಾರಿತ ತರಬೇತಿ ವೇಳೆ ಹಲವು ಸವಾಲುಗಳ ನಿರ್ಲಕ್ಷ್ಯ

ಹದಿನೈದು ವರ್ಷಗಳಿಂದ ವೈಮಾನಿಕ ಕ್ಷೇತ್ರದಲ್ಲಿರುವ, ಮೊದಲಿಗೆ ಸೇನೆಯ ವಾಯು ವಿಭಾಗದಲ್ಲಿ ಕಾರ್ಯ ನಿರ್ವಹಿಸಿ, ಬಳಿಕ ಖಾಸಗಿ ಹೆಲಿಕಾಪ್ಟರ್ ಸಂಸ್ಥೆಯಲ್ಲಿ ಪೈಲಟ್ ಆಗಿದ್ದ ಹಿರಿಯ ಪೈಲಟ್ ಒಬ್ಬರು ಅವಘಡಗಳಿಗೆ ಕಾರಣಗಳನ್ನು ಪಟ್ಟಿ ಮಾಡಿದ್ದಾರೆ. ಜತೆಗೆ ಚಾರ್‌ಧಾಮ್ ಪ್ರದೇಶಗಳಲ್ಲಿ ಹೆಲಿಕಾಪ್ಟರ್ ಕಾರ್ಯಾಚರಣೆಗೆ ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ) ನೀಡಿರುವ ಸೂಚನೆ, ಶಿಷ್ಟಾಚಾರವನ್ನು ಪರಿಷ್ಕರಿಸಬೇಕೆಂದು ಸಲಹೆ ನೀಡಿದ್ದಾರೆ.

ಆರ್ಯನ್ ಏವಿಯೇಷನ್‌ನ ಇಬ್ಬರ ವಿರುದ್ಧ ಪ್ರಕರಣ ದಾಖಲು: ಕೇದಾರನಾಥದಿಂದ ಗುಪ್ತಕಾಶಿಗೆ ಸಾಗುತ್ತಿದ್ದ ಹೆಲಿಕಾಪ್ಟರ್ ಪತನಕ್ಕೆ ಸಂಬಂಧಿಸಿದಂತೆ ಕಾಪ್ಟರ್‌ನ ನಿರ್ವಹಣಾ ಸಂಸ್ಥೆಯಾಗಿರುವ 'ಆರ್ಯನ್ ಏವಿಯೇಷನ್ ಪ್ರೈವೆಟ್ ಲಿಮಿಟೆಡ್'ನ ಇಬ್ಬರು ಹಿರಿಯ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. 'ಜೂ.15ರಂದು ಆರ್ಯನ್ ಏವಿಯೇಷನ್ ಕಾಪ್ಟರ್‌ನ ಮೊದಲ ಪ್ರಯಾಣಕ್ಕೆ ಬೆಳಿಗ್ಗೆ 6ರಿಂದ 7 ಗಂಟೆಯ ಅವಧಿ ನಿಗದಿಪಡಿಸಲಾಗಿತ್ತು. ಆದರೆ, ಸಂಸ್ಥೆ ಮುಂಚೆಯೇ ಕಾರ್ಯಾಚರಣೆ ನಡೆಸಿದ್ದು, 5.30ಕ್ಕೆ ಹೆಲಿಕಾಪ್ಟರ್ ಪತನಗೊಂಡಿದೆ. ಸಂಸ್ಥೆ ಈ ನಿರ್ಲಕ್ಷ್ಯ ತೋರಿದ್ದರಿಂದ ಅವಘಡ ಸಂಭವಿಸಿದೆ' ಎಂದು ಆರೋಪಿಸಿ ಸಬ್ ಇನ್‌ಸ್ಪೆಕ್ಟರ್ ರಾಜೀವ್ ದೂರು ಸಲ್ಲಿಸಿದ್ದರು. ಹೀಗಾಗಿ ವ್ಯವಸ್ಥಾಪಕ ಕೌಶಿಕ್ ಪಾಠಕ್, ವಿಕಾಸ್ ತೋಮರ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

'ನರೇಗಾ ಯೋಜನೆ ನಾಶಪಡಿಸಲು ಯತ್ನ'

ನವದೆಹಲಿ (ಪಿಟಿಐ): 'ಕೇಂದ್ರ ಸರ್ಕಾರವು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು (ನರೇಗಾ) ನಾಶ ಮಾಡಲು ಪ್ರಯತ್ನಿಸುತ್ತಿದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದರು.

ಮಲ್ಲಿಕಾರ್ಜುನ ಖರ್ಗೆ

'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, '2025–26ರ ಹಣಕಾಸು ವರ್ಷದ ಮೊದಲಾರ್ಧಕ್ಕೆ ಅನುದಾನದ ಹಂಚಿಕೆಯ ಮಿತಿಯನ್ನು ಶೇ 60ಕ್ಕೆ ನಿಗದಿಪಡಿಸಿದೆ. ಕೆಲಸ ಮಾಡುವ ಹಕ್ಕನ್ನು ಕಸಿಯುವ ಇದು ಸಂವಿಧಾನ ವಿರೋಧಿ ಅಪರಾಧ' ಎಂದು ಆರೋಪಿಸಿದ್ದಾರೆ.

ಅಂಗವಿಕಲ ಮಕ್ಕಳ ಆಶ್ರಯ ಕೇಂದ್ರದಲ್ಲಿ ಮದ್ಯಪಾನದ ಪಾರ್ಟಿ: ತನಿಖೆಗೆ ಆದೇಶ

ಮುಂಬೈ (ಪಿಟಿಐ): ಅಂಗವಿಕಲ ಮಕ್ಕಳ ಆಶ್ರಯ ಕೇಂದ್ರವೊಂದರಲ್ಲಿ ಮದ್ಯಪಾನ ತಂದು, ಮಹಿಳಾ ಡಾನ್ಸರ್‌ಗಳನ್ನು ಕರೆಸಿ ಹೊಸ ವರ್ಷದ ಪಾರ್ಟಿ ನಡೆಸಿದ್ದ 13 ವರ್ಷದ ಹಿಂದಿನ ಪ್ರಕರಣಕ್ಕೆ ಸಂಬಂಧಿಸಿದಂತೆ, ಆಶ್ರಯ ಕೇಂದ್ರದ ಅಧಿಕಾರಿಗಳ ವಿರುದ್ಧ ಬಾಂಬೆ ಹೈಕೋರ್ಟ್ ಸೋಮವಾರ ತನಿಖೆಗೆ ಆದೇಶಿಸಿದೆ.

ನ್ಯಾಯಮೂರ್ತಿ ಅಲೋಕ್ ಅರಾಧೆ ಹಾಗೂ ನ್ಯಾಯಮೂರ್ತಿ ಸಂದೀಪ್ ಮಾರ್ನೆ ಅವರನ್ನೊಳಗೊಂಡ ನ್ಯಾಯಪೀಠವು ಈ ಆದೇಶ ನೀಡಿದ್ದು, ಪ್ರಕರಣಕ್ಕೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಿ, 6 ವಾರಗಳ ಒಳಗೆ ವರದಿಯನ್ನು ಸರ್ಕಾರಕ್ಕೆ ಹಾಗೂ ನ್ಯಾಯಾಲಯಕ್ಕೂ ಸಲ್ಲಿಸುವಂತೆ ಅಂಗವಿಕಲರ ಇಲಾಖೆಯ ಆಯುಕ್ತರಿಗೆ ಕೋರ್ಟ್ ಸೂಚಿಸಿದೆ. ಮಾನಖುರ್ದ್ ಉಪನಗರದಲ್ಲಿರುವ ಆಶ್ರಯ ಕೇಂದ್ರದಲ್ಲಿ 2012ರ ಡಿಸೆಂಬರ್ 31ರಂದು ಈ ಘಟನೆ ನಡೆದಿತ್ತು.

Associate Sponsors: Prestige, Freedom Healthy Cooking Oils, Honda, Vi 5G, GRAM FLOUR, The Bangalore City Co-operative Bank Limited, The Janatha Co-operative Bank Ltd., Malleshwaram, Bangalore
Mobility Partner: Akshaya Motors
Banking Partner: Canara Bank
Style Partner: BSC
Travel Partner: travel mart
Wardrobe Partner: neumen
Insurance Partner: National Insurance
Knowledge Partners: INSIGHTSIAS, GITAM Bengaluru
Telecast Partner: Z ಕನ್ನಡ
Audit Partner: EY

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸಂಪಾದಕೀಯ

ಸೇವಾ ಸಿಬ್ಬಂದಿ ಜೊತೆ ಸಂಘರ್ಷ ಪರಸ್ಪರ ಗೌರವಿಸುವುದು ಅಗತ್ಯ

ಬೆಂಗಳೂರು ಮಹಾನಗರ ಸಾರಿಗೆ ನಿಗಮದ (ಬಿಎಂಟಿಸಿ) ಬಸ್ ಚಾಲಕನನ್ನು ಮಹಿಳೆಯೊಬ್ಬರು ಚಪ್ಪಲಿಯಿಂದ ಹೊಡೆದಿರುವ ಘಟನೆ ಸಾರ್ವಜನಿಕ ಜೀವನದಲ್ಲಿ ಸಂಯಮ ಮತ್ತು ಸಭ್ಯತೆ ಕ್ಷೀಣಿಸುತ್ತಿರುವುದರ ಸಂಕೇತವಾಗಿದೆ. ತಾನು ಕೇಳಿದ ಸ್ಥಳದಲ್ಲಿ ಚಾಲಕ ಬಸ್ ನಿಲ್ಲಿಸದಿರುವುದು ಹಲ್ಲೆ ನಡೆಸಿರುವ ಮಹಿಳೆಯ ಕೋಪಕ್ಕೆ ಕಾರಣವಾಗಿದೆ. ಕರ್ತವ್ಯ ನಿರ್ವಹಣೆಗೆ ಅಡ್ಡಿ, ಹಲ್ಲೆ, ಶಾಂತಿಭಂಗ ಹಾಗೂ ಸಾರ್ವಜನಿಕ ಸೇವೆಯಲ್ಲಿರುವ ನೌಕರನನ್ನು ಉದ್ದೇಶಪೂರ್ವಕವಾಗಿ ಅವಮಾನಿಸಿದ ಆರೋಪದಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಈ ಘಟನೆಯು ಮೇಲ್ನೋಟಕ್ಕೆ ಬಿಎಂಟಿಸಿ ಸಿಬ್ಬಂದಿ ಹಾಗೂ ಪ್ರಯಾಣಿಕರೊಬ್ಬರ ನಡುವಿನ ಸಂಘರ್ಷದಂತೆ ಕಾಣಿಸುತ್ತದೆ. ಆದರೆ, ಇತ್ತೀಚಿನ ದಿನಗಳಲ್ಲಿ ಸಾರಿಗೆ ನಿಗಮಗಳ ನೌಕರರ ಮೇಲೆ ನಡೆಯುತ್ತಿರುವ ಹಲ್ಲೆಯ ಪ್ರಕರಣಗಳು ಹೆಚ್ಚುತ್ತಿರುವುದರ ಹಿನ್ನೆಲೆಯಲ್ಲಿ, ಸಾರ್ವಜನಿಕ ಜೀವನ ಸಂಘರ್ಷಮಯ ಆಗುತ್ತಿರುವುದರ ಸಂಕೇತದಂತೆ ಈ ಘಟನೆಯನ್ನು ನೋಡಬಹುದಾಗಿದೆ. ಬಿಎಂಟಿಸಿ ಬಸ್ ಚಾಲಕನಿಗೆ ಚಪ್ಪಲಿಯಲ್ಲಿ ಹೊಡೆದಿರುವ ಮಹಿಳಾ ಸಾಫ್ಟ್‌ವೇರ್ ಎಂಜಿನಿಯರ್ ವಿರುದ್ಧ ಕ್ರಮ ಕೈಗೊಳ್ಳಬೇಕು ಹಾಗೂ ಸಾರಿಗೆ ನಿಗಮಗಳ ಚಾಲಕರು ಮತ್ತು ನಿರ್ವಾಹಕರಿಗೆ ರಕ್ಷಣೆ ನೀಡಲು ಪೊಲೀಸರು ಕ್ರಮ ತೆಗೆದುಕೊಳ್ಳಬೇಕು ಎಂದು ಗೃಹ ಸಚಿವ ಜಿ. ಪರಮೇಶ್ವರ ಅವರಿಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಪತ್ರ ಬರೆದಿರುವುದು, ಪ್ರಕರಣದ ಸಂಕೀರ್ಣತೆಗೆ ನಿದರ್ಶನದಂತಿದೆ. ಬಸ್ ಚಾಲಕರು ಹಾಗೂ ನಿರ್ವಾಹಕರನ್ನು ಅವಮಾನಿಸುವ ಹಾಗೂ ಅವರ ಮೇಲೆ ಹಲ್ಲೆ ನಡೆಸುವ ಪ್ರಕರಣಗಳು ಇತ್ತೀಚೆಗೆ ಹೆಚ್ಚುತ್ತಿವೆ; ಚಾಕುವಿನಿಂದ ಹಲ್ಲೆ ನಡೆಸಿದ ಪ್ರಕರಣವೂ ನಡೆದಿತ್ತು. ಹಲ್ಲೆ ನಡೆಸಿದವರ ವಿರುದ್ಧ ಕ್ರಮ ಕೈಗೊಳ್ಳುವ ಮೂಲಕ ದುರ್ವರ್ತನೆಯ ಪ್ರಕರಣಗಳು ಮರುಕಳಿಸದಂತೆ ಶಾಶ್ವತ ಪರಿಹಾರ ರೂಪಿಸಬೇಕು ಎಂದು ಸಾರಿಗೆ ಸಚಿವರು ಪತ್ರದಲ್ಲಿ ತಿಳಿಸಿರುವುದನ್ನು ಗೃಹ ಇಲಾಖೆ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಹಲ್ಲೆ ನಡೆಸಿರುವ ಟೆಕಿಯ ಮಾನಸಿಕ ಸ್ಥಿತಿ ಸರಿಯಾಗಿಲ್ಲವೆಂದು ಆಕೆಯ ಪತಿ ಹೇಳಿದ್ದು, ಪತ್ನಿಯ ಪರವಾಗಿ ಪೊಲೀಸರ ಬಳಿ ಕ್ಷಮೆ ಕೋರಿದ್ದಾರೆ. ಹಲ್ಲೆಕೋರ ಮಹಿಳೆಯ ಮಾನಸಿಕ ಸ್ಥಿತಿ ಯಾವ ಬಗೆಯದು ಎನ್ನುವುದನ್ನು ಹೊರತುಪಡಿಸಿದರೂ ಸಾರ್ವಜನಿಕ ಸೇವೆಯಲ್ಲಿ ಇರುವವರ ಮೇಲೆ ಹಲ್ಲೆ ನಡೆಸುವ ಮನಃಸ್ಥಿತಿಯನ್ನು ಆರೋಗ್ಯಕರವೆಂದು ಭಾವಿಸುವುದು ಸಾಧ್ಯವಿಲ್ಲ. ಅಂಥ ನಡವಳಿಕೆಯನ್ನು ಕಠಿಣ ಕಾನೂನು ಕ್ರಮದ ಮೂಲಕವೇ ಸರಿಪಡಿಸುವುದು ಅಗತ್ಯ.

ಸಿಬ್ಬಂದಿಯ ವರ್ತನೆ ಬಗ್ಗೆ ತಕರಾರು ಇದ್ದಲ್ಲಿ ಅದರ ವಿರುದ್ಧ ಕಾನೂನಿನ ಚೌಕಟ್ಟಿನಲ್ಲಿ ಪ್ರತಿಭಟಿಸುವ, ಮೇಲಧಿಕಾರಿಗಳಿಗೆ ದೂರು ಸಲ್ಲಿಸುವ ಅವಕಾಶ ಇದೆ

ಸಾರ್ವಜನಿಕರ ಹಲ್ಲೆಕೋರ ಮನಃಸ್ಥಿತಿಗೆ ಕೆಲವೊಮ್ಮೆ ಚಾಲಕ– ನಿರ್ವಾಹಕರ ವರ್ತನೆಯೂ ಕಾರಣವಾಗಿರುತ್ತದೆ. ಸಾರಿಗೆ ನಿಗಮಗಳ ಬಸ್‌ಗಳನ್ನು ನಿಗದಿತ ನಿಲ್ದಾಣಗಳಲ್ಲಿ ನಿಲ್ಲಿಸದೆ ದೂರದಲ್ಲೆಲ್ಲೋ ನಿಲ್ಲಿಸುವ ದೂರುಗಳು ಸಾಮಾನ್ಯವಾಗಿವೆ. ವಿದ್ಯಾರ್ಥಿಗಳು, ಮಹಿಳೆಯರು ಹಾಗೂ ಹಿರಿಯ ನಾಗರಿಕರೊಂದಿಗೆ ಒರಟಾಗಿ ನಡೆದುಕೊಳ್ಳುವ ನಿರ್ವಾಹಕ, ಚಾಲಕರೂ ಇದ್ದಾರೆ. ಸರ್ಕಾರದ ಸೌಲಭ್ಯಗಳಡಿ ಪ್ರಯಾಣಿಸುವ ಪ್ರಯಾಣಿಕರನ್ನು ಲಘುವಾಗಿ ಕಾಣುವುದು, ಇಲ್ಲವೇ ಲೇವಡಿ ಮಾಡುವವರೂ ಇದ್ದಾರೆ. ಸಾರ್ವಜನಿಕಸ್ನೇಹಿ ನಡವಳಿಕೆಯನ್ನು ರೂಪಿಸಿಕೊಳ್ಳುವ ಅಗತ್ಯವನ್ನು ತನ್ನ ಸಿಬ್ಬಂದಿಗೆ ಮನವರಿಕೆ ಮಾಡಿಕೊಡುವ ಕೆಲಸವನ್ನು ಸಾರಿಗೆ ಇಲಾಖೆ ಮಾಡಬೇಕಾಗಿದೆ. ಪ್ರಯಾಣಿಕರೊಂದಿಗೆ ಗೌರವ ಹಾಗೂ ಸಂಯಮದಿಂದ ವರ್ತಿಸುವುದನ್ನು ಸಾರ್ವಜನಿಕ ಸಾರಿಗೆ ಬಸ್‌ಗಳ ಚಾಲಕರು, ನಿರ್ವಾಹಕರು ರೂಢಿಸಿಕೊಳ್ಳಬೇಕು. ಸಾರಿಗೆ ನಿಗಮಗಳ ಸಿಬ್ಬಂದಿಯೊಂದಿಗೆ ಸೌಜನ್ಯದಿಂದ ನಡೆದುಕೊಳ್ಳುವ ವಿನಯವನ್ನು ಸಾರ್ವಜನಿಕರೂ ಅನುಸರಿಸಬೇಕು. ಚಾಲಕರು ಹಾಗೂ ನಿರ್ವಾಹಕರು ಅತೀವ ಒತ್ತಡದ ನಡುವೆ ಕಾರ್ಯನಿರ್ವಹಿಸುತ್ತಿರುತ್ತಾರೆ. ಸಾರ್ವಜನಿಕರ ದೈನಿಕವನ್ನು ಸಹನೀಯಗೊಳಿಸುವ ದಿಸೆಯಲ್ಲಿ ದುಡಿಯುವವರನ್ನು ಸೇವಕರಂತೆ ಕಾಣುವ, ಕೀಳಾಗಿ ನಡೆಸಿಕೊಳ್ಳುವ ಮನೋಭಾವ ಸರಿಯಾದುದಲ್ಲ. ಸಾರಿಗೆ ನಿಗಮಗಳ ಸಿಬ್ಬಂದಿಯು ಒರಟಾಗಿ ಅಥವಾ ನಿಯಮಬಾಹಿರವಾಗಿ ನಡೆದುಕೊಂಡ ಸಂದರ್ಭದಲ್ಲಿ ಕಾನೂನಿನ ಚೌಕಟ್ಟಿನಲ್ಲಿ ಪ್ರತಿಭಟಿಸುವ, ಮೇಲಧಿಕಾರಿಗಳಿಗೆ ದೂರು ಸಲ್ಲಿಸುವ ಅವಕಾಶ ಇದ್ದೇ ಇದೆ. ಇದರ ಹೊರತಾಗಿ, ಕಾನೂನನ್ನು ಕೈಗೆತ್ತಿಕೊಂಡು ದಂಡಿಸುವ ಅಧಿಕಾರ ಸಾರ್ವಜನಿಕರಿಗಿಲ್ಲ. ಮಾತು, ಅಧಿಕಾರ ಹಾಗೂ ದೈಹಿಕ ಬಲದಿಂದ ಯಾರನ್ನು ಬೇಕಾದರೂ ಮಣಿಸಬಹುದು ಎನ್ನುವ ಅಹಂಕಾರ ಪ್ರದರ್ಶನ ಇತ್ತೀಚಿನ ದಿನಗಳಲ್ಲಿ ಸಹಜ ಎನ್ನುವಷ್ಟು ವ್ಯಾಪಕವಾಗುತ್ತಿದೆ. ಈ ಮನೋಧರ್ಮ ಬದಲಾಗಬೇಕು. ಗೌರವ ಕೊಟ್ಟು ಪಡೆದುಕೊಳ್ಳುವ ಮನಃಸ್ಥಿತಿ ಸಾರ್ವಜನಿಕರೊಂದಿಗೆ, ಸಾರ್ವಜನಿಕ ಸೇವೆಯಲ್ಲಿ ನಿರತರಾಗಿರುವವರಿಗೂ ಅಗತ್ಯ.

ವಿರೋಧಾಭಾಸದ ನಡೆ...



ಇಸ್ರೇಲ್ ಮತ್ತು ಇರಾನ್ ಮಹಾವಿನಾಶದತ್ತ ಹೆಜ್ಜೆ ಹಾಕುತ್ತಿವೆ... ಡೊನಾಲ್ಡ್ ಟ್ರಂಪ್ ಅವರು ರಾಜತಾಂತ್ರಿಕತೆ ಬದಲು ಭ್ರಮೆಯೊಂದಿಗೆ ಮಧ್ಯಪ್ರವೇಶ ಮಾಡಿದ್ದಾರೆ... ಆ ಎರಡೂ ದೇಶಗಳು ಕಾದಾಡಲೇಬೇಕು. ಆದರೆ, ಒಪ್ಪಂದವನ್ನೂ ಮಾಡಿಕೊಳ್ಳಬೇಕು. ಏಕಕಾಲದಲ್ಲಿ ಶಾಂತಿ ಮತ್ತು ಅಸ್ತವ್ಯಸ್ತ ಸ್ಥಿತಿಯನ್ನು ಬಯಸುವ ಟ್ರಂಪ್ ಅವರ ಮಾತು ವಿರೋಧಾಭಾಸದಿಂದ ಕೂಡಿದೆ...

ರವಿಕಾಂತ ಎಸ್., ಚೆನ್ನೈ
'ಎಕ್ಸ್'ನಿಂದ

ಕಿಡಿನುಡಿ

ಕಾಂಗ್ರೆಸ್‌ನಲ್ಲಿರುವ ವಂಶಪಾರಂಪರ್ಯ ರಾಜಕಾರಣವು ಬಿಜೆಪಿಯೊಳಗೂ ಪ್ರವೇಶಿಸಿದ್ದು ದುರಂತ. ಕುಟುಂಬ ರಾಜಕಾರಣಕ್ಕೆ ತಡೆಹಾಕಲು ಪಕ್ಷದ ವರಿಷ್ಠರು ಗಂಭೀರವಾಗಿ ಆಲೋಚಿಸಬೇಕು. ಕುಟುಂಬ ರಾಜಕಾರಣದಿಂದ ದೇಶಕ್ಕೆ ಹಿನ್ನಡೆ ಆಗುವುದೇ ವಿನಾ ಅಭಿವೃದ್ಧಿ ಆಗುವುದಿಲ್ಲ.

ರಮೇಶ ಜಿಗಜಿಣಗಿ, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಶನಿವಾರ, 17-6-2000

• ಹುಬ್ಬಳ್ಳಿ– ಧಾರವಾಡದಲ್ಲಿ ಹಿಂಸಾಚಾರ

ಧಾರವಾಡ, ಜೂನ್ 16– ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಆರಂಭಕ್ಕೆ ಅನುಮತಿ ನಿರಾಕರಿಸಿರುವುದನ್ನು ಪ್ರತಿಭಟಿಸಿ ಸ್ಫೋಟಗೊಂಡಿರುವ ಚಳವಳಿ ಇಂದು ಹಿಂಸಾಚಾರಕ್ಕೆ ತಿರುಗಿತು. ನಗರದಲ್ಲಿ ಕಲ್ಲು ತೂರಾಟ ಹಾಗೂ ಹಲ್ಲೆ ನಡೆದರೆ, ಹುಬ್ಬಳ್ಳಿಯ ನ್ಯಾಯಾಲಯದ ಆವರಣದಲ್ಲಿ ಹಿಂಸಾಚಾರಕ್ಕೆ ಇಳಿದ ವಕೀಲರ ಮೇಲೆ ಲಾಠಿ ಪ್ರಹಾರ ಮಾಡಿದ್ದರಿಂದ ಪರಿಸ್ಥಿತಿ ಉದ್ವಿಗ್ನಗೊಂಡಿತು.

ಕಲ್ಲು ತೂರಾಟದಲ್ಲಿ ಕೆಲವರಿಗೆ ಗಾಯಗಳಾಗಿವೆ. ಹಲವರ ಬಟ್ಟೆ ಹರಿದಿದೆ. ಜಿಲ್ಲಾಧಿಕಾರಿ ಕಚೇರಿಗೆ ನುಗ್ಗಲು ಯತ್ನಿಸಿದ ಬಿಜೆಪಿ ಕಾರ್ಯಕರ್ತರನ್ನು ಬಂಧಿಸಿ ನಂತರ ಬಿಡುಗಡೆ ಮಾಡಲಾಯಿತು. ಪುಣೆ–ಬೆಂಗಳೂರು ಹೆದ್ದಾರಿಯಲ್ಲಿ ರಸ್ತೆ ತಡೆ ಚಳವಳಿ ನಡೆಯಿತು. ಹುಬ್ಬಳ್ಳಿಯಲ್ಲಿ ತಹಶೀಲ್ದಾರ್ ಕಚೇರಿಗೆ ಮುತ್ತಿಗೆ ಹಾಕಲಾಯಿತು.

75 ವರ್ಷಗಳ ಹಿಂದೆ

ಶನಿವಾರ, 17-6-1950

• ದೆಹಲಿ ಒಪ್ಪಂದ ಆಶ್ಚರ್ಯವಾಗಿ ಪರಿಣಮಿಸಿದೆ

ಕಲ್ಕತ್ತ, ಜೂನ್ 16– 'ನಾವಿಂದು ವ್ಯವಹರಿಸುತ್ತಿರುವ ಭಾರತ– ಪಾಕ್ ಬಿಕ್ಕಟ್ಟಿನ ವ್ಯಾಧಿಯು ಗುಣ ಹೊಂದುವಂತಹದೆಂಬ ಬಗ್ಗೆ ಭರವಸೆಯಿದೆ. ಬಿಕ್ಕಟ್ಟು ಪರಿಹಾರವಾಯಿತೆಂದೂ ಪರಿಸ್ಥಿತಿಯೂ ಪೂರ್ಣ ಹತೋಟಿಗೆ ಬಂದಿದೆಯೆಂದೂ ನನಗೆ ದೃಢ ನಂಬಿಕೆಯಿದೆ' ಎಂಬುದಾಗಿ ಪಾಕಿಸ್ತಾನದ ಅಲ್ಪಸಂಖ್ಯಾತ ಸಚಿವ ಡಾ. ಮಲ್ಲಿಕ್ ಅವರು ತಮ್ಮ ರೇಡಿಯೊ ಭಾಷಣದಲ್ಲಿ ತಿಳಿಸಿದರು.

ದೆಹಲಿಯ ಒಪ್ಪಂದವು ಉಭಯ ರಾಷ್ಟ್ರಗಳ ವಿಚಾರಪರ ನರನಾರಿಯರೆಲ್ಲರ ಮೇಲೆಯೂ ಅಸದೃಶ ಅದ್ಭುತ ಪರಿಣಾಮವನ್ನೆಸಗಿದೆ. ಸಮಸ್ಯೆಯ ಪರಿಹಾರಕ್ಕೆ ಇಂದೊಂದೇ ಅದ್ವಿತೀಯ ಮಾರ್ಗ ಎಂಬುದರ ಪರಿಪೂರ್ಣ ಅರಿವಾಗಿದೆ ಎಂದು ತಿಳಿಸಿದರು.

ಜೆಡಿಎಸ್ ತಲೆಗೆ ಅದರದೇ ಕೈ

ಗತಿಬಿಂಬ
ವೈ.ಗ. ಜಗದೀಶ್

ಪ್ರಾದೇಶಿಕ ಪಕ್ಷದ ಚಹರೆ, ಕರ್ನಾಟಕ–ಕನ್ನಡದ ಅಸ್ಮಿತೆಯ ವಿಷಯದಲ್ಲಿ ಏಕಮೇವ ಎನ್ನುವಂತಹ ನಾಯಕತ್ವ ಹೊಂದಿದ್ದ ಜನತಾ ಪರಿವಾರ ಅನೇಕ ದಿಗ್ಗಜರನ್ನು ನಾಡಿಗೆ, ದೇಶಕ್ಕೆ ಕೊಟ್ಟಿದೆ. ರಾಮಕೃಷ್ಣ ಹೆಗಡೆ, ಎಸ್.ಆರ್. ಬೊಮ್ಮಾಯಿ, ಎಚ್.ಡಿ. ದೇವೇಗೌಡ, ಜೆ.ಎಚ್. ಪಟೇಲ್ ಅವರು ಜನತಾ ಪರಿವಾರದಿಂದ ಮುಖ್ಯಮಂತ್ರಿಯಾದವರು. ಎಲ್ಲ ಜಾತಿ, ಧರ್ಮಗಳ ಪ್ರಾತಿನಿಧ್ಯವನ್ನು ಒಳಗೊಂಡಿದ್ದ ಜನತಾದಳ ಈಗ ತಬ್ಬಲಿಯಂತಾಗಿದೆ.

ಒಂದು ಕಾಲದಲ್ಲಿ ದೇಶವನ್ನೇ ಮುಷ್ಟಿಯಲ್ಲಿಟ್ಟುಕೊಂಡು ಮೆರೆಯುತ್ತಿದ್ದ ಕಾಂಗ್ರೆಸ್‌ಗೆ ಪರ್ಯಾಯವಾದ ರಾಜಕಾರಣ ಕಟ್ಟಿದ ಹೆಗ್ಗಳಿಕೆ ಜನತಾ ಪರಿವಾರದ್ದು. ಕರ್ನಾಟಕದ ಮಟ್ಟಿಗೆ ಕಾಂಗ್ರೆಸ್ಸೇತರ ಸರ್ಕಾರವನ್ನು ಅಧಿಕಾರಕ್ಕೆ ತಂದಿದ್ದೂ ಜನತಾ ಪಕ್ಷವೇ. ಒಕ್ಕಲಿಗ ಹಾಗೂ ಲಿಂಗಾಯತರ ಬಲದ ಜತೆಗೆ ಅಲ್ಪಸಂಖ್ಯಾತ, ಹಿಂದುಳಿದ ಹಾಗೂ ದಲಿತ ಸಮುದಾಯದ (ಅಹಿಂದ) ಬೆಂಬಲವನ್ನೂ ಬೆಸೆದುಕೊಂಡು ಬಲಿಷ್ಠ ಶಕ್ತಿಯಾಗಿದ್ದ ಜನತಾ ಪರಿವಾರ, ನಂತರದಲ್ಲಿ ಕವಲು ಕವಲಾಗಿ ಒಡೆಯಿತು; ಪ್ರಸ್ತುತ, ಇಡೀ ದೇಶವನ್ನು ತನ್ನ ವಜ್ರಮುಷ್ಟಿಯಲ್ಲಿ ಇಟ್ಟುಕೊಂಡಿರುವ ಬಿಜೆಪಿಗೆ ಅಂಟಿಕೊಂಡ ಒಂದು ರೆಂಬೆಯಾಗಿದೆ.

ಎರಡು ರಾಷ್ಟ್ರೀಯ ಪಕ್ಷಗಳಿಗೆ ಸಡ್ಡು ಹೊಡೆಯುವಂತೆ, ಬಲಿಷ್ಠ ಪ್ರಾದೇಶಿಕ ಪಕ್ಷವಾಗಿ ಬೆಳೆಯಬಹುದಾದ ಶಕ್ತಿ, ಸಾಮುದಾಯಿಕ ಬೆನ್ನೆಲುಬು, ಕಾರ್ಯಕರ್ತರ ಪಡೆಯನ್ನು ಜೆಡಿಎಸ್ ಹೊಂದಿತ್ತು. ನಾಯಕರ ಹೊರತಳ್ಳುವಿಕೆ, ಕುಟುಂಬ ರಾಜಕಾರಣಕ್ಕೆ ಅಂಟಿಕೊಂಡಿದ್ದು ಪಕ್ಷಕ್ಕೆ ಮುಳುವಾಯಿತು. 1999 ಹಾಗೂ 2006ರಲ್ಲಾದ ಮಹಾ ವಿಘಟನೆ ಪಕ್ಷವನ್ನು ದುರ್ಬಲಗೊಳಿಸುತ್ತಲೇ ಹೋಯಿತು. ಎರಡು ಬಾರಿ ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾದರೂ ಅದು ಸ್ವಂತ ಬಲದ ಮೇಲಲ್ಲ. ಒಮ್ಮೆ ಬಿಜೆಪಿ, ಮತ್ತೊಮ್ಮೆ ಕಾಂಗ್ರೆಸ್ ಜತೆಗಿನ ಅಪವಿತ್ರ ಕೂಡಿಕೆಯಿಂದ ಸರ್ಕಾರ ರಚನೆಗೆ ಕುಮಾರಸ್ವಾಮಿ ಕೈಗೊಂಡ ನಿರ್ಧಾರವೇ, ಪಕ್ಷವನ್ನು ತಳಾತಳಕ್ಕೆ ತಳ್ಳಿತು. ಪ್ರಸ್ತುತ ಜೆಡಿಎಸ್ ಕುಟುಂಬದ ಕುಮಾರಸ್ವಾಮಿ ಕೇಂದ್ರದಲ್ಲಿ ಪ್ರಭಾವಿ ಖಾತೆ ಹೊಂದಿರುವ ಸಚಿವರಾಗಿದ್ದಾರಾದರೂ ಉಳಿದ ಯಾರಿಗೂ ಅಧಿಕಾರದ ಭಾಗ್ಯವಿಲ್ಲ.

ದಶಕಗಳ ಕಾಲ ಎರಡು ರಾಷ್ಟ್ರೀಯ ಪಕ್ಷಗಳ ಸ್ಥಳೀಯ ನಾಯಕರ ಜತೆ ಬಡಿದಾಡಿಕೊಂಡೇ ಜೆಡಿಎಸ್‌ಗೆ ಭದ್ರ ನೆಲೆ ಕಟ್ಟಿಕೊಟ್ಟವರು ಪಕ್ಷದ ಅಪವಿತ್ರ ಮೈತ್ರಿಯಿಂದಾಗಿ ತಳಮಳ ಅನುಭವಿಸಿದರು. 2006ರಲ್ಲಿ ಬಿಜೆಪಿ ಜತೆ ಸರ್ಕಾರ ಮಾಡಿದಾಗ, ಕೋಮುವಾದಿ ಬಿಜೆಪಿಯನ್ನು ವಿರೋಧಿಸಿಕೊಂಡೇ ಬಂದವರು ಬಾಯಿಲ್ಲದಂತಾದರು. 2018ರಲ್ಲಿ ಕಾಂಗ್ರೆಸ್ ಜತೆ ಸರ್ಕಾರ ರಚಿಸಿದಾಗಲೂ ಇದೇ ಪರಿಸ್ಥಿತಿ ಉದ್ಭವಿಸಿತು. ಹಳೆ ಮೈಸೂರು ಭಾಗದಲ್ಲಿ ಕಾಂಗ್ರೆಸ್ ಜತೆಗೆ ಗುದ್ದಾಡಿ ಏಗಿ, ಪಕ್ಷ ಕಟ್ಟಿದವರು ಅದೇ ಪಕ್ಷದವರ ಜತೆಗೆ ಕೆಲಸ ನಿರ್ವಹಿಸಬೇಕಾದ ಸಂಕಷ್ಟಕ್ಕೆ ಬಿದ್ದರು.

2019ರ ಲೋಕಸಭೆ ಚುನಾವಣೆಯಂತೂ ಅವರಿಗೆ ನುಂಗಲಾರದ ತುತ್ತಾಯಿತು. 'ಯಾರಿಗೆ ವೋಟು ಹಾಕಬೇಡಿ' ಎಂದು ದಶಕಗಳ ಕಾಲ ಪ್ರಚಾರ ಮಾಡಿಕೊಂಡು ಬಂದಿದ್ದರೋ, ಕೆಲವು ಕ್ಷೇತ್ರಗಳಲ್ಲಿ ಅದೇ ಹಸ್ತದ ಚಿಹ್ನೆಗೆ ವೋಟು ಹಾಕಿಸಬೇಕಾದ ಮುಜುಗರ ಎದುರಿಸಬೇಕಾಯಿತು. 2023ರಲ್ಲಿ ಕಾಂಗ್ರೆಸ್– ಬಿಜೆಪಿ ವಿರುದ್ಧ ಸಿಡಿದೆದ್ದ ಕುಮಾರಸ್ವಾಮಿ, ಎರಡೂ ಪಕ್ಷಗಳನ್ನು ಟೀಕಿಸಿ ಚುನಾವಣೆ ಎದುರಿಸಿದ್ದೂ ಫಲ ಕೊಡಲಿಲ್ಲ. 2024ರ ಲೋಕಸಭೆ ಚುನಾವಣೆಗೆ ಮುನ್ನವೇ ಬಿಜೆಪಿ ಜತೆಗೆ ಹೋಗುವ ತೀರ್ಮಾನವನ್ನು ದೇವೇಗೌಡ ಮತ್ತು ಕುಮಾರಸ್ವಾಮಿ ಕೈಗೊಂಡರು. ಹೀಗೆ, ಮೇಲಿಂದ ಮೇಲೆ ನಿಲುವುಗಳಲ್ಲಿ ಬದಲಾವಣೆಯಾಗುತ್ತಲೇ ಹೋಗಿದ್ದರಿಂದಾಗಿ, ಶತ್ರು ಯಾರು, ಮಿತ್ರ ಯಾರು ಎನ್ನುವ ನಿಷ್ಕರ್ಷೆ ಜೆಡಿಎಸ್ ಸೈನಿಕರಿಗೆ ಕಷ್ಟವಾಗಿ, ಯಾರೊಂದಿಗೆ ನಿಲ್ಲಬೇಕೆಂಬ ದ್ವಂದ್ವ ಕಾಡಿತು.

ಜೆಡಿಎಸ್ ನಾಯಕರು ತಮ್ಮ ಅನುಕೂಲಕ್ಕೆ ತಕ್ಕಂತೆ ತೀರ್ಮಾನ ತೆಗೆದುಕೊಳ್ಳಲಾರಂಭಿಸಿದ್ದರಿಂದಾಗಿ ಕಾರ್ಯಕರ್ತರು ಒಂದೇ ಕಡೆ ನಿಲ್ಲಲಾಗದ ಸ್ಥಿತಿ ನಿರ್ಮಾಣವಾಯಿತು. ಕಾಂಗ್ರೆಸ್ ಜತೆ ಸರ್ಕಾರ ರಚಿಸಿದಾಗ, ಅವರೊಂದಿಗೆ ಗುರುತಿಸಿಕೊಂಡ ಕೆಲವರು ಆ ಕಡೆ ಹೋದರು. ಬಿಜೆಪಿ ಜತೆ ಕೂಡಿಕೆ ಮಾಡಿಕೊಂಡಾಗ, ಕೆಲವರು ಪಕ್ಷದಲ್ಲೇ ಉಳಿದರೆ, ಉಳಿದವರು ಅತ್ತ ಕಡೆ ಹೋದರು.

ಏನೆಲ್ಲ ಕಸರತ್ತು ನಡೆಸಿದರೂ ಹಳೆ ಮೈಸೂರು ಭಾಗದಲ್ಲಿ ನೆಲೆ ವಿಸ್ತರಿಸಿಕೊಳ್ಳಲು ಸಾಧ್ಯವಾಗದ ಬಿಜೆಪಿ, ಜೆಡಿಎಸ್ ಕಡೆಗೆ ಕೈಚಾಚಿತು. ಲೋಕಸಭೆ ಚುನಾವಣೆಯಲ್ಲಿ ಗೆದ್ದು ಮತ್ತೆ ಅಧಿಕಾರ ಹಿಡಿಯಲು ಪ್ರಧಾನಿ ನರೇಂದ್ರ ಮೋದಿಯವರಿಗೆ ಈ ಮೈತ್ರಿ ಅನಿವಾರ್ಯವೂ ಆಗಿತ್ತು. ಅಧಿಕಾರ ಇಲ್ಲದೇ ಪರಿತಪಿಸುತ್ತಿದ್ದ ಜೆಡಿಎಸ್‌ಗೂ ಅದು ಬೇಕಿತ್ತು. ಜೆಡಿಎಸ್ ಪ್ರಾಬಲ್ಯವಿದ್ದ ಬೆಂಗಳೂರು ಗ್ರಾಮಾಂತರ, ತುಮಕೂರು, ಮೈಸೂರು, ಚಿಕ್ಕಬಳ್ಳಾಪುರ ಕ್ಷೇತ್ರಗಳನ್ನು ಬಿಟ್ಟುಕೊಡುವ ಅನಿವಾರ್ಯವನ್ನು ಬಿಜೆಪಿ ನಾಯಕರು ಸೃಷ್ಟಿಸಿದರು. ಚುನಾವಣೆಯಲ್ಲಿ ಬಿಜೆಪಿ ಪರವಾಗಿ ಕೆಲಸ ಮಾಡಿದ ಜೆಡಿಎಸ್‌ನ ಕೆಲವರು ಆ ಪಕ್ಷದ ಕಡೆಗೆ ಹೋದರು. ಕುಮಾರಸ್ವಾಮಿ ಕೇಂದ್ರದಲ್ಲಿ ಸಚಿವರಾದ ಮೇಲೆ, ಖಾತೆಯ ನಿರ್ವಹಣೆಗೆ ಹೆಚ್ಚು ಗಮನ ಕೊಟ್ಟರು. ಕೇಂದ್ರದ ಕೆಲಸವನ್ನು ಬಿಟ್ಟು ಕೆಲವೊಮ್ಮೆ ರಾಜ್ಯಕ್ಕೆ ಬರುತ್ತಾರಾದರೂ ಆ ಭೇಟಿ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರನ್ನು ಬೈಯುವುದಕ್ಕೆ ಸೀಮಿತ. ಪಕ್ಷ ಸಂಘಟನೆಗೆ ಹೆಚ್ಚು ಸಮಯ ನೀಡಲು ಅವರಿಂದ ಆಗುತ್ತಿಲ್ಲ. ಇದರಿಂದಾಗಿ ಪಕ್ಷ ದಿನದಿಂದ ದಿನಕ್ಕೆ ಸೊರಗುತ್ತಲೇ ಇದೆ.

> ಬಲಿಷ್ಠ ಪ್ರಾದೇಶಿಕ ಶಕ್ತಿಯಾಗಿ ಬೆಳೆದಿದ್ದ ಜೆಡಿಎಸ್‌ಗೆ ಅನುಕೂಲಸಿಂಧು ನಿಲುವುಗಳೇ ಮುಳುವಾಗಿವೆ. ಸದ್ಯದ ಬಿಜೆಪಿ ಸಖ್ಯ, ಜೆಡಿಎಸ್ ಮತ್ತಷ್ಟು ದುರ್ಬಲಗೊಳ್ಳಲು ಹಾಗೂ ಕಾಂಗ್ರೆಸ್ ಬಲಗೊಳ್ಳಲು ಕಾರಣವಾಗಿದೆ. ಇದರ ಮಧ್ಯೆ, ದೇವೇಗೌಡರ ಕುಟುಂಬದ ಮೂರನೇ ಪೀಳಿಗೆ ಪಕ್ಷ ಸಂಘಟನೆಯ ಹೊಣೆ ವಹಿಸಿಕೊಂಡು, ಬಲವರ್ಧನೆಗೆ ಮುಂದಡಿ ಇಟ್ಟಿದೆ

ತಳಸ್ತರದಲ್ಲಿ ಬಿಜೆಪಿಯನ್ನು ವಿರೋಧಿಸಿಕೊಂಡೇ ಇಷ್ಟು ವರ್ಷ ರಾಜಕಾರಣ ಮಾಡಿಕೊಂಡು ಬಂದವರು ಜೆಡಿಎಸ್‌ನಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದರು. ದೇವೇಗೌಡ, ಕುಮಾರಸ್ವಾಮಿಯವರ ಮೇಲಿನ ಪ್ರೀತಿಗಾಗಿ ಪಕ್ಷದಲ್ಲಿದ್ದು, 'ಮುಂದೇನು' ಎಂಬ ಹೊಯ್ದಾಟದಲ್ಲಿದ್ದವರನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳುವಲ್ಲಿ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಹಾಗೂ ಜಮೀರ್ ಅಹಮದ್ ಖಾನ್ ಯಶಸ್ವಿಯಾಗಿದ್ದಾರೆ. ಹಿಂದುಳಿದವರು, ದಲಿತರನ್ನು ಮಾತ್ರವಲ್ಲದೇ, ಗ್ಯಾರಂಟಿ ಯೋಜನೆಗಳ ಮೂಲಕ ಮಧ್ಯಮವರ್ಗದ ಒಂದಿಷ್ಟು ಪ್ರಮಾಣದ ಜನರ ಬೆಂಬಲವನ್ನು ಪಡೆಯುವಲ್ಲಿ ಸಿದ್ದರಾಮಯ್ಯ ಶಕ್ತರಾಗಿದ್ದಾರೆ. ಜೆಡಿಎಸ್ ಜತೆಗೆ ಇನ್ನೂ ಇದ್ದ ಮುಸ್ಲಿಮರನ್ನು ಕಾಂಗ್ರೆಸ್ ತೆಕ್ಕೆಗೆ ಸೆಳೆಯುವಲ್ಲಿ ಜಮೀರ್ ಅಹಮದ್ ತಮ್ಮದೇ ಆದ ಕೆಲಸ ನಿರ್ವಹಿಸಿದ್ದಾರೆ. ಶಿವಕುಮಾರ್ ಕಾರಣಕ್ಕೆ ಒಕ್ಕಲಿಗ ಸಮುದಾಯದ ಒಂದು ಪಡೆ ಕೂಡ ಕಾಂಗ್ರೆಸ್‌ನತ್ತ ಜಾರಿದೆ.

ಬಹಳ ವರ್ಷಗಳಿಂದ 'ಮುಸ್ಲಿಂ ನಾಯಕತ್ವ' ಕರ್ನಾಟಕದಲ್ಲಿ ಇದ್ದಿರಲಿಲ್ಲ. ಸಿ.ಕೆ. ಜಾಫರ್ ಷರೀಫ್, ಅಜೀಜ್ ಸೇಠ್, ಸಗೀರ್ ಅಹಮದ್ ಅಂತಹವರು ಕಾಂಗ್ರೆಸ್‌ನಲ್ಲಿದ್ದರೂ ರಾಜ್ಯದ ಎಲ್ಲ ಮತ ಕ್ಷೇತ್ರಗಳಲ್ಲೂ ಹಿಡಿತ ಸಾಧಿಸುವಷ್ಟು ಅವರು ಪ್ರಭಾವಿಗಳಾಗಿರಲಿಲ್ಲ. ಜೆಡಿಎಸ್‌ನಿಂದಲೇ ಕಾಂಗ್ರೆಸ್‌ಗೆ ಬಂದ ಜಮೀರ್ ಅಹಮದ್, ಮುಸ್ಲಿಂ ಸಮುದಾಯವನ್ನು ಕಾಂಗ್ರೆಸ್‌ಗೆ ಸೆಳೆಯುವಲ್ಲಿ ತಮ್ಮ ಸಾಮರ್ಥ್ಯ ತೋರಿದರು.

ದಳದ ಗರಡಿಯಲ್ಲೇ ಪಳಗಿ ಬೆಳೆದ ಸಿದ್ದರಾಮಯ್ಯ, ಅಲ್ಲಿನ ಶಕ್ತಿ ಮತ್ತು ದೌರ್ಬಲ್ಯಗಳನ್ನು ಕಂಡವರು. ಅಹಿಂದ ಮತ್ತು ಒಕ್ಕಲಿಗ ಮತಗಳು ಒಗ್ಗಟ್ಟಾದರೆ ಅಧಿಕಾರ ಕೇಂದ್ರವನ್ನು ಹಿಡಿದಿಟ್ಟುಕೊಳ್ಳುವುದು ಸಲೀಸು ಎಂಬುದನ್ನು ಅರಿತು, ಶಿವಕುಮಾರ್ ಅವರನ್ನು ಜತೆಗಿಟ್ಟುಕೊಂಡು ಜೆಡಿಎಸ್ ಬೆನ್ನಿಗಿದ್ದ ಒಕ್ಕಲಿಗ ಮತಗಳನ್ನು ಒಡೆಯುವ ತಂತ್ರವನ್ನು ಸಿದ್ದರಾಮಯ್ಯ ಅನುಸರಿಸಿದರು.

ಸಿದ್ದರಾಮಯ್ಯ ಅವರು ಜನತಾದಳದಿಂದ ಹೊರ ಬಂದಾಗ ಅವರ ಜತೆಗೆ ಬಂದ ನಾಯಕರು ಹಲವರು. ಸತೀಶ ಜಾರಕಿಹೊಳಿ, ಎಚ್.ಸಿ. ಮಹದೇವಪ್ಪ, ಅಮರೇಗೌಡ ಬಯ್ಯಾಪುರ, ಶರಣಬಸಪ್ಪ ದರ್ಶನಾಪುರ, ಸಂತೋಷ್ ಲಾಡ್ ಇವರೆಲ್ಲರೂ ಪಕ್ಷದಲ್ಲಿ ಸಕ್ರಿಯರಾಗಿದ್ದಾರೆ. 2018ರ ಚುನಾವಣೆ ಪೂರ್ವದಲ್ಲಿ ಕುಮಾರಸ್ವಾಮಿಯವರ ಗಳಸ್ಯ-ಕಂಠಸ್ಯ ಎಂಬಂತಿದ್ದ ಜಮೀರ್ ಅಹಮದ್, ಚಲುವರಾಯಸ್ವಾಮಿ, ಬಾಲಕೃಷ್ಣ ಅವರು ಕಾಂಗ್ರೆಸ್ ತೆಕ್ಕೆಗೆ ಜಾರಿದರು. ಇದು, ಜೆಡಿಎಸ್‌ಗೆ ಆದ ಮತ್ತೊಂದು ದೊಡ್ಡ ಹಿನ್ನಡೆ.

2023ರಲ್ಲಿ ಮತ್ತೊಂದು ಹೆಜ್ಜೆ ಮುಂದೆ ಹೋದ ಕಾಂಗ್ರೆಸ್ ನಾಯಕರು, ಜೆಡಿಎಸ್‌ನ ಭದ್ರ ನೆಲೆಗೆ ಕೈ ಹಾಕಿದರು. ಇದರ ಭಾಗವಾಗಿ ಕೆ.ಎಂ. ಶಿವಲಿಂಗೇಗೌಡ, ಗುಬ್ಬಿ ಶ್ರೀನಿವಾಸ್ ಕಾಂಗ್ರೆಸ್ ಸೇರಿದರು. ಬಿಜೆಪಿಯಲ್ಲಿದ್ದ ಸಿ.ಪಿ. ಯೋಗೇಶ್ವರ್ ಈಚೆಗೆ ಕಾಂಗ್ರೆಸ್‌ಗೆ ಬಂದರು. ಅವಕಾಶ ಇಲ್ಲವೆಂಬುದು ಜೆಡಿಎಸ್ ತೊರೆಯಲು ಒಂದು ಕಾರಣವಾದರೆ, ಒಂದೇ ಜಾತಿಯ ಮತಗಳಿಂದ ಕ್ಷೇತ್ರದಲ್ಲಿ ಗೆಲ್ಲಲು ಸಾಧ್ಯವಿಲ್ಲ ಎಂಬುದು ಮತ್ತೊಂದು ಅಂಶ.

ಇತ್ತೀಚಿನ ವರ್ಷಗಳಲ್ಲಿ ನೆಲ–ಜಲ–ಭಾಷೆಯ ವಿಷಯ ಬಂದಾಗ, ಕನ್ನಡಿಗರಿಗೆ ಏಕೈಕ ಪರ್ಯಾಯ ಎಂದು ಜೆಡಿಎಸ್ ಬಿಂಬಿಸಿಕೊಂಡಿತ್ತು. ಯಾವಾಗ ಬಿಜೆಪಿ ನೇತೃತ್ವದಲ್ಲಿ ಕುಮಾರಸ್ವಾಮಿ ಕೇಂದ್ರ ಸಚಿವರಾದರೋ ಅವರ ಬಾಯಿ ಕಟ್ಟಿಹೋಯಿತು. ಆ ಸ್ಥಿತಿಯನ್ನು ಸಿದ್ದರಾಮಯ್ಯ ಯಶಸ್ವಿಯಾಗಿ ಬಳಸಿಕೊಂಡರು. ಕೇಂದ್ರದಲ್ಲಿ ತಮ್ಮ ಪಕ್ಷ ಅಧಿಕಾರದಲ್ಲಿ ಇಲ್ಲದೇ ಇರುವುದು ಹಾಗೂ ಹಿಂದಿಯನ್ನು ದೇಶವ್ಯಾಪಿ ಹೇರುವ ಉದ್ದೇಶ ಇಟ್ಟುಕೊಂಡ ಬಿಜೆಪಿಯು ಕೇಂದ್ರದಲ್ಲಿ ಅಧಿಕಾರದಲ್ಲಿ ಇರುವುದು ಅವರಿಗೆ ವರದಾನವಾಯಿತು.

ಜೆಡಿಎಸ್‌ನ ಬುಡಕ್ಕೆ ಕೈಹಾಕಿ ನಾಯಕರನ್ನು ಸೆಳೆದು, ಅನಾಯಕತ್ವ ಸೃಷ್ಟಿಸುವುದು ಹಾಗೂ ಜೆಡಿಎಸ್‌ಗಿದ್ದ ಪ್ರಾದೇಶಿಕ ಬದ್ಧತೆಯನ್ನು ಕಾಂಗ್ರೆಸ್‌ಗೆ ವರ್ಗಾಯಿಸಿ, ರಾಷ್ಟ್ರೀಯ ಪಕ್ಷವಾದರೂ ರಾಜ್ಯದ ಹಿತ ಕಾಪಾಡುವ ಏಕೈಕ ಪಕ್ಷವೆಂದು ಸಾರುವಲ್ಲಿ ರಾಜ್ಯದ ಕಾಂಗ್ರೆಸ್ ನಾಯಕರು ತಮ್ಮೆಲ್ಲ ಬಲ ಬಳಸಿದರು. ಇದು ಕೂಡ ದಳದ ಶಕ್ತಿಯನ್ನು ಕುಗ್ಗಿಸುತ್ತಾ ಹೋಯಿತು.

ಬೇಲಿಯ ಮೇಲೆ ಕುಳಿತು ಫಸಲು ತೆಗೆಯುವ ಜಾಯಮಾನ ರೂಢಿಸಿಕೊಂಡ ಜೆಡಿಎಸ್, ಬಲಿಷ್ಠ ಪ್ರಾದೇಶಿಕ ಪಕ್ಷವಾಗುವ ಅವಕಾಶವನ್ನು ಕೈಚೆಲ್ಲಿಬಿಟ್ಟಿದೆ. ಇದನ್ನು ಕಾಂಗ್ರೆಸ್, ಸಮರ್ಪಕವಾಗಿ ಬಳಸಿಕೊಂಡಿದೆ.

ಎಲ್ಲ ಆಘಾತಗಳ ಮಧ್ಯೆ, ಮೂರನೇ ತಲೆಮಾರಿಗೆ ಪಕ್ಷದ ನಾಯಕತ್ವ ವಹಿಸುವ ಇರಾದೆಯಲ್ಲಿರುವ ಗೌಡರ ಕುಟುಂಬ, ನಿಖಿಲ್ ಕುಮಾರಸ್ವಾಮಿಗೆ 'ತೆನೆ' ಹೊರಿಸಿದ್ದಾರೆ. ನಿಖಿಲ್ ಅವರ ರಾಜ್ಯ ಪ್ರವಾಸಕ್ಕೆ ಚಾಲನೆ ನೀಡಿದ ವೇಳೆ ಮಾತನಾಡಿದ ಕುಮಾರಸ್ವಾಮಿ, 'ನಿಮ್ಮ ಕ್ಷೇತ್ರದಲ್ಲಿ ಪಕ್ಷ ಸಂಘಟನೆ ಬಲಪಡಿಸಿ, ದೆಹಲಿಯಿಂದ ಟಿಕೆಟ್ ತರುವ ಹೊಣೆ ನನಗೆ ಬಿಡಿ' ಎಂದಿದ್ದಾರೆ. ವಿಧಾನಸಭೆ ಚುನಾವಣೆಗೆ ಮೂರು ವರ್ಷಗಳು ಇರುವಾಗಲೇ ಮಗನನ್ನು ಕುದುರೆ ಹತ್ತಿಸಿರುವ ಕುಮಾರಸ್ವಾಮಿ, ವಿಧಾನಸೌಧದ ಮೂರನೇ ಮಹಡಿಯನ್ನು ಮತ್ತೆ ಏರಲಿದ್ದಾರೆಯೇ ಎಂಬುದು ಯಕ್ಷ ಪ್ರಶ್ನೆ.

ಸುಭಾಷಿತ

ಆಳುವವರಿಗೆ ಸಂಭವನೀಯ ವಿಕೋಪಗಳ ಕುರಿತು ದೂರದೃಷ್ಟಿ ಇರಬೇಕು. ಆಗ ಮಾತ್ರವೇ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಸಾಧ್ಯ. **–ಚಾಣಕ್ಯ**

ವಾಚಕರ ವಾಣಿ

ಕಲಾವಿದರ ಬಗ್ಗೆ ನಿರ್ಲಕ್ಷ್ಯ ಏಕೆ?

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನೀಡುವ ಮಾಸಾಶನವು ಮೂರು ತಿಂಗಳಿಂದ ಕಲಾವಿದರ ಕೈಸೇರಿಲ್ಲ ಎಂಬ ಸುದ್ದಿ (ಪ್ರ.ವಾ., ಜೂನ್ 16) ಓದಿ ಬೇಸರವಾಯಿತು. ಇಲಾಖೆಯು ನೀಡುವ ಅಲ್ಪ ಧನವೇ ಬಹಳಷ್ಟು ಕಲಾವಿದರ ಜೀವನಕ್ಕೆ ಆಸರೆಯಾಗಿದೆ. ಮಾರ್ಚ್‌ನಲ್ಲಿ ಮಂಡಿಸಿದ್ದ ಬಜೆಟ್‌ನಲ್ಲಿ ಮಾಸಾಶನವನ್ನು ₹2,500ಕ್ಕೆ ಹೆಚ್ಚಿಸುವುದಾಗಿ ಸರ್ಕಾರ ಘೋಷಿಸಿತ್ತು. ಆದರೆ, ಈ ಹೆಚ್ಚಳವೂ ಕಲಾವಿದರಿಗೆ ಇನ್ನೂ ದೊರೆತಿಲ್ಲ ಎಂಬುದು ವಿಷಾದನೀಯ. ಈಗಿನ ಬೆಲೆ ಏರಿಕೆಯ ದಿನಗಳಲ್ಲಿ ಸದ್ಯ ನೀಡುತ್ತಿರುವ ಮಾಸಾಶನವು ಯಾವುದಕ್ಕೂ ಸಾಲುವುದಿಲ್ಲ. ಈ ಮೊತ್ತವನ್ನು ಕನಿಷ್ಠ ₹5 ಸಾವಿರಕ್ಕೆ ಹೆಚ್ಚಿಸಬೇಕಿದೆ.

ಕಡೂರು ಫಣಿಶಂಕರ್, ಬೆಂಗಳೂರು

ನಕಲಿ ರಸಗೊಬ್ಬರ: ಪರೀಕ್ಷೆ ಸುಲಭ

ಡಿಎಪಿ ಹೆಸರಿನಲ್ಲಿ ನಕಲಿ ರಸಗೊಬ್ಬರ ತಯಾರಿಸಿ (ಮಣ್ಣಿಗೆ ಬಣ್ಣ ಬಳಿದು), ಅದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿ ರೈತರನ್ನು ವಂಚಿಸುತ್ತಿರುವುದರ ಬಗ್ಗೆ ವರದಿಯಾಗಿದೆ (ಪ್ರ.ವಾ., ಜೂನ್ 16). ಇಂತಹ ರಸಗೊಬ್ಬರವನ್ನು ರೈತರೇ ಸುಲಭವಾಗಿ ಪರೀಕ್ಷೆ ಮಾಡಬಹುದಾಗಿದೆ.

ಅಂಗೈ ಮೇಲೆ ಡಿಎಪಿ ರಸಗೊಬ್ಬರ ತೆಗೆದುಕೊಂಡು ಎಲೆ ಅಡಿಕೆಗೆ ಬಳಸುವ ಸುಣ್ಣ ಸೇರಿಸಿ ಸ್ವಲ್ಪ ನೀರು ಹಾಕಿ ಬೆರಳಿನಿಂದ ತೀಡಿದರೆ 'ಘಾಟು ವಾಸನೆ' ಬರುತ್ತದೆ. ಒಂದು ವೇಳೆ ಘಾಟು ವಾಸನೆ ಬರದಿದ್ದರೆ ಅದು ನಕಲಿ ರಸಗೊಬ್ಬರ ಎಂದರ್ಥ. ನಕಲಿ ಎಂದು ದೃಢಪಟ್ಟರೆ ಆ ಬಗ್ಗೆ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರಿಗೆ ದೂರು ನೀಡಬೇಕು.

ಎಚ್.ಆರ್. ಪ್ರಕಾಶ್, ಮಂಡ್ಯ

ಕೊನೆಗೂ ಕಳಚಿದ 'ಚೋಕರ್ಸ್' ಪಟ್ಟ

ದಕ್ಷಿಣ ಆಫ್ರಿಕಾ ಕ್ರಿಕೆಟ್ ತಂಡವು 27 ವರ್ಷಗಳ ಬಳಿಕ ಐಸಿಸಿ ಟ್ರೋಫಿಯನ್ನು ಮುಡಿಗೇರಿಸಿಕೊಂಡಿದೆ. 'ಚೋಕರ್ಸ್' ಹಣೆಪಟ್ಟಿ ಕಳಚಿಕೊಂಡಿರುವುದು ಹೆಮ್ಮೆಯ ಸಂಗತಿ. ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಫೈನಲ್ ಪಂದ್ಯದಲ್ಲಿ ಬಲಾಢ್ಯ ಆಸ್ಟ್ರೇಲಿಯಾ ತಂಡವನ್ನು ಮಣಿಸಿದ್ದು ಮತ್ತೊಂದು ಹೆಗ್ಗಳಿಕೆ. ಆದರೆ, ಈ ಜಯದ ಹಿಂದೆ ಬಹಳಷ್ಟು ನೋವು ಇದೆ.

ಐಸಿಸಿ ಟ್ರೋಫಿಯ ಹಲವು ಟೂರ್ನಿಗಳ ಕ್ವಾರ್ಟರ್ ಫೈನಲ್ ಮತ್ತು ಸೆಮಿಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡವು ಸೋಲು ಕಂಡಿತ್ತು. ಇದು ಆ ದೇಶದ ಕ್ರಿಕೆಟ್ ಪ್ರೇಮಿಗಳ ನಿದ್ದೆಗೆಡಿಸಿತ್ತು. ಜಾಗತಿಕ ಕ್ರಿಕೆಟ್ ಲೋಕಕ್ಕೆ ಅತ್ಯುತ್ತಮ ಆಟಗಾರರನ್ನು ನೀಡಿದ ಹೆಗ್ಗಳಿಕೆ ಹೊಂದಿರುವ ದಕ್ಷಿಣ ಆಫ್ರಿಕಾ ತಂಡಕ್ಕೆ ಅಂಟಿದ್ದ ದುರದೃಷ್ಟವನ್ನು ಕಿತ್ತೆಸೆಯುವಲ್ಲಿ ತೆಂಬಾ ಬವುಮಾ ನಾಯಕತ್ವದ ಪಡೆ ಕೊನೆಗೂ ಯಶಸ್ವಿಯಾಗಿದೆ. ಬವುಮಾ ಸಜ್ಜನ ಎಂಬುದರಲ್ಲಿ ಎರಡು ಮಾತಿಲ್ಲ. ಆಫ್ರಿಕಾದಲ್ಲಿನ ಕ್ರೀಡಾ ಮೀಸಲಾತಿಯಿಂದ ಅವರು ಕ್ರಿಕೆಟ್‌ನಲ್ಲಿ ಅವಕಾಶ ಗಿಟ್ಟಿಸಿದ್ದಾರೆ ಎಂಬ ನಿಂದನೆಯು ಅವರಿಗೆ ಮೆತ್ತಿಕೊಂಡಿತ್ತು. ಎಲ್ಲಾ ಟೀಕೆಗಳನ್ನು ತಾಳ್ಮೆಯಿಂದ ಸಹಿಸಿಕೊಂಡಿದ್ದ ಅವರು, ತಮ್ಮ ಅಮೋಘ ಪ್ರತಿಭೆ ಮೂಲಕವೇ ಟೀಕಾಕಾರರ ಬಾಯಿ ಮುಚ್ಚಿಸಿದ್ದಾರೆ.

ಬಾಬು ಶಿರಮೋಜಿ, ಬೆಳಗಾವಿ

ಬೋಧಕರ ಮನೋವೈಕಲ್ಯ!

ರಾಜ್ಯದ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಬೋಧಕ ವರ್ಗದ ವರ್ಗಾವಣೆ ಪ್ರಕ್ರಿಯೆ ಆರಂಭವಾಗಿದೆ. ಕೆಲವರು ಈ ವರ್ಗಾವಣೆ ತಪ್ಪಿಸಿಕೊಳ್ಳಲು ಅಂಗವಿಕಲರೆಂದು ನಕಲಿ ಪ್ರಮಾಣ ಪತ್ರ ಸಲ್ಲಿಸುತ್ತಿರುವ ಕುರಿತು ಕೆಲವು ಪ್ರಾಧ್ಯಾಪಕರೇ ಆರೋಪಿಸಿದ್ದಾರೆ (ಪ್ರ.ವಾ., ಜೂನ್ 16). ವಿದ್ಯಾರ್ಥಿಗಳಿಗೆ ಬೋಧನೆ ಮಾಡುವವರೇ ಇಂತಹ ಕೃತ್ಯ ಎಸಗಿದರೆ ಹೇಗೆ? ತಮ್ಮಲ್ಲಿನ ಮನೋವೈಕಲ್ಯವನ್ನು ಅವರೇ ಸಾಬೀತು ಮಾಡಿದಂತಾಗಿದೆ. ನಕಲಿ ಪ್ರಮಾಣ ಪತ್ರ ಸಲ್ಲಿಸಿದವರ ವಿರುದ್ಧ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕಿದೆ. ಆಗಲಾದರೂ ಅವರಿಗೆ ಬುದ್ಧಿ ಬರಬಹುದು. ಅಂಗವೈಕಲ್ಯವನ್ನು ನಿಜವಾಗಿ ಹೊಂದಿರುವ ಪ್ರಾಧ್ಯಾಪಕರಿಗೆ ಯಾವುದೇ ತೊಂದರೆ ಆಗದಂತೆ ಎಚ್ಚರ ವಹಿಸಬೇಕಿದೆ.

ನಿಖಿತಾ ಶಶಾಂಕ್ ಭಟ್, ಬೆಂಗಳೂರು

ಮೊಬೈಲ್ ಹಾಜರಾತಿ ಸ್ವಾಗತಾರ್ಹ

ರಾಜ್ಯದ ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಸೇರಿ ಸಿಬ್ಬಂದಿಗೆ ಜುಲೈ 1ರಿಂದ ಮೊಬೈಲ್ ಫೋನ್ ಆಧಾರಿತ ಹಾಜರಾತಿ ವ್ಯವಸ್ಥೆ ಜಾರಿಗೆ ಸರ್ಕಾರ ಮುಂದಾಗಿರುವುದು ಉತ್ತಮ ನಿರ್ಧಾರ (ಪ್ರ.ವಾ., ಜೂನ್ 16). ಮೊಬೈಲ್ ಆಧಾರಿತ ಹಾಜರಾತಿಯಿಂದ ಸಾರ್ವಜನಿಕರ ದೂರು ಕಡಿಮೆ ಆಗಲಿದೆ ಎಂಬ ಆಶಯವನ್ನು ಸಕಾರಾತ್ಮಕವಾಗಿ ಸ್ವಾಗತಿಸೋಣ. ಇದರಿಂದ ವೈದ್ಯರು ಎಲ್ಲಿಂದ ಹಾಜರಾತಿ ಹಾಕುತ್ತಿದ್ದಾರೆ ಎಂಬುದು ತಿಳಿಯಲಿದೆ. ಜೊತೆಗೆ, ನೌಕರರು ಕೆಲಸದ ವೇಳೆ ಸ್ಥಳದಲ್ಲಿ ಇದ್ದಾರೆಯೇ ಅಥವಾ ಇಲ್ಲವೇ ಎಂಬುದು ಬಯಲಾಗಲಿದೆ.

ಬೆಳಿಗ್ಗೆ ಕಚೇರಿಗೆ ಬಂದು ಮೊಬೈಲ್ ಫೋನ್ ಮೂಲಕ ಹಾಜರಾತಿ ಹಾಕಿ, ಸ್ವಲ್ಪ ಸಮಯದ ನಂತರ ಜಾಗ ಖಾಲಿ ಮಾಡುತ್ತಾರೆ. ಕರ್ತವ್ಯಲೋಪ ಎಸಗುವ ಇಂತಹ ನೌಕರರ ಮೇಲೂ ನಿಗಾ ವಹಿಸುವುದು ಉತ್ತಮ.

ಎಂ.ಜಿ. ರಂಗಸ್ವಾಮಿ, ಹಿರಿಯೂರು

ಸರ್ಕಾರದ ಇಬ್ಬಗೆ ನೀತಿ

2009ರಲ್ಲಿ ಸರ್ಕಾರದಿಂದ ನೇರ ನೇಮಕವಾದ ಮತ್ತು ಜೆಒಸಿಯಿಂದ ಬಂದು ಪಿಯು ಕಾಲೇಜು ಸೇರಿದ ಉಪನ್ಯಾಸಕರಿಗೆ ವೇತನಸಹಿತ ಬಿ.ಇಡಿ ಕೋರ್ಸ್ ಮಾಡಲು ರಾಜ್ಯ ಸರ್ಕಾರ ಅನುಮತಿ ನೀಡಿದೆ. ಆದರೆ, ಅನುದಾನಿತ ಖಾಸಗಿ ಕಾಲೇಜಿನ ಉಪನ್ಯಾಸಕರಿಗೆ ಮಾತ್ರ ವೇತನರಹಿತವಾಗಿ ಬಿ.ಇಡಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಇದು ದ್ವಂದ್ವ ನೀತಿಯಾಗಿದೆ. ಈ ತಾರತಮ್ಯ ಸರಿಪಡಿಸಲು ಮುಖ್ಯಮಂತ್ರಿಯವರಿಗೂ ಮನವಿ ಸಲ್ಲಿಸಲಾಗಿದೆ. ವಿಳಂಬ ಧೋರಣೆ ತಳೆದಿರುವುದು ಸರಿಯಲ್ಲ.

ಫಾಲ್ಗುಣ ಗೌಡ ಅಚವೆ, ಅಂಕೋಲಾ

ಚುರುಮುರಿ

ಗಣತಿ ವ್ಯಾಕರಣ

• ಡಿ.ಎಸ್.ಲಿಂಗರಾಜು

'ಈಗ ಜಾತಿ ಜನಗಣತಿ ನಡೀತಾ ಅದಲ್ಲ ಅದರಲ್ಲಿ ಸಕಲೆಂಟು ವರ್ಗೀಕರಣ ಅವಂತೆ. ರಾಜಕೀಯದ ಗಣತಿ ಹ್ಯಂಗಿದ್ದತು ಅಂತ ಹುಲಿ ಸಿದ್ದಣ್ಣನ ತಾವೆ ತಿಳಕಮು ಬಾ' ಅಂತ ತುರೇಮಣೆ ಕರಕೋದರು.

'ರಾಜಕೀಯ ವ್ಯಾಕರಣದೇಲಿ ಛಂದಸ್ಸು ಮುಖ್ಯ ಕನ್ರಿ. ನಾವು ಇಲ್ಲಿ ಜಾತಿ ಜನಗಣತಿಯನ್ನ ಮಾತೆ, ರಾಜರ ಯಮಾತಾರಾಜ ಭಾನಸಲಗಂ ಸೂತ್ರದ ಪ್ರಕಾರ ನಿರ್ಧಾರ ಮಾಡ್ತೀವಿ. ಒಂದೇ ಜಾತಿಗೆ ಗಮನ ಕೊಟ್ಟು ಗಣತಿ ಮಾಡಿದ್ರೆ ಅದು ಸ್ವಜಾತೀಯ ಗಣತಿ. ಬ್ಯಾರೇ ಜಾತೀದೂ ಲೆಕ್ಕ ತಕ್ಕಂದು ಹೇಳಿದ್ರೆ ಅದು ವಿಜಾತೀಯ ಗಣತಿ' ಅಂತು ಹುಲಿ.

'ಸಾ ಗಣತಿಯಲ್ಲಿ ರಾಜಕೀಯ ವಿಭಕ್ತಿ ಇರತದ್ರಾ?' ತುರೇಮಣೆ ಕೇಳಿದರು.

'ಭಕ್ತಿ ಈಸ್ ಮಸ್ಟ್. ಗಣತಿ ನಮ್ಮ ಪರವಾಗಿದ್ರೆ ಅದು ಪ್ರಥಮಾ ವಿಭಕ್ತಿ, ವಿರುದ್ಧವಾಗಿದ್ರೆ ದ್ವಿತೀಯಾ ವಿಭಕ್ತಿ. ಜನದ ಪರವಾಗಿದ್ರೆ ಅದು ತೃತೀಯಾ ವಿಭಕ್ತಿ ಕನ್ರಿ. ಗಣತಿ ಪಕ್ಷಕ್ಕೆ ವಿರುದ್ಧವಾಗಿದ್ದರೆ ಅಧಿಕಾರದ ವ್ಯಂಜನ ಸಿಕ್ಕದೆ ಸ್ವರ ಹೊಂಡಕುಲ್ಲ' ಹುಲಿ ವಿವರಿಸಿತು.

'ಆ ಮೇಲೆ ಸಾ?'

'ಪಕ್ಷದ ಗಣಗಳಿಗೆ ಬೇಕಾದಂಗೆ ಪ್ರಾಸಬದ್ಧವಾಗಿ ಗಣತಿ ರಚಿಸಿಕ್ಯಂದ್ರೆ ಅದು ಛಂದೋಬದ್ಧ ಗಣತಿ. ಹಂಗೀಯೆ ವಿರೋಧಪಕ್ಷದೋರ ವಿಚಾರ ಸೇರಿಕ್ಯಂದ್ರೆ ಅದು ಆಗಮ ಸಂಧಿ. ಮೂರೂ ಪಕ್ಷ ಸೇರಿಕ್ಯಂದು ಗಣತಿ ಮಾಡಿದ್ರೆ ಅದು ತ್ರಿಪದಿ'.

'ಸಾ ಗಣತಿಯಲ್ಲಿ ಒಂದಿಗೇ ಎರಡು ಜಾತಿಗಳು ಮಿಕ್ಸಾದ್ರೆ ಅದು ಏನಾತದೆ?'

'ಗಣತಿಯಾದ ಮ್ಯಾಲೆ ಎರಡು ಪ್ರಬಲ ಜಾತಿಗಳು ಒಟ್ಟಾದ್ರೆ ಆಗ ಅಂತ ಒಟ್ಟುಗೂಡುವಿಕೆಯು ಜೋಡು ನುಡಿಗಟ್ಟಾತದೆ ಕಯ್ಯಾ'.

'ಏಡೇಡು ಮೂರು ಸಾರಿ ಗಣತಿ ಮಾಡ್ತಾ ಕುಕಂದ್ರೆ ಅದು ದ್ವಿರುಕ್ತಿ ಅಲ್ಲುವರಾ?' ಅಂತಂದೆ.

'ರಗಳೆ ಆದಾಗ ಇನ್ನೇನು ಮಾಡಕ್ಕಾದದು? ರಾಜಕೀಯದೇಲಿ ಈ ಶಾರ್ದೂಲ ಅಧಿಕಾರ ಕಳಕಂದು ಕರ್ಮಧಾರಯ ಸ್ವಮೋಸವಾತದೆ' ಹುಲಿ ವಿವರಿಸಿತು. ನಾನು ಮುಂದೆ ಜನತೆ ಎದುರಿಸಬೇಕಾದ ಅಪಾಯಗಳನ್ನು ಅರಿತು 'ಮೇಡೇ, ಮೇಡೇ ಮೇಡೇ' ಅಂತ ಅರಚಿಕೊಂಡು ಓಡಿಹೋದೆ.

ಸಂಗತ

ಪ್ರೋತ್ಸಾಹ ಅಗತ್ಯ, ಅನುಕಂಪದ ಕಾಸಲ್ಲ

ಅನುಕಂಪದಿಂದ ನೋಡುವುದರ ಮೂಲಕ ಅಂಗವಿಕಲರನ್ನು ಪರಾವಲಂಬನೆಗೆ ತಳ್ಳುವ ಸಮಾಜದ ಮನಃಸ್ಥಿತಿಯಲ್ಲಿ ಬದಲಾವಣೆ ಅಗತ್ಯ

• ಪ. ರಾಮಕೃಷ್ಣ ಶಾಸ್ತ್ರಿ

ಹುಟ್ಟಿನಿಂದಲೇ ಎರಡೂ ಕಣ್ಣುಗಳು ಇಲ್ಲದ ವ್ಯಕ್ತಿಯೊಬ್ಬರು ಎಂಬತ್ತರ ವಯಸ್ಸಿನಲ್ಲಿ ಸಾವು ಬರುವವರೆಗೂ ಬಳಪದ ಕಲ್ಲಿನ ಕಾವಲಿಗಳನ್ನು ಹೊತ್ತುಕೊಂಡು ಊರಿಂದೂರಿಗೆ ಹೋಗುತ್ತಿದ್ದರು. ಕಾವಲಿಗಳ ಮಾರಾಟದಿಂದ ಬಂದ ಆದಾಯದಲ್ಲಿ ಬದುಕು ಸಾಗಿಸಿದರು. ಕಣ್ಣಿಲ್ಲದಿದ್ದರೂ ಅವರು ಊರಿಂದೂರಿಗೆ ಸಂಚರಿಸುತ್ತಿದ್ದುದು ಆಶ್ಚರ್ಯಕರವಾಗಿತ್ತು. ಅನುಕಂಪದಿಂದ ಯಾರಾದರೂ ಹಣ ಕೊಡಲು ಬಂದರೆ ಅದನ್ನು ನಿರಾಕರಿಸುತ್ತ ಹೇಳುತ್ತಿದ್ದರು: 'ಕಾವಲಿ ತೆಗೆದುಕೊಂಡು ಅದರ ಬೆಲೆ ಕೊಡಿ. ಉಚಿತವಾಗಿ ಹಣ ಕೊಟ್ಟು ನನ್ನನ್ನು ಭಿಕ್ಷುಕನಾಗಿ ಮಾಡಬೇಡಿ'.

ಭಿಕ್ಷೆ ಬೇಡುವುದು ಬಿಟ್ಟರೆ ಬೇರೆ ಏನನ್ನೂ ಮಾಡುವುದು ಅಂಗವಿಕಲರಿಗೆ ಸಾಧ್ಯವಿಲ್ಲ ಎಂದು ಭಾವಿಸಿರುವವರು ಹೆಚ್ಚಾಗಿದ್ದಾರೆ. ಆ ಭಾವನೆಯಿಂದಲೇ ಅಂಗವಿಕಲರಿಗೆ 'ಅನುಕಂಪದ ಕಾಸು' ನೀಡಲು ಸಮಾಜ ಮುಂದಾಗುತ್ತದೆ. ಅವರಲ್ಲಿ ಇರಬಹುದಾದ ಪ್ರತಿಭೆಯನ್ನು ಗುರುತಿಸುವ ಮೂಲಕ ಅಂಗವೈಕಲ್ಯದ ನಡುವೆಯೂ ಸ್ವಾವಲಂಬನೆಯಿಂದ ಜೀವನ ಸಾಗಿಸಲು ಸಮಾಜ ಪ್ರೇರಣೆ ನೀಡುವ ಸಂದರ್ಭಗಳು ಕಡಿಮೆ. ಅಂಗವಿಕಲರನ್ನು ಅಸಹಾಯಕರೆಂದೇ ಬಿಂಬಿಸಿ, ಪರರ ಆಶ್ರಯದಲ್ಲಿ ಅವರು ಬದುಕುವ ವಾತಾವರಣ ರೂಪಿಸುವ ಕೆಲಸವನ್ನು ಎಲ್ಲಾ ಅಂಗಾಂಗಗಳು ಸರಿಯಾಗಿಯೇ ಇರುವವರು ಮಾಡುವುದಿದೆ.

ಕಣ್ಣಿಲ್ಲದ, ಕೈಗಳಿಲ್ಲದ ಮಗು ಜನಿಸಿದಾಗ ಹೆತ್ತವರು ಪರಿತಪಿಸುತ್ತಾರೆ. 'ನಾವು ಅಗಲಿದ ಬಳಿಕ ಮಗುವನ್ನು ಯಾರು ನೋಡಿಕೊಳ್ಳುತ್ತಾರೆ' ಎಂಬ ಭವಿಷ್ಯದ ಚಿಂತೆಯಿಂದ, ಮಗುವಿನ ಬದುಕಿಗೆ ಮುಳ್ಳಾದವರೂ ಇದ್ದಾರೆ. ಇದಕ್ಕೆ ತದ್ವಿರುದ್ಧವಾಗಿ, ಅಂಗಾಂಗ ನ್ಯೂನತೆ ಮಗುವಿಗೆ ಅರಿವಾಗದಂತೆ ಬೆಳೆಸಿ, ದಿಟ್ಟತನದಿಂದ ಜೀವನ ನಿರ್ವಹಿಸುವ ಮಾರ್ಗ ಕಲಿಸಿದ ದಿಟ್ಟ ತಂದೆ– ತಾಯಂದಿರೂ ಇದ್ದಾರೆ. ದಾರಿ ಹುಡುಕುತ್ತಾ ಹೋದರೆ, ಕೃತಕ ಅಂಗಾಂಗಗಳನ್ನು ಬಳಸಿ ಮುನ್ನಡೆಯಲು ಸಹಾಯಕವಾಗುವಂತೆ ವೈದ್ಯಕೀಯ ಆವಿಷ್ಕಾರಗಳೂ ಸಾಕಾರಗೊಂಡಿವೆ.

ಪೋಲಿಯೊ ಬಾಧೆಯಿಂದಾಗಿ ಎಳವೆಯಿಂದಲೇ ಕಾಲುಗಳೆರಡೂ ನಿಷ್ಕ್ರಿಯವಾಗಿರುವ ಮಕ್ಕಳೊಂದಿಗೆ ತೀರ್ಥಕ್ಷೇತ್ರಗಳಿಗೆ ಯಾತ್ರೆ ಕೈಗೊಂಡು, ಮಗುವಿನ ಕಾಲುಗಳನ್ನು ಸರಿಪಡಿಸುವಂತೆ ಬೇಡುವ ದೈವಭಕ್ತರಿಗೂ ಬರವಿಲ್ಲ. ಅದರಿಂದ ಫಲ ಸಿಗುವುದಿಲ್ಲ ಎಂಬ ತಥ್ಯವನ್ನು ಅವರಿಗೆ ಹೇಳಿದರೂ ಜೀರ್ಣಿಸಿಕೊಳ್ಳಲಾರರು.

ಅಂಗವೈಕಲ್ಯವನ್ನು ಮೆಟ್ಟಿ ನಿಂತು ನಿಶ್ಚಿಂತೆಯ ಬದುಕು ರೂಪಿಸಿಕೊಂಡ ಸಾಧಕರ ನೈಜ ಕಥೆಗಳು ಪಠ್ಯಪುಸ್ತಕಗಳಿಗೆ ಸೇರುವ ಅಗತ್ಯವಿದೆ. ಇಂಥ ಸ್ಫೂರ್ತಿ ಕಥನಗಳು, ಅಂಗಾಂಗ ಕೊರತೆಯ ಮಗು ಜನಿಸಿದಾಗ 'ಅಯ್ಯೋ' ಎಂದು ಪರಿತಪಿಸದೆ, ಸವಾಲಿನ ಬದುಕನ್ನು ನಿರ್ವಹಿಸಲು ಮಗುವನ್ನು ಸಜ್ಜುಗೊಳಿಸಲು ಪೋಷಕರಿಗೆ ಪ್ರೇರಣೆ ದೊರೆಯಬಹುದು.

ಅಂಗವೈಕಲ್ಯ ಹೊಂದಿರುವ ವ್ಯಕ್ತಿ ಬೀದಿಬದಿಯಲ್ಲಿ ಬಟ್ಟೆ ಹಾಸಿ ಕುಳಿತುಕೊಂಡು ಕೈ ಚಾಚುವ ಅಗತ್ಯವಿಲ್ಲ ಎಂಬುದನ್ನು, ಅಂತಹ ಮಕ್ಕಳಿಗೆ ಜನ್ಮನೀಡಿದ ಪೋಷಕರು ಗಮನಿಸಬೇಕಾಗಿದೆ. ಪಾರ್ಶ್ವವಾಯು ತಗುಲಿ ದೇಹದ ಒಂದು ಭಾಗದ ಮೇಲೆ ಹಿಡಿತ ಕಳೆದುಕೊಂಡವರು ಕೂಡ ಔಷಧೋಪಚಾರಗಳಿಂದ ಸುಧಾರಿಸಬಹುದೆಂಬುದನ್ನು ವೈದ್ಯಕೀಯ ಜಗತ್ತು ಸಾಧಿಸಿ ತೋರಿಸಿದೆ. ಒಂದು ಅಂಗವಿಲ್ಲ ಎಂಬ ಮಾತ್ರಕ್ಕೆ ಸಹಾನುಭೂತಿ, ಅನುಕಂಪಗಳ ಮಹಾಪೂರವನ್ನೇ ಹರಿಸುವ ಮೂಲಕ, ಸ್ವಂತಿಕೆಯ ಬದುಕಿನ ನಿರ್ಮಾಣದತ್ತ ಲಕ್ಷ್ಯ ಹರಿಸಲೂ ಆಗದಷ್ಟು ವ್ಯಕ್ತಿಯನ್ನು ಮಾನಸಿಕ ದೌರ್ಬಲ್ಯಕ್ಕೆ ಸಮಾಜ ಗುರಿ ಮಾಡಬಾರದು.

ಅಂಗವಿಕಲರ ಕಲ್ಯಾಣವನ್ನೇ ಗುರಿ ಮಾಡಿಕೊಂಡ ಹಲವು ಸಂಸ್ಥೆಗಳು ನಮ್ಮ ನಡುವೆ ಇವೆ. ಕೆಲವು ಸಂಸ್ಥೆಗಳು ಅಂಗವಿಕಲ ವ್ಯಕ್ತಿಗಳಿಗೆ ಗೂಡಂಗಡಿ ಹಾಕಿಕೊಂಡು ವ್ಯಾಪಾರ ಮಾಡಲು ನೆರವಾಗುತ್ತವೆ. ಅದರ ಬದಲಾಗಿ, ದೈಹಿಕ ಕೊರತೆಯನ್ನು ಬದಿಗೊತ್ತಿ ಇತರರಿಗೆ ಸರಿ ಸಮಾನವಾಗಿ ಬಾಳುವಂತಹ ಹುರುಪನ್ನು ಅವರಲ್ಲಿ ಉದ್ದೀಪನಗೊಳಿಸುವುದು ಅಗತ್ಯ. ಅಂಗವೈಕಲ್ಯದ ನಡುವೆಯೂ ಮಹತ್ವವಾದುದನ್ನು ಸಾಧಿಸಬಹುದು ಎನ್ನುವುದಕ್ಕೆ ಮಾಲತಿ ಹೊಳ್ಳ ಅವರಂತಹ ಕ್ರೀಡಾಪಟುಗಳು ನಮಗೆ ಮಾದರಿ. ಪ್ರತಿಯೊಬ್ಬ ಅಂಗವಿಕಲ ವ್ಯಕ್ತಿಯ ಆಳದಲ್ಲಿ ಹುದುಗಿರಬಹುದಾದ ಪ್ರತಿಭೆಯನ್ನು ಹೆಕ್ಕಿ ಪ್ರೋತ್ಸಾಹಿಸುವ ಕೆಲಸ ಸಂಘ–ಸಂಸ್ಥೆಗಳಿಂದ ಆಗಬೇಕು.

ಜನಿಸಿದ ಮಗು ದೈಹಿಕವಾಗಿ ಊನವಾಗಿದ್ದರೆ, ದೇವರ ಶಾಪವೆಂದು ಪೋಷಕರು ಪರಿತಪಿಸುತ್ತಾರೆ. ತಮ್ಮ ಹತಾಶ ಭಾವವನ್ನೇ ಬೆಳೆಯುತ್ತಿರುವ ಮಗುವಿನ ಮನಸ್ಸಿನಲ್ಲೂ ತುಂಬುತ್ತಾರೆ. ದುರ್ದೈವ ಎಂದು ಭಾವಿಸಿದ ಮಗುವಿನ ಭವಿಷ್ಯದ ಬದುಕನ್ನು ಸುದೈವವಾಗಿ ರೂಪಿಸುವ ಹೊಣೆ ಜನ್ಮದಾತರದು.

ಮಗುವಿಗಿಂತ ಹೆಚ್ಚಿನ ಆತ್ಮವಿಶ್ವಾಸ ಹೆತ್ತವರಿಗೆ ಇದ್ದಾಗ, ಮಗು ಬೀದಿಬದಿಯ ಗಳಿಕೆಗೆ ಶರಣಾಗದೆ ಸ್ವಾವಲಂಬನೆಯ ಹಾದಿ ಹುಡುಕಿಕೊಂಡು ಜೀವಿಸುವ ಸಾಧಕನಾಗಬಹುದು. ಮಗುವಿಗೆ ಶಾಪ ಎಂದುಕೊಂಡಿದ್ದ ಬದುಕನ್ನು ಸಹನೆ, ಛಲ ಇವೆರಡರಿಂದಲೇ ವರವಾಗಿ ಪರಿವರ್ತಿಸಬಹುದು. ಅಂತಹ ಮಗು ಯಾರದೋ ಬಳಿ ಕೈಯೊಡ್ಡಿ ವಿದ್ಯಾಭ್ಯಾಸ ಮಾಡಲು ಅವಕಾಶ ಕೊಡಬಾರದು. ಆತ್ಮಾಭಿಮಾನವನ್ನು ಮಗುವಿನಲ್ಲಿ ಬೆಳೆಸುವ ಮೂಲಕ ಮಾದರಿಯ ಜೀವನ ವಿಧಾನವನ್ನು ರೂಪಿಸಬೇಕು. ಹಿರಿಯರ ಪರಿಶ್ರಮ ಎಂದಿಗೂ ವ್ಯರ್ಥವಾಗುವುದಿಲ್ಲ. ಚಿಗುರಿನಲ್ಲೇ ಸಿಗುವ ದೃಢ ಸಾಧನೆಯ ಪೋಷಣೆ, ಅನುಕಂಪದ ಹಂಗಿಲ್ಲದ ಸ್ವಾವಲಂಬನೆಗೆ ಮಾದರಿಯಾಗಿ ಮಗುವನ್ನು ಸದೃಢವಾಗಿ ರೂಪಿಸುತ್ತದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದುಬಾರಿಯಾಗಲಿದೆಯೇ ತೈಲ?

ಇಸ್ರೇಲ್-ಇರಾನ್ ಸಂಘರ್ಷ; ಜಲಮಾರ್ಗ ಮುಚ್ಚುವ ಬೆದರಿಕೆ

ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದೆ. ಪರ್ಷಿಯನ್ ಕೊಲ್ಲಿಯಲ್ಲಿರುವ ಹೊರ್ಮುಜ್ ಜಲಸಂಧಿ ಹಾಗೂ ಕೆಂಪು ಸಮುದ್ರವು ತೈಲ ಮತ್ತು ಸರಕು ಸಾಗಣೆ ಮಾಡುವ ಪ್ರಮುಖ ಜಲಮಾರ್ಗಗಳಾಗಿವೆ. ಇಲ್ಲಿ ಹಡಗುಗಳ ಸಂಚಾರಕ್ಕೆ ಇರಾನ್ ತಡೆ ಒಡ್ಡಿದ್ದರೆ ಭಾರತ, ಚೀನಾ ಸೇರಿದಂತೆ ಏಷ್ಯಾದ ಹಲವು ರಾಷ್ಟ್ರಗಳಿಗೆ ಕಚ್ಚಾ ತೈಲ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ. ಇದರಿಂದ ಇಂಧನ ಬೆಲೆ ಹೆಚ್ಚಾಗುವ ಸಾಧ್ಯತೆಯೂ ಇದೆ. ವಾರದ ಹಿಂದೆ ಹೆಚ್ಚಾಗಿದ್ದ ಕಚ್ಚಾ ತೈಲದ ಬೆಲೆಯಲ್ಲಿ ಈಗ ಕೊಂಚ ಇಳಿಕೆಯಾಗಿದೆ. ಹಾಗಾಗಿ, ಸದ್ಯಕ್ಕೆ ಭಾರತಕ್ಕೆ ಗಂಭೀರ ಆತಂಕ ಇಲ್ಲ ಎನ್ನಲಾಗುತ್ತಿದೆ. ಆದರೆ, ಎರಡೂ ರಾಷ್ಟ್ರಗಳ ನಡುವಿನ ಸೇನಾ ಕಲಹ ಮುಂದುವರಿದರೆ ಪರಿಸ್ಥಿತಿ ಬದಲಾಗಬಹುದು



ಪ್ರಜಾವಾಣಿ ವಾರ್ತೆ

ದೇಶ ದೇಶಗಳ ನಡುವೆ ಒಂದಿಲ್ಲೊಂದು ಸಂಘರ್ಷ ಹುಟ್ಟಿಕೊಳ್ಳುತ್ತಿದ್ದು, ಇದೀಗ ಈ ಪಟ್ಟಿಗೆ ಇಸ್ರೇಲ್-ಇರಾನ್ ಸೇರಿವೆ. ಇರಾನ್‌ನ ತೈಲ ಘಟಕಗಳು, ರಕ್ಷಣಾ ನೆಲೆಗಳ ಮೇಲೆ ಇಸ್ರೇಲ್ ಕ್ಷಿಪಣಿ ದಾಳಿ ನಡೆಸಿದೆ. ಇರಾನ್ ಕೂಡ ಪ್ರತಿದಾಳಿ ನಡೆಸಿದ್ದು, ಎರಡೂ ಕಡೆ ಸಾವು–ನೋವು ವರದಿಯಾಗಿದೆ. ಪಶ್ಚಿಮ ಏಷ್ಯಾದ ಎರಡು ರಾಷ್ಟ್ರಗಳ ನಡುವಿನ ಸಂಘರ್ಷವು ಮತ್ತಷ್ಟು ತೀವ್ರಗೊಂಡರೆ, ಆ ಎರಡು ರಾಷ್ಟ್ರಗಳು ಮಾತ್ರವಲ್ಲದೇ ಭಾರತವೂ ಸೇರಿದಂತೆ ಜಗತ್ತಿನ ಹಲವು ದೇಶಗಳ ಮೇಲೆ ಪರಿಣಾಮ ಉಂಟಾಗುವ ಸಾಧ್ಯತೆ ಇದೆ.

ಭಾರತವು ಇರಾನ್‌ನ ಜಲಮಾರ್ಗ ಮತ್ತು ವಾಯುಮಾರ್ಗಗಳ ಮೂಲಕ ಹಲವು ರೀತಿಯ ಸರಕು ಸಾಗಣೆ ಮಾಡುತ್ತಿದೆ. ಹೊರ್ಮುಜ್ ಜಲಸಂಧಿ ಮತ್ತು ಕೆಂಪು ಸಮುದ್ರವು ಭಾರತವಷ್ಟೇ ಅಲ್ಲದೇ ಹಲವು ದೇಶಗಳಿಗೆ ಪ್ರಮುಖ ಮಾರ್ಗಗಳಾಗಿವೆ. ಹೊರ್ಮುಜ್ ಜಲಸಂಧಿ ಮಾರ್ಗದ ಮೇಲೆ ಇರಾನ್ ನೇರ ನಿಯಂತ್ರಣ ಹೊಂದಿದೆ. ಕೆಂಪು ಸಮುದ್ರದ ನೌಕಾ ಮಾರ್ಗದ ಮೇಲೆ ಅದಕ್ಕೆ ನೇರ ನಿಯಂತ್ರಣ ಇಲ್ಲದಿದ್ದರೂ ಯೆಮನ್‌ನಲ್ಲಿ ಕಾರ್ಯಾಚರಿಸುತ್ತಿರುವ ಹುಥಿ ಬಂಡುಕೋರರ ಮೂಲಕ ಜಲ ಮಾರ್ಗವನ್ನು ಅದು ತಡೆಯಬಹುದು.

ಹೊರ್ಮುಜ್ ಜಲಸಂಧಿ ಏಕೆ ಮುಖ್ಯ?: ಜಾಗತಿಕವಾಗಿ ಈ ಜಲಸಂಧಿಯ ಮೂಲಕವೇ ಐದನೇ ಒಂದು ಭಾಗದಷ್ಟು ಕಚ್ಚಾತೈಲ ಸಾಗಣೆ ಆಗುತ್ತಿದೆ. ಭಾರತವು ತನ್ನ ಬಳಕೆಯ ಹೆಚ್ಚಿನ ಪ್ರಮಾಣದ ಇಂಧನವನ್ನು ಆಮದು ಮಾಡಿಕೊಳ್ಳುತ್ತಿದ್ದು, ಈ ಪೈಕಿ ಬಹುಪಾಲು ಕಚ್ಚಾ ತೈಲ ಮತ್ತು ದ್ರವೀಕೃತ ನೈಸರ್ಗಿಕ ಅನಿಲವು (ಎಲ್‌ಎನ್‌ಜಿ) ಈ ಮಾರ್ಗದ ಮೂಲಕ ಬರುತ್ತಿದೆ.

ಚಿಂತಕರ ಚಾವಡಿ ಜಿಟಿಆರ್‌ಐ ಪ್ರಕಾರ, ಯಾವುದೇ ರೀತಿಯ ಸೇನಾ ಚಟುವಟಿಕೆ ಮತ್ತಿತರ ಕಾರಣಗಳಿಂದ ಈ ಜಲಸಂಧಿಯಲ್ಲಿ ಹಡಗುಗಳ ಸಂಚಾರ ನಿರ್ಬಂಧವಾದರೆ, ಭಾರತಕ್ಕೆ ಸರಕು ಸಾಗಣೆ ವೆಚ್ಚ ಹೆಚ್ಚಾಗುತ್ತದೆ. ಅದರಿಂದ ಸರಕುಗಳ ಬೆಲೆ ಹೆಚ್ಚಾಗಿ, ಹಣದುಬ್ಬರ ಉಂಟಾಗುತ್ತದೆ, ರೂಪಾಯಿ ಮೌಲ್ಯ ಕುಸಿಯುತ್ತಿದೆ. ದೇಶದ ಹಣಕಾಸು ನಿರ್ವಹಣೆ ಕಷ್ಟವಾಗುತ್ತದೆ.

ಕೆಂಪು ಸಮುದ್ರದಲ್ಲಿ ಕಂಪನ: ಇಸ್ರೇಲ್ ಜೂನ್ 14–15ರಂದು ಯೆಮನ್‌ನ ಹುಥಿ ಬಂಡುಕೋರರ ವಿರುದ್ಧ ಕಾರ್ಯಾಚರಣೆ ನಡೆಸಿದ ನಂತರ ಕೆಂಪು ಸಮುದ್ರದಲ್ಲಿ ಕಂಪನ ಸೃಷ್ಟಿಯಾಗಿದೆ. ಹುಥಿ ಪಡೆಗಳು ಕೆಂಪು ಸಮುದ್ರದಲ್ಲಿ ಸಾಗುವ ವಾಣಿಜ್ಯ ಹಡಗುಗಳ ಮೇಲೆ ದಾಳಿ ನಡೆಸಿವೆ.

ಭಾರತದಿಂದ ಯುರೋಪ್, ದಕ್ಷಿಣ ಅಮೆರಿಕ ಮತ್ತು ಅಮೆರಿಕದ ಪೂರ್ವ ಕರಾವಳಿ ಸೇರಿದಂತೆ ಪಶ್ಚಿಮ ದೇಶಗಳಿಗೆ

ಹೊರ್ಮುಜ್ ಜಲಸಂಧಿ ಮೂಲಕ ಅಮೆರಿಕದ ಯುದ್ಧವಿಮಾನ ವಾಹಕ ನೌಕೆ ಸಾಗಿದ್ದ ಸಂಗ್ರಹ ಚಿತ್ರ

ರಫ್ತಾಗುವ ಸರಕುಗಳಲ್ಲಿ ಕಾಲು ಭಾಗಕ್ಕಿಂತ ಹೆಚ್ಚು ಕೆಂಪು ಸಮುದ್ರದಲ್ಲಿರುವ ಬಾಬ್-ಎಲ್ ಮಂಡಬ್ ಜಲಸಂಧಿ ಮೂಲಕ ಸಾಗಣೆಯಾಗುತ್ತವೆ.

ಇಸ್ರೇಲ್ ಮೇಲೆ 2023ರ ಅ.7ರಂದು ಹಮಾಸ್ ಬಂಡುಕೋರರು ದಾಳಿ ನಡೆಸಿದ ನಂತರ ಆರಂಭಗೊಂಡಿದ್ದ ಸಂಘರ್ಷದ ಬಳಿಕ ನಡೆದ ಬೆಳವಣಿಗೆಗಳಿಂದಾಗಿ ಹುಥಿ ಬಂಡುಕೋರರು ಕೆಂಪು ಸಮುದ್ರದಲ್ಲಿ ಸಾಗುವ ವಾಣಿಜ್ಯ ಹಡಗುಗಳ ಮೇಲೆ ದಾಳಿ ನಡೆಸಲು ಆರಂಭಿಸಿದ್ದರು. ಇದರಿಂದಾಗಿ ಬಾಬ್ ಎಲ್ ಮಂಡಬ್ ಜಲಸಂಧಿಯಲ್ಲಿ ಉದ್ವಿಗ್ನ ಸ್ಥಿತಿ ತಲೆದೋರಿತ್ತು. ಅಮೆರಿಕವು ಬಂಡುಕೋರರ ಮೇಲೆ ದಾಳಿ ನಡೆಸಿ ಅವರನ್ನು ಬಗ್ಗುಬಡಿದ ನಂತರ ಆ ಮಾರ್ಗದಲ್ಲಿ ಹಡಗುಗಳ ಸಂಚಾರ ಸರಾಗವಾಯಿತು. ಕ್ರಮೇಣ ಭಾರತದ ಸರಕು ಸಾಗಣೆ ಹಡಗುಗಳು ಈ ಮಾರ್ಗದಲ್ಲಿ ಹಾದುಹೋಗಲಾರಂಭಿಸಿದ್ದವು. ಇದರಿಂದಾಗಿ ಭಾರತದಿಂದ ಅಮೆರಿಕ ಮತ್ತು ಯುರೋಪ್‌ಗೆ ಪ್ರಯಾಣಿಸುವ ಕಾಲಾವಧಿಯಲ್ಲಿ 15–20 ದಿನ ಕಡಿಮೆಯಾಗುತ್ತಿತ್ತು. ಈಗ ಈ ಮಾರ್ಗಕ್ಕೆ ಕುತ್ತು ಬರಬಹುದು ಎನ್ನುವ ಆತಂಕ ವ್ಯಕ್ತವಾಗಿದೆ.

ಭಾರತದಿಂದ ಅಮೆರಿಕಕ್ಕೆ ಮತ್ತು ಅಲ್ಲಿಂದ ಇಲ್ಲಿಗೆ ಹೆಚ್ಚಿನ ಸರಕುಗಳ ಸಾಗಣೆಗೆ ಈಗಲೂ ಕೆಂಪು ಸಮುದ್ರದ ಮಾರ್ಗವನ್ನೇ ಬಳಸಲಾಗುತ್ತಿದೆ. ಜಾಗತಿಕ ಮಟ್ಟದಲ್ಲಿಯೂ ಸರಕು ಸಾಗಣೆಗೆ ಈ ಜಲಮಾರ್ಗವು ಮಹತ್ವದ್ದಾಗಿದೆ. ಆದರೆ, ಇಸ್ರೇಲ್ ದಾಳಿಯಿಂದ ತೀವ್ರ ಸಾವು–ನೋವು ಅನುಭವಿಸುತ್ತಿರುವ ಇರಾನ್, ಹೊರ್ಮುಜ್ ಹಾಗೂ ಕೆಂಪು ಸಮುದ್ರದ ಮಾರ್ಗಗಳನ್ನು ನಿರ್ಬಂಧಿಸುವುದಾಗಿ ಬೆದರಿಕೆ ಒಡ್ಡಿದೆ.

ಜತೆಗೆ, ಜಾಗತಿಕವಾಗಿ ಇರಾನ್ ಶೇ 3ರಷ್ಟು ಕಚ್ಚಾ ತೈಲವನ್ನು ಉತ್ಪಾದಿಸುತ್ತಿದ್ದು, ಚೀನಾ ಸೇರಿದಂತೆ ವಿವಿಧ ದೇಶಗಳಿಗೆ ರಫ್ತು ಮಾಡುತ್ತಿದೆ. ಈಗ ಉದ್ಭವಿಸಿರುವ ಸಂಘರ್ಷದಿಂದ ತೈಲ ಪೂರೈಕೆಗೆ ಅಡ್ಡಿಯುಂಟಾಗುವುದರಿಂದ ಜಾಗತಿಕ ಮಟ್ಟದಲ್ಲಿ ತೈಲಕ್ಕೆ ಬೇಡಿಕೆ ಹೆಚ್ಚಾಗಲಿದೆ. ಅದರ ಪರಿಣಾಮ ಭಾರತದ ಮೇಲೂ ಉಂಟಾಗಲಿದ್ದು, ದೇಶದಲ್ಲಿ ಇಂಧನ ಬೆಲೆ ಹೆಚ್ಚಾಗಲಿದೆ. ಜನ ಹಲವು ರೀತಿಯಲ್ಲಿ ಬೆಲೆ ಏರಿಕೆಯ ಬಿಸಿಯನ್ನು ಅನುಭವಿಸಬೇಕಾಗುತ್ತದೆ.

ವಾಯುಪ್ರದೇಶ ಬಳಕೆಗೆ ಅಡ್ಡಿ: ಸಂಘರ್ಷದ ಕಾರಣ ಇಸ್ರೇಲ್ ಮತ್ತು ಇರಾನ್ ತಮ್ಮ ವಾಯುಪ್ರದೇಶಗಳನ್ನು ನಿರ್ಬಂಧಿಸಿವೆ. ಇದರಿಂದ ಜಾಗತಿಕ ವಿಮಾನಯಾನ ಸೇವೆಗಳಲ್ಲಿ ವ್ಯತ್ಯಯ ಉಂಟಾಗಿದೆ. ಭಾರತದಲ್ಲಿಯೂ ಕೆಲವು ವಿಮಾನಗಳ ಮಾರ್ಗವನ್ನು ಬದಲಾವಣೆ ಮಾಡಲಾಗಿದೆ. ಕೆಲವು ವಿಮಾನಗಳನ್ನು ರದ್ದುಪಡಿಸಲಾಗಿದೆ.

ಇತ್ತೀಚೆಗೆ, ಏರ್ ಇಂಡಿಯಾದ ಮುಂಬೈ-ಲಂಡನ್ ವಿಮಾನವು ಆಗಸದಲ್ಲಿ ಮೂರು ಗಂಟೆ ತಿರುಗಾಡಿ ಭಾರತಕ್ಕೇ ವಾಪಸ್ ಆಗಿತ್ತು. ಇರಾನ್ ವಾಯುಪ್ರದೇಶ ಮುಚ್ಚಿದ್ದರಿಂದ ವಾಪಸ್ ಆಗಬೇಕಾಯಿತು ಎಂದು ಏರ್ ಇಂಡಿಯಾ ಹೇಳಿದೆ. ಸಂಘರ್ಷದಿಂದಾಗಿ ತನ್ನ 12ಕ್ಕೂ ಹೆಚ್ಚು ವಿಮಾನಗಳ ಪ್ರಯಾಣವನ್ನು ರದ್ದುಪಡಿಸಲಾಗಿದೆ ಇಲ್ಲವೇ ಮಾರ್ಗ ಬದಲಾವಣೆ ಮಾಡಲಾಗಿದೆ ಎಂದು ಏರ್ ಇಂಡಿಯಾ ತಿಳಿಸಿದೆ.

ಇರಾನ್, ತನ್ನ ವಾಯುಪ್ರದೇಶವನ್ನು ಮುಚ್ಚಿರುವುದರಿಂದ ಭಾರತದ ವಿಮಾನಗಳು ಹೆಚ್ಚು ದೂರ ಪ್ರಯಾಣಿಸಬೇಕಾಗಿದೆ ಹಾಗೂ ಹೆಚ್ಚು ಇಂಧನ ಹಾಗೂ ಸಮಯ ವ್ಯಯಿಸಬೇಕಾಗಿದೆ. ಸಂಘರ್ಷ ಹೆಚ್ಚು ದಿನ ನಡೆದರೆ, ವಿಮಾನಯಾನ ಸಂಸ್ಥೆಗಳು ಮತ್ತು ಪ್ರಯಾಣಿಕರ ಮೇಲೆ ಆರ್ಥಿಕ ಹೊರೆ ಹೆಚ್ಚಲಿದೆ.

ಆಧಾರ: ಪಿಟಿಐ, ರಾಯಿಟರ್ಸ್, ಬಿಬಿಸಿ

ಭಾರತದ ನಿಲುವೇನು?

ಭಾರತವು ಇಸ್ರೇಲ್ ಮತ್ತು ಇರಾನ್ ಎರಡೂ ದೇಶಗಳೊಂದಿಗೆ ಉತ್ತಮ ಸಂಬಂಧ ಹೊಂದಿದೆ. ಇಸ್ರೇಲ್‌ನಿಂದ ಭಾರಿ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಆಮದು ಮಾಡಿಕೊಳ್ಳುತ್ತಿದೆ. ಇದೇ ಹೊತ್ತಿನಲ್ಲಿ ಇರಾನಿನ ಛಬಹಾರ್ ಬಂದರನ್ನು ಭಾರತ ಅಭಿವೃದ್ಧಿ ಪಡಿಸುತ್ತಿದೆ. ಇದು ಭಾರತಕ್ಕೆ ಅಫ್ಗಾನಿಸ್ತಾನ ಮತ್ತು ಮಧ್ಯ ಏಷ್ಯಾದೊಂದಿಗೆ ಸಂಪರ್ಕ ಕಲ್ಪಿಸುವ ದೃಷ್ಟಿಯಿಂದ ಮಹತ್ವದ್ದಾಗಿದೆ. ಹಾಗಾಗಿ, ಸಂಘರ್ಷದ ಬೆಳವಣಿಗೆಯ ನಡುವೆಯೂ ಇಬ್ಬರೊಂದಿಗೂ ಸ್ನೇಹ ಸಂಬಂಧವನ್ನು ಉಳಿಸಿಕೊಳ್ಳಲು ಅದು ಯತ್ನಿಸುತ್ತಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಭಾರತ ಯಾವ ರಾಷ್ಟ್ರವನ್ನೂ ಬಹಿರಂಗವಾಗಿ ಬೆಂಬಲಿಸಿಲ್ಲ. ಈಗಿನ ಬೆಳವಣಿಗೆಯ ಬಗ್ಗೆ ಆತಂಕ ವ್ಯಕ್ತಪಡಿಸಿದ್ದು ಮಾತುಕತೆ ಮತ್ತು ರಾಜತಾಂತ್ರಿಕ ಮಾರ್ಗಗಳ ಮೂಲಕ ಪರಿಸ್ಥಿತಿ ವಿಕೋಪಕ್ಕೆ ಹೋಗುವುದನ್ನು ತಡೆಯಬೇಕು ಎಂದು ಇಸ್ರೇಲ್ ಮತ್ತು ಇರಾನ್‌ಗೆ ಸಲಹೆ ನೀಡಿದೆ.

ಎರಡೂ ರಾಷ್ಟ್ರಗಳೊಂದಿಗೆ ಭಾರತ ಆತ್ಮೀಯ ಸಂಬಂಧ ಹೊಂದಿದ್ದು, ಅಗತ್ಯವಿರುವ ಎಲ್ಲ ನೆರವನ್ನು ನೀಡಲು ಸಿದ್ಧವಿರುವುದಾಗಿ ವಿದೇಶಾಂಗ ವ್ಯವಹಾರಗಳ ಇಲಾಖೆ ತಿಳಿಸಿದೆ.

ಇಸ್ರೇಲ್ ಪ್ರಧಾನಿ ಬೆಂಜಾಮಿನ್ ನೆತನ್ಯಾಹು ಅವರು ಪ್ರಧಾನಿ ಮೋದಿ ಅವರಿಗೆ ಕರೆ ಮಾಡಿದಾಗಲೂ ಶಾಂತಿ ಮತ್ತು ಸ್ಥಿರತೆ ಕಾಪಾಡುವ ಅಗತ್ಯದ ಬಗ್ಗೆ ಸಲಹೆ ನೀಡಿದ್ದಾರೆ.

ಶಾಂಘೈ ಸಹಕಾರ ಸಂಘಟನೆಯು ಇಸ್ರೇಲ್‌ನ ಕ್ರಮವನ್ನು ಖಂಡಿಸಿ ನೀಡಿರುವ ಹೇಳಿಕೆಯಿಂದ ಭಾರತ ಅಂತರ ಕಾಯ್ದುಕೊಂಡಿದೆ. ತಾನು ಈ ಸಂಬಂಧದ ಚರ್ಚೆಯಲ್ಲಿ ಪಾಲ್ಗೊಂಡಿಲ್ಲ ಎಂದು ಅದು ಹೇಳಿದೆ.

ಹೊರ್ಮುಜ್ ಜಲಸಂಧಿಯ ಪ್ರಾಮುಖ್ಯ

- ಇರಾನ್ ಒಮಾನ್ ನಡುವಿನ **40** ಕಿ.ಮೀ ಅಗಲದ ಸಮುದ್ರ ವ್ಯಾಪ್ತಿಯಲ್ಲಿರುವ ಜಲಸಂಧಿ
- ಜಾಗತಿಕವಾಗಿ ಬಳಸಲಾಗುವ ಕಚ್ಚಾ ತೈಲದಲ್ಲಿ ಐದನೇ ಒಂದು ಭಾಗದಷ್ಟು ತೈಲ ಈ ಜಲಸಂಧಿಯ ಮೂಲಕ ಸಾಗುತ್ತದೆ
- ಪ್ರತಿ ದಿನ **1.8** ಕೋಟಿಯಿಂದ **1.9** ಕೋಟಿ ಬ್ಯಾರೆಲ್‌ಗಳಷ್ಟು ತೈಲವನ್ನು ಹಡಗುಗಳು ಈ ಮಾರ್ಗದಲ್ಲಿ ಕೊಂಡೊಯ್ಯುತ್ತವೆ
- ಜಾಗತಿಕ ಮಟ್ಟದಲ್ಲಿ ಬಳಸಲಾಗುವ ಒಟ್ಟು ದ್ರವೀಕೃತ ನೈಸರ್ಗಿಕ ಅನಿಲದಲ್ಲಿ (ಎಲ್‌ಎನ್‌ಜಿ) ಶೇ **20**ರಷ್ಟು ಅನಿಲವೂ ಇದೇ ಮಾರ್ಗದಲ್ಲಿ ಸಾಗಾಟವಾಗುತ್ತದೆ
- ಭಾರತವು ಶೇ **80**ರಷ್ಟು ಕಚ್ಚಾತೈಲವನ್ನು ಹೊರದೇಶಗಳಿಂದ ಆಮದು ಮಾಡಿಕೊಳ್ಳುತ್ತದೆ. ಈ ಪೈಕಿ ಮೂರನೇ ಎರಡು ಭಾಗದಷ್ಟು ತೈಲ ಈ ಮಾರ್ಗದ ಮೂಲಕ ಭಾರತ ತಲುಪುತ್ತದೆ
- ಭಾರತವು ಇರಾಕ್, ಸೌದಿ ಅರೇಬಿಯಾ ಯುಎಇ, ಅಮೆರಿಕ ಮತ್ತು ರಷ್ಯಾದಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುತ್ತದೆ. ಈ ಪೈಕಿ ಇರಾಕ್, ಸೌದಿ ಅರೇಬಿಯಾ ಮತ್ತು ಯುಎಇಗಳಿಂದ ಬರುವ ತೈಲವು ಈ ಜಲಸಂಧಿ ಮೂಲಕ ಸಾಗುತ್ತದೆ
- ಭಾರತ ಆಮದು ಮಾಡಿಕೊಳ್ಳುತ್ತಿರುವ ದ್ರವೀಕೃತ ನೈಸರ್ಗಿಕ ಅನಿಲದಲ್ಲಿ ಶೇ **50**ರಷ್ಟು ಅನಿಲದ ಸಾಗಣೆಗೆ ಈ ಮಾರ್ಗವನ್ನೇ ಅವಲಂಬಿಸಿದೆ

ಒಂದು ವೇಳೆ ಕೆಂಪು ಸಮುದ್ರದ ಮಾರ್ಗದಲ್ಲಿ ಸರಕು ಸಾಗಣೆ ಸಾಧ್ಯವಾಗದೇ ಹೋದರೆ, ಯುರೋಪ್, ಅಮೆರಿಕ ಸೇರಿದಂತೆ ಪಶ್ಚಿಮ ರಾಷ್ಟ್ರಗಳಿಗೆ ಸರಕುಗಳನ್ನು ರವಾನಿಸಲು ಭಾರತ ದಕ್ಷಿಣ ಆಫ್ರಿಕಾದ ಕೇಪ್ ಆಫ್ ಗುಡ್ ಹೋಪ್ ಮಾರ್ಗವನ್ನು ಅವಲಂಬಿಸಬೇಕಾಗುತ್ತದೆ. ಇದು ಸುತ್ತು ಬಳಸುವ ಮಾರ್ಗವಾಗಿದ್ದು, ಹೆಚ್ಚು ದಿನಗಳು (**38-40** ದಿನಗಳು) ಬೇಕಾಗುತ್ತದೆ. ಸಾಗಣೆ ವೆಚ್ಚವೂ ಜಾಸ್ತಿಯಾಗುತ್ತದೆ

ಬಾಬ್ ಎಲ್–ಮಂಡಬ್ ಜಲಸಂಧಿ ಏಕೆ ಮುಖ್ಯ?

- ಬಾಬ್ ಎಲ್–ಮಂಡಬ್ ಜಲಸಂಧಿಯು ಯೆಮನ್ ಮತ್ತು ಸೊಮಾಲಿಯಾದ ನಡುವೆ ಇರುವ ಮೆಡಿಟೇರಿಯನ್ ಸಮುದ್ರ ಮತ್ತು ಕೆಂಪು ಸಮುದ್ರವನ್ನು ಹಿಂದೂ ಮಹಾ ಸಾಗರದೊಂದಿಗೆ ಬೆಸೆಯುತ್ತದೆ. ಇದು ಕೆಂಪು ಸಮುದ್ರದಲ್ಲಿದೆ
- ಜಾಗತಿಕ ಮಟ್ಟದಲ್ಲಿ ಕಂಟೇನರ್‌ಗಳಲ್ಲಿ ಮಾಡಲಾಗುವ ಶೇ **30**ರಷ್ಟು ಸರಕುಗಳ ಸಾಗಣೆಯು ಈ ಜಲಸಂಧಿಯ ಮೂಲಕ ನಡೆಯುತ್ತದೆ
- ಜಾಗತಿಕ ಮಟ್ಟದ ಶೇ **12**ರಷ್ಟು ವ್ಯಾಪಾರ ಈ ಮಾರ್ಗದಲ್ಲಿ ನಡೆಯುತ್ತದೆ
- ಭಾರತವು ಯುರೋಪ್, ಉತ್ತರ ಆಫ್ರಿಕಾ ಮತ್ತು ಅಮೆರಿಕ ಸೇರಿದಂತೆ ಪಶ್ಚಿಮದ ರಾಷ್ಟ್ರಗಳಿಗೆ ಮಾಡುವ ಶೇ 30ರಷ್ಟು ರಫ್ತುಗಳು ಈ ಮಾರ್ಗವನ್ನು ಅವಲಂಬಿಸಿದೆ
- ಭಾರತವು ಯುರೋಪಿನೊಂದಿಗೆ ಮಾಡುತ್ತಿರುವ ವಾಣಿಜ್ಯ ಸರಕು ವ್ಯಾಪಾರದಲ್ಲಿ ಶೇ **80**ರಷ್ಟು ವ್ಯಾಪಾರ ಕೆಂಪು ಸಮುದ್ರ ಮಾರ್ಗದ ಮೂಲಕ ನಡೆಯುತ್ತದೆ
- ಅಮೆರಿಕದೊಂದಿಗಿನ ವ್ಯಾಪಾರದಲ್ಲೂ ಈ ಮಾರ್ಗ ಮಹತ್ವದ ಪಾತ್ರ ವಹಿಸುತ್ತಿದೆ
- ಭಾರತದ ಒಟ್ಟಾರೆ ಶೇ **34**ರಷ್ಟು ರಫ್ತುಗಳು ಈ ಮಾರ್ಗವನ್ನು ಅವಲಂಬಿಸಿವೆ

ರಾಷ್ಟ್ರೀಯ

ವಾದ್ರಾಗೆ ಇ.ಡಿ ಸಮನ್ಸ್



ರಾಬರ್ಟ್ ವಾದ್ರಾ

ನವದೆಹಲಿ (ಪಿಟಿಐ): ಕಾಂಗ್ರೆಸ್‌ನ ಸಂಸದರಾದ ಪ್ರಿಯಾಂಕಾ ಗಾಂಧಿ ಅವರ ಪತಿ, ಉದ್ಯಮಿ ರಾಬರ್ಟ್ ವಾದ್ರಾ ಅವರಿಗೆ ಜಾರಿ ನಿರ್ದೇಶನಾಲಯವು (ಇ.ಡಿ) ಮತ್ತೆ ಸಮನ್ಸ್ ಜಾರಿಗೊಳಿಸಿದೆ.

ಬ್ರಿಟನ್ ಮೂಲದ ಶಸ್ತ್ರಾಸ್ತ್ರ ಸಲಹೆಗಾರ ಸಂಜಯ್ ಭಂಡಾರಿ ಅವರಿಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ವಿಚಾರಣೆಗಾಗಿ ಜೂನ್ 17ರಂದು ಹಾಜರಾಗುವಂತೆ ಸೂಚಿಸಲಾಗಿದೆ ಎಂದು ಮೂಲಗಳು ಸೋಮವಾರ ತಿಳಿಸಿವೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ತನಿಖೆ ನಡೆಯುತ್ತಿರುವ ಈ ಪ್ರಕರಣದಲ್ಲಿ, ಜೂನ್ 10ರಂದು ವಿಚಾರಣೆಗೆ ಹಾಜರಾಗುವಂತೆ ಈ ಹಿಂದೆ ಸಮನ್ಸ್ ನೀಡಲಾಗಿತ್ತು. ಜೂನ್ 9ರಂದು ಜ್ವರದ ಲಕ್ಷಣಗಳು ಕಾಣಿಸಿಕೊಂಡಿದ್ದರಿಂದ ವಾದ್ರಾ ವಿಚಾರಣೆಗೆ ಹಾಜರಾಗಿರಲಿಲ್ಲ.

ಪಿಎಂಎಲ್‌ಎ ಕಾಯ್ದೆಯಡಿ ಹೇಳಿಕೆ ದಾಖಲಿಸಿಕೊಳ್ಳಲು ತನಿಖಾ ಸಂಸ್ಥೆಯು ವಾದ್ರಾಗೆ ಮತ್ತೆ ಸಮನ್ಸ್ ಜಾರಿಗೊಳಿಸಿದೆ ಎಂದು ತಿಳಿದುಬಂದಿದೆ.

ಹರಿಯಾಣದಲ್ಲಿ 2008ರಲ್ಲಿ ನಡೆದ ಭೂ ಒಪ್ಪಂದದಲ್ಲಿನ ಅಕ್ರಮಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ತನಿಖಾ ಸಂಸ್ಥೆಯು ವಾದ್ರಾ ಅವರನ್ನು ಏಪ್ರಿಲ್‌ನಲ್ಲಿ ಸತತ ಮೂರು ದಿನ ವಿಚಾರಣೆಗೆ ಒಳಪಡಿಸಿತ್ತು. ಮೂರು ಪ್ರಕರಣಗಳಲ್ಲಿ ಇ.ಡಿ ತನಿಖೆ ನಡೆಸುತ್ತಿದೆ.

ದೆಹಲಿಯಲ್ಲಿ ಆದಾಯ ತೆರಿಗೆ ಇಲಾಖೆಯು 2016ರಲ್ಲಿ ದಾಳಿ ನಡೆಸಿದ ಬೆನ್ನಿಗೆ ಭಂಡಾರಿ ಲಂಡನ್‌ಗೆ ಪರಾರಿ ಆಗಿದ್ದರು.

ಇ.ಡಿ.ಯ ಆರೋಪಗಳನ್ನು ರಾಬರ್ಟ್ ವಾದ್ರಾ ನಿರಾಕರಿಸಿದ್ದಾರೆ.

ವರ್ತನೆ ಬದಲಿಸಿಕೊಳ್ಳದ ರಾಜ್ಯಪಾಲ: ಸ್ಟಾಲಿನ್ ಆರೋಪ

ಪ್ರಜಾವಾಣಿ ವಾರ್ತೆ

ಎಂ.ಕೆ. ಸ್ಟಾಲಿನ್

ಚೆನ್ನೈ: 'ಸುಪ್ರೀಂ ಕೋರ್ಟ್‌ನ ನಿರ್ದೇಶನದ ಹೊರತಾಗಿಯೂ ತಮಿಳುನಾಡು ರಾಜ್ಯಪಾಲ ಆರ್.ಎನ್.ರವಿ ಅವರು ತಮ್ಮ ವರ್ತನೆಯನ್ನು ಬದಲಾಯಿಸಿಕೊಳ್ಳುತ್ತಿಲ್ಲ' ಎಂದು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಸೋಮವಾರ ಆರೋಪಿಸಿದರು.

ತಂಜಾವೂರಿನಲ್ಲಿ ಆಯೋಜಿಸಿದ್ದ ಸರ್ಕಾರಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ತಂಜಾವೂರಿನಲ್ಲಿ ಹೊಸದಾಗಿ ಎಂ.ಕರುಣಾನಿಧಿ ವಿಶ್ವವಿದ್ಯಾಲಯ ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಮಸೂದೆಯನ್ನು ಅಧಿವೇಶನದಲ್ಲಿ ಅಂಗೀಕರಿಸಿದ್ದು, ರಾಜ್ಯಪಾಲರ ಅನುಮೋದನೆಗೆ ಕಳುಹಿಸಿ 40 ದಿನಗಳಾಗಿವೆ. ಆದರೆ, ಈವರೆಗೂ ಸಹಿ ಹಾಕಿಲ್ಲ. ನಾವು ಕಳುಹಿಸಿದ ಕೂಡಲೇ ಅನುಮೋದನೆ ನೀಡಿದ್ದರೆ ಈ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯ ಸ್ಥಾಪನೆಗೆ ಶಂಕುಸ್ಥಾಪನೆ ನೆರವೇರಿಸುತ್ತಿದ್ದೆ' ಎಂದು ಹೇಳಿದರು.

'ರಾಜ್ಯಪಾಲರ ಕಚೇರಿ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಹಾಗೂ ವಿರೋಧ ಪಕ್ಷವಾದ ಎಐಎಡಿಎಂಕೆ ಕಡೆಯಿಂದ ಡಿಎಂಕೆ ಅಡೆತಡೆಗಳನ್ನು ಎದುರಿಸುತ್ತಿದೆ' ಎಂದರು.

ಸಿವಿಲ್ ಜಡ್ಜ್ ಹುದ್ದೆ: ಆದೇಶ ಮರುಪರಿಶೀಲನೆಗೆ 'ಸುಪ್ರೀಂ'ಗೆ ಮನವಿ

ನವದೆಹಲಿ (ಪಿಟಿಐ): ಸಿವಿಲ್ ಕೋರ್ಟ್ ನ್ಯಾಯಮೂರ್ತಿ (ಜೂನಿಯರ್ ಡಿವಿಜನ್) ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಮೂರು ವರ್ಷಗಳ ವಕೀಲಿ ವೃತ್ತಿ ಅನುಭವ ಕಡ್ಡಾಯ ಎಂದು ಸುಪ್ರೀಂ ಕೋರ್ಟ್ ಮೇ 20ರಂದು ನೀಡಿದ್ದ ತೀರ್ಪನ್ನು ಮರು ಪರಿಶೀಲನೆಗೆ ಒಳಪಡಿಸಬೇಕು ಎಂದು ಆಗ್ರಹಿಸಿ ವಕೀಲ ಚಂದ್ರಸೇನ್ ಯಾದವ್ ಎಂಬವರು ಅರ್ಜಿ ಸಲ್ಲಿಸಿದ್ದಾರೆ.

ಸುಪ್ರೀಂ ಕೋರ್ಟ್ ಮೇ 20ರಂದು ನೀಡಿದ್ದ ಆದೇಶದಲ್ಲಿ ಸಿವಿಲ್ ಕೋರ್ಟ್ ನ್ಯಾಯಮೂರ್ತಿ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕನಿಷ್ಠ ಮೂರು ವರ್ಷ ವಕೀಲಿ ವೃತ್ತಿ ಮಾಡಿದ ಅನುಭವ ಹೊಂದಿರಬೇಕು ಎಂದು ಎಲ್ಲ ಹೈಕೋರ್ಟ್ ಮತ್ತು ರಾಜ್ಯ ಸರ್ಕಾರಗಳಿಗೆ ಸೂಚಿಸಿತ್ತು.

'ಮೂರು ವರ್ಷಗಳ ವಕೀಲಿ ವೃತ್ತಿ ಕಡ್ಡಾಯ' ಎಂಬ ಆದೇಶದ ಮೂಲಕ ಸಂವಿಧಾನದ 14 ಮತ್ತು 16ನೇ ವಿಧಿಯಡಿ ನೀಡಿರುವ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸಲಾಗಿದೆ. ಸಾರ್ವಜನಿಕ ಸೇವೆಯಲ್ಲಿ ಸಮಾನ ಮತ್ತು ನ್ಯಾಯಯುತ ಅವಕಾಶದ ಮೇಲೂ ಈ ಆದೇಶ ಪ್ರತಿಕೂಲ ಪರಿಣಾಮ ಬೀರುತ್ತದೆ. ಇದರಿಂದ ಸುಪ್ರೀಂ ಕೋರ್ಟ್ ಈ ಆದೇಶವನ್ನು ಪುನರ್ ಪರಿಶೀಲಿಸಬೇಕು ಎಂದು ಚಂದ್ರಸೇನ್ ಮನವಿ ಮಾಡಿದ್ದಾರೆ.

ಪದಬಂಧ 6076

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹಣಕ್ಕಾಗಿ ನಡೆದ ಉಗ್ರವಾದ ಹೊಡೆದಾಟ (4)
3.ಆಹಾರವನ್ನು ಸೇವಿಸದಿರುವಿಕೆ (4)
5.ನಂಜಿನಿಂದ ಕೂಡಿದ ಸಂಗತಿ (3)
6.ಕತ್ತಿಯ ಅಲುಗಿದು (4)
7.ನದಿ ಸಮುದ್ರಕ್ಕೆ ಸೇರುವಡೆಯ ಮೆಕ್ಕಲು ಭೂಮಿ (7)
10.ತಟದಲ್ಲಿದ್ದಾಗ ಮಾಡಿದ ವಂಚನೆ (4)
11.ಸಮಾಧಾನವಾಗಿ ಮಾಡಿಕೊಂಡಿರುವ ಒಪ್ಪಂದ (3)
14.ಇಂಪಾದ ಮಾತು (4)
15.ವಾತದೋಷದಿಂದ ಉಂಟಾಗುವ ವ್ಯಾಧಿ (4)

ಮೇಲಿಂದ ಕೆಳಕ್ಕೆ

1.ಹುಬ್ಬಿನ ಮೇಲಿನ ಮುಖದ ಭಾಗ (2)
2.ಹರ್ಷವಿಲ್ಲಿ ವಿರಳವಾಗಿದೆ (3)
4.ಅಕ್ಕರೆಯಿಂದ ತಿನಿಸಿದ ಸಿಹಿ (3)
5.ಆಗಸದಲ್ಲಿ ಹಾರುವ ಲೋಹದ ಹಕ್ಕಿ (3)
6.ಗಣಿಯಲ್ಲಿ ಹುಟ್ಟಿದುದು (3)
8.ಕಿರೀಟ ಇಲ್ಲಿದೆ (3)
9.ಜ್ಯೋತಿಶ್ಚಕ್ರದ ರಾಶಿಗಳಲ್ಲಿರುವ ಜೋಡಿ! (3)
10.ಅನುವಾದವನ್ನು ಹೀಗೆನ್ನಿ (3)
12.ಆತುರ ಇಲ್ಲಿ ಕಾಣುತ್ತಿದೆ (3)
13.ಜಾಗರೂಕತೆಯಿಂದ ನೋಡಿದ ಸ್ಥಳ! (2)



6075ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಅತಿಮಾನುಷ 4.ಲೆಕ್ಕ 5.ರಾತ್ರಿ
6.ವನಿತ 7.ಕಟವಾಯಿ
8.ಬರಡುಭೂಮಿ 11.ಪದಚ್ಯುತಿ
12.ಭಾವನೆ 13.ರವ
14.ಋಷಿ 15.ನವೀಕರಣ

ಮೇಲಿಂದ ಕೆಳಕ್ಕೆ:
1.ಅನಾವರಣ 2.ಅಕ್ಕ
3.ಷರಾಯಿ 4.ಲೆತಕ್ಕಬ
7.ಕರಡುಪ್ರತಿ 9.ಮಿತಭಾಷಿ
10.ಸವಿನೆನಪು 11.ಪವನ
14.ಋಣ

ಸುಡೊಕು 6460

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7			3		1		6
4		9						
	1		7		2		5	4
		3	5		6	4		
	4						6	7
		5	1		7	3		
	8		6		5	2		3
2		6						
	3	4		7		6	1	

6459 ಸುಡೊಕು

5	2	9	1	3	8	4	7	6
4	7	1	5	6	2	9	8	3
3	6	8	9	4	7	2	5	1
1	9	7	3	5	4	6	2	8
6	3	2	7	8	9	1	4	5
8	5	4	2	1	6	3	9	7
7	8	6	4	2	1	5	3	9
2	1	3	8	9	5	7	6	4
9	4	5	6	7	3	8	1	2

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

17 ಜೂನ್ 2025 ,ಮಂಗಳವಾರ . ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಷಷ್ಠಿ ಗಂ. 14-47 ನಕ್ಷತ್ರ: ಶತಭಿಷ ಗಂ. 25-02 ಯೋಗ: ವಿಷ್ಕಂಭ ಗಂ. 9-34 ಕರಣ: ವಣಜೆ ಗಂ. 14-47, ಮಿಥುನ ಮಾಸದ 03 ನೇ ದಿನ. ಮಳೆ ನಕ್ಷತ್ರ : ಮೃಗಶಿರ 3ನೇ ಪಾದ. ರಾಹುಕಾಲ: ಮಧ್ಯಾಹ್ನ 03-00 –04-30 ಸೂರ್ಯೋದಯ: 06-08 ಸೂರ್ಯಾಸ್ತ : 06-55, ಮುಸ್ಲಿಂ ದಿನಾಂಕ: 20 ಜುಲ್‌ಹಿಜಾ , ಅದೃಷ್ಟ ಸಂಖ್ಯೆ: 5, 7

ಮೇಷ: ಹಿರಿಯರ ಜೀವನಾನುಭವ ಸಲಹೆಗಳನ್ನು ತಿಳಿದುಕೊಂಡು ಎದುರಾದ ಸಮಸ್ಯೆಗೆ ಪರಿಹಾರವನ್ನು ತೆಗೆದುಕೊಳ್ಳಿರಿ. ಷೇರು ಮಾರಾಟದಿಂದ ಲಾಭ . ಶನೈಶ್ಚರನ ಸ್ತೋತ್ರ ಪಠಿಸುವುದರಿಂದ ಒಳಿತಾಗುತ್ತದೆ.

ವೃಷಭ: ಲಾಭ-ನಷ್ಟಗಳ ಬಗ್ಗೆ ಪುನರವಲೋಕನ ಅಗತ್ಯ. ವಿದೇಶಿ ಬಂಡವಾಳಗಳಿಂದ ಲಾಭ ಗಳಿಸುವ ಅವಕಾಶ ಸಿಗಲಿದೆ. ಹಣಕ್ಕೆ ಇರುವ ಅಡಚಣೆಗಳನ್ನು ನಿವಾರಿಸಿಕೊಳ್ಳುವ ಬಗ್ಗೆ ಮಾರ್ಗದರ್ಶಕರನ್ನು ಭೇಟಿ ಮಾಡಿ.

ಮಿಥುನ: ಬೇಜವಾಬ್ದಾರಿತನ, ಕರ್ತವ್ಯ ಕೊರತೆಯಿಂದಾಗಿ ಉಲ್ಲಾಸವನ್ನು ಕಳೆದುಕೊಳ್ಳುವ ಸಮಯ ಎದುರಾಗಲಿದೆ. ಮಾನಸಿಕ ನೆಮ್ಮದಿಗಾಗಿ ಧಾರ್ಮಿಕ ಕಾರ್ಯಗಳನ್ನು ಮಾಡಿ ಅಥವಾ ಪುಣ್ಯಕ್ಷೇತ್ರಗಳ ದರ್ಶನವನ್ನು ಮಾಡಿರಿ.

ಕರ್ಕಾಟಕ: ಹೊಸ ಆಸೆಗಳನ್ನು ಈಡೇರಿಸಿಕೊಳ್ಳುವಂಥ ಉತ್ತಮ ಅವಕಾಶಗಳು ಎದುರಾಗಲಿವೆ. ಹೊಸ ವ್ಯವಹಾರಗಳ ಚಾಲನೆಗೆಂದು ಉತ್ತಮ ಮಾರ್ಗದರ್ಶನವನ್ನು ಹೊಂದುವಿರಿ. ಬಿಳಿ ಬಣ್ಣ ಶುಭಪ್ರದವಾಗಿರುತ್ತದೆ.

ಸಿಂಹ: ಗಂಡ-ಹೆಂಡತಿಯ ಮಧ್ಯದಲ್ಲಿ ಅನಗತ್ಯ ವಾದಗಳು ಬೇಡ. ಇಲಾಖೆ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಬಡ್ತಿ ದೊರೆಯುವ ಸಂಭವವಿದೆ. ಗೃಹಿಣಿಯರು ಉತ್ತಮ ಹೊಗಳಿಕೆಯ ಮಾತುಗಳನ್ನು ಎದುರು ನೋಡಬಹುದು.

ಕನ್ಯಾ: ಹೋಟೆಲ್ ಉದ್ಯಮ ನಡೆಸುವವರು ಅಥವಾ ಆಹಾರ ಪದಾರ್ಥಗಳನ್ನು ಮಾರಾಟ ಮಾಡುವವರು ಸಂಯಮದಿಂದ ನಡೆದುಕೊಳ್ಳುವುದು ಲಾಭ ತಂದುಕೊಡುತ್ತದೆ. ದಿನನಿತ್ಯದ ಹಣಕಾಸಿನ ಕೊರತೆ ಇರುವುದಿಲ್ಲ.

ತುಲಾ: ಅಧಿಕಾರಿ ವರ್ಗದವರಿಗೆ ಸ್ಥಳ ಬದಲಾವಣೆ ಸಂಭವವಿದೆ. ಕೃಷಿ ಕೆಲಸಗಳಿಗೆ ಪರಿಶ್ರಮ ಅಗತ್ಯ. ಘನತೆ–ಗೌರವದ ವಿಚಾರವಾಗಿ ಸ್ಥಾನದ ಅರಿವು ನಿಮಗಾಗುವುದು. ವೃತ್ತಿಪರ ಕೆಲಸಗಳ ಬಗ್ಗೆ ತಿಳಿದುಕೊಳ್ಳುವಿರಿ.

ವೃಶ್ಚಿಕ: ವೈದ್ಯ ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಪ್ರಗತಿ ಕಂಡುಬರಲಿದೆ. ವಿದ್ಯಾಭ್ಯಾಸಕ್ಕೆ ವಿದೇಶಕ್ಕೆ ತೆರಳಲು ಬೇಕಾದ ಪೂರ್ವತಯಾರಿ ಮಾಡಿಕೊಳ್ಳುವಿರಿ. ಇನ್ನೊಬ್ಬರಿಂದ ಹೀಯಾಳಿಕೆಯ ಮಾತನ್ನು ಕೇಳಬೇಕಾಗಬಹುದು.

ಧನು: ಜವಳಿ ವ್ಯಾಪಾರಿಗಳು ವಿಶೇಷ ರಿಯಾಯಿತಿ ಮಾರಾಟಗಳಿಂದ ಲಾಭ ಪಡೆಯುವಿರಿ. ಮಿತ್ರರೊಂದಿಗೆ ಮಾತುಕತೆಗಳಲ್ಲಿ ಕಾಲ ಕಳೆಯುವಂತಾಗಲಿದೆ. ಮನಸ್ಸನ್ನು ಸ್ಥಿಮಿತದಲ್ಲಿ ಇಟ್ಟುಕೊಳ್ಳಬೇಕಾದ ಅಗತ್ಯವಿದೆ.

ಮಕರ: ಕೈಗೊಂಡ ಕೆಲಸಗಳು ಭಾಗಶಃ ಆರ್ಥಿಕ ದುಸ್ಥಿತಿಯಿಂದ ಹಿನ್ನಡೆ ಕಾಣಲಿವೆ. ವೃತ್ತಿರಂಗದಲ್ಲಿ ಅನಿವಾರ್ಯವಾಗಿ ಮೋಸ ಮಾಡಬೇಕಾದ ಸಂದರ್ಭಗಳು ಎದುರಾಗುವುದು.

ಕುಂಭ: ಶುಭ ಸಮಾಚಾರಗಳನ್ನು ಕೇಳುವುದಲ್ಲದೆ ಪ್ರಯತ್ನಿಸಿದ ಎಲ್ಲಾ ಕಾರ್ಯಗಳಲ್ಲಿ ಯಶಸ್ಸು ಪಡೆಯುವಿರಿ. ಮನೆಯಲ್ಲಿ ಸಂತಸದ ವಾತಾವರಣ ಸೃಷ್ಟಿಯಾಗಲಿದೆ. ಮಾನಸಿಕ ಪೀಡೆಗಳಿಗೆ ಒಳಗಾಗದಂತೆ ಕಾಳಜಿ ವಹಿಸಿ.

ಮೀನ: ಐ.ಟಿ. ಕಂಪನಿ ಉದ್ಯೋಗಿಗಳಿಗೆ ಕೆಲಸದ ಒತ್ತಡ ಜಾಸ್ತಿಯಾಗಲಿದೆ. ಅದರ ಪರಿಣಾಮವಾಗಿ ವರಮಾನ ಹೆಚ್ಚಳದ ಸಂಭವವು ಇರುವುದು. ನವದಂಪತಿಗೆ ಹರ್ಷದ ಸಮಾಚಾರ ಕೇಳಿ ಬರಲಿದೆ.

ಅವಮಾನಕ್ಕೆ ಸಾಧನೆಯೇ ಉತ್ತರ

ನುಡಿ ಬೆಳಗು

ದೀಪಾ ಹಿರೇಗುತ್ತಿ

ಭಾನುವಾರ ಮುಗಿದ ಐಸಿಸಿ ಟೆಸ್ಟ್ ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ದಕ್ಷಿಣ ಆಫ್ರಿಕಾ ಚಾಂಪಿಯನ್ ಆಗಿದೆ. ದಶಕ ದಶಕಗಳ ಕಾಲ ತನ್ನ ವರ್ಣಭೇದ ನೀತಿಯಿಂದ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ಬಹಿಷ್ಕರಿಸಲ್ಪಟ್ಟಿದ್ದ ದಕ್ಷಿಣ ಆಫ್ರಿಕಾ ತಂಡಕ್ಕೆ ಕಪ್ಪು ವರ್ಣದ ವ್ಯಕ್ತಿ ನಾಯಕನಾಗಿ ಈ ಟ್ರೋಫಿ ತಂದುಕೊಟ್ಟಿದ್ದು ಇಲ್ಲಿ ನಮೂದಿಸಲೇಬೇಕಾದ ಐತಿಹಾಸಿಕ ದಾಖಲೆ. ತೆಂಬಾ ಬವುಮಾ ಅನ್ನುವ ಈ ಕ್ರಿಕೆಟಿಗ ತಮ್ಮ ದೇಶದ ಕ್ರಿಕೆಟ್ ತಂಡಕ್ಕೆ ನಾಯಕನಾದ ಮೊದಲ ಕಪ್ಪು ಆಟಗಾರ!

ದಾಖಲೆಗಳಲ್ಲಿ ವರ್ಣಭೇದ ನೀತಿ ಇತಿಹಾಸದ ಪುಟ ಸೇರಿದರೂ ಜನರ ಮನಸ್ಸಿನಲ್ಲಿ ಇಂದಿಗೂ ಅದು ಹಸಿರಾಗಿಯೇ ಇದೆ. ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾದ ಬವುಮಾ ಅನುಭವಿಸಿದ ಹೀಗಳಿಕೆ, ಟೀಕೆಗಳು ಒಂದೆರಡಲ್ಲ. ಕಪ್ಪು ವರ್ಣೀಯ ಎಂಬ ಕಾರಣಕ್ಕೆ ಮಾತ್ರವೇ ತಂಡಕ್ಕೆ ಆಯ್ಕೆಯಾದ 'ಕೋಟಾ ಆಟಗಾರ' ಎಂಬ ಹೀಗಳಿಕೆಯಿಂದಲೇ ವೃತ್ತಿಜೀವನ ಶುರು ಮಾಡಿದವರು ಬವುಮಾ. ಅಷ್ಟು ಮಾತ್ರವಲ್ಲ, ಕಡಿಮೆ ಎತ್ತರದ ಕಾರಣಕ್ಕೆ ಅವರ ಕ್ರಿಕೆಟ್ ಸಾಮರ್ಥ್ಯದ ಬಗ್ಗೆಯೇ ಅನುಮಾನಗಳನ್ನು ವ್ಯಕ್ತಪಡಿಸಿದವರಿದ್ದರು. ಇಂತಹ ನೂರಾರು ಟೀಕೆಗಳನ್ನು ಕೇಳಿರಬಹುದು ಬವುಮಾ. ಅಂತರರಾಷ್ಟ್ರೀಯ ಆಟದ ಒತ್ತಡದ ಜತೆಗೆ ನಿರೀಕ್ಷೆಗಳ ಭಾರ, ಅವಮಾನದ ಸಂಕಟ ಎಲ್ಲವೂ ಸೇರಿದರೂ ಬವುಮಾ ಕುಗ್ಗಲಿಲ್ಲ. ಬದಲಿಗೆ ತಮ್ಮನ್ನು ತಾವು ಗಟ್ಟಿಯಾಗಿಸಿಕೊಂಡರು. ಟೀಕೆಗಳಿಗೆ ದಪ್ಪ ಚರ್ಮ ಬೆಳೆಸಿಕೊಂಡುಬಿಟ್ಟೆ ಎನ್ನುವ ಬವುಮಾ ದಿನಂಪ್ರತಿ ತಮ್ಮನ್ನು ತಾವು ಸುಧಾರಿಸಿಕೊಳ್ಳುವತ್ತ ಗಮನ ಕೊಟ್ಟರು. ಒಬ್ಬ ನಾಯಕನಾಗಿ ತಂಡವನ್ನು ಸರಿಯಾದ ಹಾದಿಯಲ್ಲಿ ಮುನ್ನಡೆಸಿದರು. ಬವುಮಾ ನಾಯಕತ್ವ ವಹಿಸಿದ ಯಾವ ಟೆಸ್ಟ್‌ನಲ್ಲೂ ದಕ್ಷಿಣ ಆಫ್ರಿಕಾ ಸೋತಿಲ್ಲ! ಟ್ವೆಂಟಿ ಟ್ವೆಂಟಿ ಮತ್ತು ಏಕದಿನ ಕ್ರಿಕೆಟ್‌ಗಳಲ್ಲೂ ನಾಯಕರಾಗಿ ಒಳ್ಳೆಯ ಸಾಧನೆಯನ್ನೇ ಮಾಡಿದ್ದಾರೆ! ಈ ಸಲದ ಟೆಸ್ಟ್ ವಿಶ್ವಕಪ್ ಗೆಲ್ಲುವುದರ ಮೂಲಕ ದಕ್ಷಿಣ ಆಫ್ರಿಕಾದ ಕ್ರಿಕೆಟ್ ಇತಿಹಾಸದಲ್ಲಿ ತಮ್ಮ ಹೆಸರು ಶಾಶ್ವತವಾಗಿ ನಮೂದಿಸಲ್ಪಡುವಂತೆ ನೋಡಿಕೊಂಡಿದ್ದಾರೆ ತೆಂಬಾ ಬವುಮಾ!

ಬವುಮಾ ಅವರ ಸಮುದಾಯ ವರ್ಣಭೇದ ನೀತಿಯಿಂದ ನಿರಂತರ ಸಂಕಷ್ಟ ಎದುರಿಸುತ್ತಿದ್ದಾಗ ಸಹಾಯಕ್ಕೆ ಬಾರದ ಮಂದಿ ಅವರು ಸಾಧನೆಯ ದಾರಿಯಲ್ಲಿ ಹೊರಟಾಗ ಟೀಕಿಸಿದರು. ಆದರೆ ಅವಮಾನ ಮಾಡಿದವರಿಗೆ ಬವುಮಾ ಅವರಲ್ಲಿನ ಹೋರಾಟದ ಕಿಚ್ಚನ್ನು ಆರಿಸಲಾಗಲಿಲ್ಲ, ಅವರ ಸಾಧನೆಯ ಹಟವನ್ನು ಕಸಿದುಕೊಳ್ಳಲಾಗಲಿಲ್ಲ. ಸಮಾಜ ಮಾಡುವ ಸಣ್ಣ ಸಣ್ಣ ಅವಮಾನಗಳಿಗೆ ಹಿಂಜರಿದು ತಮ್ಮ ಪ್ರಯತ್ನವನ್ನೇ ಕೈಬಿಡುವ, ಇನ್ನೂ ಕೆಲವೊಮ್ಮೆ ಬದುಕಿಗೇ ವಿದಾಯ ಹೇಳಿಬಿಡುವ ಯುವಜನತೆಗೆ ಬವುಮಾ ಅವರ ಸಾಧನೆ ಒಂದು ಪಾಠ. ತಮ್ಮ ಕಡಿಮೆ ಎತ್ತರದ ಕಾರಣಕ್ಕೆ ಟೀಕೆಗೊಳಗಾದ ವ್ಯಕ್ತಿ ತಮ್ಮ ವ್ಯಕ್ತಿತ್ವವನ್ನು ಹಿಮಾಲಯದೆತ್ತರಕ್ಕೆ ಬೆಳೆಸಿಕೊಂಡ ರೀತಿ ನಮ್ಮೆಲ್ಲರಿಗೂ ಸ್ಫೂರ್ತಿಯ ಸೆಲೆ. ❖

ಗುಂಡಣ್ಣ

ವಿನಿಮಯ ದರ: ಡಾಲರ್ 86.06 | ಯುರೊ 99.70 | ಪೌಂಡ್ 111.91 | ಯೆನ್ (100ಕ್ಕೆ) 60

ಷೇರುಪೇಟೆ ವಹಿವಾಟು: 81,118 ಹಿಂದಿನ ಅಂತ್ಯ | 677 | 81,796 ಇಂದಿನ ಅಂತ್ಯ

ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	24,718
ಇಂದಿನ ಅಂತ್ಯ:	24,946
ದಿನದ ಗರಿಷ್ಠ:	24,967
	227

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು		
	100 ಕ್ಕೆ	₹585
	12 ಕ್ಕೆ	₹78
ಮೈಸೂರು:	100 ಕ್ಕೆ	₹590

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹288-562
ದ್ವಿತಳಿ (ಬಿ.ವಿ)	₹350-649

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹193.50
ಆರ್‌ಎಸ್‌ಎಸ್-5	₹188
ಗುಡ್ ಲಾಟ್	₹177

ಮುದ್ರೆ-ಮನೆ ಕಾಫಿ (50 ಕೆಜಿಗೆ)	
ಎಪಿ	₹28,050
ಎಸಿ	₹15,260
ಆರ್‌ಪಿ	₹20,500
ಆರ್‌ಸಿ	₹10,700

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ಅರಸೀಕೆರೆ	₹20000-23000
ಬೆಂಗಳೂರು	₹20000-24000
ದಾವಣಗೆರೆ	₹17500-18250
ತಿಪಟೂರು	₹22000-23456

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1400 (1375)
ಸೋಯಾ (ರಿಫೈನ್ಡ್)	₹1220 (1175)
ಸೂರ್ಯಕಾಂತಿ (ರಿಫೈನ್ಡ್)	₹1350 (1340)
ಪಾಮೋಲಿನ್	₹1200 (1155)

ಈರುಳ್ಳಿ ಧಾರಣೆ (ಪ್ರತಿ ಕ್ವಿಂಟಾಲ್) ಬೆಂಗಳೂರು	
ದೊಡ್ಡ	₹1,500-2,000
ಮಧ್ಯಮ	₹1,000-1,500
ಸಣ್ಣ	₹500-1,000

ವ್ಯಾಪಾರ ಕೊರತೆ ₹1.88 ಲಕ್ಷ ಕೋಟಿ

ನವದೆಹಲಿ (ಪಿಟಿಐ/ರಾಯಿಟರ್ಸ್): ಆಮದು ಪ್ರಮಾಣದಲ್ಲಿನ ಇಳಿಕೆಯಿಂದ ಮೇ ತಿಂಗಳಲ್ಲಿ ದೇಶದ ವ್ಯಾಪಾರ ಕೊರತೆ ₹1.88 ಲಕ್ಷ ಕೋಟಿಯಾಗಿದೆ ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ.

ಸತತ ಎರಡು ತಿಂಗಳಿನಿಂದ ಬೆಳವಣಿಗೆ ಕಂಡಿದ್ದ ರಫ್ತು ಮೇನಲ್ಲಿ ಶೇ 2.17ರಷ್ಟು ಇಳಿಕೆಯಾಗಿದ್ದು, ₹3.32 ಲಕ್ಷ ಕೋಟಿಯಾಗಿದೆ. ಏಪ್ರಿಲ್‌ನಲ್ಲಿ ವ್ಯಾಪಾರ ಕೊರತೆ ₹2.27 ಲಕ್ಷ ಕೋಟಿ ಆಗಿತ್ತು. ಇದಕ್ಕೆ ಹೋಲಿಸಿದರೆ ಮೇ ತಿಂಗಳಲ್ಲಿ ಇಳಿಕೆ ಆಗಿದೆ.

ಆಮದು ಶೇ 1.7ರಷ್ಟು ಕಡಿಮೆಯಾಗಿದ್ದು, ₹5.21 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ರಫ್ತು ಪ್ರಮಾಣದಲ್ಲಿ ಶೇ 3.11 ಹೆಚ್ಚಳವಾಗಿದ್ದು, ₹6.62 ಲಕ್ಷ ಕೋಟಿಯಾಗಿದೆ. ಆಮದು ಶೇ 8ರಷ್ಟು ಹೆಚ್ಚಳವಾಗಿದ್ದು, ₹10.77 ಲಕ್ಷ ಕೋಟಿಯಾಗಿದೆ. ವ್ಯಾಪಾರ ಕೊರತೆ ₹4.14 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ. ಸೇವಾ ರಫ್ತು ₹2.77 ಲಕ್ಷ ಕೋಟಿಯಷ್ಟಾಗಿದೆ.

ರಫ್ತು ಮೌಲ್ಯಕ್ಕಿಂತ ಆಮದು ಮೌಲ್ಯ ಹೆಚ್ಚಿದ್ದರೆ ಅದನ್ನು ವ್ಯಾಪಾರ ಕೊರತೆ ಎಂದು ಕರೆಯಲಾಗುತ್ತದೆ.

'ಜಾಗತಿಕ ವ್ಯಾಪಾರ ನೀತಿಗಳ ಅನಿಶ್ಚಿತತೆ, ಬಿಕ್ಕಟ್ಟಿನ ನಡುವೆಯೂ ಏಪ್ರಿಲ್–ಮೇ ತಿಂಗಳಿನಲ್ಲಿ ದೇಶದ ರಫ್ತು ಉತ್ತಮವಾಗಿದೆ' ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಕಾರ್ಯದರ್ಶಿ ಸುನಿಲ್ ಬರ್ತ್ವಾಲ್ ಹೇಳಿದ್ದಾರೆ.

ಸಂಘರ್ಷಕ್ಕೆ ಬಾಗದ ಷೇರುಪೇಟೆ

ಇಸ್ರೇಲ್–ಇರಾನ್ ಸಂಘರ್ಷದ ನಡುವೆಯೂ ಸೂಚ್ಯಂಕ ಏರಿಕೆ

ಮುಂಬೈ (ಪಿಟಿಐ): ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷ ತೀವ್ರವಾಗಿದ್ದರೂ, ಐ.ಟಿ ಮತ್ತು ತೈಲ ಕಂಪನಿಗಳ ಷೇರು ಖರೀದಿ ಹೆಚ್ಚಳದಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಶೇ 1ರವರೆಗೆ ಏರಿಕೆ ಕಂಡಿವೆ.

ಏಷ್ಯಾದ ಮಾರುಕಟ್ಟೆಗಳು ಗಳಿಕೆ ಕಂಡಿರುವುದು ಮತ್ತು ಬ್ರೆಂಟ್ ಕಚ್ಚಾ ತೈಲದ ಬೆಲೆ ಇಳಿಕೆಯಾಗಿರುವುದು ದೇಶದ ಷೇರು ಸೂಚ್ಯಂಕಗಳ ಏರಿಕೆಗೆ ನೆರವಾಗಿವೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 677 ಅಂಶ (ಶೇ 0.84) ಏರಿಕೆಯಾಗಿ, 81,796ಕ್ಕೆ ವಹಿವಾಟು ಅಂತ್ಯಗೊಂಡಿದೆ. ದಿನದ ವಹಿವಾಟಿನ ನಡುವಿನಲ್ಲಿ 747 ಅಂಶದವರೆಗೆ (ಶೇ 0.92) ಜಿಗಿತ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 227 ಅಂಶ (ಶೇ 0.92) ಹೆಚ್ಚಳವಾಗಿ, 24,946ಕ್ಕೆ ಕೊನೆಗೊಂಡಿದೆ.

ಸೆನ್ಸೆಕ್ಸ್ ಗುಚ್ಛದ ಕಂಪನಿಗಳಲ್ಲಿ ಅಲ್ಟ್ರಾಟೆಕ್ ಸಿಮೆಂಟ್, ಟೆಕ್ ಮಹೀಂದ್ರ, ಎಚ್‌ಸಿಎಲ್ ಟೆಕ್, ಟಿಸಿಎಸ್, ಎಟರ್ನಲ್, ಏಷ್ಯನ್ ಪೇಂಟ್ಸ್, ಟಾಟಾ ಸ್ಟೀಲ್ ಮತ್ತು ಕೋಟಕ್ ಮಹೀಂದ್ರ ಬ್ಯಾಂಕ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಟಾಟಾ ಮೋಟರ್ಸ್, ಅದಾನಿ ಪೋರ್ಟ್ಸ್ ಮತ್ತು ಸನ್ ಫಾರ್ಮಾ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಏಷ್ಯಾದ ಮಾರುಕಟ್ಟೆಯಲ್ಲಿ ದಕ್ಷಿಣ ಕೊರಿಯಾದ ಕೊಸ್ಪಿ, ಜಪಾನ್‌ನ ನಿಕ್ಕೈ, ಶಾಂಘೈನ ಕಾಂಪೊಸಿಟ್ ಇಂಡೆಕ್ಸ್ ಮತ್ತು ಹಾಂಗ್‌ಕಾಂಗ್‌ನ ಹ್ಯಾಂಗ್ ಸೆಂಗ್ ಸಕಾರಾತ್ಮಕ ವಹಿವಾಟು ನಡೆಸಿವೆ.

'ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಬಿಕ್ಕಟ್ಟಿನಿಂದ ಜಾಗತಿಕ ಅನಿಶ್ಚಿತತೆ ಉಂಟಾಗಿದ್ದರೂ, ದೇಶದ ಷೇರುಪೇಟೆ ಚೇತರಿಕೆ ಕಂಡಿದೆ' ಎಂದು ಆಶಿಕಾ ಸ್ಟಾಕ್ ಬ್ರೋಕಿಂಗ್ ಸಮೂಹದ ವಿಶ್ಲೇಷಕ ಸುಂದರ್ ಕೇವತ್ ಹೇಳಿದ್ದಾರೆ.

'ಇಸ್ರೇಲ್ ಮತ್ತು ಇರಾನ್ ನಡುವಿನ ಬಿಕ್ಕಟ್ಟಿನ ನಡುವೆಯೂ ದೇಶದ ಷೇರು ಸೂಚ್ಯಂಕಗಳು ಏರಿಕೆ ಕಂಡಿವೆ. ಲಾರ್ಜ್‌ಕ್ಯಾಪ್ ಕಂಪನಿಗಳ ಷೇರು ಗಳಿಕೆಯು ಸೂಚ್ಯಂಕದ ಏರಿಕೆಗೆ ನೆರವಾದವು. ಜಾಗತಿಕ ಚಂಚಲತೆಯ ಸ್ಥಿತಿಯಿಂದಾಗಿ ಹೂಡಿಕೆದಾರರು ದೀರ್ಘಾವಧಿಗೆ ಹೂಡಿಕೆ ಮಾಡಲು ಮುಂದಾಗಿದ್ದಾರೆ' ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಬೆಳವಣಿಗೆಯು ಮುಂದಿನ ದಿನಗಳಲ್ಲಿ ಮಾರುಕಟ್ಟೆ ಮೇಲೆ ಪ್ರಭಾವ ಬೀರುವ ನಿರೀಕ್ಷೆಯಿದೆ ಎಂದು ಹೇಳಿದ್ದಾರೆ.

ಕಚ್ಚಾ ತೈಲ ದರ ಇಳಿಕೆ

ಮುಂಬೈ/ಲಂಡನ್ (ರಾಯಿಟರ್ಸ್/ಎಎಫ್‌ಪಿ): ಜಾಗತಿಕ ಮಾರುಕಟ್ಟೆಯಲ್ಲಿ ಸೋಮವಾರ ಬ್ರೆಂಟ್ ಕಚ್ಚಾ ತೈಲ ದರವು ಶೇ 0.81ರಷ್ಟು ಇಳಿಕೆಯಾಗಿದೆ. ಪ್ರತೀ ಬ್ಯಾರೆಲ್ ದರ 73.63 ಡಾಲರ್ ಆಗಿದೆ.

ಇರಾನ್–ಇಸ್ರೇಲ್ ಸಂಘರ್ಷದಿಂದ ಶುಕ್ರವಾರದ ವಹಿವಾಟಿನಲ್ಲಿ ಕಚ್ಚಾ ತೈಲ ದರವು ಪ್ರತಿ ಬ್ಯಾರೆಲ್‌ಗೆ 78.50 ಡಾಲರ್‌ವರೆಗೂ ಏರಿಕೆಯಾಗಿತ್ತು. ಆದರೆ, ವಹಿವಾಟಿನ ಅಂತ್ಯದ ವೇಳೆಗೆ 74.23 ಡಾಲರ್ ಆಗಿತ್ತು. ಗುರುವಾರದ ವಹಿವಾಟಿನಲ್ಲಿ ಪ್ರತಿ ಬ್ಯಾರೆಲ್ ದರವು 68.77 ಡಾಲರ್ ಇತ್ತು.

ಇಸ್ರೇಲ್–ಇರಾನ್ ಸಂಘರ್ಷ ವಿಸ್ತರಿಸುತ್ತದೆ ಎನ್ನುವ ಭೀತಿ ಕಡಿಮೆ ಆಗಿದೆ. ಹೀಗಾಗಿ, ತೈಲ ದರವು ಇಳಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

₹400ಕ್ಕೆ ತಲುಪಿದ ಕೊಬ್ಬರಿ ಎಣ್ಣೆ

ಪ್ರಜಾವಾಣಿ ವಾರ್ತೆ

ಮಂಗಳೂರು: ವರ್ಷದ ಹಿಂದೆ ಲೀಟರ್‌ಗೆ ₹200ಕ್ಕೆ ಕುಸಿದಿದ್ದ ಕೊಬ್ಬರಿ ಎಣ್ಣೆಯ (ತೆಂಗಿನೆಣ್ಣೆ) ದರ ಈಗ ₹400ರವರೆಗೆ ತಲುಪಿದೆ.

ತೆಂಗಿನೆಣ್ಣೆ ದುಬಾರಿಯಾಗಲು ಕೊಬ್ಬರಿಯ ಕೊರತೆ ಕಾರಣ. ಪ್ರತಿ ಕೆ.ಜಿ. ಕೊಬ್ಬರಿ ದರ ₹200ರಿಂದ ₹230ರವರೆಗೆ ತಲುಪಿದೆ. ಹಾಗಾಗಿ ತೆಂಗಿನೆಣ್ಣೆ ದರವೂ ದುಪ್ಪಟ್ಟಾಗಿದೆ ಎನ್ನುತ್ತಾರೆ ಕೊಬ್ಬರಿ ಮಿಲ್‌ಗಳ ಮಾಲೀಕರು.

'ವರ್ಷದ ಹಿಂದೆ ತೆಂಗಿನಕಾಯಿ ದರ ನೆಲಕಚ್ಚಿತ್ತು. ಆಗ ತೆಂಗಿನೆಣ್ಣೆಯ ದರ ಲೀಟರ್‌ಗೆ ₹200ರವರೆಗೆ ಇಳಿಕೆಯಾಗಿತ್ತು. ಕ್ರಮೇಣ ದರ ಏರಿಕೆಯಾಗಿ ಪ್ರತಿ ಲೀಟರ್‌ಗೆ ₹ 300ರವರೆಗೆ ತಲುಪಿತ್ತು. ತಿಂಗಳಿನಿಂದ ಈಚೆಗೆ ದರ ಹೆಚ್ಚುತ್ತಲೇ ಇದ್ದು, ಪ್ರಸ್ತುತ ಲೀಟರ್‌ಗೆ ₹ 390ರಿಂದ ₹400ರವರೆಗೆ ಇದೆ' ಎಂದು ಕದ್ರಿಯ ನಂದಿ ಆಯಿಲ್ ಮಿಲ್ ಮಾಲೀಕರಾದ ನಾಗರಾಜ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕರಾವಳಿಯಲ್ಲಿ ಬೆಳೆಯುವ ತೆಂಗಿನ-ಕಾಯಿಯಲ್ಲಿ ಎಣ್ಣೆ ಪ್ರಮಾಣ ಜಾಸ್ತಿ. ಆದರೆ ಈ ಕೊಬ್ಬರಿಯೇ ಈಚೆಗೆ ಸಿಗುತ್ತಿಲ್ಲ. ನಾವು ಪ್ರತಿ ಕೆ.ಜಿ.ಗೆ ₹230 ಕೊಡುತ್ತೇವೆ ಎಂದರೂ ಕೊಬ್ಬರಿ ಕೊಡುವವರಿಲ್ಲ' ಎಂದರು.

'ಒಂದು ಲೀಟರ್ ತೆಂಗಿನೆಣ್ಣೆ ಪಡೆಯಲು ಸುಮಾರು ಒಂದೂ ಮುಕ್ಕಾಲು ಕೆ.ಜಿ. ಕೊಬ್ಬರಿ ಬೇಕು. ಒಂದು ಕೆ.ಜಿ. ಕೊಬ್ಬರಿಗೆ ₹ 350ರವರೆಗೆ ವೆಚ್ಚವಾಗುತ್ತದೆ. ಪ್ರತಿ ಲೀಟರ್ ತೆಂಗಿನೆಣ್ಣೆಯನ್ನು ₹390 ಕ್ಕಿಂತ ಕಡಿಮೆ ದರಕ್ಕೆ ಮಾರಾಟ ಮಾಡಿದರೆ ನಷ್ಟವಾಗುತ್ತದೆ' ಎಂದರು.

'ಎಳನೀರು ದುಬಾರಿ– ಸಿಗುತ್ತಿಲ್ಲ ಕೊಬ್ಬರಿ'

'ಕರಾವಳಿಯಲ್ಲಿ ಕೊಬ್ಬರಿ ಕೊರತೆ ಎದುರಾಗಲು ಮುಖ್ಯಕಾರಣ ಎಳನೀರಿನ ದರ ಗಣನೀಯವಾಗಿ ಹೆಚ್ಚಾಗಿರುವುದು. ಇಲ್ಲಿ ಬೇಸಿಗೆಯಲ್ಲಿ ಎಳನೀರು ₹50ರಿಂದ ₹ 60ಕ್ಕೆ ಮಾರಾಟವಾಗಿದೆ. ವ್ಯಾಪಾರಿಗಳು ಬೆಳೆಗಾರರಿಂದಲೇ ₹35 ಕೊಟ್ಟು ಎಳನೀರು ಖರೀದಿ ಮಾಡಿದ್ದಾರೆ. ತೆಂಗಿನಕಾಯಿಗೂ ಆಗ ಅಷ್ಟು ದರ ಇರಲಿಲ್ಲ. ತೆಂಗಿನಕಾಯಿಗಿಂತ ಎಳನೀರಿಗೇ ಜಾಸ್ತಿ ದರ ಸಿಕ್ಕಿದ್ದರಿಂದ, ತೆಂಗಿನಕಾಯಿಯನ್ನು ಒಣಗಿಸಿ ಕೊಬ್ಬರಿ ಮಾಡಲು ಬೆಳೆಗಾರರು ಆಸಕ್ತಿ ತೋರಿಸಿಲ್ಲ' ಎನ್ನುತ್ತಾರೆ ದಕ್ಷಿಣ ಕನ್ನಡ ತೆಂಗು ರೈತ ಉತ್ಪಾದಕರ ಸಂಸ್ಥೆಯ ಅಧ್ಯಕ್ಷ ಕುಸುಮಾಧರ ಎಸ್.ಕೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಮತಿ. ವಿಶಾಲ ಚಂದ್ರಶೇಖರ್
(ವೃತ್ತಿಪರ ನಿರ್ದೇಶಕರು)
ಇವರು ದಿನಾಂಕ 15/06/2025 (ಭಾನುವಾರ) ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಇಂತಿ ದುಃಖ ತಪ್ತರು :
ಶ್ರೀ ಬನಶಂಕರಿ ಮಹಿಳಾ ಕೋ-ಆಪರೇಟಿವ್ ಬ್ಯಾಂಕ್ ಲಿ.,
ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು

ಸಗಟು ಹಣದುಬ್ಬರ 14 ತಿಂಗಳ ಕನಿಷ್ಠ

ನವದೆಹಲಿ (ಪಿಟಿಐ): ಆಹಾರ ವಸ್ತುಗಳು ಹಾಗೂ ಇಂಧನ ಬೆಲೆ ತಗ್ಗಿದ ಪರಿಣಾಮವಾಗಿ ಸಗಟು ಹಣದುಬ್ಬರ ದರವು ಮೇ ತಿಂಗಳಲ್ಲಿ ಶೇಕಡ 0.39ಕ್ಕೆ ಇಳಿಕೆ ಕಂಡಿದೆ. ಇದು 14 ತಿಂಗಳ ಕನಿಷ್ಠ ಮಟ್ಟ. ಆದರೆ, ಜಾಗತಿಕ ಸಂಘರ್ಷಗಳ ಪರಿಣಾಮವಾಗಿ ಸಗಟು ಬೆಲೆಯಲ್ಲಿ ಏರಿಕೆ ಆಗುವ ಸಾಧ್ಯತೆ ಇದೆ ಎಂದು ತಜ್ಞರು ಅಂದಾಜಿಸಿದ್ದಾರೆ.

ಸಗಟು ಹಣದುಬ್ಬರ ಪ್ರಮಾಣವು ಏಪ್ರಿಲ್‌ನಲ್ಲಿ ಶೇ 0.85ರಷ್ಟು ಇತ್ತು. ಕಳೆದ ವರ್ಷದ ಮೇ ತಿಂಗಳಲ್ಲಿ ಇದು ಶೇ 2.74 ಆಗಿತ್ತು.

ತರಕಾರಿ, ಈರುಳ್ಳಿ, ಆಲೂಗಡ್ಡೆಯ ಬೆಲೆ ಇಳಿದಿರುವ ಕಾರಣಕ್ಕೆ ಮೇ ತಿಂಗಳಲ್ಲಿ ಆಹಾರ ವಸ್ತುಗಳ ಬೆಲೆಯು ಶೇ 1.56ರಷ್ಟು ಇಳಿದಿದೆ ಎಂಬುದನ್ನು ಅಂಕಿ–ಅಂಶಗಳು ಹೇಳುತ್ತಿವೆ. ಮೇ ತಿಂಗಳಲ್ಲಿ ತರಕಾರಿಗಳ ಸಗಟು ಬೆಲೆಯಲ್ಲಿ ಶೇ 21.62ರಷ್ಟು ಇಳಿಕೆ ದಾಖಲಾಗಿದೆ.

ಸಂಕ್ಷಿಪ್ತ ಸುದ್ದಿ

ಎಸ್‌ಬಿಐ ಬಡ್ಡಿ ದರ ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ರೆಪೊ ಆಧಾರಿತ ಸಾಲದ ಮೇಲಿನ ಬಡ್ಡಿ ದರವನ್ನು ಶೇ 0.50ರಷ್ಟು ಕಡಿತಗೊಳಿಸಿದೆ.

ಪರಿಷ್ಕೃತ ಬಡ್ಡಿ ದರವು ಜೂನ್ 15ರಿಂದ ಜಾರಿಗೆ ಬಂದಿದೆ ಎಂದು ಬ್ಯಾಂಕ್ ತಿಳಿಸಿದೆ.

ರೆಪೊ ಆಧಾರಿತ ಸಾಲದ ಬಡ್ಡಿ ದರವು (ಆರ್‌ಎಲ್‌ಎಲ್‌ಆರ್) ಶೇ 7.75 ಆಗಿದೆ. ಎಕ್ಸ್‌ಟರ್ನಲ್ ಬೆಂಚ್‌ಮಾರ್ಕ್ ಲೆಂಡಿಂಗ್ ರೇಟ್ (ಇಬಿಎಲ್‌ಆರ್) ಶೇ 8.65 ಇತ್ತು. ಇದೀಗ ಶೇ 8.15ಕ್ಕೆ ಇಳಿಕೆಯಾಗಿದೆ ಎಂದು ತಿಳಿಸಿದೆ.

ನಿರುದ್ಯೋಗ ಪ್ರಮಾಣ ಮೇ ತಿಂಗಳಿನಲ್ಲಿ ಏರಿಕೆ

ನವದೆಹಲಿ (ಪಿಟಿಐ): ಮೇ ತಿಂಗಳಲ್ಲಿ ದೇಶದಲ್ಲಿನ ನಿರುದ್ಯೋಗ ಪ್ರಮಾಣವು ಶೇಕಡ 5.6ಕ್ಕೆ ಹೆಚ್ಚಳ ಕಂಡಿದೆ. ಇದು ಏಪ್ರಿಲ್‌ನಲ್ಲಿ ಶೇ 5.1ರಷ್ಟು ಇತ್ತು.

15ರಿಂದ 29 ವರ್ಷ ವಯಸ್ಸಿನ ನಡುವಿನವರಲ್ಲಿ ನಿರುದ್ಯೋಗ ಪ್ರಮಾಣವು ಮೇ ತಿಂಗಳಲ್ಲಿ ಶೇ 15ರಷ್ಟಾಗಿದೆ. ಇದು ಏಪ್ರಿಲ್‌ನಲ್ಲಿ ಶೇ 13.8ರಷ್ಟು ಮಾತ್ರ ಇತ್ತು.

ಈ ವಯಸ್ಸಿನ ಮಹಿಳೆಯರಲ್ಲಿ ನಿರುದ್ಯೋಗ ಪ್ರಮಾಣವು ಮೇ ತಿಂಗಳಲ್ಲಿ ಶೇ 16.3ರಷ್ಟು ಆಗಿದೆ. ಇದು ಏಪ್ರಿಲ್‌ನಲ್ಲಿ ಶೇ 14.4ರಷ್ಟು ಇತ್ತು.

ಮುಂಬೈ ಧಾರಣೆ (ಶೇಂಗಾ) 16-06-2025	
ಜಾವಾ 70/80(ಹೊಸ)	9700-9800
ಜಾವಾ 80/90(ಹೊಸ)	9200-9300
ದಪ್ಪ ಮಧ್ಯಪ್ರದೇಶ (ಹೊಸ)	7700-7800
ದಪ್ಪ ಗುಜರಾತ್ (ಹೊಸ)	8000-8100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1410 (1385)
ಒಂದು ವಾರದ ಡೆಲಿವರಿ	1405 (1380)
ಪಾಮ್ ವಾರದ ಡೆಲಿವರಿ	1198 (1153)
ಸೂರ್ಯಕಾಂತಿ ಎಣ್ಣೆ ಕಚ್ಚಾ	1280 (1255)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	98,900 (99,200)
ಬೆಳ್ಳಿ ಕೆ.ಜಿಗೆ	1,06,750 (1,06,300)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಅಡಿಕೆ ಧಾರಣೆ

ಕಾರ್ಕಳ		ಶಿವಮೊಗ್ಗ		ಶಿರಸಿ	
ಹೊಸತು	25000-47500	ರಾಶಿ	20989-57170	ತಟ್ಟಿಬೆಟ್ಟೆ	28119-41499
ಹಳತು	30000-52000	ಸಿಪ್ಪೆಗೋಟು	6099-17629	ಬೆಟ್ಟೆ	28161-38529
ಕುಮಟಾ		ಬೆಟ್ಟೆ	47410-60029	ಬಿಳಿಗೋಟು	21099-33609
ಚಾಲಿ	38869-41399	ಗೊರಬಲು	17890-29699	ಚಾಲಿ	35298-42299
ಚಿಪ್ಪು	24569-29869	ರಾಶಿ	45499-57899	ಕೆಂಪುಗೋಟು	15799-28161
ಕೋಕ	7069-19569	ಸರಕು	60699-81210	ರಾಶಿ	44181-48909
ಫ್ಯಾಕ್ಟರಿ	4372-23770	**ಸಿದ್ದಾಪುರ**		**ಯಲ್ಲಾಪುರ**	
ಹೊಸಚಾಲಿ	35610-42099	ಬಿಳಿಗೋಟು	23900-30119	ಬಿಳಿಗೋಟು	17699-30600
ಸಾಗರ		ಚಾಲಿ	33889-40009	ಚಾಲಿ	31099-42041
ಬಿಳಿಗೋಟು	8269-24375	ಕೋಕ	15119-23899	ಕೋಕ	8899-17410
ಚಾಲಿ	20022-38100	ಹೊಸಚಾಲಿ	33369-38009	ಕೆಂಪುಗೋಟು	20808-25999
ಕೋಕ	6500-22066	ಕೆಂಪುಗೋಟು	17889-24500	ರಾಶಿ	42299-54769
ಕೆಂಪುಗೋಟು	15170-30919	ರಾಶಿ	42009-46009	ತಟ್ಟಿಬೆಟ್ಟೆ	28899-383399



ಭಾವಪೂರ್ಣ ಶ್ರದ್ಧಾಂಜಲಿ
ಶ್ರೀಮತಿ ವಿಶಾಲಾಕ್ಷಿ ಬನಪ್ಪ
(ನಿವೃತ್ತ ವಿಜಯಾ ಬ್ಯಾಂಕ್ ನೌಕರರು)
ನಿರ್ದೇಶಕರು, ಬನಶಂಕರಿ ಮಹಿಳಾ ಸಹಕಾರಿ ಬ್ಯಾಂಕ್, ಬೆಂಗಳೂರು
ನಿಧನ ದಿನಾಂಕ: 15 ಜೂನ್ 2025
ಅಂತಿಮ ಸಂಸ್ಕಾರ ವಿವರಗಳು:
17 ಜೂನ್ 2025 ಬೆಳಿಗ್ಗೆ 11:00 ಗಂಟೆಗೆ
ಸ್ಥಳ: ವಿಲ್ಸನ್ ಗಾರ್ಡನ್ ಚಿತಾಗಾರ,
ಕೆಂಗಲ್ ಹನುಮಂತಯ್ಯ ವೃತ್ತ,
ಹೊಸೂರು ಮುಖ್ಯರಸ್ತೆ, ವಿಲ್ಸನ್ ಗಾರ್ಡನ್,
ಬೆಂಗಳೂರು - 560027
ಚಂದ್ರಶೇಖರ್ ಎಸ್.ಎಸ್. & ಕುಟುಂಬ

ಟೆಹರಾನ್‌ನಲ್ಲಿ ಸಿಲುಕಿದ ಗೌರಿಬಿದನೂರು ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಗೌರಿಬಿದನೂರು ತಾಲ್ಲೂಕಿನ ಅಲೀಪುರ ಗ್ರಾಮದ ಏಳು ವೈದ್ಯಕೀಯ ವಿದ್ಯಾರ್ಥಿಗಳು ಇರಾನ್ ರಾಜಧಾನಿ ಯುದ್ಧಪೀಡಿತ ಟೆಹರಾನ್‌ನಲ್ಲಿ ಸಿಲುಕಿಕೊಂಡಿದ್ದಾರೆ.

ಅಲೀಪುರ ಗ್ರಾಮದ ಹಬೀಬ್ ರಜಾ, ಶಬ್ಬೀರ್ ಅಲಿ, ಇಲ್ಹಾನ್ ಅಲಿ, ಇರ್ಫಾನ್ ಹೈದರ್, ರಜಾ ಅಬ್ಬಾಸ್, ಹಬೀಬ್ ಹುಸೇನ್ ಮತ್ತು ನಕೀರ್ ರಜಾ ಟೆಹರಾನ್‌ನ ವಿವಿಧ ವೈದ್ಯಕೀಯ ಶಿಕ್ಷಣ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

ಗೌರಿಬಿದನೂರಿನ ಹಸನ್ ಸೈಯದ್ ಎಂಬುವವರು 'ಎಕ್ಸ್'ನಲ್ಲಿ ಈ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರನ್ನೂ ಟ್ಯಾಗ್ ಮಾಡಿದ್ದಾರೆ. ವಿದ್ಯಾರ್ಥಿಗಳು ಭಯಭೀತರಾಗಿದ್ದಾರೆ. ಅವರನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಮರಳಿ ಕರೆತರುವಂತೆ ಕೋರಿದ್ದಾರೆ.

ಇಸ್ರೇಲ್‌ನಲ್ಲಿ ಆಲೂರಿನ 30 ಮಂದಿ: ಎಲ್ಲರೂ ಸುರಕ್ಷಿತ ಆಲೂರು (ಹಾಸನ ಜಿಲ್ಲೆ): ತಾಲ್ಲೂಕಿನ ಮಗ್ಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಠದಕೊಪ್ಪಲು, ನವಿಲಹಳ್ಳಿ ಮತ್ತು ಬಡಗಿಪುರ ಗ್ರಾಮದ ಪುರುಷರು, ಮಹಿಳೆಯರು ಸೇರಿದಂತೆ 30 ಮಂದಿ ಇಸ್ರೇಲ್‌ನಲ್ಲಿ 'ಹೋಂಟೇಕರ್' ಕೆಲಸಕ್ಕೆ ಹೋಗಿದ್ದಾರೆ.

ಸದ್ಯ ಇರಾಕ್ ಮತ್ತು ಇಸ್ರೇಲ್ ಮಧ್ಯೆ ಯುದ್ಧ ನಡೆಯುತ್ತಿರುವುದರಿಂದ ಕುಟುಂಬಸ್ಥರು ಆತಂಕಕ್ಕೊಳಗಾಗಿದ್ದರೂ, ಆಗಾಗ ಫೋನ್ ಮೂಲಕ ಮಾತನಾಡುತ್ತಿರುವುದರಿಂದ ಧೈರ್ಯವಾಗಿದ್ದಾರೆ.

9 ವರ್ಷಗಳಿಂದ ಇಲ್ಲಿನ ನಿವಾಸಿಗಳು ಇಸ್ರೇಲ್ ದೇಶದ ಅಶ್‌ಮದ್ ಮತ್ತು ಇತರೆ ಸ್ಥಳಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಕಳೆದ ಬಾರಿ ಯುದ್ಧ ನಡೆದ ಸಂದರ್ಭದಲ್ಲಿ 21 ಜನರು ಇಸ್ರೇಲ್‌ನಲ್ಲಿದ್ದರು. ಮೂರು ವರ್ಷಗಳಿಂದೀಚೆಗೆ 9 ಜನರು ಹೋಗಿದ್ದಾರೆ.

'ನನ್ನ ಪತ್ನಿ ಅನ್ನಿಲಾ ಇಸ್ರೇಲ್‌ನ ಅಶ್‌ಮದ್ ಪ್ರದೇಶದ ಮನೆಯೊಂದರಲ್ಲಿ ಹೋಂ ಟೇಕರ್ ಕೆಲಸ ಮಾಡುತ್ತಿದ್ದಾರೆ. ಮೊದಲು ಎಲ್ಲ ಸಂದರ್ಭದಲ್ಲೂ ಸಂಪರ್ಕದಲ್ಲಿ ಇರುತ್ತಿದ್ದರು. ಯುದ್ಧದ ಪರಿಸ್ಥಿತಿ ನಿರ್ಮಾಣವಾದ ನಂತರ, ಪ್ರತಿದಿನ ಬೆಳಿಗ್ಗೆ ಮತ್ತು ರಾತ್ರಿ 11ಕ್ಕೆ ಮಾತನಾಡುತ್ತಾರೆ' ಎಂದು ನವಿಲಹಳ್ಳಿಯ ಸ್ಟ್ಯಾನ್ಲಿ ತಿಳಿಸಿದರು.

'ಯುದ್ಧಕ್ಕೆ ಸಂಬಂಧಿಸಿದಂತೆ ಸೈರನ್ ಶಬ್ದ ಕೇಳಿಸುತ್ತದೆ. ಮೊಬೈಲ್‌ಗೆ ಮೆಸೇಜ್ ಬರುತ್ತದೆ. ಆಗ ರಕ್ಷಣೆಗಾಗಿ ತಕ್ಷಣ ಬಂಕರ್‌ಗೆ ಹೋಗಿ ಸೇರಿಕೊಳ್ಳುತ್ತಾರೆ. ಹೊರಗಡೆ ಯಾರೂ ತಿರುಗಾಡದಂತೆ ನಿಷೇಧ ಹೇರಿದ್ದಾರೆ. ಸದ್ಯಕ್ಕೆ ಯಾವುದೇ ಆತಂಕಪಡುವಂತಿಲ್ಲ ಎಂದು ಪತ್ನಿ ತಿಳಿಸಿದ್ದಾರೆ' ಎಂದು ಹೇಳಿದರು.

ನಗರಗಳನ್ನು ಗುರಿಯಾಗಿಸಿ ದಾಳಿ ● ಅಮೆರಿಕದ ರಾಯಭಾರ ಕಚೇರಿಗೆ ಹಾನಿ

ಕ್ಷಿಪಣಿ ದಾಳಿ: ಇಸ್ರೇಲ್‌ನ 8 ಸಾವು

ಜೆರುಸಲೇಂ/ ಪ್ಯಾರಿಸ್ (ಎಎಫ್‌ಪಿ): ಇರಾನ್ ಮತ್ತು ಇಸ್ರೇಲ್ ನಡುವಿನ ಸಂಘರ್ಷ ಸೋಮವಾರವೂ ಮುಂದುವರಿದಿದ್ದು, ಉಭಯ ದೇಶಗಳು ಪರಸ್ಪರರ ವಿರುದ್ಧ ವೈಮಾನಿಕ ದಾಳಿಗಳನ್ನು ನಡೆಸಿವೆ.

ಇಸ್ರೇಲ್‌ನ ಪ್ರಮುಖ ನಗರಗಳಾದ ಟೆಲ್ ಅವೀವ್, ಬೆನೆ ಬ್ರಾಕ್, ಪೆಟಾ ಟಿಕ್ವಾ ಮತ್ತು ಹೈಫಾ ನಗರಗಳ ಮೇಲೆ ಇರಾನ್ ಕ್ಷಿಪಣಿ ದಾಳಿ ನಡೆಸಿದೆ. ಇದರ ಪರಿಣಾಮ ಇಸ್ರೇಲ್‌ನಲ್ಲಿ ಸೋಮವಾರ 8 ಮಂದಿ ಮೃತಪಟ್ಟಿದ್ದಾರೆ. ಶುಕ್ರವಾರದಿಂದ ನಡೆದಿರುವ ದಾಳಿಯಲ್ಲಿ ಮೃತಪಟ್ಟ ಇಸ್ರೇಲಿಗರ ಸಂಖ್ಯೆ 24ಕ್ಕೆ ಏರಿಕೆಯಾಗಿದೆ.

ಇರಾನ್ ವಾಯು ದಾಳಿಗೆ ಸಿಲುಕಿದ ಇಸ್ರೇಲ್‌ನ ನಗರಗಳ ಪ್ರಮುಖ ರಸ್ತೆಗಳು, ಹಲವು ಕಟ್ಟಡಗಳು ನಾಶವಾಗಿವೆ. ಟೆಲ್ ಅವೀವ್ ನಗರದಲ್ಲಿನ ಅಮೆರಿಕದ ರಾಯಭಾರ ಕಚೇರಿಯ ಕಟ್ಟಡಕ್ಕೂ ಕ್ಷಿಪಣಿ ದಾಳಿಯಿಂದ ಸ್ವಲ್ಪ ಹಾನಿಯಾಗಿದೆ ಎಂದು ಇಸ್ರೇಲ್‌ನಲ್ಲಿರುವ ಅಮೆರಿಕದ ರಾಯಭಾರಿ ಮೈಕ್ ಹಕಬೀ ತಿಳಿಸಿದ್ದಾರೆ.

ನೆತನ್ಯಾಹು ಖಂಡನೆ: ಇರಾನ್ ದಾಳಿಯನ್ನು ಖಂಡಿಸಿರುವ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, 'ನಾಗರಿಕರು, ಮಹಿಳೆಯರು ಮತ್ತು ಮಕ್ಕಳ ಮೇಲೆ ದಾಳಿ ನಡೆಸಿರುವ ಇರಾನ್‌ಗೆ ತಕ್ಕ ಪಾಠ ಕಲಿಸಲಾಗುವುದು' ಎಂದು ಗುಡುಗಿದ್ದಾರೆ.

ಇಸ್ರೇಲ್ ಶುಕ್ರವಾರದಿಂದ ನಡೆಸಿರುವ ದಾಳಿಯಿಂದಾಗಿ ಇರಾನ್‌ನಲ್ಲಿ ಕನಿಷ್ಠ 224 ಜನರು ಮೃತಪಟ್ಟಿದ್ದಾರೆ ಎಂದು ಇರಾನ್ ಅಧಿಕಾರಿಗಳು ತಿಳಿಸಿದ್ದಾರೆ. ಅಲ್ಲದೆ ಈ ದಾಳಿಯಲ್ಲಿ ಹಿರಿಯ ಮಿಲಿಟರಿ ಕಮಾಂಡರ್‌ಗಳು, ಪರಮಾಣು ವಿಜ್ಞಾನಿಗಳು ಮತ್ತು ನಾಗರಿಕರು ಅಸುನೀಗಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಇರಾನ್ ಸೋಮವಾರ ನಡೆಸಿದ ಕ್ಷಿಪಣಿ ದಾಳಿಯಲ್ಲಿ ಇಸ್ರೇಲ್‌ನ ಟೆಲ್ ಅವೀವ್ ನಗರದ ಕಟ್ಟಡಗಳು ಮತ್ತು ವಾಹನಗಳಿಗೆ ಹಾನಿಯಾಗಿವೆ –ಎಪಿ/ಪಿಟಿಐ ಚಿತ್ರ

ಖಮೇನಿ ಹತ್ಯೆಯ ಯೋಜನೆ ತಡೆದ ಟ್ರಂಪ್

ವಾಷಿಂಗ್ಟನ್ (ಎಪಿ): ಇರಾನ್‌ನ ಪರಮೋಚ್ಚ ನಾಯಕ ಆಯಾತೊಲ್ಲಾ ಅಲಿ ಖಮೇನಿ ಅವರ ಹತ್ಯೆಗೆ ಇಸ್ರೇಲ್ ರೂಪಿಸಿದ್ದ ಯೋಜನೆ ಕಾರ್ಯಗತವಾಗುವುದನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಡೆದಿದ್ದಾರೆ ಎಂದು ಅಮೆರಿಕದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಖಮೇನಿ ಅವರ ಹತ್ಯೆಗೆ ಯೋಜನೆ ರೂಪಿಸಿರುವುದಾಗಿ ಇಸ್ರೇಲ್‌ನ ಅಧಿಕಾರಿಗಳು ಇತ್ತೀಚೆಗೆ ಟ್ರಂಪ್ ಆಡಳಿತಕ್ಕೆ ತಿಳಿಸಿದ್ದರು. ಇದಕ್ಕೆ ಟ್ರಂಪ್ ಅವರು ವಿರೋಧ ವ್ಯಕ್ತಪಡಿಸಿದ್ದಾರೆ ಎಂಬುದನ್ನು ಇಸ್ರೇಲಿ ಅಧಿಕಾರಿಗಳಿಗೆ ಸ್ಪಷ್ಟವಾಗಿ ತಿಳಿಸಿದ್ದೇವೆ' ಎಂದು ಅವರು ವಿವರಿಸಿದ್ದಾರೆ.

ಈ ಕುರಿತು 'ಫಾಕ್ಸ್ ನ್ಯೂಸ್' ಕೇಳಿದ ಪ್ರಶ್ನೆಗೆ ನೇರವಾಗಿ ಉತ್ತರಿಸದ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು, 'ನಾವು ಏನು ಮಾಡಬೇಕೋ ಅದನ್ನು ಮಾಡುತ್ತೇವೆ. ಹಾಗೆಯೇ ಅಮೆರಿಕಕ್ಕೆ ಏನು ಒಳ್ಳೆಯದು ಎಂಬುದೂ ಗೊತ್ತಿದೆ ಎಂದು ಭಾವಿಸುತ್ತೇನೆ' ಎಂದು ಉತ್ತರಿಸಿದ್ದಾರೆ.

ಸುದ್ದಿವಾಹಿನಿ ಕಚೇರಿ ಮೇಲೆ ದಾಳಿ

ಟೆಹರಾನ್‌ನಲ್ಲಿ ನಾಗರಿಕರ ಸ್ಥಳಾಂತರಕ್ಕೆ ಎಚ್ಚರಿಕೆ ನೀಡಿದ್ದ ಇಸ್ರೇಲ್, ಅದರ ಬೆನ್ನಲ್ಲೇ ಇರಾನ್‌ನ ರಾಷ್ಟ್ರೀಯ ಸುದ್ದಿವಾಹಿನಿ ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್ ನ್ಯೂಸ್ ನೆಟ್‌ವರ್ಕ್ ಕಚೇರಿ ಮೇಲೆ ದಾಳಿ ನಡೆಸಿದೆ ಎಂದು 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆ ಮತ್ತು ಎಪಿ ಸುದ್ದಿ ಸಂಸ್ಥೆಗಳು ವರದಿ ಮಾಡಿದೆ.

ಇರಾನ್–ಇಸ್ರೇಲ್ ಮಧ್ಯದ ಯುದ್ಧದ ಕುರಿತ ನೇರಪ್ರಸಾರ ಮಾಡುತ್ತಿರುವಾಗಲೇ ಸುದ್ದಿವಾಹಿನಿ ಕಚೇರಿ ಬಳಿ ಭಾರಿ ಸ್ಫೋಟದ ಸದ್ದು ಕೇಳಿಬಂತು. ನೇರಪ್ರಸಾರದ ಮಧ್ಯೆಯೇ ವಾಹಿನಿಯ ಸ್ಟುಡಿಯೊ ಕಟ್ಟಡದ ಅವಶೇಷಗಳು ಮತ್ತು ದೂಳಿನಿಂದ ಆವೃತವಾಯಿತು. ವಾಹಿನಿಯ ನಿರೂಪಕರು ತಕ್ಷಣವೇ ಕ್ಯಾಮೆರಾ-ಗಳನ್ನು ಆಫ್ ಮಾಡಿದರು.

ಸಂಘರ್ಷ ಶಮನಕ್ಕೆ ಹೆಚ್ಚಿದ ಒತ್ತಡ: ಉಭಯ ದೇಶಗಳ ನಡುವಿನ ಸೇನಾ ಸಂಘರ್ಷದಿಂದ ಉಂಟಾಗಿರುವ ಉದ್ವಿಗ್ನತೆಯನ್ನು ಶಮನಗೊಳಿಸಲು ತಕ್ಷಣವೇ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಚೀನಾ ಉಭಯ ದೇಶಗಳನ್ನು ಒತ್ತಾಯಿಸಿದೆ.

ಖಮೇನಿಗೆ ಅಧಿಕಾರ ಉಳಿಸಿಕೊಳ್ಳುವ ಸವಾಲು

ಇರಾನ್‌ನ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಈಗ ಹಲವು ರೀತಿಯ ಸವಾಲುಗಳನ್ನು ಎದುರಿಸುತ್ತಿದ್ದಾರೆ.

86 ವರ್ಷದ ಖಮೇನಿ ಅವರ ಉತ್ತರಾಧಿಕಾರಿಯ ಬಗ್ಗೆಯೂ ಚರ್ಚೆಯೂ ನಡೆಯುತ್ತಿದೆ. ಆದರೆ, ಈ ಬಗ್ಗೆ ಇದುವರೆಗೆ ಇರಾನ್‌ನಲ್ಲಿ ಸಾಮೂಹಿಕ ಪ್ರತಿಭಟನೆಗಳು ನಡೆದಿಲ್ಲ.

'ಇರಾನ್‌ನ ಆಡಳಿತದಲ್ಲಿ ಬದಲಾವಣೆ ತರುವ ಬಗ್ಗೆ ಇಸ್ರೇಲ್ ಯೋಚಿಸಿರಬಹುದು. ಇರಾನ್‌ನ ನಾಯಕರೊಬ್ಬರು ಕ್ಷಿಪ್ರಕ್ರಾಂತಿ ನಡೆಸುವಂತೆ ಬೆಂಬಲ ನೀಡಬಹುದು ಅಥವಾ ಉನ್ನತ ನಾಯಕನನ್ನೇ ಹತ್ಯೆ ಮಾಡಬಹುದು' ಎಂದು ಬಾಸ್ಟನ್ ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕ ಅರಷ್ ಅಜಿಜಿ ವಿಶ್ಲೇಷಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, 'ಇಸ್ರೇಲ್ ದಾಳಿಯಿಂದ ಇರಾನ್‌ನ ಆಡಳಿತದಲ್ಲಿ ಬದಲಾವಣೆಯಾಗಬಹುದು. ಇರಾನ್ ಜನತೆಯೇ ಈ ಬಗ್ಗೆ ನಿರ್ಧರಿಸಬೇಕು. ಇರಾನ್‌ನಲ್ಲಿ ಆಡಳಿತ ದುರ್ಬಲವಾಗಿದೆ' ಎಂದು ಹೇಳಿದ್ದಾರೆ.

ಇರಾನ್ ವಾಯುರಕ್ಷಣಾ ವ್ಯವಸ್ಥೆ ದುರ್ಬಲಗೊಳಿಸಿದ್ದೇವೆ: ಇಸ್ರೇಲ್

ಟೆಲ್ ಅವೀವ್ (ಎಪಿ): 'ಇರಾನ್ ರಾಜಧಾನಿ ಟೆಹರಾನ್ ಮೇಲೆ ವೈಮಾನಿಕ ನಿಯಂತ್ರಣ ಸಾಧಿಸಲಾಗಿದೆ' ಎಂದು ಇಸ್ರೇಲ್ ಸೇನೆ ಸೋಮವಾರ ಪ್ರತಿಪಾದಿಸಿದೆ

'ಇರಾನ್‌ನ ವಾಯುರಕ್ಷಣಾ ಹಾಗೂ ಕ್ಷಿಪಣಿ ವ್ಯವಸ್ಥೆಯನ್ನೇ ದುರ್ಬಲಗೊಳಿಸಿದ್ದೇವೆ. ಹೀಗಾಗಿ ನಾವು ಟೆಹರಾನ್ ಮೇಲೆ ಯಾವುದೇ ಬೆದರಿಕೆ ಇಲ್ಲದೆ ವೈಮಾನಿಕ ಕಾರ್ಯಾಚರಣೆಗಳನ್ನು ನಡೆಸಬಹುದಾಗಿದೆ' ಎಂದು ಅದು ತಿಳಿಸಿದೆ.

ಪಶ್ಚಿಮ ಇರಾನ್‌ನಿಂದ ಟೆಹರಾನ್‌ವರೆಗಿನ ವಾಯುಸೀಮೆ ಇಸ್ರೇಲ್‌ನ ನಿಯಂತ್ರಣದಲ್ಲಿದೆ. ಇರಾನ್‌ನ 120ಕ್ಕೂ ಹೆಚ್ಚು ಕ್ಷಿಪಣಿಗಳನ್ನು ನಾಶಪಡಿಸಿದ್ದೇವೆ ಎಂದು ಸೇನೆ ಮಾಹಿತಿ ಹಂಚಿಕೊಂಡಿದೆ.

ಇರಾನ್ ದಾಳಿಯಿಂದ ಇಲ್ಲಿಯವರೆಗೆ ಇಸ್ರೇಲ್‌ನಲ್ಲಿ 24 ಜನರು ಮೃತಪಟ್ಟಿದ್ದು, 500 ಜನರು ಗಾಯಗೊಂಡಿದ್ದಾರೆ. ಇರಾನ್ 370ಕ್ಕೂ ಹೆಚ್ಚು ಕ್ಷಿಪಣಿಗಳು ಮತ್ತು ನೂರಾರು ಡ್ರೋನ್‌ಗಳಿಂದ ದಾಳಿ ನಡೆಸಿದೆ ಎಂದು ಇಸ್ರೇಲ್ ಹೇಳಿಕೊಂಡಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.

ಸೌಂದರ್ಯ-ಆರೋಗ್ಯ

Beauty Parlour

ಸೆಲೆಬ್ರಿಟಿ ಸಲೂನ್ & ಸ್ಪಾ (MEN* WOMEN* CHILDREN) ಐಬ್ರೋ ಫೇಷಿಯಲ್ ಬ್ಲೀಚಿಂಗ್-ಕ್ಲೀನ್ ಆಫ್ ಹೇರ್ ಡೈ ಮೆನಿಕ್ಯೂರ್ ಪೆಡಿಕ್ಯೂರ್ ವಿವಿಧ ರೀತಿಯ ಹೇರ್ ಕಟ್ ವ್ಯಾಕ್ಸಿಂಗ್ ಉಚಿತವಾಗಿ ಕೂಡಲಾಗುವುದು - ವಿಳಾಸ: ಎಸ್ ಸಿ ರೋಡ್ ಕುಮಾರ್ ಕೀನೊ ಎದುರುಗಡೆ ಶೇಷಾದ್ರಿಪುರಂ, ಬೆಂಗಳೂರು. 9019626612

ವ್ಯಾಪಾರ

Business Offers

Finance

LOAN AVAILABLE @5% Yearly Interest Business Project Property Mortgage Agriculture Takeover Personal HomeLoan MSME Loan 8787091647Agents Welcome

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

TRAVEL CORNER

Orchid TRAVEL & TOURS ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್
ನಿಮ್ಮ ಪ್ರವಾಸ ನಮ್ಮೊಂದಿಗೆ
ನಂ 98, 1ನೇ ಮಹಡಿ ಡಿವಿಜಿ ರಸ್ತೆ, ಬಸವನಗುಡಿ, ಬೆಂಗಳೂರು – 560 004.
99000 99252
Confirmed Group Departures
11 ದಿನಗಳ

ಸಿಂಗಾಪುರ್

ಮಲೇಶೀಯಾ

ಥೈಲ್ಯಾಂಡ್
ಬೆಂಗಳೂರಿನಿಂದ ಬೆಂಗಳೂರಿಗೆ
ವಿವರಗಳಿಗೆ ಸಂಪರ್ಕಿಸಿ

ಪ್ರವಾಸ

Travel

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 6 ದಿನಗಳು ರಾಮೇಶ್ವರ ಕನ್ಯಾಕುಮಾರಿ ಮಧುರೈ,ಶ್ರೀರಂಗಂ ಸಮಯಪುರಂ ತಿರುಪರಕುಂಡ್ರಂ ಸುಚಿಂದ್ರಂ ತಿರುಚಂದೂರ್ ಧನುಷ್‌ಕೋಡಿ ನವಪಾಷಣಂ ಪಿಳ್ಳಿಯರ್‌ಪಟ್ಟಿ. 9000. 9448390735

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
www.dhclassifieds.com
@500/-* PER SQCM
BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9845114560
+91 9731810277 | 080- 45557163/164

CASAGRAND Presents ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ಚಿತ್ರೋದ್ಯಮಕ್ಕೆ ದಿಕ್ಸೂಚಿಯಾಗಬಲ್ಲ ಸಿನಿಮಾಗಳು

‘ಕಾಸಾಗ್ರ್ಯಾಂಡ್’ ಪ್ರಸ್ತುತ ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ 3ನೇ ಆವೃತ್ತಿಗೆ ದಿನಗಣನೆ ಆರಂಭವಾಗಿದೆ. ಈಗಾಗಲೇ 15 ವಿಭಾಗಗಳ ನಾಮನಿರ್ದೇಶಿತರನ್ನು ಘೋಷಿಸಲಾಗಿದೆ. ಇದೀಗ ‘ಚಿತ್ರೋದ್ಯಮಕ್ಕೆ ದಿಕ್ಸೂಚಿಯಾಗಬಲ್ಲ ಸಿನಿಮಾಗಳು’ ಎಂಬ ವಿಭಾಗದಲ್ಲಿ ನಾಮನಿರ್ದೇಶನಗೊಂಡ ಸಿನಿಮಾಗಳನ್ನು ಘೋಷಿಸುವ ಸಮಯ. ಈ ವಿಭಾಗಕ್ಕೆ ನಾಮನಿರ್ದೇಶಿತಗೊಂಡ ಸಿನಿಮಾಗಳ ಪೈಕಿ ವಿಜೇತರನ್ನು ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ ಮುಖ್ಯ ತೀರ್ಪುಗಾರರೇ ಆಯ್ಕೆ ಮಾಡಲಿದ್ದಾರೆ. ಜೂನ್ 27ರಂದು ಮೂರನೇ ಆವೃತ್ತಿಯ ಸಮಾರಂಭ ನಡೆಯಲಿದೆ.

ಸಾಮಾಜಿಕ ಪರಿಣಾಮ ಬೀರಿದ ಅತ್ಯುತ್ತಮ ಚಿತ್ರ

ಫೋಟೋ

ಹದಿನೇಳೆಂಟು

ಕುಬುಸ

ಸಹಾರಾ

ಚಿಲ್ಲಿ ಚಿಕನ್

ಧೈರ್ಯಂ ಸರ್ವತ್ರ ಸಾಧನಂ

O2

ಅತ್ಯುತ್ತಮ ನಿರ್ಮಾಣ ವಿನ್ಯಾಸ

ಯುಐ

ಲವ್‌ಲಿ

ಮ್ಯಾಕ್ಸ್

ಇಬ್ಬನಿ ತಬ್ಬಿದ ಇಳೆಯಲಿ

ಅಬ್ಬಬ್ಬಾ

ಶಾಖಾಹಾರಿ


ಕೆರೆಬೇಟೆ

ಅತ್ಯುತ್ತಮ ವಿಎಫ್‌ಎಕ್ಸ್, ಪೋಸ್ಟ್ ಪ್ರೊಡಕ್ಷನ್ ಹಾಗೂ ಆ್ಯನಿಮೇಷನ್

ಬಘೀರ

ಮಾರ್ಟಿನ್


ಯುಐ

ಬ್ಲಿಂಕ್

ಕೆರೆಬೇಟೆ

ಇಬ್ಬನಿ ತಬ್ಬಿದ ಇಳೆಯಲಿ

ಅತ್ಯುತ್ತಮ ಧ್ವನಿಗ್ರಹಣ ಹಾಗೂ ಶಬ್ದವಿನ್ಯಾಸ

ಶಿವಮ್ಮ ಯರೇಹಂಚಿನಾಳ

ಮ್ಯಾಕ್ಸ್

ಕೆರೆಬೇಟೆ

ಯುಐ


ಪರಜ್ಯಾ


ಶಾಖಾಹಾರಿ

ಇಬ್ಬನಿ ತಬ್ಬಿದ ಇಳೆಯಲಿ

ಸಹ ಪ್ರಾಯೋಜಕರು: ಟಿಟಿಕೆ ಪ್ರೆಸ್ಟೀಜ್, ಫ್ರೀಡಂ ಹೆಲ್ತಿ ಕುಕ್ಕಿಂಗ್ ಆಯಿಲ್, ಹೋಂಡಾ, ವಿ, ಸದ್ಗುರು ಆಯುರ್ವೇದ, ದಿ ಬೆಂಗಳೂರ್ ಸಿಟಿ ಕೊ-ಆಪರೇಟಿವ್ ಬ್ಯಾಂಕ್, ದಿ ಜನತಾ ಕೊ-ಆಪರೇಟಿವ್ ಬ್ಯಾಂಕ್, ಕೆಎಸ್‌ಡಿಎಲ್.
ಮೊಬಿಲಿಟಿ ಪಾರ್ಟ್‌ನರ್: ಮರ್ಸಿಡೀಸ್ ಬೆಂಜ್-ಅಕ್ಷಯ್ ಮೋಟರ್ಸ್.
ಬ್ಯಾಂಕಿಂಗ್ ಪಾರ್ಟ್‌ನರ್: ಕೆನರಾ ಬ್ಯಾಂಕ್.
ಸ್ಟೈಲ್ ಪಾರ್ಟ್‌ನರ್: ಬಿ.ಎಸ್. ಚನ್ನಬಸಪ್ಪ ಆ್ಯಂಡ್ ಸನ್ಸ್.
ಟ್ರಾವೆಲ್ ಪಾರ್ಟ್‌ನರ್: ಟ್ರಾವೆಲ್‌ಮಾರ್ಟ್. **ವಾರ್ಡ್‌ರೋಬ್ ಪಾರ್ಟ್‌ನರ್:** ನ್ಯುಮೆನ್.
ನಾಲೆಜ್ ಪಾರ್ಟ್‌ನರ್ಸ್: ಇನ್‌ಸೈಟ್ಸ್‌ಐಎಎಸ್ ಮತ್ತು ಗೀತಂ ಬೆಂಗಳೂರು.
ಇನ್‌ಶ್ಯೂರೆನ್ಸ್ ಪಾರ್ಟ್‌ನರ್: ನ್ಯಾಷನಲ್ ಇನ್‌ಶ್ಯೂರೆನ್ಸ್.
ಟೆಲಿಕಾಸ್ಟ್ ಪಾರ್ಟ್‌ನರ್: ಜೀ ಕನ್ನಡ.
ಆಡಿಟ್ ಪಾರ್ಟ್‌ನರ್: ಇ ಆ್ಯಂಡ್ ವೈ.

ಚಿಟಿಕೆ ಸುದ್ದಿ

ಎಂಜಿಡಿ1 ತಂಡಕ್ಕೆ ಐದನೇ ಸ್ಥಾನ

ಲಂಡನ್ (ಪಿಟಿಐ): ಭಾರತದ ಯುವ ಆಟಗಾರರನ್ನು ಹೊಂದಿರುವ ಎಂಜಿಡಿ1 ತಂಡ, ಫಿಡೆ ವಿಶ್ವ ಬ್ಲಿಟ್ಜ್ ಟೀಮ್ ಚಾಂಪಿಯನ್‌ಷಿಪ್‌ನಲ್ಲಿ ಐದನೇ ಸ್ಥಾನಕ್ಕೆ ಸರಿಯಿತು. ಕೇವಲ ಮೂರು ದಿನಗಳ ಹಿಂದೆ ಈ ತಂಡ ವಿಶ್ವ ರ್‍ಯಾಪಿಡ್ ಟೀಮ್ ಚಾಂಪಿಯನ್ ಆಗಿತ್ತು.

ಡಬ್ಲ್ಯು ಆರ್ ಚೆಸ್ ತಂಡ, ಕಾರ್ಫುಚೆಸ್ ತಂಡವನ್ನು ಸೋಲಿಸಿ ಪ್ರಶಸ್ತಿ ಗೆದ್ದುಕೊಂಡಿತು. 2023ರಲ್ಲಿ ಈ ಚಾಂಪಿಯನ್‌ಷಿಪ್ ಆರಂಭವಾದ ನಂತರ ಡಬ್ಲ್ಯು ಆರ್ ಚೆಸ್ ತಂಡ ಎರಡನೇ ಬಾರಿ ಚಾಂಪಿಯನ್ ಕಿರೀಟ ಧರಿಸಿದೆ.

ಅರ್ಜುನ್ ಇರಿಗೇಶಿ, ಪಿ.ಹರಿಕೃಷ್ಣ, ವಿ.ಪ್ರಣವ್, ಲಿಯಾನ್ ಮೆಂಡೊನ್ಸಾ, ಅಥರ್ವ ತಾಯಡೆ ಕ್ವಾರ್ಟರ್‌ಫೈನಲ್‌ನಲ್ಲಿ ಹೆಕ್ಸಾಮಿಂಡ್ ಚೆಸ್ ತಂಡದ ಎದುರು 2–4ರಲ್ಲಿ ಸೋಲನುಭವಿಸಿತು. ಐದನೇ ಸ್ಥಾನಕ್ಕೆ ನಡೆದ ಪ್ಲೇ ಆಫ್ ಪಂದ್ಯದಲ್ಲಿ ಎಂಜಿಡಿ1 ತಂಡವು, ವಿಶ್ವನಾಥನ್ ಆನಂದ್ ಅವರನ್ನು ಒಳಗೊಂಡಿದ್ದ ಫ್ರೀಡಂ ತಂಡವನ್ನು ಸೋಲಿಸಿತು.

ಮಿಸಾಕಾ ಯುನೈಟೆಡ್‌ಗೆ ಜಯ

ಬೆಂಗಳೂರು: ಮಿಸಾಕಾ ಯುನೈಟೆಡ್ ಎಫ್‌ಸಿ ತಂಡವು ಬಿಡಿಎಫ್‌ಎ ಸಿ ಡಿವಿಷನ್ ಫುಟ್‌ಬಾಲ್ ಲೀಗ್ ಪಂದ್ಯದಲ್ಲಿ 5–0 ಗೋಲುಗಳಿಂದ ವಿವೇಕಾನಂದ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಮತ್ತೊಂದು ಪಂದ್ಯದಲ್ಲಿ ಮಹಾರಾಜ ಸೋಷಿಯಲ್ಸ್ ಎಫ್‌ಸಿ ತಂಡವು 16–0ರಿಂದ ಬಿಎಚ್‌ಇಎಲ್ (ಇಡಿಎನ್) ಎಫ್‌ಸಿ ತಂಡದ ವಿರುದ್ಧ ಗೆಲುವು ಸಾಧಿಸಿತು. ಎಚ್ ಗ್ರೂಪ್ ಪಂದ್ಯದಲ್ಲಿ ಎಂಪೈರ್ ಎಫ್‌ಸಿ 3–0 ರಿಂದ ವೇಲು ಸೋಷಿಯಲ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಟ್ರಯಲ್ಸ್ ಇಂದು

ಬೆಂಗಳೂರು: ರಾಷ್ಟ್ರೀಯ ಫುಟ್‌ಬಾಲ್ ಜೂನಿಯರ್ ಬಾಲಕರ ಚಾಂಪಿಯನ್‌ಷಿಪ್‌ಗೆ ರಾಜ್ಯ ತಂಡದ ಆಯ್ಕೆಗಾಗಿ ರಾಜ್ಯ ಫುಟ್‌ಬಾಲ್ ಸಂಸ್ಥೆಯು ಟ್ರಯಲ್ಸ್ ಆಯೋಜಿಸಿದೆ.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಇದೇ 17ರಂದು ಮಧ್ಯಾಹ್ನ 2.30ಕ್ಕೆ ಟ್ರಯಲ್ಸ್ ನಡೆಯಲಿದೆ. 2010 ಜ.1ರಿಂದ 2011 ಡಿ.31ರ ಅವಧಿಯಲ್ಲಿ ಜನಿಸಿದವರು ಭಾಗವಹಿಸಬಹುದು.

‘ಪ್ರಾಬಲ್ಯಕ್ಕೆ ಯತ್ನಿಸುತ್ತಿದ್ದ ಕೊಹ್ಲಿ’

21 ವರ್ಷಗಳ ದೀರ್ಘ ಕ್ರಿಕೆಟ್ ಜೀವನದ ಬಗ್ಗೆ ಮಾತನಾಡಿದ ಜೇಮ್ಸ್ ಆ್ಯಂಡರ್ಸನ್

ಲಂಡನ್ (ಪಿಟಿಐ): ಇಂಗ್ಲೆಂಡ್‌ನ ಮಾಜಿ ವೇಗದ ಬೌಲಿಂಗ್ ಬೌಲರ್ ಜೇಮ್ಸ್ ಆ್ಯಂಡರ್ಸನ್ ತಮ್ಮ 21 ವರ್ಷಗಳ ದೀರ್ಘ ಕ್ರಿಕೆಟ್ ಜೀವನದಲ್ಲಿ ಭಾರತದ ಬ್ಯಾಟಿಂಗ್ ತಾರೆಯರಾದ ಸಚಿನ್ ತೆಂಡೂಲ್ಕರ್ ಮತ್ತು ವಿರಾಟ್ ಕೊಹ್ಲಿ ಅವರೊಂದಿಗೆ ಹಲವು ಬಾರಿ ಮುಖಾಮುಖಿ ಆಗಿದ್ದಾರೆ. ಆದರೆ ಈ ಇಬ್ಬರಲ್ಲಿ ವಿರಾಟ್ ಅವರಿಗೆ ಬೌಲಿಂಗ್ ಮಾಡುವುದು ಅವರಿಗೆ ತುಸು ಕಠಿಣವೆನಿಸಿದೆ.

2003ರಲ್ಲಿ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಆ್ಯಂಡರ್ಸನ್, ಕಳೆದ ವರ್ಷವಷ್ಟೇ ವಿದಾಯ ಹೇಳಿದ್ದರು. ಲ್ಯಾಂಕಾಶೈರ್‌ನ ಈ ದಿಗ್ಗಜ ಬೌಲರ್ ಭಾರತದ ಇಬ್ಬರು ತಾರಾ ಬ್ಯಾಟರ್‌ಗಳ ವಿರುದ್ಧ ಉತ್ತಮ ದಾಖಲೆ ಹೊಂದಿದ್ದಾರೆ. ತೆಂಡೂಲ್ಕರ್ ಅವರ ವಿಕೆಟ್‌ಅನ್ನು 9 ಸಲ ಮತ್ತು ಕೊಹ್ಲಿ ಅವರ ವಿಕೆಟ್‌ಅನ್ನು ಏಳು ಸಲ ಪಡೆದಿದ್ದಾರೆ.

‘ಕೊಹ್ಲಿ ಮೊದಲ ಬಾರಿ (2014ರಲ್ಲಿ) ಇಂಗ್ಲೆಂಡ್‌ಗೆ ಬಂದಿದ್ದಾಗ ನಾನು ಅವರ ವಿಕೆಟ್‌ಅನ್ನು ಬೇಗ ಪಡೆಯುತ್ತಿದ್ದೆ. ಆಫ್‌ಸ್ಟಂಪ್ ಆಚೆ ಹೋಗುವ ಎಸೆತಗಳ ಎದುರು ಅವರ ದೌರ್ಬಲ್ಯ ಬಂಡವಾಳ ಮಾಡಿಕೊಳ್ಳುತ್ತಿದ್ದೆ. ಆದರೆ ನಂತರದ ಪ್ರವಾಸದಲ್ಲಿ (2018) ಕೊಹ್ಲಿ ತಿದ್ದಿಕೊಂಡಿದ್ದು ಅವರಲ್ಲಿ ಆ ದೌರ್ಬಲ್ಯ ಕಾಣಲಿಲ್ಲ. ಅವರು ಬೇರೆಯೇ ಆಟಗಾರನಂತೆ ಕಂಡಿದ್ದರು’ ಎಂದು ಈಗಲೂ ಕೌಂಟಿ ಕ್ರಿಕೆಟ್ ಆಡುತ್ತಿರುವ 42 ವರ್ಷ ವಯಸ್ಸಿನ ಆ್ಯಂಡರ್ಸನ್ ‘ಟಾಕ್‌ಸ್ಪೋರ್ಟ್’ಗೆ ತಿಳಿಸಿದ್ದಾರೆ.

‘ಕೊಹ್ಲಿ ಈ ಆಟವನ್ನು ಹೊಸ ಎತ್ತರಕ್ಕೆ ಒಯ್ದರು. ನನಗಷ್ಟೇ ಅಲ್ಲ, ಬೌಲರ್‌ಗಳಿಗೆ ತುಂಬಾ ಕಷ್ಟ ಎದುರಿಸುವಂತೆ ಮಾಡಿದರು. ಮೊದಲ ಬಾರಿಯ ಸರಣಿಯಲ್ಲಿ ಅವರನ್ನು 4–5 ಸಲ ಔಟ್ ಮಾಡಿದ್ದೆ. ಆದರೆ ನಂತರದ ಸರಣಿಯಲ್ಲಿ ಅವರನ್ನು ಎದುರಿಸಿದಾಗ ವಿಕೆಟ್ ಪಡೆಯಲಾಗಲಿಲ್ಲ’

‘ಸಚಿನ್‌ಗೆ ಬೌಲಿಂಗ್ ಮಾಡುತ್ತಿದ್ದಾಗ ಕೊಹ್ಲಿ ಹೊಂದಿದ್ದ ರೀತಿಯ ಪ್ರಭುತ್ವ ನನಗೆ ಕಂಡಿರಲಿಲ್ಲ. ಅವರಿಗೆ (ಕೊಹ್ಲಿ) ಬೌಲಿಂಗ್ ಮಾಡುವುದು ಕಷ್ಟವಾಗಿತ್ತು. ಅಂಥ ಗಟ್ಟಿ ಮನೋಬಲ ಹೊಂದಿದ್ದರು. ಕೊಹ್ಲಿ ರಣಾಂಗಣಕ್ಕೆ ಇಳಿದು ಪ್ರಾಬಲ್ಯ ಸಾಧಿಸಲು ಸಜ್ಜಾಗಿಯೇ ಬರುತ್ತಿದ್ದರು. ಬೌಲರ್‌ಗಳು ಅದನ್ನು ತಿಳಿದುಕೊಳ್ಳಬೇಕೆಂದು ಬಯಸುವ ರೀತಿ ಅವರ ಆಟವಿತ್ತು. ಆರಂಭಿಕ ಯಶಸ್ಸಿನ ನಂತರ ಅವರಿಗೆ ಬೌಲಿಂಗ್ ಮಾಡುವುದು ಕಷ್ಟವಾಯಿತು’ ಎಂದು ಹೇಳಿದರು.

‘ಟ್ರೋಫಿ ಅನಾವರಣ ಕಾರ್ಯಕ್ರಮ ವಿಳಂಬಕ್ಕೆ ವಿಮಾನ ದುರಂತ ಕಾರಣ’

ಲಂಡನ್ (ಪಿಟಿಐ): ಭಾರತ–ಇಂಗ್ಲೆಂಡ್ ನಡುವಣ ಮುಂಬರುವ ಕ್ರಿಕೆಟ್ ಟೆಸ್ಟ್ ಸರಣಿಗೆ ಆ್ಯಂಡರ್ಸನ್–ತೆಂಡೂಲ್ಕರ್ ಟ್ರೋಫಿ ಅನಾವರಣ ಮಾಡುವ ಕಾರ್ಯಕ್ರಮವು, ಅಹಮದಾಬಾದಿನ ವಿಮಾನ ದುರಂತದ ಕಾರಣದಿಂದ ಮುಂದಕ್ಕೆ ಹೋಗಿದೆ.

ಭಾರತ ತಂಡದ ಮಾಜಿ ನಾಯಕ ಮನ್ಸೂರ್ ಅಲಿ ಖಾನ್ ಪಟೌಡಿ ಗೌರವಾರ್ಥ ‘ಪಟೌಡಿ ಟ್ರೋಫಿ’ ಎಂದು ಈ ಹಿಂದೆ ಕರೆಯಲಾಗುತಿತ್ತು. ಆದರೆ ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ಈ ಟ್ರೋಫಿಗೆ ಆ್ಯಂಡರ್ಸನ್–ತೆಂಡೂಲ್ಕರ್ ಟ್ರೋಫಿ ಎಂದು ಮರುನಾಮಕರಣ ಮಾಡಲು ತೀರ್ಮಾನಿಸಿದೆ.

‘ಎಟಿಟಿ ಟ್ರೋಫಿ ಅನಾವರಣ ಕಾರ್ಯಕ್ರಮ ಜೂನ್ 14ರಂದು ನಡೆಯಬೇಕಾಗಿತ್ತು. ಆದರೆ ಅಹಮದಾಬಾದಿನಲ್ಲಿ ವಿಮಾನ ದುರಂತದ ಕಾರಣ ವಿಳಂಬವಾಗಿದೆ. ಈ ತೀರ್ಮಾನ ರದ್ದಾಗಿಲ್ಲ. ಆದರೆ ಸರಣಿಗೆ ಒಂದೆರಡು ದಿನ ಮೊದಲು ಈ ಕಾರ್ಯಕ್ರಮ ನಡೆಯಬಹುದೆಂಬ ವಿಶ್ವಾಸ ಇದೆ’ ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದರು.

ಲಂಡನ್‌ಗೆ ತೆರಳಬೇಕಾದ ಏರ್ ಇಂಡಿಯಾ ವಿಮಾನ ಟೇಕಾಫ್ ಆದ ಕ್ಷಣಾರ್ಧದಲ್ಲಿ ಪತನಗೊಂಡು 275 ಮಂದಿ ಮೃತಪಟ್ಟಿದ್ದರು. ಪ್ರಯಾಣಿಕರಲ್ಲಿ 50ಕ್ಕೂ ಹೆಚ್ಚು ಮಂದಿ ಬ್ರಿಟನ್‌ನ ನಾಗರಿಕರು ಇದ್ದರು.

ಈ ಮಧ್ಯೆ, ಸರಣಿಗೆ ಪಟೌಡಿ ಟ್ರೋಫಿ ಹೆಸರನ್ನು ಉಳಿಸಿಕೊಳ್ಳುವಂತೆ ಬಿಸಿಸಿಐಯಿಂದ ಇಸಿಬಿಗೆ ಕೋರಿಕೆ ಸಲ್ಲಿಸಲಾಗಿದೆ ಎಂದು ತಿಳಿದುಬಂದಿದೆ. ಭಾರತದ ಕ್ರಿಕೆಟ್‌ಗೆ ಪಟೌಡಿ ಕೊಡುಗೆ ಗಮನದಲ್ಲಿಟ್ಟುಕೊಂಡು ಈ ಸರಣಿಗೆ ಅವರದೇ ಹೆಸರನ್ನು ಮುಂದುವರಿಸಲು ತೆಂಡೂಲ್ಕರ್ ಮತ್ತು ಐಸಿಸಿ ಅಧ್ಯಕ್ಷ ಜಯ್ ಶಾ ಅವರು ಬಯಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಜನಗಣತಿಗೆ ಮುಹೂರ್ತ

ಒಂದನೇ ಪುಟದಿಂದ...

ಈ ಅಧಿಸೂಚನೆಯು ಹಿಂದಿನ ಪ್ರಕಟಣೆಗಳ ಪುನರಾವರ್ತನೆಯಾಗಿದೆ ಹಾಗೂ ಅಧಿಸೂಚನೆಯಲ್ಲಿ ಜಾತಿ ಗಣತಿಯ ಸೇರ್ಪಡೆಯ ಬಗ್ಗೆ ಪ್ರಸ್ತಾವವೇ ಇಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದೆ. ‘ಇದು ಯೂ-ಟರ್ನ್‌ಗಳ 'ಉಸ್ತಾದ್'ನಿಂದ ಮತ್ತೊಂದು ಯೂ-ಟರ್ನ್ ಆಗಿದೆಯೇ ಅಥವಾ ವಿವರಗಳನ್ನು ನಂತರ ಪ್ರಕಟಿಸಲಾಗುತ್ತದೆಯೇ’ ಎಂದೂ ಪ್ರಶ್ನಿಸಿದೆ.

ಜನಗಣತಿಯ ಜೊತೆಗೆ ಜಾತಿ ಗಣತಿಯನ್ನು ಮೊದಲ ಬಾರಿಗೆ ನಡೆಸಲಾಗುವುದು ಎಂದು ಸರ್ಕಾರ ಈ ಹಿಂದೆ ಘೋಷಿಸಿತ್ತು. ‘ಅಧಿಸೂಚನೆಯಲ್ಲಿ ಜಾತಿ ಗಣತಿ ಬಗ್ಗೆ ಉಲ್ಲೇಖಿಸುವ ಅಗತ್ಯ ಇಲ್ಲ. ಜನಗಣತಿಯ ಪ್ರಶ್ನಾವಳಿಯಲ್ಲಿ ಜಾತಿಯ ಕುರಿತ ಪ್ರಶ್ನೆ ಇರುತ್ತದೆ’ ಎಂದು ಗೃಹ ಸಚಿವಾಲಯದ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ಜನಗಣತಿಯೊಂದಿಗೆ ಜಾತಿ ಎಣಿಕೆಯೂ ನಡೆಯಲಿದೆ ಎಂದು ಸರ್ಕಾರದ ಹೇಳಿಕೆ ತಿಳಿಸಿದೆ.

2011ರಲ್ಲಿ ಕೊನೆಯ ಬಾರಿ ಗಣತಿ ನಡೆದಿತ್ತು. ಈ ಅಧಿಸೂಚನೆಯಿಂದಾಗಿ 2021ರಲ್ಲಿ ಜನಗಣತಿ ನಡೆಸಲು ಹೊರಡಿಸಲಾಗಿದ್ದ 2019ರ ಮಾರ್ಚ್ 26ರ ಅಧಿಸೂಚನೆ ರದ್ದಾಗಿದೆ. ಕೋವಿಡ್ -19 ಸಾಂಕ್ರಾಮಿಕವು ದೇಶವನ್ನು ಆವರಿಸಿ ಲಾಕ್‌ಡೌನ್ ಹೇರಿದ್ದರಿಂದ ಜನಗಣತಿಯನ್ನು ಮುಂದೂಡಲಾಗಿತ್ತು. 2021ರ ಜನಗಣತಿಯಲ್ಲಿ ರಾಷ್ಟ್ರೀಯ ಜನಸಂಖ್ಯಾ ನೋಂದಣಿಯನ್ನು ಪರಿಷ್ಕರಿಸಲು ಯೋಜಿಸಲಾಗಿತ್ತು. ಆದರೆ, ಹೊಸ ಅಧಿಸೂಚನೆಯಲ್ಲಿ ಈ ಬಗ್ಗೆ ಉಲ್ಲೇಖ ಇಲ್ಲ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕೇಂದ್ರ ಗೃಹ ಕಾರ್ಯದರ್ಶಿ, ರಿಜಿಸ್ಟ್ರಾರ್ ಜನರಲ್ ಮತ್ತು ಭಾರತದ ಜನಗಣತಿ ಆಯುಕ್ತ ಮೃತ್ಯುಂಜಯ್ ಕುಮಾರ್ ನಾರಾಯಣ್ ಮತ್ತು ಇತರ ಹಿರಿಯ ಅಧಿಕಾರಿಗಳೊಂದಿಗೆ ಭಾನುವಾರ ಸಭೆ ನಡೆಸಿ ಜನಗಣತಿಯ ಸಿದ್ಧತೆಯನ್ನು ಪರಿಶೀಲಿಸಿದ್ದರು.

ಜನಗಣತಿ ಪ್ರಕ್ರಿಯೆ ಪ್ರಾರಂಭ ಆದಾಗಿನಿಂದ ಇದು 16ನೇ ಜನಗಣತಿಯಾಗಿದ್ದು, ಸ್ವಾತಂತ್ರ್ಯ ನಂತರದ ಎಂಟನೇ ಜನಗಣತಿಯಾಗಿದೆ ಎಂದು ಸರ್ಕಾರದ ಹೇಳಿಕೆ ತಿಳಿಸಿದೆ.

‘ರಾಜ್ಯದ ಜಾತಿ ಗಣತಿ ಭಿನ್ನ’

ಒಂದನೇ ಪುಟದಿಂದ...

‘ಕೇಂದ್ರ ಸರ್ಕಾರ 2027ರಿಂದ ಜಾತಿಗಣತಿ ಶುರು ಮಾಡುವುದಾಗಿ ಹೇಳಿದೆ. ಕೇಂದ್ರದ ಜಾತಿ ಗಣತಿಗೆ ರಾಜ್ಯ ಸರ್ಕಾರದ ತಕರಾರು ಇಲ್ಲ. ಜಾತಿ ಗಣತಿಯ ಜೊತೆಗೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಮಾಡುವುದಾಗಿ ಕೇಂದ್ರ ಸರ್ಕಾರ ಈವರೆಗೆ ಸ್ಪಷ್ಟಪಡಿಸಿಲ್ಲ’ ಎಂದರು.

‘ಎಚ್. ಕಾಂತರಾಜ ಆಯೋಗ ನಡೆಸಿದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಗೆ ಸಂಬಂಧಿಸಿದಂತೆ ಪ್ರಬಲ ಮತ್ತು ದುರ್ಬಲ ವರ್ಗಗಳಿಂದ ಆಕ್ಷೇಪ ವ್ಯಕ್ತವಾಗಿತ್ತು. ಅಲ್ಲದೆ, ಈ ಸಮೀಕ್ಷೆ ನಡೆದು 10 ವರ್ಷ ಕಳೆದಿದೆ. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಕಾಯ್ದೆ–1995ರ ಕಲಂ 11ರ ಪ್ರಕಾರ 10 ವರ್ಷದ ಬಳಿಕ ಹೊಸ ವರದಿ ತರಿಸಿಕೊಳ್ಳಲು ಅವಕಾಶವಿದೆ. ಹೀಗಾಗಿ, ಹೊಸದಾಗಿ ಜಾತಿ ಗಣತಿ ನಡೆಸಲು ನಿರ್ಧರಿಸಲಾಗಿದೆ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಜಾತಿ ಜನಗಣತಿಯ ಬೇಡಿಕೆಗೆ ಪ್ರಧಾನಿ ಶರಣಾಗಲು ಕಾಂಗ್ರೆಸ್‌ನ ಹಠ ಮತ್ತು ಒತ್ತಾಯವೇ ಕಾರಣ. ಈ ಬೇಡಿಕೆಯನ್ನು ಮಂಡಿಸಿದ್ದಕ್ಕಾಗಿ ಪ್ರಧಾನಿ ಅವರು ಕಾಂಗ್ರೆಸ್ ನಾಯಕರನ್ನು ನಗರ ನಕ್ಸಲರು ಎಂದು ಕರೆದಿದ್ದರು. ಜಾತಿ ಎಣಿಕೆಗೆ ಮಾತ್ರವಲ್ಲದೆ ಸಾಮಾಜಿಕ-ಆರ್ಥಿಕ ಅಂಶಗಳ ದತ್ತಾಂಶ ಸಂಗ್ರಹಿಸಲು ಕೇಂದ್ರ ಸರ್ಕಾರವು ತೆಲಂಗಾಣ ಮಾದರಿ ಅಳವಡಿಸಿಕೊಳ್ಳಬೇಕು.

ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ)

ಎಂಟು ವರ್ಷಗಳ ಬಳಿಕ ಟೆಸ್ಟ್ ಆಡಲು ಸಜ್ಜಾದ ಕರುಣ್ ನಾಯರ್

‘2022ರ ವರ್ಷಾಂತ್ಯ ನನ್ನ ಪಾಲಿಗೆ ಕಠಿಣ ಅವಧಿ’

ನವದೆಹಲಿ (ಪಿಟಿಐ): ದೇಶೀಯ ಕ್ರಿಕೆಟ್‌ನಲ್ಲಿ ರನ್ ಹೊಳೆ ಹರಿಸಿ, ಎಂಟು ವರ್ಷಗಳ ಬಳಿಕ ಭಾರತ ಟೆಸ್ಟ್ ತಂಡದಲ್ಲಿ ಆಡಲು ಸಜ್ಜಾಗುತ್ತಿರುವ ಬೆಂಗಳೂರಿನ ಕರುಣ್ ನಾಯರ್ ತಮ್ಮ ವೃತ್ತಿಜೀವನದಲ್ಲಿ ಅನುಭವಿಸಿದ ಕಠಿಣ ಸನ್ನಿವೇಶವನ್ನು ಸ್ಮರಿಸಿಕೊಂಡಿದ್ದಾರೆ.

‘2022ರ ವರ್ಷಾಂತ್ಯ ನನ್ನ ಪಾಲಿಗೆ ಅತ್ಯಂತ ಕಠಿಣ ಅವಧಿಯಾಗಿತ್ತು. ಅದು ಒಂದು ರೀತಿಯ ಅಂಧಕಾರದ ಸಮಯ. ನನ್ನ ಕ್ರಿಕೆಟ್ ಜೀವನದ ಭಾವನಾತ್ಮಕ ಹಂತವೂ ಹೌದು. 2018ರಲ್ಲೂ ಇಷ್ಟೊಂದು ಕಠಿಣ ಪರಿಸ್ಥಿತಿಯನ್ನು ಎದುರಿಸಿರಲಿಲ್ಲ’ ಎಂದು ಆರ್.ಅಶ್ವಿನ್ ಅವರ ಯೂಟ್ಯೂಬ್ ಚಾನೆಲ್‌ಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಈ ಅಸಾಧಾರಣ ಪುನರಾಗಮನ ಕರುಣ್ ಅವರ ಛಲದ ಮನೋಭಾವವನ್ನು ತೋರಿಸಿದೆ. ಕ್ರಿಕೆಟ್ ದಿಗ್ಗಜ ವೀರೇಂದ್ರ ಸೆಹ್ವಾಗ್ ಹೊರತುಪಡಿಸಿ ಟೆಸ್ಟ್ ಕ್ರಿಕೆಟ್‌ನಲ್ಲಿ ತ್ರಿಶತಕ ಬಾರಿಸಿದ ಎರಡನೇ ಆಟಗಾರ ಅವರಾಗಿದ್ದಾರೆ.

ಕರುಣ್

‘2017ರಲ್ಲಿ ಯಾವುದೇ ಸೂಚನೆಯಿಲ್ಲದೆ ಭಾರತ ಕ್ರಿಕೆಟ್ ತಂಡದಿಂದ ಕೈಬಿಟ್ಟಿದ್ದು ನನ್ನನ್ನು ಗಾಸಿಗೊಳಿಸಿತ್ತು. ಆ ವೇಳೆ ಏನು ನಡೆಯುತ್ತಿದೆ ಎಂದು ನನಗೆ ಅರ್ಥವಾಗಲಿಲ್ಲ. ನಂತರದಲ್ಲಿ ನಾನು ದೇಶೀಯ ಕ್ರಿಕೆಟ್‌ಗೆ ಹಿಂತಿರುಗಬೇಕಾಯಿತು. ಅಂದು ಕರ್ನಾಟಕ ರಾಜ್ಯ ತಂಡದಿಂದ ಉತ್ತಮ ಬೆಂಬಲ ದೊರಕಿತ್ತು. ಕರ್ನಾಟಕದ ಆಟಗಾರರ ನಡುವೆ ನಿಕಟ ಬಾಂಧವ್ಯವಿದೆ’ ಎಂದು ಹೇಳಿದ್ದಾರೆ.

ಕಳೆದ ವಾರ ಇಂಗ್ಲೆಂಡ್ ಲಯನ್ಸ್ ವಿರುದ್ಧ ‘ಟೆಸ್ಟ್’ ಪಂದ್ಯದಲ್ಲಿ ಭಾರತ ‘ಎ’ ತಂಡವನ್ನು ಪ್ರತಿನಿಧಿಸಿದ್ದ ಕರುಣ್ ದ್ವಿಶತಕವನ್ನು ಬಾರಿಸಿದ್ದರು. ಆ ಮೂಲಕ ಶುಕ್ರವಾರ ಲೀಡ್ಸ್‌ನಲ್ಲಿ ಆರಂಭವಾಗುವ ಮೊದಲ ಟೆಸ್ಟ್‌ನಲ್ಲಿ ಭಾರತದ ಆಡುವ ಹನ್ನೊಂದರ ಬಳಗದಲ್ಲಿ ಸ್ಥಾನ ಪಡೆಯುವ ಸಾಧ್ಯತೆ ಉಜ್ವಲವಾಗಿದೆ.

ಇಂದು ತಂಡ ಸೇರಿಕೊಳ್ಳಲಿರುವ ಗಂಭೀರ್

ನವದೆಹಲಿ (ಪಿಟಿಐ): ‘ಕುಟುಂಬದ ತುರ್ತು ಕಾರಣ’ ಹೋದ ವಾರ ತವರಿಗೆ ಮರಳಿದ್ದ ಭಾರತ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರು ಮಂಗಳವಾರ ತಂಡವನ್ನು ಸೇರಿಕೊಳ್ಳಲಿದ್ದಾರೆ. ಮೊದಲ ಟೆಸ್ಟ್ ಶುಕ್ರವಾರ ಆರಂಭವಾಗಲಿದೆ.

ಜೂನ್ 11ರಂದು ಗಂಭೀರ್ ಅವರ ತಾಯಿ ಸೀಮಾ ಗಂಭೀರ್ ಅವರಿಗೆ ಹೃದಯಾಘಾತ ಆಗಿತ್ತು. ಹಾಗಾಗಿ, 12ರಂದು ಗಂಭೀರ್ ಅವರು ಕುಟುಂಬದವರೊಂದಿಗೆ ಲಂಡನ್‌ನಿಂದ ದೆಹಲಿಗೆ ಮರಳಿದ್ದರು.

ಗಂಭೀರ್ ಅವರ ತಾಯಿ ಆರೋಗ್ಯದಿಂದಿದ್ದಾರೆ. ಅವರು ಮಂಗಳವಾರ ದೆಹಲಿಯಿಂದ ಲಂಡನ್‌ಗೆ ಪ್ರಯಾಣ ಬೆಳೆಸಲಿದ್ದು, ತಂಡದೊಂದಿಗೆ ಕೂಡಿಕೊಳ್ಳಲಿದ್ದಾರೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

‘ಶಾಸ್ತ್ರ ಡೀಮ್ಡ್ ವಿ ವಿ’ಯ ನಾಲ್ಕು ವಿದ್ಯಾರ್ಥಿನಿಯರಿಗೆ ಅಗ್ರ ಸ್ಥಾನ

ಬಿ.ಟೆಕ್. ಪ್ರವೇಶ ಪಟ್ಟಿ ಬಿಡುಗಡೆ

ಚೆನ್ನೈ: ಇದೇ ಜೂ.14 ರಂದು ಬಿಡುಗಡೆಯಾದ ‘ಶಾಸ್ತ್ರ ಡೀಮ್ಡ್ ವಿಶ್ವವಿದ್ಯಾಲಯ’ದ ವಿವಿಧ ಬಿ.ಟೆಕ್. ಕಾರ್ಯಕ್ರಮಗಳ ಪ್ರವೇಶಕ್ಕಾಗಿ ನಾಲ್ಕು ವಿದ್ಯಾರ್ಥಿನಿಯರಿಗೆ ಅಗ್ರ ಸ್ಥಾನ ಒಲಿದಿದೆ.

ಬಿ.ಟೆಕ್. ಪ್ರವೇಶಕ್ಕೆ ಜೆಇಇ ಮೇನ್ ಮತ್ತು +2 ಅಂಕಗಳ ಆಧಾರದ ಮೇಲೆ ಸ್ಟ್ರೀಮ್–1 ರಲ್ಲಿ ಶೇ 50 ರಷ್ಟು ಸೀಟುಗಳು ಮೀಸಲಿಡಲಾಗಿದ್ದು, ಆಂಧ್ರ ಪ್ರದೇಶದ ಕರ್ನೆಲಂಪಾಳಯಂನ ಚೈತನ್ಯ ಜೂನಿಯರ್ ಕಾಲೇಜಿನ ಅಕೇಲಾ ಮೇಘವನ್ ಶರ್ಮಾ ಪ್ರಥಮ ರ್‍ಯಾಂಕ್ ಪಡೆದಿದ್ದಾರೆ. 1000ಕ್ಕೆ 991 ಅಂಕಗಳನ್ನು ಹಾಗೂ ಪ್ಲಸ್ 2ನಲ್ಲಿ ಪಡೆದ ಅಂಕಗಳು ಸೇರಿದಂತೆ ಒಟ್ಟು 99.39 ಅಂಕಗಳೊಂದಿಗೆ ಮೇಘವನ್ 1ನೇ ರ್‍ಯಾಂಕ್ ಗಳಿಸಿದರೆ, ತೆಲಂಗಾಣದ ಬೇಗಂಪೇಟ್‌ನ ಚೈತನ್ಯ ಜೂನಿಯರ್ ಕಾಲೇಜಿನ ಬುರ್ರಾ ನಿಶಿತಾ ಜೆಇಇ ಮೇನ್‌ನ 99.69 ಅಂಕಗಳೊಂದಿಗೆ ಒಟ್ಟು 99.30 ಅಂಕ ಗಳಿಸಿ 2ನೇ ಸ್ಥಾನ ಪಡೆದರು.

ಸ್ಟ್ರೀಮ್–2 ರಲ್ಲಿ (XII ತರಗತಿಯ ಒಟ್ಟು ಅಂಕಗಳ ಆಧಾರದ ಮೇಲೆ) ತೆಲಂಗಾಣದ ಖಮ್ಮಮ್‌ನ ಎಸ್‌ಆರ್ ಜೂನಿಯರ್ ಕಾಲೇಜಿನ ಇಂದೂರಿ ರಶ್ಮಿತಾ 12ನೇ ತರಗತಿ ಅರ್ಹತಾ ಪರೀಕ್ಷೆಗಳಲ್ಲಿ ಪಡೆದಿರುವ 996 ಅಂಕಗಳೊಂದಿಗೆ ಮೊದಲ ರ್‍ಯಾಂಕ್, ಚೆನ್ನೈನ PSBB ಕೆಕೆ ನಗರದ ಅಕ್ಷಯ ಶಿವಗುರು 500ಕ್ಕೆ 498 ಅಂಕಗಳೊಂದಿಗೆ ದ್ವಿತೀಯ ರ್‍ಯಾಂಕ್ ಪಡೆದಿದ್ದಾರೆ.

ಜೂ. 14 ರಂದು ಸಂಜೆ 5 ಗಂಟೆಗೆ ಅರ್ಜಿ ಸಲ್ಲಿಸಲು ಕೊನೆ ಸಮಯ ಎಂದು ನಿಗದಿಪಡಿಸಿದ್ದ SASTRA ಅಂದೇ ರ್‍ಯಾಂಕ್ ಪಟ್ಟಿಯನ್ನೂ ಬಿಡುಗಡೆ ಮಾಡಿದೆ. ರ್‍ಯಾಂಕ್ ಪಟ್ಟಿಯ ವಿವರಗಳು www.sastra.edu ನಲ್ಲಿ ಲಭ್ಯವಿದ್ದು, ಪ್ರವೇಶ ಪ್ರಕ್ರಿಯೆಗಾಗಿ JEE-ಮೇನ್ ಅಂಕಗಳು ಮತ್ತು ಪ್ಲಸ್ 2 ಸರಾಸರಿಯನ್ನು ಒಟ್ಟಿಗೆ ಸೇರಿಸುವ ಏಕೈಕ ಡೀಮ್ಡ್ ವಿವಿ ಇದಾಗಿದೆ.

ಪಾರದರ್ಶಕ ಆನ್‌ಲೈನ್ ಕೌನ್ಸೆಲಿಂಗ್ ಪ್ರಕ್ರಿಯೆ ಜೂ.15 ರಿಂದ ಪ್ರಾರಂಭವಾಗಿದ್ದು, ನಂತರ ದಿನಗಳಲ್ಲಿ ಹಂಚಿಕೆ ಪ್ರಕ್ರಿಯೆ ಮಾಡಲಾಗುವುದು. ಜಮ್ಮು ಮತ್ತು ಕಾಶ್ಮೀರ ಹಾಗೂ ಈಶಾನ್ಯ ರಾಜ್ಯಗಳ ವಿದ್ಯಾರ್ಥಿಗಳಿಗೆ ಉಚಿತ ಬೋರ್ಡಿಂಗ್ ಮತ್ತು ವಸತಿ ಜೊತೆ ಶೇ 100ರಷ್ಟು ವಿದ್ಯಾರ್ಥಿವೇತನ ನೀಡಲಾಗುತ್ತದೆ ಎಂದು ವಿವಿ ಪ್ರಕಟಿಸಿದೆ.

"ಶಾಸ್ತ್ರ ವಿವಿಯ ಪಾರದರ್ಶಕ ಮತ್ತು ಅರ್ಹತೆ ಆಧಾರಿತ ಪ್ರವೇಶ ವ್ಯವಸ್ಥೆ ಪೋಷಕರ ಮೆಚ್ಚುಗೆ ಗಳಿಸಿದೆ. ಆ.1 ರಂದು ನಮ್ಮಲ್ಲಿ ಸೇರುವ ವಿದ್ಯಾರ್ಥಿಗಳಿಗಾಗಿ ನಾವು ಎದುರು ನೋಡುತ್ತಿದ್ದೇವೆ" ಎಂದು ಶಾಸ್ತ್ರದ ಕುಲಪತಿ ಡಾ.ಎಸ್. ವೈದ್ಯ ಸುಬ್ರಮಣಿಯಂ ಹೇಳಿದ್ದಾರೆ.

ಪ್ರಸ್ತುತಿ: ಪಿ.ವಿ.ಬ್ರ್ಯಾಂಡ್ ಸ್ಪಾಟ್

ಅ.5ಕ್ಕೆ ಭಾರತ–ಪಾಕ್ ಪಂದ್ಯ

ಮಹಿಳಾ ವಿಶ್ವಕಪ್: 5 ಪಂದ್ಯಗಳಿಗೆ ಬೆಂಗಳೂರು ಆತಿಥ್ಯ, ಪಾಕ್ ಪಂದ್ಯಗಳು ಕೊಲಂಬೊದಲ್ಲಿ

ದುಬೈ (ಪಿಟಿಐ): ಮಹಿಳಾ ಏಕದಿನ ವಿಶ್ವಕಪ್‌ನ ಪ್ರಮುಖ ಆಕರ್ಷಣೆಯಾದ ಭಾರತ–ಪಾಕಿಸ್ತಾನ ನಡುವಣ ಪಂದ್ಯ ತಟಸ್ಥ ತಾಣವಾದ ಕೊಲಂಬೊದ ಆರ್. ಪ್ರೇಮದಾಸ ಕ್ರೀಡಾಂಗಣದಲ್ಲಿ ಅಕ್ಟೋಬರ್ 5ರಂದು ನಡೆಯಲಿದೆ.

ಎಂಟು ತಂಡಗಳು ಭಾಗವಹಿಸುವ ಟೂರ್ನಿಯ ವೇಳಾಪಟ್ಟಿಯನ್ನು ಐಸಿಸಿ ಸೋಮವಾರ ಪ್ರಕಟಿಸಿದೆ.

ಈ ವರ್ಷದ ಆರಂಭದಲ್ಲಿ ಐಸಿಸಿ ಚಾಂಪಿಯನ್ಸ್ ಟ್ರೋಫಿ ವೇಳೆ ಭಾರತ ತಂಡ, ಪಾಕಿಸ್ತಾನಕ್ಕೆ ಹೋಗಲು ನಿರಾಕರಿಸಿತ್ತು. ಈ ವೇಳೆ ಪುರುಷರ ಮತ್ತು ಮಹಿಳಾ ವಿಭಾಗದ ಪ್ರಮುಖ ಟೂರ್ನಿಗಳಿಗೆ ಹೈಬ್ರಿಡ್ ಮಾದರಿ ಅನುಸರಿಸಲು ಉಭಯ ತಂಡಗಳು ಒಪ್ಪಿಕೊಂಡಿದ್ದು, ಇದರ ಅನ್ವಯ ಭಾರತ ಆತಿಥ್ಯ ವಹಿಸಿರುವ ಈ ಟೂರ್ನಿಗೆ ಕೊಲಂಬೊವನ್ನು ತಟಸ್ಥ ತಾಣವಾಗಿ ಆಯ್ಕೆ ಮಾಡಲಾಗಿದೆ. ಪಾಕಿಸ್ತಾನ ತನ್ನ ಎಲ್ಲ ಪಂದ್ಯಗಳನ್ನು ಇಲ್ಲಿ ಆಡಲಿದೆ.

ಪಹಲ್ಗಾಮ್‌ನಲ್ಲಿ ಏಪ್ರಿಲ್ ಕೊನೆಯಲ್ಲಿ ಪ್ರವಾಸಿಗರ ಮೇಲೆ ಭಯೋತ್ಪಾದಕ ದಾಳಿ ನಡೆದ ನಂತರ ಈ ಎರಡು ತಂಡಗಳು ಪರಸ್ಪರ ಆಡುವ ಬಗ್ಗೆ ಅನುಮಾನ ಉಂಟಾಗಿತ್ತು. ಆ ದಾಳಿಯಲ್ಲಿ 26 ಮಂದಿ ಹತ್ಯೆಗೀಡಾಗಿದ್ದು, ಕೆಲ ದಿನಗಳ ನಂತರ ಗಡಿಯಲ್ಲಿ ಸೇನಾ ಸಂಘರ್ಷವೂ ನಡೆದಿತ್ತು. ಆದರೆ ಸೋಮವಾರದ ವೇಳಾಪಟ್ಟಿ ಈ ಕುರಿತ ಊಹಾಪೋಹಗಳಿಗೆ ತೆರೆಯೆಳೆದಿದೆ.

ಭಾರತ ತಂಡ ಸೆ. 30ರಂದು ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶ್ರೀಲಂಕಾ ವಿರುದ್ಧ ಉದ್ಘಾಟನಾ ಪಂದ್ಯ ಆಡುವ ಮೂಲಕ ತನ್ನ ಅಭಿಯಾನ ಆರಂಭಿಸಲಿದೆ. ಇತ್ತೀಚೆಗೆ ಆರ್‌ಸಿಬಿ ತಂಡ ಐಪಿಎಲ್ ಕಪ್ ಗೆದ್ದ ವಿಜಯೋತ್ಸವ ವೇಳೆ ಕಾಲ್ತುಳಿತ ಸಂಭವಿಸಿದ ಕಾರಣ ಬೆಂಗಳೂರು ವಿಶ್ವಕಪ್ ಪಂದ್ಯಗಳ ಆತಿಥ್ಯ ಕಳೆದುಕೊಳ್ಳಬಹುದು ಎಂದು ಸಂದೇಹಗಳಿಗೂ ವಿರಾಮ ಬಿದ್ದಿದೆ.

ಭಾರತ ತನ್ನ ಎರಡು ಪಂದ್ಯಗಳನ್ನು ವಿಶಾಖಪಟ್ಟಣದಲ್ಲಿ ಆಡಲಿದೆ. ಅಕ್ಟೋಬರ್ 9ರಂದು ದಕ್ಷಿಣ ಆಫ್ರಿಕಾ ವಿರುದ್ಧ ಮತ್ತು 12ರಂದು ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ ವಿರುದ್ಧದ ಪಂದ್ಯವನ್ನು ಅಲ್ಲಿ ಆಡಲಿದೆ.

‘ಆದರೆ ಈ ದೊಡ್ಡ ಟೂರ್ನಿಯ ಸಾಂಗವಾಗಿ ನಡೆಯುವಂತೆ ನೋಡಿ ಕೊಳ್ಳುವ ಸ್ಥಳೀಯ ಆಯೋಜನಾ ಸಮಿತಿಯನ್ನು (ಎಲ್‌ಒಸಿ) ಆದರೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಇನ್ನೂ ರಚಿಸಿಲ್ಲ.

ಆಸ್ಟ್ರೇಲಿಯಾ ತನ್ನ ಮೊದಲ ಪಂದ್ಯವನ್ನು ಅ. 1ರಂದು ನ್ಯೂಜಿಲೆಂಡ್ ವಿರುದ್ಧ ಇಂದೋರ್‌ನಲ್ಲಿ ಆಡಲಿದೆ. ಕಳೆದ ವರ್ಷ ಫೈನಲ್‌ನಲ್ಲಿ ಎದುರಾಗಿದ್ದ ಆಸ್ಟ್ರೇಲಿಯಾ– ಇಂಗ್ಲೆಂಡ್ ನಡುವಣ ಪಂದ್ಯ ಅ. 22ರಂದು ಇಂದೋರ್‌ನಲ್ಲಿ ನಿಗದಿಯಾಗಿದೆ.

ಮೊದಲ ಸೆಮಿಫೈನಲ್ ಪಂದ್ಯ ಅ.29ರಂದು ಗುವಾಹಟಿಯಲ್ಲಿ ಮತ್ತು ಎರಡನೇ ಸೆಮಿಫೈನಲ್ ಪಂದ್ಯ ಅ.30ರಂದು ಬೆಂಗಳೂರಿನಲ್ಲಿ ನಡೆಯಲಿದೆ. ಫೈನಲ್ ಪಂದ್ಯ ನವೆಂಬರ್ 2ರಂದು ಬೆಂಗಳೂರಿನಲ್ಲಿ (ಪಾಕಿಸ್ತಾನ ತಂಡವು ಫೈನಲ್‌ಗೆ ಅರ್ಹತೆ ಪಡೆದಲ್ಲಿ ಕೊಲಂಬೊದಲ್ಲಿ) ನಿಗದಿಯಾಗಿದೆ.

2013ರ ನಂತರ ಭಾರತ ಇದೇ ಮೊದಲ ಬಾರಿ ಈ ಟೂರ್ನಿಯ ಆತಿಥ್ಯ ವಹಿಸಿದೆ. ಪಂದ್ಯಗಳು ರೌಂಡ್‌ರಾಬಿನ್ ಮಾದರಿಯಲ್ಲಿ ನಡೆಯಲಿದೆ. ಅಗ್ರ ನಾಲ್ಕು ತಂಡಗಳು ಸೆಮಿಫೈನಲ್‌ನಲ್ಲಿ ಆಡುವ ಅರ್ಹತೆ ಪಡೆಯಲಿವೆ.

ಆತಿಥೇಯ ಭಾರತದ ಜೊತೆ ಈ ವಿಶ್ವಕಪ್ ಟೂರ್ನಿಗೆ ಆಸ್ಟ್ರೇಲಿಯಾ, ಇಂಗ್ಲೆಂಡ್, ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ ಮತ್ತು ಶ್ರೀಲಂಕಾ ತಂಡಗಳು ನೇರ ಅರ್ಹತೆ ಪಡೆದಿದ್ದವು. ಈ ವರ್ಷದ ಆರಂಭದಲ್ಲಿ ಲಾಹೋರ್‌ನಲ್ಲಿ ನಡೆದ ಕ್ವಾಲಿಫಯರ್ಸ್ ಮೂಲಕ ಪಾಕಿಸ್ತಾನ ಮತ್ತು ಬಾಂಗ್ಲಾದೇಶ ತಂಡಗಳು ಅರ್ಹತೆ ಪಡೆದವು.

ಮುಖ್ಯಾಂಶಗಳು

- ಸೆ. 30ಕ್ಕೆ ಬೆಂಗಳೂರಿನಲ್ಲಿ ಭಾರತ– ಶ್ರೀಲಂಕಾ ಉದ್ಘಾಟನಾ ಪಂದ್ಯ
- ಚೊಚ್ಚಲ ಪ್ರಶಸ್ತಿಯ ನಿರೀಕ್ಷೆಯಲ್ಲಿ ಆತಿಥೇಯ ಭಾರತ ಮಹಿಳೆಯರು
- ಟೂರ್ನಿಯಲ್ಲಿ ಒಟ್ಟು 8 ತಂಡಗಳ ಸೆಣಸಾಟ

ಮಹಿಳಾ ಏಕದಿನ ವಿಶ್ವಕಪ್

ಭಾರತ ತಂಡದ ಪಂದ್ಯಗಳು

ದಿನಾಂಕ	ಎದುರಾಳಿ	ಸ್ಥಳ
ಸೆ.30	ಶ್ರೀಲಂಕಾ	ಬೆಂಗಳೂರು
ಅ.5	ಪಾಕಿಸ್ತಾನ	ಕೊಲಂಬೊ
ಅ.9	ದಕ್ಷಿಣ ಆಫ್ರಿಕಾ	ವಿಶಾಖಪಟ್ಟಣ
ಅ.12	ಆಸ್ಟ್ರೇಲಿಯಾ	ವಿಶಾಖಪಟ್ಟಣ
ಅ.19	ಇಂಗ್ಲೆಂಡ್	ಇಂದೋರ್
ಅ.23	ನ್ಯೂಜಿಲೆಂಡ್	ಗುವಾಹಟಿ
ಅ.26	ಬಾಂಗ್ಲಾದೇಶ	ಬೆಂಗಳೂರು

ಬೆಂಗಳೂರಿನಲ್ಲಿ ನಡೆಯುವ ಪಂದ್ಯಗಳು

ದಿನಾಂಕ	ತಂಡಗಳು
ಸೆ.30	ಭಾರತ–ಶ್ರೀಲಂಕಾ
ಅ.3	ಇಂಗ್ಲೆಂಡ್ –ದಕ್ಷಿಣ ಆಫ್ರಿಕಾ
ಅ.26	ಭಾರತ–ಬಾಂಗ್ಲಾದೇಶ
ಅ.30	ಸೆಮಿಫೈನಲ್ 2
ನ.2	ಫೈನಲ್

(*ಪಾಕಿಸ್ತಾನ ಫೈನಲ್‌ಗೆ ಪ್ರವೇಶಿಸಿದರೆ ಪಂದ್ಯ ಕೊಲಂಬೊದಲ್ಲಿ ನಡೆಯಲಿದೆ)

ಹರ್ಮನ್‌ಪ್ರೀತ್ ಕೌರ್ ಮತ್ತು ಸ್ಮೃತಿ ಮಂಧಾನ

ರಾಷ್ಟ್ರೀಯ ತಂಡದಲ್ಲಿ ವಿನೀತ್ ವೆಂಕಟೇಶ್

ನವದೆಹಲಿ (ಪಿಟಿಐ): ತಜಿಕಿಸ್ತಾನ ಮತ್ತು ಕಿರ್ಗಿಸ್ತಾನ ವಿರುದ್ಧದ ಮುಂಬರುವ ಸೌಹಾರ್ದ ಫುಟ್‌ಬಾಲ್ ಪಂದ್ಯಗಳಿಗೆ 23 ಆಟಗಾರರನ್ನು ಒಳಗೊಂಡ ಭಾರತ 23 ವರ್ಷದೊಳಗಿನವರ ತಂಡವನ್ನು ಮುಖ್ಯ ಕೋಚ್ ನೌಶಾದ್ ಮೂಸಾ ಪ್ರಕಟಿಸಿದ್ದಾರೆ. ಕರ್ನಾಟಕದ ಮಿಡ್‌ಫೀಲ್ಡರ್ ವಿನೀತ್ ವೆಂಕಟೇಶ್ ಸ್ಥಾನ ಪಡೆದಿದ್ದಾರೆ.

ಜೂನ್ 1ರಿಂದ ಕೋಲ್ಕತ್ತದ ಎಐಎಫ್‌ಎಫ್ ರಾಷ್ಟ್ರೀಯ ಶ್ರೇಷ್ಠತಾ ಕೇಂದ್ರದಲ್ಲಿ ತರಬೇತಿ ಪಡೆದಿರುವ ಆಟಗಾರರು ಸೋಮವಾರ ಸಂಜೆ ತಜಕಿಸ್ತಾನಕ್ಕೆ ಪ್ರಯಾಣ ಬೆಳೆಸಿದ್ದಾರೆ. ಸೆಪ್ಟೆಂಬರ್‌ನಲ್ಲಿ ನಡೆಯುವ ಎಎಫ್‌ಸಿ (23 ವರ್ಷದೊಳಗಿನವರ) 2026ರ ಏಷ್ಯನ್ ಕಪ್ ಅರ್ಹತಾ ಪಂದ್ಯಗಳಿಗೆ ಪೂರ್ವಸಿದ್ಧತೆಯ ಭಾಗವಾಗಿ ಸೌಹಾರ್ದ ಪಂದ್ಯ ನಡೆಯಲಿದೆ.

ಶಿಬಿರದಲ್ಲಿದ್ದ ಒಟ್ಟು 29 ಆಟಗಾರರ ಪೈಕಿ 20 ಮಂದಿ ಮತ್ತು ಸೀನಿಯರ್ ತಂಡದ ಮೂವರು ಅಂತಿಮ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಸುಹೇಲ್ ಅಹ್ಮದ್ ಭಟ್, ಆಯುಷ್ ಚೆಟ್ರಿ ಮತ್ತು ಅಭಿಷೇಕ್ ಸಿಂಗ್ ಅವರು ಸೀನಿಯರ್ ತಂಡವನ್ನು ಪ್ರತಿನಿಧಿಸಿದ್ದ ಆಟಗಾರರು.

ಭಾರತ ತಂಡವು ಜೂನ್ 18ರಂದು ತಜಕಿಸ್ತಾನ ವಿರುದ್ಧ ಮತ್ತು 21ರಂದು ಕಿರ್ಗಿಸ್ತಾನ ವಿರುದ್ಧ ಆಡಲಿದೆ.

ರನ್ನರ್ಸ್ ಅಪ್ ಆದ ಕರ್ನಾಟಕ ತಂಡ. (ಎಡದಿಂದ) ಸತ್ಯಾ ಕೆ., ಮೇಖಲಾ ಗೌಡ, ನಿಹಾರಿಕಾ ರೆಡ್ಡಿ, ನಿಧಿ ಉಮೇಶ್ ಚಿತ್ರದಲ್ಲಿದ್ದಾರೆ

3x3 ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಕರ್ನಾಟಕದ ಮಹಿಳೆಯರಿಗೆ ಬೆಳ್ಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ವನಿತೆಯರ ತಂಡವು ಕೇರಳದ ಕೊಚ್ಚಿಯಲ್ಲಿ ನಡೆದ 23 ವರ್ಷದೊಳಗಿನವರ 3x3 ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದಿದೆ.

ಕರ್ನಾಟಕ ತಂಡವು ಶನಿವಾರ ನಡೆದ ಫೈನಲ್‌ನಲ್ಲಿ 11–19ರಿಂದ ಆತಿಥೇಯ ಕೇರಳ ತಂಡಕ್ಕೆ ಮಣಿಯಿತು.

ಸೆಮಿಫೈನಲ್‌ನಲ್ಲಿ ಕರ್ನಾಟಕ ತಂಡವು 21–19ರಿಂದ ಮಧ್ಯಪ್ರದೇಶ ವಿರುದ್ಧ; ಕ್ವಾರ್ಟರ್ ಫೈನಲ್‌ನಲ್ಲಿ 21–18ರಿಂದ ತಮಿಳುನಾಡು ವಿರುದ್ಧ; ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ 21–15ರಿಂದ ಪಂಜಾಬ್ ವಿರುದ್ಧ ಗೆಲುವು ಸಾಧಿಸಿತ್ತು. ಕರ್ನಾಟಕ ತಂಡ ₹2 ಲಕ್ಷ ಬಹುಮಾನ ತನ್ನದಾಗಿಸಿಕೊಂಡಿದೆ.

ಬೆಂಗಳೂರು ಎಸ್.ಸಿ.ಗೆ ಪ್ರಶಸ್ತಿ

ಪ್ರಜಾವಾಣಿ ಚಿತ್ರ

ಬೆಂಗಳೂರು ಸ್ಪೋರ್ಟ್ಸ್ ಕ್ಲಬ್ ತಂಡವು ಕೆಎಸ್‌ಸಿಎ ಗುಂಪು ಒಂದರ 1, 2 ಮತ್ತು 3ನೇ ಡಿವಿಷನ್ (16 ವರ್ಷದೊಳಗಿನವರ) ಇಂಟರ್ ಕ್ಲಬ್ ಕ್ರಿಕೆಟ್ ಟೂರ್ನಿಯ ಪ್ರಶಸ್ತಿ ಜಯಿಸಿತು. (ನಿಂತವರು) ಎಡದಿಂದ; ಆದಿತ್ಯನ್, ಹೈದರ್ ಅಲಿ, ಗೋಕುಲ್ ಸಾಯಿ ಶಶಾಂಕ್, ಗೋಕುಲನಾಥನ್, ಯದುನಾರಾಯಣ, ಜೈವರ್ಧನ್ ಸಿಪಾನಿ, ಜವಾಜಿ ಕುಶಾಲ್, ಅರುಷ್ ಜೈನ್, ಏಕಾಂಶ್ ರಾವುಲ್, ವಿಕ್ರಮ್, ಕುಶ್ ಕುಮಾರ್ ಝಾ, ವೇದಾಂತ್, ಅಬ್ದುಲ್ಲಾ, ಪವನದೀಪ್ ಆರ್. (ಕುಳಿತವರು) ವೆಂಕಟೇಶ್ ಪಿ.ಎಂ. (ಮ್ಯಾನೇಜರ್), ಪ್ರದೀಪ್ (ಕೋಚ್), ನಾಗರಾಜ್ (ಕ್ಲಬ್ ಅಧ್ಯಕ್ಷ), ಸುಧಾಕರ್ ರಾವ್ (ಕಾರ್ಯದರ್ಶಿ) ಚಿತ್ರದಲ್ಲಿದ್ದಾರೆ. ಆಲೂರು ಮೈದಾನದಲ್ಲಿ ಸೋಮವಾರ ನಡೆದ ಫೈನಲ್ ಪಂದ್ಯದಲ್ಲಿ ಬೆಂಗಳೂರು ಸ್ಪೋರ್ಟ್ಸ್ ಕ್ಲಬ್ ತಂಡವು 121 ರನ್‌ಗಳಿಂದ ಮೌಂಟ್ ಜಾಯ್ ಕ್ರಿಕೆಟ್ ಕ್ಲಬ್ ತಂಡವನ್ನು ಮಣಿಸಿತು

ಸ್ನೂಕರ್ ಸ್ಪರ್ಧೆಗೆ ಮಯಂಕ್, ನತಾಶಾ

ಬೆಂಗಳೂರು: ಕರ್ನಾಟಕದ ಜಯದ್ ಆರವ್, ಮಯಂಕ್ ಕಾರ್ತಿಕ್ ಮತ್ತು ನತಾಶಾ ಚೇತನ್ ಅವರು ಮುಂಬರುವ ಐಬಿಎಸ್‌ಎಫ್ ವಿಶ್ವ ಸ್ನೂಕರ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ 17 ವರ್ಷದೊಳಗಿನ ಬಾಲಕರ, 21 ವರ್ಷದೊಳಗಿನ ಪುರುಷರ ಮತ್ತು ಮಹಿಳಾ ವಿಭಾಗದಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ.

2024ರ ವಿಶ್ವ (21 ವರ್ಷದೊಳಗಿನವರ) ಚಾಂಪಿಯನ್ ಆಗಿರುವ ನತಾಶಾ ಅವರು ಟೂರ್ನಿಗೆ ನೇರಪ್ರವೇಶ ಪಡೆದಿದ್ದಾರೆ. ಮಯಂಕ್ ಅವರು ಜೂನ್ 4ರಂದು ಕೆಎಸ್‌ಬಿಎ ನಡೆಸಿದ ಟ್ರಯಲ್ಸ್ ಮೂಲಕ ಆಯ್ಕೆಯಾದರು.

17 ವರ್ಷದೊಳಗಿನ ಬಾಲಕರ ಸ್ನೂಕರ್‌ನಲ್ಲಿ ನಾಲ್ಕು ಮಂದಿ, 21 ವರ್ಷದೊಳಗಿನ ಪುರುಷರ ಸ್ನೂಕರ್‌ನಲ್ಲಿ ಎಂಟು ಮಂದಿ ಮತ್ತು ಮಹಿಳಾ ವಿಭಾಗದಲ್ಲಿ ಐದು ಮಂದಿ ಭಾರತವನ್ನು ಪ್ರತಿನಿಧಿಸುವರು.

ಪುಟಿದೇಳುವ ತವಕದಲ್ಲಿ ಟೆಟೆ ಪಡೆ

ಲಂಡನ್ (ಪಿಟಿಐ): ಎಫ್‌ಐಎಚ್ ಪ್ರೊ ಹಾಕಿ ಲೀಗ್‌ನ ಯುರೋಪಿಯನ್ ಲೆಗ್‌ನಲ್ಲಿ ಅಲ್ಪ ಅಂತರದ ಎರಡು ಸೋಲು ಕಂಡಿರುವ ಭಾರತ ಮಹಿಳಾ ಹಾಕಿ ತಂಡ, ಮಂಗಳವಾರ ನಡೆಯಲಿರುವ ಪಂದ್ಯದಲ್ಲಿ ವಿಶ್ವದ ಎರಡನೇ ಕ್ರಮಾಂಕದ ಅರ್ಜೆಂಟೀನಾ ವಿರುದ್ಧ ಆಡಲಿದ್ದು, ಪುಟಿದೇಳುವ ತವಕದಲ್ಲಿದೆ.

ಹೋದ ವಾರದ ಕೊನೆಯಲ್ಲಿ ಭಾರತ 1–2 ಮತ್ತು 2–3 ಅಂತರದಲ್ಲಿ ಆಸ್ಟ್ರೇಲಿಯಾ ಎದುರು ಸೋಲು ಕಂಡಿತ್ತು. ಈಗ ಸೋಲಿನ ಗುಂಗಿನಿಂದ ಹೊರಬಂದು ಪ್ರಬಲ ಅರ್ಜೆಂಟೀನಾ ವಿರುದ್ಧ ಆಡಬೇಕಾಗಿದೆ. ಅರ್ಜೆಂಟೀನಾ ಇದುವರೆಗೆ ಆಡಿರುವ 12 ಪಂದ್ಯಗಳ ಪೈಕಿ ಏಳು ಪಂದ್ಯಗಳನ್ನು ಗೆದ್ದುಕೊಂಡಿದೆ.

‘ಅರ್ಜೆಂಟೀನಾ ತಂಡ ಕಠಿಣ ತಂಡಗಳಲ್ಲಿ ಒಂದು. ಆದರೆ ನಾವು ಹೋರಾಟ ನೀಡುವುದು ಶತಃಸಿದ್ಧ. ಅವರನ್ನು ಎದುರಿಸಲು ಉತ್ತಮ ರೀತಿಯಲ್ಲಿ ತರಬೇತಿ ಪಡೆದಿದ್ದೇವೆ. ಆ ತಂಡದ ವಿರುದ್ಧ ನಿರ್ಣಾಯಕ ಅಂಕಗಳನ್ನು ಪಡೆಯಲು ತಂತ್ರಗಳನ್ನು ರೂಪಿಸಿದ್ದೇವೆ’ ಎಂದು ಭಾರತ ತಂಡದ ನಾಯಕಿ ಸಲೀಮಾ ಟೆಟೆ ಪ್ರತಿಕ್ರಿಯಿಸಿದ್ದಾರೆ.

ಅಂಕಪಟ್ಟಿಯಲ್ಲಿ ಸದ್ಯ ಎರಡನೇ ಸ್ಥಾನದಲ್ಲಿರುವ ಅರ್ಜೆಂಟೀನಾ, ಭಾರತದ ವಿರುದ್ಧ ಗೆದ್ದು, ಮೊದಲ ಸ್ಥಾನದಲ್ಲಿರುವ ನೆದರ್ಲೆಂಡ್ಸ್‌ಗೆ ಪೈಪೋಟಿ ನೀಡುವ ಗುರಿ ಹೊಂದಿದೆ. ಇನ್ನೊಂದೆಡೆ, ಭಾರತ ತಂಡವು 9 ಅಂಕಗಳೊಂದಿಗೆ ಏಳನೇ ಸ್ಥಾನದಲ್ಲಿದೆ. ಗೆಲುವಿನ ಹಳಿಗೆ ಮರಳಲು ಎದುರು ನೋಡುತ್ತಿದೆ.